ಭಾನುವಾರ, ಮೇ 3, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 122 | ಪುಟ 20

● www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸ್ಕ್ಯಾನ್ ಮಾಡಿ

ಫೈನಲ್‌ಗೆ ಮಾನಸ್

ಭಾರತದ ಉದಯೋನ್ಮುಖ ಆಟಗಾರ ಮಾನಸ್ ಧಾಮ್ನೆ ಅವರು ಕಜಾಕಸ್ತಾನದ ಷಿಮ್ಕೆಂಟ್‌ನಲ್ಲಿ ನಡೆಯುತ್ತಿರುವ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ಶನಿವಾರ ಫೈನಲ್ ಪ್ರವೇಶಿಸಿದರು

ಮಾವು ನಷ್ಟ ಅಧ್ಯಯನಕ್ಕೆ ತಂಡ 8

ಫಾಲ್ಟಾ ಕ್ಷೇತ್ರ: 21ರಂದು ಮರುಮತದಾನ 5

ಕಡಲ ಪ್ರವಾಸೋದ್ಯಮ ನಿಸ್ತೇಜ

ಒಳನೋಟ

● ಗಣೇಶ ಚಂದನಶಿವ

ರಾಜ್ಯಕ್ಕೆ ಬಂದ ಪ್ರವಾಸಿಗರ ಸಂಖ್ಯೆ (ಕೋಟಿಗಳಲ್ಲಿ)



ಮಂಗಳೂರು: 'ದೆಹಲಿಯ ಒಂದು ತಂಡ ಬೀಚ್ ಪ್ರವಾಸಕ್ಕೆ ಯೋಜನೆ ರೂಪಿಸುತ್ತಿತ್ತು. ಆ ತಂಡದ ಕೆಲವರು ವಿಚಾರಣೆಗೆ ಬಂದಿದ್ದರು. ಅವರನ್ನು ಮಂಗಳೂರಿಗೆ ಸೆಳೆಯಬೇಕು ಎಂದು ನಾನು ಯತ್ನಿಸಿದೆ. ಅಲ್ಲಿ ಪಂಚತಾರಾ ಹೋಟೆಲ್ ಇದೆಯೇ? ಗೋವಾದಂತೆ 'ಮುಕ್ತ' ವಾತಾವರಣ ಉಂಟೇ? ಎಂದು ಕೇಳಿದರು. ಮೆಲುದನಿಯಲ್ಲಿ ಇಲ್ಲ ಎಂದೆ. ಆದರೂ, ಹೋಟೆಲ್‌ಗಳು ಚೆನ್ನಾಗಿವೆ, ಗೋವಾಕ್ಕೆ ಹೋಲಿಸಿದರೆ ನಿಮ್ಮ ಪ್ರವಾಸದ ಖರ್ಚೂ ಬಹಳ ಕಡಿಮೆ ಎಂದು ಮನವೊಲಿಸಲು ಯತ್ನಿಸಿದೆ. ಅವರು ಗೋವಾವನ್ನೇ ಆಯ್ಕೆ ಮಾಡಿಕೊಂಡರು'.

ದೆಹಲಿಯಲ್ಲಿ ಪ್ರವಾಸ ಆಯೋಜನ ಕಚೇರಿಯಲ್ಲಿ ಪ್ರಮುಖ ಹುದ್ದೆಯಲ್ಲಿರುವ ಮಂಗಳೂರಿನ ವ್ಯಕ್ತಿಯೊಬ್ಬರು ಹೀಗೆ ಮಾತು ಆರಂಭಿಸಿದರು.

'ಇನ್ನೊಂದು ತಂಡ ವಿಚಾರಣೆಗೆ ಬಂದಿತ್ತು. ಮತ್ತೆ ಮಂಗಳೂರು ಬಗ್ಗೆ ಹೇಳಿದೆ. ಅದರಲ್ಲಿ ಒಬ್ಬರು ಗೂಗಲ್‌ನಲ್ಲಿ ಸರ್ಚ್ ಮಾಡಿ, 'ಗೋವಾದಲ್ಲಿ ವೈಬ್ರೆಂಟ್ ನೈಟ್‌ಲೈಫ್ ಇದೆ' ಅದೇ ಇರಲಿ ಎಂದಾಗ, ನಾನು ನಿರುತ್ತರನಾದೆ. ಗೋವಾದಂತೆ ನಮ್ಮ ಬೀಚ್ ಪ್ರವಾಸೋದ್ಯಮಕ್ಕೂ 'ಜೀವ' ತುಂಬಬೇಕಿದೆ' ಎಂದರು.

ಕರ್ನಾಟಕಕ್ಕೆ (343.30 ಕಿ.ಮೀ ಉದ್ದ) ಹೋಲಿಸಿದರೆ ಗೋವಾದ ಕರಾವಳಿ ತೀರ (193.95 ಕಿ.ಮೀ.) ಪ್ರದೇಶ ಕಡಿಮೆ. ನಮ್ಮಲ್ಲಿರುವ ಬೀಚ್‌ಗಳ ಸಂಖ್ಯೆಯೂ ಅಧಿಕ. ಆದರೂ, ಕರಾವಳಿ ತೀರ ಪ್ರವಾಸೋದ್ಯಮದಲ್ಲಿ ಆ ರಾಜ್ಯ ನಮಗಿಂತಲೂ ಬಹಳ ಮುಂದಿದೆ.

ಮಂಗಳೂರಿಗೆ ಬಂದಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇದೇ ಮಾತನ್ನು ಹೇಳುತ್ತಿದ್ದರು, 'ಗೋವಾ ಮತ್ತು ಕೇರಳದವರು ಕರಾವಳಿ ಪ್ರದೇಶದ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಿಕೊಂಡಿದ್ದಾರೆ; ನಾವು ವಿಫಲವಾಗಿದ್ದೇವೆ. ಇಲ್ಲಿಯ ಪ್ರಕೃತಿ ಸಂಪತ್ತನ್ನು ನಾವು ಸರಿಯಾಗಿ ಬಳಸಿಕೊಂಡಿಲ್ಲ'.

ರಾತ್ರಿ 8 ಗಂಟೆಯಾದರೆ ಮಂಗಳೂರು ಡೆಡ್ ಆಗುತ್ತದೆ ಎಂದು ಅವರು ವಿಧಾನ ಸಭೆಯಲ್ಲಿಯೂ ಹೇಳಿದ್ದ ಮಾತು, 'ಪ್ರವಾಸೋದ್ಯಮಕ್ಕೆ ಮಂಗಳೂರು ತೆರೆದುಕೊಳ್ಳಬೇಕು' ಎಂಬ ಆಶಯವನ್ನು ಹೊಂದಿತ್ತು. ಅದಾದ ನಂತರ 'ಮಂಗಳೂರು ನೈಟ್ ಲೈಫ್' ಬಗ್ಗೆ ಚರ್ಚೆ ನಡೆದವು. ಅಷ್ಟೇ ಬೇಗ ತಣ್ಣಗಾದವು.

ಈಗ ಕರ್ನಾಟಕ ಸರ್ಕಾರ ಇಲ್ಲಿನ ಪ್ರವಾಸೋದ್ಯಮಕ್ಕೆ ಚೇತರಿಕೆ ನೀಡಲು ಮುಂದಡಿ ಇಟ್ಟಿದ್ದು, ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ. ಇಲ್ಲಿರುವ ಭೌಗೋಳಿಕ ಅವಕಾಶ, ಪ್ರವಾಸೋದ್ಯಮ ಅಭಿವೃದ್ಧಿ ವಿಚಾರದಲ್ಲಿ ಎದುರಿಸು-ತ್ತಿರುವ ಸವಾಲುಗಳ ಬಗ್ಗೆ ಇತ್ತೀಚೆಗೆ ಸುದೀರ್ಘ ಸಮಾಲೋಚನೆ ನಡೆದಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಪ್ರವಾಸೋದ್ಯಮ ಸಚಿವ ಹಾಗೂ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಉಸ್ತುವಾರಿ ಸಚಿವರು ಈ ಸಮಾಲೋಚನೆಯಲ್ಲಿ ಭಾಗಿಯಾಗಿ ಕರಾವಳಿ ಕರ್ನಾಟಕದ ಪ್ರವಾಸೋದ್ಯಮ ಅಭಿವೃದ್ಧಿಗೆ ಸಕಲ ಸಹಕಾರ ನೀಡುವ ವಾಗ್ದಾನ ಮಾಡಿದ್ದಾರೆ.

▶ 6

ಮಂಗಳೂರಿನ ಪಣಂಬೂರು ಕಡಲತೀರ ಪ್ರಜಾವಾಣಿ ಚಿತ್ರ : ಫಕ್ರುದ್ದೀನ್ ಎಚ್

ಜಲಸಾಹಸಕ್ಕೆ ಬೇಕು ಉತ್ತೇಜನ

ಅಳಿವೆ ಪ್ರದೇಶಗಳ ಕಾಂಡ್ಲಾವನಗಳನ್ನು ಕಣ್ತುಂಬಿಕೊಳ್ಳಲು ಪ್ರವಾಸಿಗರು ಬಯಸುತ್ತಾರೆ. ಇದರಿಂದಾಗಿ ಕಾರವಾರದ ಕಾಳಿ ನದಿ, ಹೊನ್ನಾವರದ ಕಾಸರಕೋಡದ ಕಾಂಡ್ಲಾ ನಡಿಗೆ ಪ್ರವಾಸಿಗರ ನೆಚ್ಚಿನ ಆಯ್ಕೆಯಾಗುತ್ತಿದೆ. ಇದು ಕಯಾಕಿಂಗ್, ಬೋಟಿಂಗ್‌ನಂತಹ ಜಲಸಾಹಸ ಚಟುವಟಿಕೆ ಉತ್ತೇಜನಕ್ಕೆ ಪೂರಕವಾಗಿದೆ. ಆದರೆ, ಜಲಸಾಹಸ ಚಟುವಟಿಕೆಗೆ ಪರವಾನಗಿ ನೀಡಲು ಆಡಳಿತ ವ್ಯವಸ್ಥೆ ಇಚ್ಛಾಶಕ್ತಿ ತೋರಿಸುತ್ತಿಲ್ಲ.

ವಿನಯ ನಾಯ್ಕ, ಹೋಮ್ ಸ್ಟೇ ಮಾಲೀಕ, ಕಾರವಾರ

ವಿಳಂಬ ಧೋರಣೆ: ಸಿ.ಎಂ ಚಾಟಿ

ಜಾರಿಯಾಗದ ಯೋಜನೆಗಳು: ಕಾರ್ಯದರ್ಶಿಗಳೇ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ ವರ್ಷದ ಬಜೆಟ್‌ನ 15 ಘೋಷಣೆಗಳು ಇನ್ನೂ ಜಾರಿಯಾಗಿಲ್ಲ. ಈ ಸಾಲಿನಲ್ಲಿ ಐದು ಘೋಷಣೆಗಳ ಕುರಿತ ಆದೇಶವಷ್ಟೇ ಹೊರಬಿದ್ದಿದೆ. ಈ ವಿಳಂಬಕ್ಕೆ ಯಾರು ಹೊಣೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯ ಅಧಿಕಾರಿಗಳನ್ನು ಕಟುವಾಗಿ ಪ್ರಶ್ನಿಸಿದರು.

ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯ-ದರ್ಶಿಗಳ ಹಾಗೂ ಕಾರ್ಯದರ್ಶಿಗಳ ಸಭೆಯನ್ನು ಶನಿವಾರ ನಡೆಸಿದರು.

'ಬಜೆಟ್ ಘೋಷಣೆಗಳ ಸರ್ಕಾರಿ ಆದೇಶ ಹೊರಡಿಸಿ, ಅನುಷ್ಠಾನ ಕಾರ್ಯ ಆರಂಭಿಸದಿದ್ದರೆ ಕಾರ್ಯದರ್ಶಿಗಳನ್ನೇ ಹೊಣೆ ಮಾಡಲಾಗುವುದು' ಎಂದು ಎಚ್ಚರಿಸಿದ ಸಿದ್ದರಾಮಯ್ಯ, ಈ ಸಾಲಿನ ಎಲ್ಲ ಘೋಷಣೆಗಳ ಕುರಿತು ಮೇ ತಿಂಗಳ ಒಳಗೆ ಆದೇಶ ಹೊರಡಿಸಿ ಜಾರಿ ಮಾಡಬೇಕು' ಎಂದು ಆದೇಶಿಸಿದರು.

'2026-27ನೇ ಸಾಲಿನ ಬಜೆಟ್‌ನಲ್ಲಿ 218 ಹೊಸ ಘೋಷಣೆಗಳು ಸೇರಿದಂತೆ ಒಟ್ಟು 565 ಘೋಷಣೆಗಳನ್ನು ಮಾಡಿದ್ದೇವೆ. ಎಲ್ಲ ಘೋಷಣೆಗಳನ್ನು ಅದೇ ವರ್ಷ ಜಾರಿಗೊಳಿಸುವುದು ಅಧಿಕಾರಿಗಳ ಜವಾಬ್ದಾರಿ. ಅನುಷ್ಠಾನದಲ್ಲಿ ಪ್ರಾಯೋಗಿಕ ತೊಡಕುಗಳು ಎದುರಾದರೆ ನೇರವಾಗಿ ನನ್ನ ಅಥವಾ ಮುಖ್ಯ ಕಾರ್ಯದರ್ಶಿಯ ಗಮನಕ್ಕೆ ತರಬೇಕು' ಎಂದು ಸೂಚನೆ ನೀಡಿದರು.

'ಅಧಿಕಾರಕ್ಕೆ ಬಂದ ನಂತರ ರಾಜ್ಯ-ಮಟ್ಟದಲ್ಲಿ ಎರಡು ಜನಸ್ಪಂದನ ಸಭೆ ನಡೆಸಿ 15,334 ಅರ್ಜಿಗಳನ್ನು ಸ್ವೀಕರಿಸ-ಲಾಗಿದ್ದು, ಈ ಪೈಕಿ 15,295 ವಿಲೇವಾರಿ ಆಗಿದೆ. ಉಳಿದ 45 ಅನ್ನು ವಿಲೇವಾರಿ ಮಾಡಬೇಕು' ಎಂದು ಹೇಳಿದರು.

▶ 9

ವಿವಿಧ ಇಲಾಖೆಗಳ ಯೋಜನೆಗಳ ಕುರಿತಾದ 'ಕರ್ನಾಟಕದ ಯಶೋಗಾಥೆಗಳ ಕೈಪಿಡಿ'ಯನ್ನು ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಯ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ ಪಾಲ್ಗೊಂಡಿದ್ದರು

'ಪರಿಶಿಷ್ಟರಿಗೆ ಗುತ್ತಿಗೆ: ಪ್ಯಾಕೇಜ್ ಸಲ್ಲ'

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಗುತ್ತಿಗೆಯಲ್ಲಿ ₹2 ಕೋಟಿವರೆಗೆ ಮೀಸಲಾತಿ ಕಲ್ಪಿಸಲಾಗಿದೆ. ವಿವಿಧ ಕಾಮಗಾರಿಗಳನ್ನು ಒಟ್ಟು ಸೇರಿಸಿ ಪ್ಯಾಕೇಜ್ ಮಾಡುವ ಮೂಲಕ ಮೀಸಲಾತಿ ತಪ್ಪಿಸಲು ಅವಕಾಶ ನೀಡಬಾರದು' ಎಂದು ಸಿದ್ದರಾಮಯ್ಯ ಹೇಳಿದರು.

'ಎಲ್ಲ ಕಾಮಗಾರಿಗಳನ್ನು ನಿಗದಿತ ಅವಧಿಯ ಒಳಗಾಗಿ ಪೂರ್ಣಗೊಳಿಸಬೇಕು. ಕಾಮಗಾರಿ ವಿಳಂಬದಿಂದ ನಿರ್ಮಾಣ ವೆಚ್ಚ ಹೆಚ್ಚಳಕ್ಕೆ ಅವಕಾಶ ಮಾಡಬಾರದು' ಎಂದೂ ತಿಳಿಸಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಮತ್ತೆ ಯುದ್ಧ ಸಾಧ್ಯತೆ: ಇರಾನ್

ಟೆಹರಾನ್ (ಎಎಫ್‌ಪಿ): 'ಅಮೆರಿಕ ಮತ್ತು ಇಸ್ರೇಲ್ ಪಡೆಗಳು ಇರಾನ್ ವಿರುದ್ಧ ಮತ್ತೆ ಯುದ್ಧ ಆರಂಭಿಸುವ ಸಾಧ್ಯತೆ ಇದೆ' ಎಂದು ಇರಾನ್ ಸೇನೆ ಶನಿವಾರ ಹೇಳಿದೆ.

'ದೇಶದ ಮೇಲೆ ನಡೆಯುವ ಯಾವುದೇ ಹೊಸ ಆಕ್ರಮಣ ಅಥವಾ ಅಮೆರಿಕನ್ನರು ತೋರುವ ಅವಿವೇಕದ ನಡೆಗೆ ಎದಿರೇಟು ನೀಡಲು ಇರಾನ್ ಸಂಪೂರ್ಣ ಸನ್ನದ್ಧವಾಗಿದೆ' ಎಂದೂ ಹೇಳಿದೆ.

'ಯುದ್ಧ ಕೊನೆಗೊಳಿಸಿ, ಶಾಂತಿ ಸ್ಥಾಪಿಸುವ ಸಂಬಂಧ ಇರಾನ್ ಮುಂದಿಟ್ಟಿದ್ದ ಹೊಸ ಪ್ರಸ್ತಾವದಿಂದ ನಾನು ತೃಪ್ತನಾಗಿಲ್ಲ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ ಬೆನ್ನಲ್ಲೇ ಇರಾನ್‌ನಿಂದ ಈ ಹೇಳಿಕೆ ಹೊರಬಿದ್ದಿದೆ.

'ಅಮೆರಿಕ ತಾನು ನೀಡಿದ ಯಾವುದೇ ಭರವಸೆ ಅಥವಾ ಮಾಡಿಕೊಂಡ ಒಪ್ಪಂದಕ್ಕೆ ಬದ್ಧವಾಗಿಲ್ಲ ಎಂಬುದು ಹಲವಾರು ಬಾರಿ ಸಾಬೀತಾಗಿದೆ. ಈಗ, ಟ್ರಂಪ್ ಅವರು ಇರಾನ್‌ನ ಹೊಸ ಪ್ರಸ್ತಾವವನ್ನು ತಿರಸ್ಕರಿಸಿದ್ದಾರೆ.

▶ 8

ಶಸ್ತ್ರಾಸ್ತ್ರ ಮಾರಾಟಕ್ಕೆ ಅನುಮೋದನೆ

ವಾಷಿಂಗ್ಟನ್: ಪಶ್ಚಿಮ ಏಷ್ಯಾದ ಮಿತ್ರರಾಷ್ಟ್ರಗಳಿಗೆ ಪ್ರಮುಖ ಶಸ್ತ್ರಾಸ್ತ್ರಗಳ ಮಾರಾಟಕ್ಕೆ ಅಮೆರಿಕ ಅನುಮೋದನೆ ನೀಡಿದೆ.

ಕತಾರ್‌ಗೆ 400 ಕೋಟಿ ಡಾಲರ್ (ಸುಮಾರು ₹37,964 ಕೋಟಿ) ಮೊತ್ತದ ಪೇಟ್ರಿಯಾಟ್ ಕ್ಷಿಪಣಿ ಮಾರಾಟ, ಇಸ್ರೇಲ್‌ಗೆ ಸುಮಾರು 100 ಕೋಟಿ ಡಾಲರ್ (ಸುಮಾರು ₹9,491 ಕೋಟಿ) ಮೊತ್ತದ ಶಸ್ತ್ರಾಸ್ತ್ರ ವ್ಯವಸ್ಥೆಗಳ ಮಾರಾಟಕ್ಕೆ ಅನುಮೋದನೆ ನೀಡಲಾಗಿದೆ.

ಹೊಸ ಆದೇಶದ ಅಗತ್ಯವಿಲ್ಲ: ಟಿಎಂಸಿ ಅರ್ಜಿ ವಜಾಗೊಳಿಸಿದ ಸುಪ್ರೀಂ ಕೋರ್ಟ್

ಸಿಬ್ಬಂದಿ ನೇಮಕ ಆಯೋಗದ ಅಧಿಕಾರ

ಮತ ಎಣಿಕೆ

ನವದೆಹಲಿ (ಪಿಟಿಐ): 'ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಮತ ಎಣಿಕೆಯಲ್ಲಿ ಕೇಂದ್ರ ಸರ್ಕಾರದ ನೌಕರರನ್ನು ನಿಯೋಜಿಸಲು ಚುನಾವಣಾ ಆಯೋಗವು ಅಧಿಕಾರ ಹೊಂದಿದೆ' ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಎಣಿಕೆಯ ಮೇಲ್ವಿಚಾರಕರಾಗಿ ಕೇಂದ್ರ ಸರ್ಕಾರಿ ನೌಕರರನ್ನು ನಿಯೋಜಿಸುವ ಕುರಿತು ಆಯೋಗವು ಏ.13ರಂದು ಹೊರಡಿಸಿದ್ದ ಸುತ್ತೋಲೆಯನ್ನು ಕಲ್ಕತ್ತ ಹೈಕೋರ್ಟ್‌ನಲ್ಲಿ ಟಿಎಂಸಿ ಪ್ರಶ್ನಿಸಿತ್ತು. ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

ಟಿಎಂಸಿ ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಹಾಗೂ ಜಾಯ್‌ಮಾಲ್ಯಾ ಬಾಗ್ಚಿ ಅವರಿದ್ದ ಪೀಠವು, 'ಮತ ಎಣಿಕೆಗೆ ಸಿಬ್ಬಂದಿ ನೇಮಿಸುವ ವಿಚಾರವನ್ನು ಆಯೋಗವೇ ನಿರ್ಧರಿಸ-ಬಹುದು. ರಾಜ್ಯ ಸರ್ಕಾರಿ ನೌಕರರನ್ನು ಮಾತ್ರ ನಿಯೋಜಿಸಬೇಕು ಎಂಬುದು ಸರಿಯಾದುದಲ್ಲ. ರಾಜ್ಯ ಹಾಗೂ ಕೇಂದ್ರ ಸರ್ಕಾರಿ ನೌಕರರು ಮತ ಎಣಿಕೆಯಲ್ಲಿ ಒಟ್ಟಿಗೆ ಕಾರ್ಯನಿರ್ವ-ಹಿಸಲಿದ್ದಾರೆ ಎಂಬುದು ಆಯೋಗದ ಸುತ್ತೋಲೆಯಲ್ಲಿ ಸ್ಪಷ್ಟವಾಗಿದೆ. ಹೀಗಾಗಿ, ಯಾವುದಾದರೂ ತಪ್ಪು ನಡೆಯಲಿದೆ ಎಂಬ ಟಿಎಂಸಿಯ ಆತಂಕ ಸರಿಯಾದುದಲ್ಲ' ಎಂದು ತಿಳಿಸಿದೆ.

'ಮೇ 4ರಂದು ನಡೆಯುವ ಮತ ಎಣಿಕೆಯಲ್ಲಿ ರಾಜ್ಯ ಸರ್ಕಾರಿ ನೌಕರರನ್ನೂ ಬಳಸಿಕೊಳ್ಳಲಾಗುವುದು ಮತ್ತು ಈಗಾಗಲೇ ನ್ಯಾಯಾಲಯಕ್ಕೆ ಸಲ್ಲಿಸಿದ ಸುತ್ತೋಲೆಯಲ್ಲಿರುವ ನಿಯಮಗಳನ್ನು ಪಾಲನೆ ಮಾಡಲಾಗುವುದು' ಎಂದು ಆಯೋಗ ತಿಳಿಸಿದೆ.

▶ 6

ಮುಖ್ಯಾಂಶಗಳು

- ಮತ ಎಣಿಕೆ; ರಾಜ್ಯ, ಕೇಂದ್ರದ ನೌಕರರಿಗೆ ಅವಕಾಶ
- 'ಸುಪ್ರೀಂ'ಗೆ ಮಾಹಿತಿ ನೀಡಿದ ಆಯೋಗ

ಭಾರತ್ ಕೀ ಜನಗಣನಾ 2027 CENSUS OF INDIA
ಗೃಹ ಮಂತ್ರಾಲಯ
ಭಾರತ ಸರ್ಕಾರ
ಸತ್ಯಮೇವ ಜಯತೆ

ನಮ್ಮ ಜನಗಣತಿ
ನಮ್ಮ ಅಭಿವೃದ್ಧಿ

ಜನಗಣತಿ 2027 ರ ಮೊದಲನೇ ಹಂತ
ಮನೆ ಪಟ್ಟಿ ಮತ್ತು ಮನೆ ಗಣತಿ
16ನೇ ಏಪ್ರಿಲ್ ಯಿಂದ
15ನೇ ಮೇ 2026 ರ ವರೆಗೆ
ಈ ಹಂತದಲ್ಲಿ ನಿಮ್ಮ ಪ್ರದೇಶದ ಪ್ರತಿಯೊಂದು ಮನೆಯ ವಿವರಗಳನ್ನು ದಾಖಲಿಸಲಾಗುತ್ತದೆ.

ನಿಮ್ಮನ್ನು ಏನು ಕೇಳಲಾಗುತ್ತದೆ ?

ಮನೆಗೆ ಸಂಬಂಧಿಸಿದ ಮಾಹಿತಿ:
- ಮನೆ ಸಂಖ್ಯೆ
- ನೆಲ, ಗೋಡೆ ಮತ್ತು ಮೇಲ್ಛಾವಣಿಯ ಪ್ರಧಾನ ಸಾಮಗ್ರಿಗಳು
- ಮನೆಯ ಬಳಕೆ (ವಾಸ/ವಾಸೇತರ)
- ಮನೆಯ ಸ್ಥಿತಿ

ಕುಟುಂಬದ ಮೂಲಭೂತ ಮಾಹಿತಿ:
- ಕುಟುಂಬದ ಸದಸ್ಯರ ಸಂಖ್ಯೆ
- ಕುಟುಂಬದ ಮುಖ್ಯಸ್ಥರ ಹೆಸರು
- ಮನೆಯ ಮಾಲೀಕತ್ವದ ಸ್ಥಾನ - ಮಾನ
- ಕೊಠಡಿಗಳ ಸಂಖ್ಯೆ

ಮೂಲ ಸೌಲಭ್ಯಗಳು:
- ಕುಡಿಯುವ ನೀರಿನ ಮೂಲ
- ವಿದ್ಯುತ್/ಬೆಳಕಿನ ಸೌಲಭ್ಯ
- ಶೌಚಾಲಯಗಳ ಲಭ್ಯತೆ ಮತ್ತು ಪ್ರಕಾರ
- ಸ್ನಾನ ಗೃಹದ ಸೌಲಭ್ಯ
- ಅಡುಗೆ ಮನೆ ಮತ್ತು ಅನಿಲ ಸಂಪರ್ಕ
- ಅಡುಗೆಗೆ ಬಳಸುವ ಇಂಧನ

ಕುಟುಂಬದ ಸೌಲಭ್ಯಗಳು:
- ರೇಡಿಯೋ/ಟೆಲಿವಿಷನ್
- ಇಂಟರ್ನೆಟ್/ಕಂಪ್ಯೂಟರ್
- ಮೊಬೈಲ್ ಫೋನ್
- ದ್ವಿಚಕ್ರ/ ನಾಲ್ಕು ಚಕ್ರದ ವಾಹನ

- ಫೆಬ್ರವರಿ 2027ರಲ್ಲಿ ನಡೆಸುವ ಜನ ಗಣತಿ ಪ್ರಕ್ರಿಯೆಗೆ ಈ ಹಂತವು ಅಡಿಪಾಯ ಹಾಕುತ್ತದೆ
- ಸ್ವಯಂಗಣತಿ ಮಾಡಿಕೊಂಡಿದ್ದರೆ, ದೃಢೀಕರಣಕ್ಕಾಗಿ ಗಣತಿದಾರರಿಗೆ ನಿಮ್ಮ SE ID ಹಂಚಿಕೊಳ್ಳಿ
- ನಿಮ್ಮ ಎಲ್ಲಾ ಮಾಹಿತಿಯು ಗೌಪ್ಯವಾಗಿ ಮತ್ತು ಸುರಕ್ಷಿತವಾಗಿರುತ್ತದೆ.

ಈ ರಾಷ್ಟ್ರೀಯ ಕಾರ್ಯಕ್ಕಾಗಿ ಮನೆಗೆ ಭೇಟಿನೀಡುವ ಗಣತಿದಾರರೊಂದಿಗೆ
ದಯವಿಟ್ಟು ಸಹಕರಿಸಿ

ನಮ್ಮ ಜನಗಣತಿಯಲ್ಲಿ ಭಾಗವಹಿಸಿ
ಹೆಮ್ಮೆಯಿಂದ ಹೇಳಿ-ನನ್ನ ಗಣತಿ ದೇಶದ ಶಕ್ತಿ

ಪ್ರತಿಯೊಂದು ಕುಟುಂಬವೂ ಗಣತಿಗೆ ಮಹತ್ವಪೂರ್ಣವಾಗಿದೆ
@CensusIndia2027

PES INSTITUTIONS
NOW OPEN PRE-UNIVERSITY (PU) AND POLYTECHNIC
ADMISSIONS 2026

PU COLLEGE admissions@pes.edu +91 87623 67200 pu.pes.edu

AMONGST STATE LEVEL TOPPERS - II PUC MARCH 2026 EXAM

PRAKRUTHI SEBA 99.17% (595/600) 6th State Topper
SATHVIK C BASM 99.00% (594/600) 7th State Topper
CHAITHANYA V BASM 98.83% (593/600) 8th State Topper
MAHADEV PRASAD S BASM 98.83% (593/600) 8th State Topper
RUDHII SANTHOSH SEBA 98.67% (592/600) 9th State Topper
SONU M SEBA 98.50% (591/600) 10th State Topper

JEE MAIN QUALIFIERS

DARPAN N PATEL 97.10 Percentile
KARTIKEY TRIPATHI 96.71 Percentile
MYNUDDIN N 96.00 Percentile
VIHAAN P JAIN 93.11 Percentile 9th State Topper
PRAJWAL S 92.94 Percentile
MITHIL SAI M N 90.38 Percentile

SCIENCE PCMB & PCMCs with Option for CET / JEE / NEET
COMMERCE BASM, SEBA, GEBA & SBACs (with Excel Certification)

Medium of Instruction: English
Languages Offered: Kannada / Sanskrit / Hindi / Telugu

POLYTECHNIC admissions@pes.edu +91 94480 15469 pespt.pes.edu

DCET STATE TOPPERS 2025

PARIKSHITH B B COMPUTER SCIENCE DCET Rank - 2
VED U COMPUTER SCIENCE DCET Rank - 7
NIKITHA DAYANAND COMPUTER SCIENCE DCET Rank - 23
NAYANA S ELECTRONICS DCET Rank - 24
JAYANTH S B ELECTRONICS DCET Rank - 49
BHUVAN RAJ H COMPUTER SCIENCE DCET Rank - 72

COURSES OFFERED
AUTOMOBILE ▪ ELECTRONICS & COMMUNICATION ▪ COMPUTER SCIENCE & ENGINEERING

HIGHLIGHTS FOR THE PUC AND POLYTECHNIC PROGRAMS AT PES
- Progress Report Service (PRS), and Mentor System
- PESU App for Parents - To track Attendance & Marks
- Merit Scholarships - 50% Fee Refund for top 5% students, 40% Refund for the next 20% Students.
- 100+ students join top engineering colleges annually
- Loyalty Program Fee Discounts - 20% for alumni, 10% for alumni siblings, and 30% for staff
- Seminars on Career Opportunities & Post-PU Initiatives
- Placements for all eligible aspirants
- DCET Coaching Classes for all Branches (Optional)

HOSTEL FACILITY - AVAILABLE FOR BOYS & GIRLS
50 FEET ROAD, HANUMANTHNAGAR, BENGALURU

WHERE ACADEMIC EXCELLENCE MEETS HOLISTIC DEVELOPMENT

☀ ಸೂರ್ಯೋದಯ: 5:59 ಸೂರ್ಯಾಸ್ತ : 6:35 🌙 ಚಂದ್ರೋದಯ: ರಾ. 7:11 ಚಂದ್ರಾಸ್ತ: ಬೆ. 6:03 | ಶನಿವಾರದ ಉಷ್ಣಾಂಶ : ಗರಿಷ್ಠ 35° ಕನಿಷ್ಠ 22°

ಭಾನುವಾರದ ಉಷ್ಣಾಂಶ 35° ಗರಿಷ್ಠ | 22° ಕನಿಷ್ಠ | ಸೋಮವಾರ 35° : 23° | ಮಂಗಳವಾರ 35° : 23° | ಬುಧವಾರ 35° : 23°

ಹವಾಮಾನ ಮುನ್ಸೂಚನೆ: ನಗರದಲ್ಲಿ ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಇದೆ.

ವಿನಾಯಕ ಶಾಲೆಗೆ ಶೇ 100 ಫಲಿತಾಂಶ

ಬೆಂಗಳೂರು: ಕಬ್ಬನ್‌ಪೇಟೆ ಬನ್ನಪ್ಪ ಪಾರ್ಕ್‌ನಲ್ಲಿರುವ ವಿನಾಯಕ ಪ್ರೌಢ ಶಾಲೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 100ರಷ್ಟು ಫಲಿತಾಂಶ ದಾಖಲಿಸಿದೆ.

ಒಟ್ಟು 38 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಅವರಲ್ಲಿ 12 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಗಳಿಸಿದ್ದಾರೆ. ಆರ್.ವಿ. ಲೋಹಿತ್ ಕುಮಾರ್ ಶೇ 97 ಹಾಗೂ ಸಂಕೇತ್ ಎನ್. ಪವಾರ್ ಶೇ 96ರಷ್ಟು ಅಂಕ ಗಳಿಸಿ ಶಾಲೆಗೆ ಅಗ್ರಸ್ಥಾನ ಗಳಿಸಿದ್ದಾರೆ.

‘ನಮ್ಮ ಶಾಲೆಯಲ್ಲಿ ಓದುತ್ತಿರುವ ವರಲ್ಲಿ ಬಹುತೇಕರು ಕೂಲಿ ಕಾರ್ಮಿಕರ ಮಕ್ಕಳಾಗಿದ್ದಾರೆ. ಎಲ್ಲರೂ ಉತ್ತೀರ್ಣ ರಾಗಿರುವುದು ಸಂತಸದ ವಿಷಯ. ಶರಾಜ್ ಎಂಬ ವಿದ್ಯಾರ್ಥಿ, ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದರು. ಅವರಿಗೆ ಕೃತಕ ಮೂತ್ರಕೋಶ ಅಳವಡಿಸಲಾಗಿದೆ. ಆತ ಶಾಲೆಯಲ್ಲಿ ಕಲಿಯುವಾಗ ಅವರ ತಂದೆ ಪ್ರತಿ ಮೂರು ಗಂಟೆಗೊಮ್ಮೆ ಬಂದು, ‘ಬ್ಲಾಡರ್’ ಖಾಲಿ ಮಾಡುತ್ತಿದ್ದರು. ಶರಾಜ್ ಮಾನಸಿಕವಾಗಿ ಕುಗ್ಗದೆ, ಶ್ರದ್ಧೆಯಿಂದ ಓದಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ 83ರಷ್ಟು ಅಂಕ ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾನೆ’ ಎಂದು ವಿನಾಯಕ ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿ ಟಿ.ಆರ್. ಉಮಾಪತಿ ತಿಳಿಸಿದರು.

ಲೋಹಿತ್ ಕುಮಾರ್

ಸಂಕೇತ್ ಎನ್. ಪವಾರ್

ಮರುಮೌಲ್ಯಮಾಪನ: ದ್ವಿತೀಯ ರ್‍ಯಾಂಕ್

ಬೆಂಗಳೂರು: ದಯಾನಂದ ಸಾಗರ ಪಿಯು ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಮರು ಮೌಲ್ಯಮಾಪನದಲ್ಲಿ ಹೆಚ್ಚುವರಿ ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ಎರಡನೇ ಮತ್ತು ನಾಲ್ಕನೇ ರ್‍ಯಾಂಕ್ ಪಡೆದಿದ್ದಾರೆ.

ಫಲಿತಾಂಶ ಪ್ರಕಟಗೊಂಡಾಗ ಇಬ್ಬರಿಗೂ ಕಡಿಮೆ ಅಂಕ ಬಂದಿತ್ತು. ಹಾಗಾಗಿ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದರು. ಕೆ.ಆರ್.ಭರತ್ 599 ಹಾಗೂ ಎಂ.ಪ್ರದೀಪ್ 596 ಅಂಕ ಪಡೆಯುವ ಮೂಲಕ ಕ್ರಮವಾಗಿ ದ್ವಿತೀಯ ಹಾಗೂ ನಾಲ್ಕನೇ ರ್‍ಯಾಂಕ್ ಗಳಿಸಿದ್ದಾರೆ ಎಂದು ಕಾಲೇಜು ಪ್ರಕಟಣೆ ತಿಳಿಸಿದೆ.

ಕೆ.ಆರ್.ಭರತ್

ಪ್ರದೀಪ್

ಶಿವಸ್ವಾಮಿ, ಜಿತೇಂದ್ರಗೆ ಕಸಾಪ ದತ್ತಿ ಪ್ರಶಸ್ತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ‘ಶ್ರೀಮತಿ ವಿ. ಗೌರಮ್ಮ ಗಂಗಾಧರಯ್ಯ ಮಕ್ಕಳು- ಸಿಬ್ಬಂದಿ ಸೇವಾ ದತ್ತಿ’ ಪ್ರಶಸ್ತಿಗೆ ಕೆ.ಸಿ. ಶಿವಸ್ವಾಮಿ ಹಾಗೂ ‘ಶ್ರೀಮತಿ ಎಸ್.ರಮಾದೇವಿ ವಿಶ್ವೇಶ್ವರಯ್ಯ ದತ್ತಿ’ ಪ್ರಶಸ್ತಿಗೆ ಎಂ.ಜಿತೇಂದ್ರ ಆಯ್ಕೆಯಾಗಿದ್ದಾರೆ.

ಶಿವಸ್ವಾಮಿ ಅವರು 24 ವರ್ಷಗಳಿಂದ, ಜಿತೇಂದ್ರ ಅವರು 23 ವರ್ಷಗಳಿಂದ ಕಸಾಪದಲ್ಲಿ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇದೇ 5ರಂದು ಸಂಜೆ 4 ಗಂಟೆಗೆ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಸಮಾರಂಭವು ಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ನಡೆಯಲಿದೆ. ಸಾಹಿತಿ ಹಂಪ ನಾಗರಾಜಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕಸಾಪ ಆಡಳಿತಾಧಿಕಾರಿ ಕೆ.ಎ.ದಯಾನಂದ ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಅಧ್ಯಕ್ಷ ನಲ್ಲೂರು ಪ್ರಸಾದ್, ಮನು ಬಳಿಗಾರ್ ಅವರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಕೊಡುಗೆಗಳ ಬಗ್ಗೆ ಜಗನ್ನಾಥ ಹೇಮಾದ್ರಿ ಅವರು ಉಪನ್ಯಾಸ ನೀಡಲಿದ್ದಾರೆ.

ಶಿವಸ್ವಾಮಿ

ಎಂ. ಜಿತೇಂದ್ರ

5ನೇ ವರ್ಷದ ಪುಣ್ಯ ಸ್ಮರಣೆ

ಶ್ರೀಮತಿ ನಂದಾ ಆಂಜನಪ್ಪ ರೆಡ್ಡಿ
W/o ಮೊಮು ಆಂಜನಪ್ಪ ರೆಡ್ಡಿ

(24.03.1969–03.05.2021)

ಪ್ರೀತಿ ವಾತ್ಸಲ್ಯದ ಬದುಕನ್ನು ಕಲಿಸಿ ನಮ್ಮೆಲ್ಲರೊಂದಿಗೆ ಆದರ್ಶದ ಬದುಕನ್ನು ಬಾಳಿ ಸರಳ ಸೌಜನ್ಯತೆಯ ಸಾಕಾರ ಮೂರ್ತಿಯಾಗಿದ್ದ ನೀವು ನಮ್ಮನ್ನು ಅಗಲಿ ಇಂದಿಗೆ ಐದು ವರ್ಷ ಕಳೆದರೂ, ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ.
ನಿಮ್ಮ ಆದರ್ಶಮಯ ಜೀವನ ನಮ್ಮ ಪಾಲಿಗೆ ಸದಾ ದಾರಿದೀಪವಾಗಿದೆ.

ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಮತ್ತು ಕುಟುಂಬವರ್ಗದವರು

ನೈಋತ್ಯ ರೈಲ್ವೆ

ಇ–ಟೆಂಡರಿಂಗ್ ಮೂಲಕ ಮುಕ್ತ ಟೆಂಡರ್ ಅಧಿಸೂಚನೆ ಸಂಖ್ಯೆ.10/SBC/26 ದಿ. 23.04.2026

ಭಾರತದ ರಾಷ್ಟ್ರಪತಿಗಳ ಪರವಾಗಿ, ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಗಳಿಗೆ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ.ಸಂ.	ಕೆಲಸದ ವಿವರ	ಅಂದಾಜು ಮೌಲ್ಯ
1	ವಿಭಾಗೀಯ ಅಭಿಯಂತರರು/ದಕ್ಷಿಣ/ಬೆಂಗಳೂರು: ಚಿಕ್ಕಬಾಣಾವರ–ಹಾಸನ ವಿಭಾಗ: ನೆಲಮಂಗಲ (ಎನ್‌ಎಂಜಿಎ) ನಿಲ್ದಾಣದ ಪ್ಲಾಟ್‌ಫಾರ್ಮ್–1 ರಲ್ಲಿ 140 ಮೀಟರ್, ಕುಣಿಗಲ್ (ಕೆಐಜಿಎಲ್) ನಿಲ್ದಾಣದ ಪ್ಲಾಟ್‌ಫಾರ್ಮ್–1,2 ಮತ್ತು 3 ರಿಂದ 20 ಮೀಟರ್, ಸಹಾಯಕ ವಿಭಾಗೀಯ ಅಭಿಯಂತರರು/ಕುಣಿಗಲ್ ಉಪವಿಭಾಗದಲ್ಲಿ ಯಡಿಯೂರು (ವೈವೈ) ನಿಲ್ದಾಣದ ಪ್ಲಾಟ್‌ಫಾರ್ಮ್ 1,2 ಮತ್ತು 3 ರಿಂದ 40 ಮೀಟರ್‌ಗಳವರೆಗೆ ಹೈ-ಲೆವೆಲ್ ಪ್ಲಾಟ್‌ಫಾರ್ಮ್ ವಿಸ್ತರಣೆಗೆ ಬಾಕಿ ಕೆಲಸ. ಉಪಕಾರ್ಯ II: ವಿಭಾಗೀಯ ಅಭಿಯಂತರರು/ದಕ್ಷಿಣ/ಬೆಂಗಳೂರು: ಚಿಕ್ಕಬಾಣಾವರ–ಹಾಸನ ವಿಭಾಗ: ಬಿಜಿ ನಗರ (ಬಿಜಿಎನ್‌ಆರ್) ನಿಲ್ದಾಣದ ಪ್ಲಾಟ್‌ಫಾರ್ಮ್–1, 2 ರಿಂದ 16 ಮೀಟರ್, ಹಿರಿಸಾವೆ (ಎಚ್‌ಐಎಸ್‌ಇ) ಪ್ಲಾಟ್‌ಫಾರ್ಮ್ 1,2 ಮತ್ತು 3 ರಿಂದ 20 ಮೀಟರ್, ಶ್ರವಣಬೆಳಗೊಳ (ಎಸ್‌ಬಿಜಿಎ) ನಿಲ್ದಾಣದ ಪ್ಲಾಟ್‌ಫಾರ್ಮ್ 1,2 ಮತ್ತು 3 ರಿಂದ 138 ಮೀಟರ್, ಚನ್ನರಾಯಪಟ್ಟಣ (ಸಿಎನ್‌ಪಿಎ) ಪ್ಲಾಟ್‌ಫಾರ್ಮ್ 1,2 ಮತ್ತು 3 ರಿಂದ 140 ಮೀಟರ್ ಮತ್ತು ಅಡೆನ್/ಕುಣಿಗಲ್ ಉಪ–ವಿಭಾಗದ ಚನ್ನರಾಯಪಟ್ಟಣ ನಿಲ್ದಾಣದಲ್ಲಿ ಕಾಂಪೌಂಡ್ ಗೋಡೆಯ ವಿಸ್ತರಣೆಗೆ ಬಾಕಿ ಕೆಲಸ. ನಿರ್ವಹಣಾ ಅವಧಿ 12 ತಿಂಗಳುಗಳು	ರೂ. 2,51,99,792/–
2	ವಿಭಾಗೀಯ ಅಭಿಯಂತರರು/ದಕ್ಷಿಣ/ಬೆಂಗಳೂರು ವಿಭಾಗ: ಉಪಕಾರ್ಯ I: ಸಹಾಯಕ ವಿಭಾಗೀಯ ಅಭಿಯಂತರರು /ಕುಣಿಗಲ್ ಉಪವಿಭಾಗದ ಅಡಿಯ ಸೋಲದೇವನಹಳ್ಳಿ (ಎಸ್‌ಡಿವಿಎಲ್), ಸೋಲೂರು (ಎಸ್‌ಒಎಲ್‌ಆರ್), ತಿಪ್ಪಸಂದ್ರ (ಟಿಎಎಸ್‌ಎ), ಯಡಿಯೂರು (ವೈವೈ), ಬಿ ಜಿ ನಗರ (ಬಿಜಿಎನ್‌ಆರ್), ಹಿರೀಸಾವೆ (ಎಚ್‌ಐಎಸ್‌ಇ) ಮತ್ತು ಶಾಂತಿಗ್ರಾಮ (ಎಸ್‌ಐಜಿಎ) ನಿಲ್ದಾಣಗಳಲ್ಲಿ ವಿದ್ಯುತ್ ಭಾಗಗಳೊಂದಿಗೆ ಪ್ರಸ್ತಾವಿತ ಟ್ರ್ಯಾಕ್‌ಮೆನ್ ವಿಶ್ರಾಂತಿ ಕೊಠಡಿ. ಉಪಕಾರ್ಯ II: ಆನೇಕಲ್ ಟಿಎಂ ವಿಶ್ರಾಂತಿ ಕೊಠಡಿ ಮತ್ತು ಸೇವಾ ಕಟ್ಟಡಗಳಿಗೆ ಸುಧಾರಿತ ಪ್ರವೇಶಕ್ಕಾಗಿ ಸಿಸಿ ರಸ್ತೆಯ ಪ್ರಸ್ತಾವಿತ ನಿರ್ಮಾಣ. ನಿರ್ವಹಣಾ ಅವಧಿ 3 ವರ್ಷಗಳು (ಸಂಯೋಜಿತ ಟೆಂಡರ್)	ರೂ. 1,88,46,526
3	ಓಮಲೂರು–ಯಶವಂತಪುರ ವಿಭಾಗ: ಸಹಾಯಕ ವಿಭಾಗೀಯ ಅಭಿಯಂತರರು/ಧರ್ಮಪುರಿ ಉಪವಿಭಾಗದಲ್ಲಿ ಓಮಲೂರು–ಬೆಂಗಳೂರು ನಿಲ್ದಾಣಗಳ ನಡುವಿನ 13 ಆರ್‌ಯುಬಿ ಸಂಖ್ಯೆಗಳಿಗೆ ಪ್ರಮಾಣಿತ ಎತ್ತರ ಮಾಪಕಗಳ ಪ್ರಸ್ತಾವಿತ ನಿಬಂಧನೆ – 31/ಎ, 31/ಬಿ, 32/ಎ, 35/ಎ, 42/ಎ, 45/ಎ, 81/ಎ, 82/ಬಿ, 178/ಎ, 243/ಎ, 427/ಎ, 541 ಮತ್ತು 580/ಎ. ನಿರ್ವಹಣಾ ಅವಧಿ 6 ತಿಂಗಳುಗಳು ಅಥವಾ ಒಂದು ಮುಂಗಾರು ಅವಧಿ, ಇವುಗಳಲ್ಲಿ ಯಾವುದು ನಂತರವೋ ಅದು.	ರೂ. 2,20,78,074
4	ಚಿಕ್ಕಬಾಣಾವರ – ಹಾಸನ ವಿಭಾಗ: ಸಹಾಯಕ ವಿಭಾಗೀಯ ಅಭಿಯಂತರರು/ಕುಣಿಗಲ್ ಉಪವಿಭಾಗದಲ್ಲಿ ಹಾಸನ – ನೆಲಮಂಗಲ ನಿಲ್ದಾಣಗಳ ನಡುವಿನ 20 ಆರ್‌ಯುಬಿ ಸಂಖ್ಯೆ 14, 73, 95, 96, 106, 168, 178, 177, 196, 204, 205, 221, 236, 281, 312, 323, 351, 356, 374 ಮತ್ತು 382 ಕ್ಕೆ ಸುಧಾರಣೆಗಳ ಪ್ರಸ್ತಾವನೆ. ನಿರ್ವಹಣಾ ಅವಧಿ 6 ತಿಂಗಳು ಅಥವಾ ಒಂದು ಮುಂಗಾರು, ಇವುಗಳಲ್ಲಿ ಯಾವುದು ನಂತರವೋ ಅದು.	ರೂ. 1,48,12,351
5	ಬೆಂಗಳೂರು ಧರ್ಮಾವರಂ ವಿಭಾಗ: ಆರ್‌ಯುಬಿ ಸೇತುವೆ ಒಳಚರಂಡಿಗೆ ಪ್ರಸ್ತಾವನೆ ವ್ಯವಸ್ಥೆಗಳು. ನಂ. 162/ಎ ಕಿಮೀ 154/200–300 ನಲ್ಲಿ ಮಕಜ್ಜಿಪಲ್ಲಿ (ಎಂಕೆಜೆ) – ನಾಗಸಮುದ್ರಂ (ಎನ್‌ಜಿಎಂ) ನಿಲ್ದಾಣಗಳ ನಡುವೆ ಮತ್ತು ಆರ್‌ಯುಬಿ ಸೇತುವೆ. ಪೆನುಕೊಂಡಿ–ಸತ್ಯ ಸಾಯಿ ಪ್ರಶಾಂತಿ ನಿಲಯ ರೈಲು ನಿಲ್ದಾಣ–ಧರ್ಮಾವರಂ ವಿಭಾಗದಲ್ಲಿ ಬಸಂಪಲ್ಲೆ (ಬಿಎಸ್‌ಪಿಎಲ್) ಧರ್ಮಾವರಂ (ಡಿಎಂಎಂ) ನಿಲ್ದಾಣಗಳ ನಡುವೆ ಕಿಮೀ 47/200–300 ರಲ್ಲಿ ನಂ. ಪಿಡಿ–133/ಎ. ನಿರ್ವಹಣೆ ಅವಧಿ 6 ತಿಂಗಳುಗಳು	ರೂ. 2,35,35,240
6	ಸಹಾಯಕ ವಿಭಾಗೀಯ ಅಭಿಯಂತರರು/ಮಂಡ್ಯ ಉಪವಿಭಾಗ:ಬೆಂಗಳೂರು ಎಲಿಯೂರು ವಿಭಾಗದಲ್ಲಿ ವಿದ್ಯುತ್ ಭಾಗ ಸೇರಿದಂತೆ ನಿಗದಿತ ಸ್ಥಳಗಳಲ್ಲಿ 16 ಸಂಖ್ಯೆಯ ಗೂಮ್ಟೀಸ್ ಕಟ್ಟಡ ನಿರ್ಮಾಣಕ್ಕೆ ಪ್ರಸ್ತಾವನೆ. ನಿರ್ವಹಣೆ ಅವಧಿ 3 ವರ್ಷಗಳು. ಸಂಯೋಜಿತ ಟೆಂಡರ್.	ರೂ. 4,00,73,852
7	ಸಹಾಯಕ ವಿಭಾಗೀಯ ಅಭಿಯಂತರರು/ಮಂಡ್ಯ ಉಪವಿಭಾಗ:ನಾಯಂಡಹಳ್ಳಿ (ಎನ್‌ವೈಎಚ್), ಹೆಜ್ಜಾಲ (ಎಚ್‌ಕೆಎಲ್), ಚನ್ನಪಟ್ಟಣ (ಸಿಪಿಟಿ) ಮತ್ತು ಬಿಡದಿ (ಬಿಐಡಿ) ಕೇಂದ್ರಗಳಲ್ಲಿ ವಿದ್ಯುತ್ ಭಾಗ ಸೇರಿದಂತೆ 4 ಎಸ್ ಮತ್ತು ಟಿ ವಸತಿ ಕಟ್ಟಡಗಳ ಪ್ರಸ್ತಾವಿತ ನಿರ್ಮಾಣ. ನಿರ್ವಹಣಾ ಅವಧಿ 3 ವರ್ಷಗಳು. ಸಂಯೋಜಿತ ಟೆಂಡರ್	ರೂ. 2,72,43,579
8	ಬೆಂಗಳೂರು–ಜೋಲಾರಪೇಟೆ ವಿಭಾಗ:ಸಹಾಯಕ ವಿಭಾಗೀಯ ಅಭಿಯಂತರರು/ಬಂಗಾರಪೇಟೆ ಉಪ–ವಿಭಾಗದಲ್ಲಿ. ಕೆಎಂ 285/400–500 (ಉದಾ. ಸ್ಪಾನ್ 1 x 7.10ಎಂ+2x9.15ಎಂ+1x10.35ಎಂ ಡಿಎನ್) ನಲ್ಲಿ ಸೇತುವೆ ಸಂಖ್ಯೆ 758 ರ ಪಿಎಸ್‌ಸಿ ಸ್ಲ್ಯಾಬ್‌ನೊಂದಿಗೆ ಸ್ಟೀಲ್ ಗಿರ್ಡರ್‌ಗಳ ಬದಲಿ. ನಿರ್ವಹಣಾ ಅವಧಿ 4 ವರ್ಷಗಳು.	ರೂ. 1,45,44,543
9	ಸಹಾಯಕ ವಿಭಾಗೀಯ ಅಭಿಯಂತರರು/ಬಂಗಾರಪೇಟೆ ಉಪ–ವಿಭಾಗ: ಬಂಗಾರಪೇಟೆ (ಬಿಡಬ್ಲ್ಯೂಟಿ) ನಿಲ್ದಾಣದಲ್ಲಿ ವಿದ್ಯುತ್ ಭಾಗಗಳನ್ನು ಒಳಗೊಂಡಂತೆ ಟೈಪ್–ಇಲ್ ಕ್ವಾರ್ಟರ್ಸ್ 12 ಯೂನಿಟ್‌ಗಳು ಮತ್ತು ಟೈಪ್–ಖಖಖ ಕ್ವಾರ್ಟರ್ಸ್ 4 ಯೂನಿಟ್‌ಗಳ ಪುನರ್ನಿರ್ಮಾಣಕ್ಕೆ ಪ್ರಸ್ತಾವಿತ. ನಿರ್ವಹಣಾ ಅವಧಿ 3 ವರ್ಷಗಳು. ಸಂಯೋಜಿತ ಟೆಂಡರ್.	ರೂ. 4,00,12,222

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18–05–2026 ರಂದು 15.00 ಗಂಟೆಗಳವರೆಗೆ

ವಿವರಗಳಿಗಾಗಿ **www.ireps.gov.in** ಲಾಗಿನ್ ಮಾಡಿ.

ಹಿರಿಯ ವಿಭಾಗೀಯ ಅಭಿಯಂತರರು/ಸಮನ್ವಯ/ಬೆಂಗಳೂರು

ಪಿಯುಬಿ/83/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27

ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487 ಇ–ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ಕಲ್ಯಾಣ ಶಾಖೆ/ಸಿ.ಆರ್/01/2026–27 ದಿನಾಂಕ: 28/04/2026

ಸಾರ್ವಜನಿಕ ಪ್ರಕಟಣೆ

ಮಾದನಾಯಕನಹಳ್ಳಿ ನಗರಸಭೆಯ 2026–27ನೇ ಸಾಲಿನ ಎಸ್.ಎಫ್.ಸಿ ಹಾಗೂ ನಗರಸಭಾ ನಿಧಿಯ ಅನುದಾನದಲ್ಲಿ ವೈಯಕ್ತಿಕ ಕಾರ್ಯಕ್ರಮಗಳ ಯೋಜನೆಯಡಿ ಶೇ.17.15ರ ಯೋಜನೆ (ಪರಿಶಿಷ್ಟ ಜಾತಿ) ಮತ್ತು ಶೇ.6.95ರ ಯೋಜನೆ (ಪರಿಶಿಷ್ಟ ಪಂಗಡದವರಿಗೆ), 7.25ರ ಯೋಜನೆ (ಹಿಂದುಳಿದ ವರ್ಗ) ಹಾಗೂ ಶೇ.5ರ ಯೋಜನೆ (ವಿಶೇಷಚೇತನರಿಗೆ) ಗಳಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲು ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯ ಅರ್ಹ ಅಭ್ಯರ್ಥಿ / ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಕೆಳಕಂಡ ಸೌಲಭ್ಯಗಳನ್ನು ಪಡೆಯಲು ಅರ್ಹ ಪ.ಜಾ/ಪ.ಪಂ ವರ್ಗದವರು ಮತ್ತು ಇತರೆ ಹಿಂದುಳಿದ ಬಡ ಜನಾಂಗದವರು ಹಾಗೂ ವಿಶೇಷಚೇತನರು ದಿನಾಂಕ: **31/05/2026** ರೊಳಗಾಗಿ ಅರ್ಜಿಗಳನ್ನು ಈ ಕಛೇರಿಗೆ ಸಲ್ಲಿಸತಕ್ಕದ್ದು. ತಡವಾಗಿ ಬಂದ ಅರ್ಜಿಗಳನ್ನು ಅಥವಾ ಅಪೂರ್ಣ ಮಾಹಿತಿಯುಳ್ಳ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ ಈ ಕಛೇರಿಯ ಕಲ್ಯಾಣ ಶಾಖೆಯನ್ನು ಸಂಪರ್ಕಿಸುವುದು.

ಎಸ್.ಎಫ್.ಸಿ ಮುಕ್ತನಿಧಿ ಹಾಗೂ ನಗರಸಭಾ ನಿಧಿ

ಶೇ.17.15ರ ಯೋಜನೆ (ಪರಿಶಿಷ್ಟ ಜಾತಿ) ಹಾಗೂ ಶೇ.6.95ರ ಯೋಜನೆ (ಪರಿಶಿಷ್ಟ ಪಂಗಡ)	
01.	ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿವಿಧ ಹಂತಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಹಧನ ನೀಡುವುದು.
02.	ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಗ್ರಾಮಠಾಣಾದಲ್ಲಿ ವಾಸಿಸುವ (ಗ್ರಾಮ ಪಂಚಾಯಿತಿಯ ನಮೂನೆ 9 & 11 ಅಥವಾ ನಗರಸಭೆಯ ನಮೂನೆ–3 ಹೊಂದುರುವಂತಹ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಡಜನರ ಮನೆ ರಿಪೇರಿಗಾಗಿ ಸಹಾಯಧನ ನೀಡುವುದು.
03.	ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಿ.ಇ / ಎಂ.ಬಿ.ಬಿ.ಎಸ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಸಲು ಸಹಾಯಧನ ನೀಡುವುದು.
ಶೇ.7.25ರ ಯೋಜನೆ (ಹಿಂದುಳಿದವರಿಗೆ)	
01.	ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಹಿಂದುಳಿದ ವರ್ಗದ ವಿವಿಧ ಹಂತಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಹಧನ ನೀಡುವುದು
02.	ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಇತರೆ ಹಿಂದುಳಿದ ವರ್ಗಗಳ ಬಿ.ಇ / ಎಂ.ಬಿ.ಬಿ.ಎಸ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಸಲು ಸಹಾಯಧನ ನೀಡುವುದು.
ಶೇ.5ರ ಕಾರ್ಯಕ್ರಮ (ವಿಶೇಷಚೇತನರಿಗೆ)	
01.	ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ವಿಶೇಷಚೇತನರಿಗೆ ಅಂಗವಿಕಲ ಸಾಧನ ಸಲಕರಣೆ ಖರೀದಿಸಿ ನೀಡುವುದು.
02.	ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ವಾಸಿಸುವ ವಿಶೇಷಚೇತನ ಸಣ್ಣ ಉದ್ದಿಮೆದಾರರಿಗೆ ಸಹಾಯಧನ ನೀಡುವುದು.
03.	ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ವಾಸಿಸುವ ವಿಶೇಷಚೇತನ 16 ವರ್ಷದ ಒಳಗಿನ ಹೆಣ್ಣು ಮಕ್ಕಳಿಗೆ ಸಿಂಗಲ್ ಪ್ರೀಮಿಯಮ್ ಜೀವಾ ವಿಮೆ ಮಾಡಿಸುವುದು.
04.	ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ವಾಸಿಸುವ ವಿಶೇಷಚೇತನರ ಮನೆ ರಿಪೇರಿಗೆ ಸಹಾಯಧನ ನಿಡುವುದು.

ಷರತ್ತುಗಳು:– (1) ಒಬ್ಬ ಫಲಾನುಭವಿಯು ಒಂದು ಯೋಜನೆಯಲ್ಲಿ ಮಾತ್ರ ಸೌಲಭ್ಯವನ್ನು ಪಡೆಯಲು ಅವಕಾಶವಿರುತ್ತದೆ. (2) ನಗರಸಭೆ ವ್ಯಾಪ್ತಿಯಲ್ಲಿನ ಅಭ್ಯರ್ಥಿಗಳು/ಫಲಾನುಭವಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. (3) ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವವರಿಗೆ ಗರಿಷ್ಠ ರೂ.2,50,000/– ವಾರ್ಷಿಕ ಆದಾಯ ಹಾಗೂ ಉಳಿದ ಸೌಲಭ್ಯ ಪಡೆಯುವವರಿಗೆ ವಾರ್ಷಿಕ 3,00,000/– ಆದಾಯ ಇರತಕ್ಕದ್ದು. (4) ಪ್ರಸಕ್ತ ಸಾಲಿನಲ್ಲಿ ವಿಧ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ಗರಿಷ್ಠ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. (5) ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ಪ್ರಕಟಣೆಯ ದಿನಾಂಕದಿಂದ ನಿಗಧಿಪಡಿಸಿರುವ ಕೊನೆಯ ದಿನಾಂಕದ ಒಳಗೆ ಸಂಬಂದಪಟ್ಟ ಕಾಲೇಜ್ ಪ್ರಾಂಶುಪಾಲರಿಂದ ಪಡೆದ ವ್ಯಾಸಂಗ ದೃಡೀಕರಣ ಪತ್ರ / ಶಾಲಾ ಪ್ರವೇಶ ಪತ್ರ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. (6) ಸಂಬಂದಪಟ್ಟ ಝೆರಾಕ್ಸ್ ದಾಖಲಾತಿಗಳಿಗೆ ಸ್ಥಳೀಯ ಗೆಜೆಟೇಡ್ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು. (7) ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (8) ಸೌಲಭ್ಯ ಪಡೆಯಲು ಆಯ್ಕೆಯಾಗಿರುವ ಫಲಾನುಭವಿಯು ಸವಲತ್ತನ್ನು ಮಾರಿಕೊಳ್ಳುವುದು/ಅನ್ಯರಿಗೆ ಮಾರಾಟ ಮಾಡುವುದು ಕಂಡುಬಂದಲ್ಲಿ ಅಂತಹ ಫಲಾನುಭವಿಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು.

ಸಹಿ/–
ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ಸಹಿ/– ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರಜಿಲ್ಲೆ ಹಾಗೂ ಅಡಳಿತಾಧಿಕಾರಿಗಳು
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/ಎಸ್‌ಎಂಸಿಎಲ್/459/2026–27

ಆರ್‌ಎಂಪಿ 2041: ಡ್ರೋನ್ ಸರ್ವೆಗೆ ಸಿದ್ಧತೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಗೆ 450 ಚದರ ಕಿ.ಮೀ ವರ್ಷದೊಳಗೆ ಆರ್‌ಎಂಪಿ ತಯಾರಿಸಿಕೊಡಲು ಗಡುವು

● ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಸ್ಥಳೀಯ ಯೋಜನಾ ಪ್ರದೇಶದ 'ಪರಿಷ್ಕೃತ ಮಾಸ್ಟರ್ ಪ್ಲಾನ್ 2041 (ಆರ್‌ಎಂಪಿ)' ಅನ್ನು ಡ್ರೋನ್ ಮೂಲಕ 3ಡಿ ಸರ್ವೆ ನಡೆಸಿ ಸಿದ್ಧಪಡಿಸಲು ನಿರ್ಧರಿಸಿದೆ.

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಏಜೆನ್ಸಿ ಆಯ್ಕೆ ಮಾಡಲು ಅರ್ಹ ಸಂಸ್ಥೆಗಳಿಂದ ಬಿಡ್ ಆಹ್ವಾನಿಸಿದ್ದು, ವರ್ಷದೊಳಗೆ ಆರ್‌ಎಂಪಿ ತಯಾರಿಸಿಕೊಡಲು ಗಡುವು ನೀಡಲಾಗಿದೆ. ಈ ಸಮೀಕ್ಷೆಯು ನಗರ ಮತ್ತು ಸುತ್ತಲಿನ ಪ್ರದೇಶಗಳ ವಿವರವಾದ ಪ್ರಾದೇಶಿಕ ಮತ್ತು ಭೌಗೋಳಿಕ ಮಾಹಿತಿ ಒದಗಿಸುವ ಗುರಿ ಹೊಂದಿದೆ.

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿರುವ ಒಟ್ಟು 242 ಹಳ್ಳಿಗಳನ್ನು ಒಳಗೊಂಡ ಯೋಜನೆ ಸಿದ್ಧಪಡಿಸಲಾಗುತ್ತಿದೆ.

ಜಿಬಿಎ ನಗರದ ಒಳಭಾಗದ 710 ಚದರ ಕಿಲೋ ಮೀಟರ್ ಜವಾಬ್ದಾರಿ ವಹಿಸಿಕೊಂಡಿದೆ. ಬಿಡಿಎ ತನ್ನ ವ್ಯಾಪ್ತಿಯ ಸುಮಾರು 450 ಚದರ ಕಿ.ಮೀ. ಪ್ರದೇಶ ಮತ್ತು ಗ್ರಾಮಗಳನ್ನು ಒಳಗೊಂಡಂತೆ ಮಹಾ ಯೋಜನೆಯ ನೀಲನಕ್ಷೆ ಸಿದ್ಧಪಡಿಸುತ್ತಿದೆ. ಬೆಂಗಳೂರು ನಗರ ಶಿಸ್ತುಬದ್ಧವಾಗಿ ಅಭಿವೃದ್ಧಿ ಸಾಧಿಸಲು ಈ ಯೋಜನೆ ಪೂರಕವಾಗಲಿದೆ ಎನ್ನುತ್ತಾರೆ ಬಿಡಿಎ ಅಧಿಕಾರಿಗಳು.

ಆನೇಕಲ್ ತಾಲ್ಲೂಕಿನ ಅತ್ತಿಬೆಲೆ, ಜಿಗಣಿ, ಹೆಸರುಘಟ್ಟ, ಯಶವಂತಪುರ, ಜಾಲ, ಯಲಹಂಕ, ಕೆಂಗೇರಿ, ತಾವರೆಕರೆ ಹೋಬಳಿಗಳು, ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ, ವರ್ತೂರು ಹೋಬಳಿಗಳ ಒಟ್ಟು 242 ಗ್ರಾಮಗಳು ಯೋಜನೆಗೆ ಒಳಪಡಲಿವೆ.

ಈ ಯೋಜನೆಯಲ್ಲಿ ಸಂಚಾರ ದಟ್ಟಣೆ ನಿವಾರಣೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಹಾಗಾಗಿ ಹೊರವರ್ತುಲ ರಸ್ತೆ ಮತ್ತು ಸಾರಿಗೆ ಆಧಾರಿತ ಅಭಿವೃದ್ಧಿ ಮಾಡಲು ಯೋಜಿಸಲಾಗಿದೆ. ಮೆಟ್ರೊ ಕಾರಿಡಾರ್‌ಗಳ ಸಮೀಪದ ಜಮೀನುಗಳ ಅಭಿವೃದ್ಧಿ ಮತ್ತು ಕಂದಾಯ ಭೂಮಿಯನ್ನು ಯೋಜನಾ ಬದ್ಧವಾಗಿ ವಸತಿ ಪ್ರದೇಶಗಳನ್ನಾಗಿ ಮಾರ್ಪಡಿಸುವ ಕುರಿತು ಬಿಡಿಎ ಚಿಂತನೆ ನಡೆಸಿದೆ.

ಭೌಗೋಳಿಕ ಮಾಹಿತಿ ವ್ಯವಸ್ಥೆ ವಿಧಾನದ ಮೂಲಕ ಸಮೀಕ್ಷೆ ಕೈಗೊಳ್ಳಲಾಗುವುದು. ಪ್ರತಿ ಇಂಚು ಭೂಮಿ ಬಳಕೆಯ ನಿಖರ ಮಾಹಿತಿ ಸಂಗ್ರಹಿಸಲಾಗುತ್ತದೆ. ಕೃಷಿ, ವಸತಿ, ವಾಣಿಜ್ಯ ವಲಯ, ಕಂದಾಯ ಭೂಮಿ, ಇತರೆ ಸಂಗತಿಗಳನ್ನು ಪರಿಶೀಲಿಸಲಾಗುತ್ತದೆ.

ಕೃಷಿ, ವಸತಿ, ವಾಣಿಜ್ಯ ಉದ್ದೇಶಕ್ಕೆ ಬಳಸುವ ಜಮೀನು ಎಷ್ಟು? ಹಾಗೂ ಸರ್ಕಾರಿ ಜಮೀನು ಎಷ್ಟು? ಎಂಬುದನ್ನು ಮೌಲ್ಯಮಾಪನ ಮಾಡುವ ಮೂಲಕ ಆರ್‌ಎಂಪಿ–2041 ಸಮಗ್ರವಾಗಿರುವುದನ್ನು ಖಾತರಿಪಡಿಸಲಾಗುವುದು. ಇದರ ಆಧಾರದ ಮೇಲೆ ಪರಿಷ್ಕೃತ ಮಾಸ್ಟರ್ ಪ್ಲಾನ್ ತಯಾರಿಸುವ ಬಗ್ಗೆ ತಜ್ಞರು, ಸಾರ್ವಜನಿಕ ಸಂಸ್ಥೆಗಳೊಂದಿಗೆ ಚರ್ಚಿಸಲಾಗುತ್ತದೆ. ಬಳಿಕ ಕರಡು ಸಿದ್ಧಪಡಿಸಲಾಗುತ್ತದೆ.

ಆರ್‌ಎಂಪಿ ಸಿದ್ಧವಾದ ಬಳಿಕ ವಲಯ ನಿಯಮಗಳು, ರಸ್ತೆ ವಿಸ್ತರಣೆ, ಭೂ ಬಳಕೆ, ವಾಣಿಜ್ಯ, ವಸತಿ ಮತ್ತು ಕೈಗಾರಿಕಾ ಪ್ರದೇಶದ ವಿಸ್ತರಣೆ, ಪಿಆರ್‌ಆರ್, ರಾಜ್ಯ, ರಾಷ್ಟ್ರೀಯ ಹೆದ್ದಾರಿ ಸಂಪರ್ಕ ರಸ್ತೆಗಳ ವಿಸ್ತೀರ್ಣ, ಉದ್ಯಾನ ಹಾಗೂ ಸಾರ್ವಜನಿಕ ಮೂಲಸೌಕರ್ಯಕ್ಕೆ ಅಗತ್ಯವಿರುವ ಭೂಮಿಯನ್ನು ಕಾಯ್ದಿರಿಸಲಾಗುತ್ತದೆ.

ಸಂಚಾರ ದಟ್ಟಣೆ, ಪ್ರವಾಹ ಪರಿಸ್ಥಿತಿ, ನೀರಿನ ಅಭಾವ ಮತ್ತು ಅನಿಯಂತ್ರಿತ ನಗರೀಕರಣ ತಡೆಗಟ್ಟಲು ಈ ಯೋಜನೆ ಒತ್ತು ನೀಡಲಿದೆ. ಸಾರಿಗೆ ಆಧಾರಿತ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಗೆ ಪೂರಕವಾಗಿ ನಿಯಮ ರೂಪಿಸಲಾಗುತ್ತದೆ.

2015ರ ಮಾಸ್ಟರ್ ಪ್ಲಾನ್

ಪ್ರತಿ ಹತ್ತು ವರ್ಷಕ್ಕೊಮ್ಮೆ ನಗರ ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು ಮಹಾಯೋಜನೆ ಸಿದ್ಧಪಡಿಸಬೇಕು. ಆದರೆ, ಈ ಹಿಂದೆ ಎರಡು ಬಾರಿ ಮಹಾಯೋಜನೆಗಾಗಿ ಸಿದ್ಧತೆ ನಡೆಸಿ, ಅಂತಿಮ ಕರಡು ತಯಾರಿಸಿದರೂ ಹಲವು ಕಾರಣಕ್ಕೆ ಕೈ ಬಿಡಲಾಯಿತು.

11 ವರ್ಷಗಳ ಹಿಂದೆ ಅನುಮೋದಿಸಲಾಗಿದ್ದ ಪರಿಷ್ಕೃತ ಮಾಸ್ಟರ್ ಪ್ಲಾನ್–2015 ಅನ್ನು ನಂತರ ಪರಿಷ್ಕರಿಸಿಲ್ಲ. ಆರ್‌ಎಂಪಿ–31 ಅನ್ನು ತಾಂತ್ರಿಕ ಕಾರಣಕ್ಕೆ ಹಿಂಪಡೆಯಲಾಯಿತು.

ಕಟ್ಟಡಗಳು, ವಿನ್ಯಾಸಗಳು ಮತ್ತು ಅಭಿವೃದ್ಧಿ ಯೋಜನೆಗಳಿಗೆ ಅನುಮೋದನೆಗಳನ್ನು ನೀಡಲು ಬಿಡಿಎ ಬಳಸುವ ಪ್ರಾಥಮಿಕ ದಾಖಲೆಯು ಮಾಸ್ಟರ್ ಪ್ಲ್ಯಾನ್ ಆಗಿದೆ. ಸಂಚಾರ ಆಧಾರಿತ ಅಭಿವೃದ್ಧಿ ಪರಿಕಲ್ಪನೆ ಇಟ್ಟುಕೊಂಡು ಮಹಾಯೋಜನೆ ರೂಪಿಸಲು ಸಿದ್ಧತೆ ನಡೆದಿತ್ತು.

> **ಆರ್‌ಎಂಪಿ ಸಿದ್ಧಪಡಿಸುವ ಸಲಹಾ ಸಂಸ್ಥೆಯ ಆಯ್ಕೆಗೆ ಟೆಂಡರ್ ಕರೆಯಲಾಗಿದೆ. ಒಂದು ವರ್ಷದೊಳಗೆ ಯೋಜನೆಯ ಕರಡು ಸಿದ್ಧಪಡಿಸಲು ಗಡುವು ನೀಡಲಾಗುವುದು**
> **ಶಶಿಕುಮಾರ್,** ನಗರ ಯೋಜನಾ ಸದಸ್ಯ

ಇ–ಸ್ವತ್ತು 2.0: 1.40 ಲಕ್ಷ ಅರ್ಜಿ ಅನುಮೋದನೆ

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್ ಖರ್ಗೆ

ಬೆಂಗಳೂರು: ಇ–ಸ್ವತ್ತು 2.0 ತಂತ್ರಾಂಶದಡಿ ಸ್ವೀಕರಿಸುತ್ತಿರುವ ಅರ್ಜಿಗಳ ವಿಲೇವಾರಿ ಪ್ರಕ್ರಿಯೆ ತೀವ್ರಗೊಳಿಸಿದ್ದು, ಈವರೆಗೆ ಒಟ್ಟು 1,40,719 ಅರ್ಜಿಗಳನ್ನು ಅನುಮೋದಿಸಿ, ವಿಲೇವಾರಿ ಮಾಡಲಾಗಿದೆ ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಹೊಸ ನಮೂನೆ 11–ಬಿ ಅಡಿ ಈವರೆಗೆ 82,640 ಅರ್ಜಿಗಳು ಸ್ವೀಕೃತವಾಗಿದ್ದು, ವಿವಿಧ ಹಂತಗಳಲ್ಲಿ ಈ ಅರ್ಜಿಗಳು ಅನುಮೋದನೆಗೆ ಬಾಕಿ ಉಳಿದಿವೆ. ಈ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಇ–ಸ್ವತ್ತು 2.0 ತಂತ್ರಾಂಶದಡಿ ಸಾರ್ವಜನಿಕರಿಂದ ಇದುವರೆಗೆ ಒಟ್ಟು 1,52,863 ಅರ್ಜಿಗಳು ಸ್ವೀಕೃತವಾಗಿವೆ. ಇವುಗಳಲ್ಲಿ 7,896 ಅರ್ಜಿಗಳು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಲಾಗಿನ್‌ನಲ್ಲಿ, 3,182 ಅರ್ಜಿಗಳು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಲಾಗಿನ್‌ನಲ್ಲಿ, 4,036 ಅರ್ಜಿಗಳು ಗ್ರಾಮ ಪಂಚಾಯಿತಿ ಅಧ್ಯಕ್ಷರು/ಆಡಳಿತಾಧಿಕಾರಿ ಲಾಗಿನ್‌ನಲ್ಲಿ ಹಾಗೂ 1,947 ಅರ್ಜಿಗಳು ತಾ.ಪಂ. ಇಒ ಲಾಗಿನ್‌ನಲ್ಲಿ ಅನುಮೋದನೆಗಾಗಿ ಬಾಕಿ ಇವೆ ಎಂದಿದ್ದಾರೆ.

ಅಲ್ಲದೇ, 950 ಅರ್ಜಿಗಳು ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆಗೊಂಡು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಲಾಗಿನ್‌ನಲ್ಲಿವೆ. ಈ ರೀತಿ, ವಿವಿಧ ಹಂತಗಳಲ್ಲಿ ಒಟ್ಟು 18,011 ಅರ್ಜಿಗಳು ಅನುಮೋದನೆಗಾಗಿ ಬಾಕಿ ಇವೆ ಎಂದು ವಿವರಿಸಿದ್ದಾರೆ.

ಇ–ಸ್ವತ್ತು 2.0 ತಂತ್ರಾಂಶದ ಸಿಟಿಜನ್ ಇಂಟರ್ಫೇಸ್ ಮೂಲಕ ಅರ್ಜಿಗಳನ್ನು ಸಲ್ಲಿಸುವಲ್ಲಿ ಮತ್ತು ಬಳಕೆದಾರರು ಅರ್ಜಿಗಳನ್ನು ಅನುಮೋದನೆ ಮಾಡುವ ಸಂದರ್ಭಗಳಲ್ಲಿ ಎದುರಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳನ್ನು ಆದಷ್ಟು ಪರಿಹರಿಸಲಾಗಿದೆ ಎಂದು ಪ್ರಿಯಾಂಕ್ ಹೇಳಿದ್ದಾರೆ.

ತಂತ್ರಾಂಶದಲ್ಲಿ ಬದಲಾವಣೆ

- ಹೊಸ ಬಡಾವಣೆಗಳಿಗೆ ಅರ್ಜಿಗಳನ್ನು ಸಲ್ಲಿಸಲು ಗ್ರಾಮ ಪಂಚಾಯಿತಿ ಹಂತದಲ್ಲಿ ಅವಕಾಶ ನೀಡಲಾಗಿದೆ. ಈವರೆಗೆ 2,238 ಹೊಸ ಬಡಾವಣೆಗಳಿಗೆ ಅರ್ಜಿ ಸಲ್ಲಿಕೆಯಾಗಿದ್ದು, ಅವುಗಳಲ್ಲಿ 998 ಹೊಸ ಬಡಾವಣೆಗಳಿಗೆ ಗ್ರಾಮ ಪಂಚಾಯಿತಿ ಹಂತದಲ್ಲಿ ಅನುಮೋದನೆ
- ನಮೂನೆ–11 ಬಿ ಖಾತೆಗಳನ್ನು ನಮೂನೆ–11ಎ ಗಳಾಗಿ ಪರಿವರ್ತನೆ ಮಾಡಿಕೊಳ್ಳಲು ಗ್ರಾಮ ಪಂಚಾಯಿತಿ ಹಂತದಲ್ಲಿ ಅವಕಾಶ
- ಹೊಸ ಬಹುಮಹಡಿ ಕಟ್ಟಡಗಳಿಗೆ (ಅಪಾರ್ಟ್‌ಮೆಂಟ್) ಅರ್ಜಿಗಳನ್ನು ಸಲ್ಲಿಸಲು ಗ್ರಾಮ ಪಂಚಾಯಿತಿ ಹಂತದಲ್ಲಿ ಅವಕಾಶ
- ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್ಫೇಸ್ ಮೂಲಕ ಅರ್ಜಿಗಳನ್ನು ಸಲ್ಲಿಸುವಲ್ಲಿ ಗುಂಟೆ ಮತ್ತು ಸೆಂಟ್ಸ್‌ನಲ್ಲಿರುವ ವಿಸ್ತೀರ್ಣವನ್ನು ಚ.ಮೀನಲ್ಲಿ ಪರಿವರ್ತಿಸಿ, ಅರ್ಜಿಗಳನ್ನು ಸಲ್ಲಿಸಲು ಅವಕಾಶ
- ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್ಫೇಸ್ ಮೂಲಕ ಋಣಭಾರ ಪ್ರಮಾಣಪತ್ರ ಸಲ್ಲಿಸಲು ಉಂಟಾಗುತ್ತಿದ್ದ ಸಮಸ್ಯೆ ಬಗೆಹರಿಸಲಾಗಿದೆ.

'ಪಿಟಿಸಿಎಲ್ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸರ್ಕಾರ ಮಂಜೂರು ಮಾಡಿರುವ ಜಮೀನನ್ನು ರಕ್ಷಿಸುವ ಕರ್ನಾಟಕ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪಂಗಡಗಳ (ಎಸ್‌ಟಿ) (ಕೆಲವು ಭೂಮಿಗಳ ವರ್ಗಾವಣೆ ನಿಷೇಧ– ಪಿಟಿಸಿಎಲ್) ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಮುಖಂಡ ಎನ್. ವೆಂಕಟೇಶ್, ಕೋಟಿಗಾನಹಳ್ಳಿ ರಾಮಯ್ಯ, ಹೆಣ್ಣೂರು ಶ್ರೀನಿವಾಸ್, 'ಪಿಟಿಸಿಎಲ್ ಕಾಯ್ದೆಯ ವಿರುದ್ಧ ಜಿಲ್ಲಾಧಿಕಾರಿಗಳು ಹಾಗೂ ಉಪ ವಿಭಾಗಾಧಿಕಾರಿಗಳು ಸರ್ವಾಧಿಕಾರಿಗಳಂತೆ ವರ್ತಿಸುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕು. ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ಅನುದಾನವನ್ನು ಗ್ಯಾರಂಟಿ ಯೋಜನೆಗೆ ಬಳಕೆ ಮಾಡಬಾರದು' ಎಂದು ಒತ್ತಾಯಿಸಿದರು.

'ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾಗಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿ, ಪ್ರತಿವರ್ಷ ₹500 ಕೋಟಿ ಅನುದಾನ ಮೀಸಲಿಡಬೇಕು. ಉನ್ನತ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟರ ಮಕ್ಕಳಿಗೆ ಸರಿಯಾದ ಸಮಯಕ್ಕೆ ಶುಲ್ಕ ಮರುಪಾವತಿ ಮಾಡಬೇಕು. ರೋಹಿತ್ ವೇಮುಲ ಕಾಯ್ದೆಯನ್ನು ಕೂಡಲೇ ಜಾರಿಗೊಳಿಸಬೇಕು' ಎಂದರು.

'ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಪ್ರಮಾಣವನ್ನು ಹಂಚಿಕೆ ಮಾಡಿರುವ ರಾಜ್ಯ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಒಳ ಮೀಸಲಾತಿಯನ್ನು ಜಾರಿಗೊಳಿಸಿ, ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಬೇಕು' ಎಂದು ಆಗ್ರಹಿಸಿದರು.

'ನಮ್ಮ ಆರ್ಟ್ ಬೆಂಗಳೂರು' 6ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾಕೃತಿಗಳಿಗೆ ನವದೆಹಲಿ ಮತ್ತು ಮುಂಬೈ ಮಾದರಿಯಲ್ಲಿ ಮಾರುಕಟ್ಟೆ ಕಲ್ಪಿಸುವ ಉದ್ದೇಶದಿಂದ ಕುಮಾರಕೃಪ ರಸ್ತೆಯಲ್ಲಿರುವ ಕರ್ನಾಟಕ ಚಿತ್ರಕಲಾ ಪರಿಷತ್ತು ಇದೇ 6ರಿಂದ 10ರವರೆಗೆ 'ನಮ್ಮ ಆರ್ಟ್–ಬೆಂಗಳೂರು' ರಾಷ್ಟ್ರೀಯ ಕಲಾಮೇಳ ಹಮ್ಮಿಕೊಂಡಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, 'ಕಳೆದ ವರ್ಷ ಈ ಮೇಳವನ್ನು ಪ್ರಾರಂಭಿಸಿದ್ದು, ಇದು ಎರಡನೇ ಆವೃತ್ತಿಯಾಗಿದೆ. ಇದು ಎಲ್ಲರನ್ನೂ ಒಳಗೊಳ್ಳುವ ಕಲಾ ಮೇಳವಾಗಿದ್ದು, ಸಾಂಪ್ರದಾಯಿಕ ಹಾಗೂ ಸಮಕಾಲೀನ ಕಲೆಗೆ ವಿಸ್ತೃತವಾದ ವೇದಿಕೆಯಾಗಿದೆ. ದೇಶದ ಪ್ರಖ್ಯಾತ 80 ಕಲಾವಿದರು ಸೇರಿದಂತೆ 150 ಕಲಾವಿದರ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ. ಇದಕ್ಕೆ ಪರಿಷತ್ತಿನ ಆವರಣದಲ್ಲಿ ನಿರ್ಮಾಣವಾಗಿರುವ 60 'ಚಿತ್ತಾರ' ಮಳಿಗೆಗಳು ಹಾಗೂ ಗ್ಯಾಲರಿಗಳನ್ನು ಬಳಸಿ ಕೊಳ್ಳಲಾಗುತ್ತಿದೆ. ಬೆಳಿಗ್ಗೆ 10ರಿಂದ ಸಂಜೆ 7ರವರೆಗೆ ಈ ಪ್ರದರ್ಶನ ಮತ್ತು ಮಾರಾಟ ನಡೆಯಲಿದ್ದು, ಅಪರೂಪದ ಕಲಾಕೃತಿಗಳನ್ನು ನೇರವಾಗಿ ಕಲಾವಿದರಿಂದ ಖರೀದಿಸಬಹುದು' ಎಂದರು.

'ನವದೆಹಲಿ ಮತ್ತು ಮುಂಬೈನಲ್ಲಿ ಈ ರೀತಿಯ ಮೇಳ ನಡೆಯುತ್ತಿದ್ದು, ರಾಜ್ಯದ ಕಲಾವಿದರು ಕೂಡ ಪಾಲ್ಗೊಳ್ಳುತ್ತಿದ್ದರು. ಈಗ ಇಲ್ಲಿಯೇ ಅಂತಹ ಅವಕಾಶವನ್ನು ನಿರ್ಮಿಸಲಾಗುತ್ತಿದೆ. ನೋಂದಣಿ ಮಾಡಿಕೊಂಡ ವೃತ್ತಿಪರ ಕಲಾವಿದರು ಲಕ್ಷಾಂತರ ರೂಪಾಯಿ ಮೌಲ್ಯದ 1,500ಕ್ಕೂ ಅಧಿಕ ಕಲಾಕೃತಿಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕೆ ಇರಿಸಲಿದ್ದಾರೆ. ಮೇಳಕ್ಕೆ ಪ್ರವೇಶ ಉಚಿತ ಇರಲಿದೆ' ಎಂದು ಹೇಳಿದರು.

ಬಿ.ಎಲ್. ಶಂಕರ್

ಕಲಾ ಕ್ಷೇತ್ರಕ್ಕೆ ಎಐ: 'ಈ ಮೇಳದ ಜತೆಗೆ ಕಲಾ ಇತಿಹಾಸಕಾರ್ತಿ ಲೀನಾ ವಿನ್ಸೆಂಟ್ ಅವರು ಕ್ಯುರೇಟ್ ಮಾಡಿರುವ ಕಲಾ ಪ್ರದರ್ಶನವು ಪರಿಷತ್ತಿನ ನಾಲ್ಕು ಗ್ಯಾಲರಿಗಳಲ್ಲಿ ಇದೇ 6ರಿಂದ 20ರವರೆಗೆ ನಡೆಯಲಿದೆ. ಮಾಸ್ಟರ್ ಕ್ಲಾಸ್ ಮತ್ತು ಚರ್ಚಾ ಗೋಷ್ಠಿಗಳನ್ನು ಈ ಮೇಳ ಒಳಗೊಂಡಿದೆ. ಇದು ಪರಿಷತ್ತಿನ ಆವರಣದಲ್ಲಿರುವ ಗಾಂಧಿ ಕುಟೀರದಲ್ಲಿ ಇದೇ 7ರಿಂದ 9ರವರೆಗೆ ನಡೆಯಲಿದೆ' ಎಂದು ಮಾಹಿತಿ ನೀಡಿದರು.

'ಮಾಸ್ಟರ್ ಕ್ಲಾಸ್ ಮತ್ತು ಚರ್ಚಾಗೋಷ್ಠಿಯಲ್ಲಿ ಕಲಾ ಕ್ಷೇತ್ರದ ಪ್ರಮುಖರು ಪಾಲ್ಗೊಳ್ಳುತ್ತಾರೆ. ಇತ್ತೀಚೆಗೆ ಕಲಾ ಕ್ಷೇತ್ರಕ್ಕೂ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಕಾಲಿಟ್ಟಿದ್ದು, ಈ ಬಗ್ಗೆಯೂ ಚರ್ಚಾಗೋಷ್ಠಿ ನಡೆಯಲಿದೆ. ಇದರಲ್ಲಿ ಶಿಕ್ಷಣ ತಜ್ಞರು, ವಿನ್ಯಾಸಕರು, ಕಲಾವಿದರು ಮತ್ತು ಎಐ ತಂತ್ರಜ್ಞರು ಪಾಲ್ಗೊಳ್ಳುತ್ತಾರೆ. ಕಲಾ ಕ್ಷೇತ್ರದಲ್ಲಿನ ಅವಕಾಶಗಳು ಹಾಗೂ ಸವಾಲುಗಳ ಬಗ್ಗೆಯೂ ಚರ್ಚೆ ನಡೆಯಲಿದೆ' ಎಂದು ವಿವರಿಸಿದರು.

ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶಶಿಧರ್ ಎಸ್.ಎನ್., ಉಪಾಧ್ಯಕ್ಷ ಪ್ರಭಾಕರ್ ಟಿ. ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ದೆಹಲಿ ವಿಧಾನಸಭೆ ರಾಮಕಥಾ

ನವದೆಹಲಿ (ಪಿಟಿಐ): ದೆಹಲಿ ವಿಧಾನಸಭೆಯು ಮೇ 6ರಂದು 'ಸಂಗೀತ ರಾಮಕಥಾ' ಆಯೋಜಿಸಿದೆ ಎಂದು ಸ್ಪೀಕರ್ ವಿಜೇಂದ್ರ ಗುಪ್ತಾ ಶನಿವಾರ ತಿಳಿಸಿದ್ದಾರೆ.

ಖ್ಯಾತ ರಾಮಕಥಾ ಪ್ರವೀಣ, ಕುಮಾರ್ ವಿಶ್ವಾಸ್ ಅವರು 'ಅಪ್ನೆ ಅಪ್ನೆ ರಾಮ್' ಕಾರ್ಯಕ್ರಮ ಪ್ರಸ್ತುತಪಡಿಸಲಿದ್ದು, ಕೇಂದ್ರ ಹಾಗೂ ದೆಹಲಿಯ ಸಚಿವರು ಮತ್ತು ಗಣ್ಯರನ್ನು ಆಹ್ವಾನಿಸಲಾಗುವುದು ಎಂದಿದ್ದಾರೆ.

ನಗರದಲ್ಲಿ ಇಂದು

84ನೇ ವರ್ಷದ ಶಂಕರಾಚಾರ್ಯರ ಜಯಂತಿ ಪ್ರಯುಕ್ತ ಶಂಕರೋತ್ಸವ ಹಾಗೂ ರಂಗನಂದೋತ್ಸವ: ಸ್ತೋತ್ರ ಪಠಣ, ಗಾನ ಲಹರಿ, ಭಜನೆ, ಆಯೋಜನೆ ಹಾಗೂ ಸ್ಥಳ: ಅನಸೂಯ ಆಶ್ರಮ, ರಾಜಾಜಿನಗರ, ಬೆಳಿಗ್ಗೆ 8.30

ರಾಜಧಾನಿ ಭಜನೋತ್ಸವ: ಬೆಳಿಗ್ಗೆ 8ರಿಂದ ರಾಜಧಾನಿ ಕುಣಿತ ಭಜನಾ ಸ್ಪರ್ಧೆ, ಉದ್ಘಾಟನೆ: ಮೋಹನದಾಸ ಪರಮಹಂಸ ಸ್ವಾಮೀಜಿ, ಅತಿಥಿ: ಭಾರತಿ ಶೆಟ್ಟಿ, ಸಂಜೆ 5.45ರಿಂದ ಸಮಾರೋಪ ಸಮಾರಂಭ: ಉಪಸ್ಥಿತಿ: ವಿರೇಂದ್ರ ಹೆಗ್ಗಡೆ, ಅಧ್ಯಕ್ಷತೆ: ದಿನೇಶ್ ಹೆಗ್ಡೆ ಬಿ., ಅತಿಥಿಗಳು: ಸುರೇಂದ್ರ ಕುಮಾರ್, ಅನಿತಾ ಸುರೇಂದ್ರ ಕುಮಾರ್, ಎಂ. ಕೃಷ್ಣಪ್ಪ, ಪ್ರಕಾಶ್ ಶೆಟ್ಟಿ, ಗುರ್ಮೆ ಸುರೇಶ್ ಶೆಟ್ಟಿ, ಅಶೋಕ್ ಕುಮಾರ್ ರೈ, ಅರುಣ್ ಉಳ್ಳಾಲ್, ಆಯೋಜನೆ: ತುಳುಕೂಟ ಬೆಂಗಳೂರು, ಸ್ಥಳ: ಬಂಟರ ಸಂಘ, ವಿಜಯನಗರ.

ವಿರೇಂದ್ರ ಹೆಗ್ಗಡೆ

ಜಗಜ್ಯೋತಿ ಬಸವೇಶ್ವರರ ಜಯಂತಿ ಮತ್ತು ಶರಣ ಮುಕುಟ ಪ್ರಶಸ್ತಿ ಪ್ರದಾನ: ಅತಿಥಿಗಳು: ಸಿ. ಸೋಮಶೇಖರ್, ಬಿ. ಸ್ವರ್ಣಗೌರಿ, ಅಧ್ಯಕ್ಷತೆ: ದಿನೇಶ್ ಎಂ.ಎನ್., ಪ್ರಶಸ್ತಿ ಪುರಸ್ಕೃತರು: ಗೊ.ರು. ಚನ್ನಬಸಪ್ಪ, ಆಯೋಜನೆ: ವೀರಶೈವ ಸೇವಾ ಸಮಾಜ, ಸ್ಥಳ: ಎಸ್.ಎಂ. ಕಲ್ಯಾಣ ಮಂಟಪ, ಜರಗನಹಳ್ಳಿ, ಕನಕಪುರ ರಸ್ತೆ, ಬೆಳಿಗ್ಗೆ 10

ಗೊ.ರು. ಚನ್ನಬಸಪ್ಪ

ಹಿರಿಯ ನಾಗರಿಕರ ಆಶ್ರಯ ಧಾಮ ಹಾಗೂ ಪುನರ್ ವಸತಿ ಕೇಂದ್ರ ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಡಾ.ಸಿ.ಎನ್. ಮಂಜುನಾಥ್, ಪ್ರಶಸ್ತಿ ಪ್ರದಾನ: ಎಂ. ಕೃಷ್ಣಪ್ಪ, ಆಯೋಜನೆ ಹಾಗೂ ಸ್ಥಳ: ಶ್ರೀ ಸದ್ಗುರು ಆಧಾರ್ ಫೌಂಡೇಷನ್, #46, ಆರ್ಕಿಡ್ ವುಡ್ಸ್, 7ನೇ ಮುಖ್ಯರಸ್ತೆ, ನೋಬೋ ನಗರ, ಬೆಳಿಗ್ಗೆ 10

ಸುವರ್ಣ ಮಹೋತ್ಸವ ಆಚರಣೆ: ಆಯೋಜನೆ: ಗಾಂಧಿ ವಿದ್ಯಾ ಶಾಲೆಯ (1976–1977 ಬ್ಯಾಚ್) ಹಳೆಯ ವಿದ್ಯಾರ್ಥಿಗಳು, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಳಿಗ್ಗೆ 10

ಅನ್ನಪೂರ್ಣಾಂಬ ಸಮೇತ ನಗರೇಶ್ವರಸ್ವಾಮಿ ಅವರ 142ನೇ ಬ್ರಹ್ಮರಥೋತ್ಸವ: ಬೆಳಿಗ್ಗೆ 10.30ಕ್ಕೆ ಉತ್ಸವ ಮೂರ್ತಿಗಳಿಗೆ ದ್ರವ್ಯಾಭಿಷೇಕ–ವಾರುಣ ಹೋಮ–ವಸಂತೋತ್ಸವ–ತೀರ್ಥಸ್ನಾನ, ಸಂಜೆ 6.30ಕ್ಕೆ ಪಲ್ಲಕ್ಕಿ ಉತ್ಸವ, ರಾತ್ರಿ 8ಕ್ಕೆ ದಾಸೋಹ, ಆಯೋಜನೆ ಹಾಗೂ ಸ್ಥಳ: ಬಿ.ಎ.ಎಸ್.ವಿ. (ನಗರ್ತ) ಸಮಿತಿ, ನಗರೇಶ್ವರಸ್ವಾಮಿ ದೇವಾಲಯದ ಆವರಣ, ನಗರ್ತರಪೇಟೆ

'ಕ–ಮಿಡಿ ಶೋ' ಕನ್ನಡದರಿವು ಹಾಸ್ಯಗಳ ರಸಾಯನ: ಏಕವ್ಯಕ್ತಿ ಪ್ರಸ್ತುತಿ: ವೀರಪ್ಪ ಮರಳವಾಡಿ, ಆಯೋಜನೆ: ಗಂಧರ್ವ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಳಿಗ್ಗೆ 10.30

ಮಾಸದ ಮಂಥನ 86ನೇ ಸಂಭ್ರಮ: 'ಕವಿಗಳು ಕಂಡ ಶಬರಿ' ವಿಷಯದ ಬಗ್ಗೆ ಮಂಥನ: ಜಗದೀಶಶರ್ಮಾ ಸಂಪ, ಸ್ಥಳ: ಸಾನಿಧ್ಯ, 1ನೇ ಅಡ್ಡರಸ್ತೆ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ಪ್ರೊ.ಎಂ.ಕೆ.ಎಲ್.ಎನ್. ಶಾಸ್ತ್ರಿ ಸ್ಮಾರಕ ದತ್ತಿ ಉಪನ್ಯಾಸ: 'ಶಿವತತ್ವ–ಮಧ್ಯಕಾಲೀನ ಕರ್ನಾಟಕದ ಬಹುತ್ವದ ಪ್ರತಿಫಲನ' ವಿಷಯದ ಬಗ್ಗೆ ಉಪನ್ಯಾಸ: ಡಿ.ವಿ. ಪರಮಶಿವಮೂರ್ತಿ, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

'ಇದ್ದಾಗ ನಿಮ್ದು ಕದ್ದಾಗ ನಮ್ದು' ನಾಟಕ ಪ್ರದರ್ಶನ: ನಿರ್ದೇಶನ: ಆಸಿಫ್ ಕ್ಷತ್ರಿಯ, ಶ್ವೇತಾ ಶ್ರೀನಿವಾಸ್, ಆಯೋಜನೆ: ರಂಗರಥ ಭಾರತೀಯ ಪ್ರದರ್ಶನ ಕಲಾ ಸಂಸ್ಥೆ, ಕಲಾಪ್ರೇಮಿ ಫೌಂಡೇಷನ್, ಸ್ಥಳ: ಸೇವಾ ಸದನ ಸಭಾಂಗಣ, ಮಲ್ಲೇಶ್ವರ, ಸಂಜೆ 4 ಹಾಗೂ 7

38ನೇ ಪ್ರತಿಷ್ಠಾಪನಾ ಮಹೋತ್ಸವ: ಅಷ್ಟಾವಧಾನ: ಆರ್. ಗಣೇಶ್, ಆಯೋಜನೆ ಹಾಗೂ ಸ್ಥಳ: ವಿನಾಯಕ ದೇವಸ್ಥಾನ ಸಮಿತಿ, ಆರ್.ಟಿ.ನಗರ, ಸಂಜೆ 5

ಅಂತರರಾಷ್ಟ್ರೀಯ ನೃತ್ಯ ದಿನಾಚರಣೆ: 'ಸೃಷ್ಟಿ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ: ಚಂದ್ರಶೇಖರ ಕಂಬಾರ, ಪ್ರಶಸ್ತಿ ಪುರಸ್ಕೃತರು: ಪ್ರತಿಭಾ ಪ್ರಹ್ಲಾದ್, ಬಿ. ಜಯಶ್ರೀ, ಅತಿಥಿಗಳು: ರಾಮಲಿಂಗಾರೆಡ್ಡಿ, ತೇಜಸ್ವಿ ಸೂರ್ಯ, ಶಾಲಿನಿ ರಜನೀಶ್, ಎಂ.ಎ. ಸಲೀಂ, ಭರತನಾಟ್ಯ: ಪ್ರತಿಭಾ ಪ್ರಹ್ಲಾದ್, 'ಕರಿಮಾಯಿ' ಸಂಗೀತ ನಾಟಕ ಪ್ರದರ್ಶನ, ಆಯೋಜನೆ: ಸೃಷ್ಟಿ ಸಂಸ್ಥೆ, ರೋಟರಿ ಡಿಸ್ಟ್ರಿಕ್ಟ್ 3191, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 5.30

ಪ್ರತಿಭಾ ಪ್ರಹ್ಲಾದ್

ತ್ಯಾಗರಾಜ ಆರಾಧನೆ: ಅತಿಥಿಗಳು: ಜ್ಯೋತಿ ರಘುರಾಮ್, ಕೃಷ್ಣಮೂರ್ತಿ ಬಿ.ಎನ್., ಸತೀಶ್ ಗುಂಡಪ್ಪ, ನೃತ್ಯ ಪ್ರದರ್ಶನ: ರಕ್ಷಾ ಕಾರ್ತಿಕ್ ನೇತೃತ್ವದಲ್ಲಿ ಅವರ ಶಿಷ್ಯರಿಂದ, ಭಾರದ್ವಾಜ್ ದಯಾನಿಧಿ, ದರ್ಶನ್ ಶಂಕರ್, ಗುರುರಾಜ್ ಎನ್., ಆಯೋಜನೆ: ನಟನಮ್ ಇನ್‌ಸ್ಟಿಟ್ಯೂಟ್ ಆಫ್ ಡಾನ್ಸ್, ಸ್ಥಳ: ವ್ಯೋಮ ಸ್ಟುಡಿಯೋ, ಜೆ.ಪಿ.ನಗರ, ಸಂಜೆ 5.30

ಚಿಗುರು ರಂಗೋತ್ಸವ ಸಮಾರೋಪ ಸಮಾರಂಭ: ಉಪಸ್ಥಿತಿ: ಟಿ.ಎಸ್. ನಾಗಾಭರಣ, ರಂಗ ಗೌರವ: ರಾಮಕೃಷ್ಣ ಬೆಳ್ತೂರು, 'ಲೆಕ್ಕಕುಂಟು ಆಟಕ್ಕಿಲ್ಲ' ನಾಟಕ ಪ್ರದರ್ಶನ, ತಂಡ: ಸ್ಪಷ್ಟ ಥಿಯೇಟರ್, ಆಯೋಜನೆ: ಭಾಗವತರು ಸಾಂಸ್ಕೃತಿಕ ಸಂಘಟನೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

10ಕ್ಕೆ 'ಧ್ಯಾನ ಮಂದಿರ' ಉದ್ಘಾಟನೆ

ಬೆಂಗಳೂರು: ದಿ ಆರ್ಟ್ ಆಫ್ ಲಿವಿಂಗ್‌ನ 45 ವರ್ಷಗಳ ಸಂಭ್ರಮದ ಅಂಗವಾಗಿ, ಬೆಂಗಳೂರಿನ ಅಂತರರಾಷ್ಟ್ರೀಯ ಕೇಂದ್ರದಲ್ಲಿ ಮೇ 10ರಂದು 'ಧ್ಯಾನ ಮಂದಿರ' ಉದ್ಘಾಟನೆಗೊಳ್ಳಲಿದೆ.

ದಿ ಆರ್ಟ್ ಆಫ್ ಲಿವಿಂಗ್‌ನ 45ನೇ ವರ್ಷದ ಸ್ಮರಣಾರ್ಥ ಕಾರ್ಯಕ್ರಮವು ಮೇ 25ರವರೆಗೆ ನಡೆಯಲಿದೆ. ಧ್ಯಾನ ಕೇಂದ್ರವು ವಿವಿಧ ದೇಶಗಳು ಮತ್ತು ಸಂಸ್ಕೃತಿಗಳ ಸಾವಿರಾರು ಸಾಧಕರಿಗೆ, ಸಮೂಹ ಜಪ ಮತ್ತು ಧ್ಯಾನದ ಶಕ್ತಿಯ ಮೂಲಕ ಆಳವಾದ ಅಂತರಂಗದ ಶಾಂತಿಯನ್ನು ಅನುಭವಿಸಲು ಅವಕಾಶ ಒದಗಿಸುತ್ತದೆ.

ನಾಲ್ಕು ಎಕರೆ ಪ್ರದೇಶದಲ್ಲಿರುವ ಧ್ಯಾನ ಮಂದಿರವು ದೇಶದಾದ್ಯಂತ ಅಳಿವಿನಂಚಿನಲ್ಲಿರುವ ವಿವಿಧ ಹಸ್ತಕಲೆಗಳು ಮತ್ತು ಕಲಾವಿದರಿಗೆ ವೇದಿಕೆ ಒದಗಿಸಿದೆ. ಇದರಲ್ಲಿ ವಾರ್ಲಿ, ಮಧುಬನಿ, ಪಟ್ಟಚಿತ್ರ, ತಂಜಾವೂರು, ಸೋಹ್ರಾಯ್, ಕೊಹ್ಬರ್, ಗೊಂಡ್ ಮತ್ತು ಪಿಚ್ವಾಯಿ ಕಲೆಗಳು ಸೇರಿವೆ. ಇಲ್ಲಿನ ಸೀಲಿಂಗ್ ಹಿತವಾದ ಮತ್ತು ಸೂಕ್ಷ್ಮವಾದ ಮಂಡಲ ಕಲೆಯಿಂದ ಅಲಂಕರಿಸಲ್ಪಟ್ಟಿದೆ. ಸಾವಿರಾರು ಜನರು ಸುರಕ್ಷಿತವಾಗಿ ಕುಳಿತುಕೊಳ್ಳುವಂತೆ ವಿನ್ಯಾಸಗೊಳಿಸಲಾಗಿದೆ.

'ಸಮೂಹ ಧ್ಯಾನವು ಒಂದು ಯಜ್ಞದಂತೆ; ಇಲ್ಲಿ ಪ್ರತಿಯೊಬ್ಬರ ಶಕ್ತಿಯು ಒಗ್ಗೂಡಿ ಒಂದು ಸಾಮೂಹಿಕ ಹಾಗೂ ವಿಸ್ತಾರವಾದ ಪರಿಣಾಮ ಬೀರುತ್ತದೆ. ಇದು ಪರಿಸರವನ್ನು ಶುದ್ಧೀಕರಿಸುತ್ತದೆ, ಧನಾತ್ಮಕ ತರಂಗಗಳನ್ನು ಹೆಚ್ಚಿಸುತ್ತದೆ ಮತ್ತು ಸತ್ವ ಅಥವಾ ಶುದ್ಧತೆಯನ್ನು ವೃದ್ಧಿಸುತ್ತದೆ' ಎಂದು ಆಧ್ಯಾತ್ಮಿಕ ಗುರು ಶ್ರೀ ಶ್ರೀ ರವಿ ಶಂಕರ್ ತಿಳಿಸಿದ್ದಾರೆ.

ಬೆಂಗಳೂರು ರೇಸ್

ಪ್ರೊಕೊಫಿವ್ ಗೆಲ್ಲುವ ನಿರೀಕ್ಷೆ

ರಾಂಕ್ವೆಲಿನೊ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪ್ರೊಕೊಫಿವ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3:00ಕ್ಕೆ ಏರ್ಪಡಿಸಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬ್ಲೂ ಸ್ಟಾರ್ಮ್ 1, ವರ್ಸೇಸ್ 3, ರಾನ್ಸಮ್‌ವೇರ್ 5
2ನೇ ರೇಸ್: ಮ್ಯೂಚುವಲ್ ಟ್ರಸ್ಟ್ 1, ನೈಟ್ ರೈಡರ್ 2, ನೆಮೊಸೈನ್ 4
3ನೇ ರೇಸ್: ಫಿಲ್ಸ್ ಡಿ ಫ್ರಾನ್ಸ್ 1, ಸುಪ್ರೀಂ ಸಕ್ಸಸ್ 7, ಕೇಜಿಂಗ್ 5
4ನೇ ರೇಸ್: ಸಪ್ಪೊರೊ 1, ಜೇಡ್ ಮೌಂಟೆನ್ 6, ಡಬಲ್ ಯುವರ್ ಮನಿ 8
5ನೇ ರೇಸ್: ಪ್ರೊಕೊಫಿವ್ 8, ರೀಕೊ 2, ಇನ್‌ಸ್ಪೈರ್ 4
6ನೇ ರೇಸ್: ಬುಲ್ಲೆಟ್ ಪ್ರೂಫ್ 1, ನೈಟ್ಸ್‌ಬ್ರಿಡ್ಜ್ 2, ಬ್ರೀಥ್‌ಟೇಕಿಂಗ್ 6
7ನೇ ರೇಸ್: ಮನಿ ಬ್ಯಾಗ್ಸ್ 2, ಫ್ಲೈಟ್ ಆಫ್ ಫ್ಯಾನ್ಸಿ 10, ಸ್ಮಾಲ್ ಡ್ರೀಮ್ಸ್ 7

ಉತ್ತಮ ಬೆಟ್: ಬ್ಲೂ ಸ್ಟಾರ್ಮ್

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್
3,4,5,6,7	2,3,4	5,6,7



ಚಿಟಿಕೆ ಸುದ್ದಿ

ಜಿ.ಸತ್ಯವತಿ ರಾಜ್ಯ ಮುಖ್ಯ ಮಾಹಿತಿ ಆಯುಕ್ತೆ

ಬೆಂಗಳೂರು: ನಿವೃತ್ತ ಐಎಎಸ್ ಅಧಿಕಾರಿ ಜಿ.ಸತ್ಯವತಿ ಅವರನ್ನು ರಾಜ್ಯ ಮುಖ್ಯ ಮಾಹಿತಿ ಆಯುಕ್ತರಾಗಿ ನೇಮಕ ಮಾಡಿ ರಾಜ್ಯಪಾಲರು ಆದೇಶಿಸಿದ್ದಾರೆ.

ರಾಜ್ಯ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರು 65 ವರ್ಷ ವಯಸ್ಸಿನವರೆಗೆ ಅಥವಾ ಗರಿಷ್ಠ ಮೂರು ವರ್ಷದ ಅವಧಿಯವರೆಗೆ ಅಧಿಕಾರದಲ್ಲಿ ಇರಲಿದ್ದಾರೆ. ರಾಮನ್ ಕೆ. ಅವರು ರಾಜ್ಯ ಮುಖ್ಯ ಮಾಹಿತಿ ಆಯುಕ್ತ ಪ್ರಭಾರ ಹುದ್ದೆಯಲ್ಲಿದ್ದಾರೆ.

ತಿಗಳ ಅಭಿವೃದ್ಧಿ ನಿಗಮ: ಮಂಜುನಾಥ್ ಅಧ್ಯಕ್ಷ

ಬೆಂಗಳೂರು: ಕರ್ನಾಟಕ ತಿಗಳ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಎಲ್.ಎ.ಮಂಜುನಾಥ್ ಅವರನ್ನು ನೇಮಕ ಮಾಡಿ, ರಾಜ್ಯ ಸರ್ಕಾರವು ಆದೇಶ ಹೊರಡಿಸಿದೆ.

ಸರ್ಕಾರದ ಮುಂದಿನ ಆದೇಶದವರೆಗೂ ಅವರು ನಿಗಮದ ಅಧ್ಯಕ್ಷರಾಗಿ ಮುಂದುವರೆಯಲಿದ್ದಾರೆ ಎಂದು ಆದೇಶದಲ್ಲಿ ತಿಳಿಸಿದೆ.

ದೋಣಿ ಮಗುಚಿ ಇಬ್ಬರು ಸಾವು

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಗಿರಿಯಾರಹಳ್ಳಿ ಬಳಿ ಶುಕ್ರವಾರ ಕೆಆರ್‌ಎಸ್ ಹಿನ್ನೀರಿನಲ್ಲಿ 'ಸೇಲಿಂಗ್' ಮಾಡುತ್ತಿದ್ದ ವೇಳೆ ಗಾಳಿಯ ರಭಸಕ್ಕೆ ದೋಣಿ ಮಗುಚಿ ಇಬ್ಬರು ಮೃತಪಟ್ಟರು.

ಕೇರಳದ ಕೊಚ್ಚಿನ್ ಮೂಲ ಮಂಜುನಾಥ್ (72) ಮತ್ತು ಅವರ ಪತ್ನಿ ಜೆಸ್ಸಿ (71) ಮೃತರು. ನೀರಿಗೆ ಬಿದ್ದು ಅಸ್ವಸ್ಥರಾಗಿದ್ದ ಅವರನ್ನು ಪಾಂಡವಪುರ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಬೆಂಗಳೂರಿನ ಜಕ್ಕೂರು ಏರೋಡ್ರಂಗೆ ಸೇರಿದ ಅಗ್ನಿ ಅಡ್ವೆಂಚರ್ ಸಂಸ್ಥೆ ಮತ್ತು ಮೈಸೂರಿನ ರಾಯಲ್ ಸೇಲಿಂಗ್ ಸಂಸ್ಥೆಗಳ ಸಹಯೋಗದಲ್ಲಿ ಕೆಆರ್‌ಎಸ್ ಹಿನ್ನೀರಿನಲ್ಲಿ ಆಯೋಜಿಸಿದ್ದ ದೋಣಿ-ವಿಹಾರದಲ್ಲಿ ಈ ದುರ್ಘಟನೆ ನಡೆದಿದೆ ಎಂದು ಕೆಆರ್‌ಎಸ್ ಪೊಲೀಸ್ ಠಾಣೆ ಪೊಲೀಸರು ಹೇಳಿದ್ದಾರೆ.

ಆರು ವರ್ಷ ವಿನಯ ಶಾಸಕತ್ವ ಅನರ್ಹ

ಬೆಂಗಳೂರು: ಧಾರವಾಡ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಜನಪ್ರತಿನಿಧಿ ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗಿರುವ ವಿನಯ ಕುಲಕರ್ಣಿ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಿ ವಿಧಾನಸಭೆ ಸಚಿವಾಲಯ ಶನಿವಾರ ಅಧಿಸೂಚನೆ ಹೊರಡಿಸಿದೆ.

ಆ ಮೂಲಕ, ಕರ್ನಾಟಕ ವಿಧಾನ ಸಭೆಯಲ್ಲಿ ಒಂದು ಸ್ಥಾನ ತೆರವಾಗಿದೆ.

ವಿನಯ ಕುಲಕರ್ಣಿ ಅವರಿಗೆ ಜನಪ್ರತಿನಿಧಿ ನ್ಯಾಯಾಲಯವು ಏಪ್ರಿಲ್ 15ರಂದು ಜೀವಾವಧಿ ಶಿಕ್ಷೆ ವಿಧಿಸಿತ್ತು. ಶಿಕ್ಷೆ ಪ್ರಕಟಿಸಿದ ದಿನದಿಂದ ಅನರ್ಹತೆ ಆದೇಶ ಅನ್ವಯ ಆಗಲಿದೆ.

ಜನಪ್ರತಿನಿಧಿಗಳ ಕಾಯ್ದೆಯ ಅನ್ವಯ ಶಿಕ್ಷೆಯ ಅವಧಿ ಮುಕ್ತಾಯವಾಗಿ ಬಿಡುಗಡೆಗೊಂಡ ಬಳಿಕ ಆರು ವರ್ಷಗಳವರೆಗೆ ಅನರ್ಹತೆ ಮುಂದುವರಿಯಲಿದೆ. ಅಲ್ಲಿಯವರೆಗೆ ವಿನಯ ಕುಲಕರ್ಣಿ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಇಲ್ಲ ಎಂದೂ ಅಧಿಸೂಚನೆಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಶಿಕ್ಷೆಗೆ ಗುರಿಯಾಗಿದ್ದರೂ ಅವರನ್ನು ಅನರ್ಹಗೊಳಿಸಿ ಆದೇಶ ಹೊರಡಿಸದಿರುವ ಬಗ್ಗೆ ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್ ಕುರಿತು ಸಾಕಷ್ಟು ಟೀಕೆಗಳು ವ್ಯಕ್ತವಾಗಿದ್ದವು.

ನಿಧನ ವಾರ್ತೆ

ಲಾವಣ್ಯ

ಬೆಂಗಳೂರು: ಬೆಸ್ಕಾಂ ಜಾಗೃತದಳದ ಎಸ್‌ಪಿ ಲಾವಣ್ಯ ಬಿ.ಎನ್. (39) ಅವರು ಶನಿವಾರ ನಿಧನರಾದರು.

ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಲಾವಣ್ಯ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಪತಿ, ಪುತ್ರ, ಪುತ್ರಿ ಇದ್ದಾರೆ.

2012ರಲ್ಲಿ ಇಲಾಖೆ ಸೇರಿದ ಅವರು ಬಳ್ಳಾರಿ, ತುಮಕೂರು, ಮಂಡ್ಯ ಹಾಗೂ ಡಿಸಿಆರ್‌ಇನಲ್ಲಿ ಕರ್ತವ್ಯ ನಿರ್ವಹಿಸಿದ್ದರು. 2017ರಲ್ಲಿ ಎಸ್‌ಪಿ ದರ್ಜೆಗೆ ಪದೋನ್ನತಿ ಹೊಂದಿದ್ದರು. ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ದೊಡ್ಡಗಂಜೂರು ಗ್ರಾಮದ ಲಾವಣ್ಯ, ಬೆಂಗಳೂರಿನ ವಿದ್ಯಾರಣ್ಯಪುರ ದಲ್ಲಿ ಕುಟುಂಬ ಸದಸ್ಯರೊಂದಿಗೆ ವಾಸವಾಗಿದ್ದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ. ಎ. ಸಲೀಂ, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

'ಕೃಷಿ ಮಾರುಕಟ್ಟೆಗೆ 454 ಎಕರೆ ಲಭ್ಯ'

ಮೂರು ಭೂಸ್ವಾಧೀನ ಪ್ರಕರಣಗಳಲ್ಲಿ ಎಪಿಎಂಸಿ ಪರವಾಗಿ ತೀರ್ಪು: ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ಮಾರುಕಟ್ಟೆಗಾಗಿ ಭೂಸ್ವಾಧೀನ ಮಾಡಿಕೊಳ್ಳಲಾಗಿದ್ದ ಮೂರು ಪ್ರಕರಣಗಳಲ್ಲಿ ಸುದೀರ್ಘ ಕಾನೂನು ಹೋರಾಟದ ನಂತರ ಎಪಿಎಂಸಿ ಪರವಾಗಿ ತೀರ್ಪು ಬಂದಿದೆ. ರಾಜ್ಯದ ವಿವಿಧೆಡೆ ಒಟ್ಟು 454 ಎಕರೆಯಷ್ಟು ಜಮೀನು ದೊರೆತಿದೆ' ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದ ವಿವಿಧ ಎಪಿಎಂಸಿಗಳು ಹೊಸ ಮಾರುಕಟ್ಟೆ ನಿರ್ಮಾಣ ಮತ್ತು ಮಾರುಕಟ್ಟೆ ವಿಸ್ತರಣೆಗಾಗಿ ಸರ್ಕಾರಕ್ಕೆ ಹಣ ಪಾವತಿಸಿ, ರಾಜ್ಯದ ಹಲವೆಡೆ ಭೂಸ್ವಾಧೀನದ ಮೂಲಕ ಜಮೀನನ್ನು ಪಡೆದುಕೊಂಡಿದ್ದವು. ಭೂಸ್ವಾಧೀನದ ವಿರುದ್ಧ ವ್ಯಾಜ್ಯಗಳು ದಾಖಲಾದ ಕಾರಣ, ಎಪಿಎಂಸಿಗಳಿಗೆ ಜಮೀನು ಹಸ್ತಾಂತರವಾಗಿರಲಿಲ್ಲ' ಎಂದರು.

> ಮಾಗಡಿ ರಸ್ತೆಯಲ್ಲಿ ಮೆಗಾ ಮಾರುಕಟ್ಟೆಯೂ ಸೇರಿ ನನೆಗುದಿಗೆ ಬಿದ್ದಿದ್ದ ಮೂರು ಯೋಜನೆಗಳನ್ನು ಪುನರಾರಂಭ ಮಾಡಲು ಈಗ ಸಾಧ್ಯವಾಗಲಿದೆ
>
> **ಶಿವಾನಂದ ಪಾಟೀಲ,** ಕೃಷಿ ಮಾರುಕಟ್ಟೆ ಸಚಿವ

'ಹಿಂದಿನ ಸರ್ಕಾರ ಈ ವ್ಯಾಜ್ಯ ಗಳನ್ನು ಕಡೆಗಣಿಸಿದ್ದ ಕಾರಣ, ಎಪಿಎಂಸಿಗಳ ಜಮೀನು ಕೈತಪ್ಪುವ ಅಪಾಯ ಎದುರಾಗಿತ್ತು. ನಾನು ಕೃಷಿ ಮಾರುಕಟ್ಟೆ ಸಚಿವನಾದ ನಂತರ, ಪ್ರಕರಣಗಳತ್ತ ಗಮನ ನೀಡಲು ಅಧಿಕಾರಿಗಳಿಗೆ ಸೂಚಿಸಿದ್ದೆ. ಸುಪ್ರೀಂ ಕೋರ್ಟ್‌ನಲ್ಲಿ ಎಪಿಎಂಸಿ ಪರವಾಗಿ ವಾದ ಮಾಡಲು ಹಿರಿಯ ವಕೀಲರನ್ನು ನೇಮಕ ಮಾಡಿದ ಕಾರಣಕ್ಕೆ, ನಮ್ಮ ಪರವಾಗಿ ತೀರ್ಪು ಬಂದಿದೆ' ಎಂದು ಹೇಳಿದರು.

'ಬೆಂಗಳೂರಿನ ಸುಂಕದಕಟ್ಟೆ ಸಮೀಪದ ಶ್ರೀಗಂಧ ಕಾವಲು ಮತ್ತು ಹೇರೋಹಳ್ಳಿ ವ್ಯಾಪ್ತಿಯಲ್ಲಿ ಯಶವಂತಪುರ ಎಪಿಎಂಸಿ ವತಿಯಿಂದ ಮೆಗಾ ಮಾರುಕಟ್ಟೆ ನಿರ್ಮಿಸಲು 1994ರಲ್ಲಿ 272 ಎಕರೆ 33 ಗುಂಟೆ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಆದರೆ, ಅದರ ವಿರುದ್ಧ ಜಮ್ನಾಲಾಲ್ ಬಜಾಜ್ ಸೇವಾ ಟ್ರಸ್ಟ್ ನ್ಯಾಯಾಲಯದ ಮೊರೆ ಹೋಗಿತ್ತು. ಸುಪ್ರೀಂ ಕೋರ್ಟ್‌ನಲ್ಲಿ ಎಪಿಎಂಸಿ ಪರವಾಗಿ ತೀರ್ಪು ಬಂದಿದೆ. ಈ ಜಮೀನಿಗೆ ಎಪಿಎಂಸಿಯೇ ₹186 ಕೋಟಿ ಪಾವತಿಸಿದೆ. ಮೆಗಾ ಮಾರುಕಟ್ಟೆ ಯೋಜನೆ ಮತ್ತೆ ಆರಂಭವಾಗಲಿದೆ' ಎಂದರು.

'ಸರ್ಜಾಪುರ ಹೋಬಳಿಯ ಗೂಳಿಮಂಗಲದಲ್ಲಿ ಹಣ್ಣು, ಹೂವು, ತರಕಾರಿ ಮಾರುಕಟ್ಟೆ ಯೋಜನೆಗೆ 2003ರಲ್ಲಿ 42 ಎಕರೆ 31 ಗುಂಟೆ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಭೂಸ್ವಾಧೀನದ ವಿರುದ್ಧದ ಪ್ರಕರಣದಲ್ಲಿ, ಸುಪ್ರೀಂ ಕೋರ್ಟ್ ನಿರ್ದೇಶನದಂತೆ ರಾಜ್ಯ ಹೈಕೋರ್ಟ್ ತೀರ್ಪು ನೀಡಿದೆ. ಎಪಿಎಂಸಿಗೆ ಭೂಮಿ ಒದಗಿಸಿಕೊಡಲು, ನ್ಯಾಯಾಲಯಕ್ಕೆ ₹211.37 ಕೋಟಿ ಪಾವತಿ ಮಾಡಲಾಗಿದೆ' ಎಂದು ತಿಳಿಸಿದರು.

'ಕೊಪ್ಪಳ ಜಿಲ್ಲೆಯ ಗಂಗಾವತಿ ಎಪಿಎಂಸಿಯಿಂದ ಕಾರಟಗಿಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಾಣಕ್ಕೆ 2012ರಲ್ಲಿ, 136 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಈ ಪ್ರಕರಣದಲ್ಲಿ ಜಿಲ್ಲಾ ನ್ಯಾಯಾಲಯ ಚದರ ಅಡಿಗೆ 50 ರೂ. ಪರಿಹಾರ ನೀಡಲು ಆದೇಶ ಮಾಡಿತ್ತು. ಜಿಲ್ಲಾ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗಿತ್ತು. ಈಗ ಎಪಿಎಂಸಿ ಪರವಾಗಿ ತೀರ್ಪು ಬಂದಿದ್ದು, ಪರಿಹಾರಕ್ಕೆ ₹12 ಕೋಟಿ ಪಾವತಿ ಮಾಡಲಾಗಿದೆ' ಎಂದರು.

'ಮೂರೂ ಪ್ರಕರಣಗಳಲ್ಲಿ ಎಪಿಎಂಸಿಗಳೇ ತಮ್ಮ ಲಾಭದ ಹಣದಲ್ಲಿ, ಭೂಸ್ವಾಧೀನಕ್ಕೆ ₹450 ಕೋಟಿ ಒದಗಿಸಿವೆ. ಎಪಿಎಂಸಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಇದು ಸಾಧ್ಯವಾಗಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಎಪಿಎಂಸಿಗೆ ಬಿಎಂಟಿಸಿ ಭೂಮಿ

'ದಾಸನಪುರ ಎಪಿಎಂಸಿಗೆ ಹೊಂದಿಕೊಂಡಂತೆ ಬಿಎಂಟಿಸಿಯ 12 ಎಕರೆ ಜಾಗವಿದ್ದು, ಅದನ್ನು ಬಾಡಿಗೆ ಆಧಾರದಲ್ಲಿ ಎಪಿಎಂಸಿಗೆ ನೀಡಲು ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ. ಯಶವಂತಪುರ ಮಾರುಕಟ್ಟೆಯಿಂದ ಈರುಳ್ಳಿ, ಬೆಳ್ಳುಳ್ಳಿ, ಆಲೂಗಡ್ಡೆ ಮತ್ತು ಶುಂಠಿ ವಹಿವಾಟನ್ನು ದಾಸನಪುರಕ್ಕೆ ಸ್ಥಳಾಂತರ ಮಾಡಲಾಗುತ್ತದೆ' ಎಂದು ಶಿವಾನಂದ ಪಾಟೀಲ ತಿಳಿಸಿದರು.

'ಉತ್ತರ ಕರ್ನಾಟಕ ಭಾಗದಿಂದ ಈರುಳ್ಳಿ, ಶುಂಠಿ ಬೆಳ್ಳುಳ್ಳಿ ಅಧಿಕ ಪ್ರಮಾಣದಲ್ಲಿ ಆವಕವಾಗುತ್ತಿದ್ದು, ನೂರಾರು ಲಾರಿಗಳು ಬರುವುದರಿಂದ ಯಶವಂಪುರ ಬಳಿ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಈ ನಾಲ್ಕು ಕೃಷಿ ಉತ್ಪನ್ನಗಳ ವಹಿವಾಟನ್ನು ದಾಸನಪುರಕ್ಕೆ ಸ್ಥಳಾಂತರ ಮಾಡಿದರೆ ಈ ಸಮಸ್ಯೆಗೆ ಪರಿಹಾರ ಸಿಗಲಿದೆ' ಎಂದರು.

ಮಲ್ಲಿಕಾರ್ಜುನ ಖರ್ಗೆ ಕೂಡ ಟವೆಲ್ ಹಾಕಿದ್ದಾರೆ: ಬಿ.ವೈ. ವಿಜಯೇಂದ್ರ

'ಸಿ.ಎಂ ಬದಲಾಗುವ ಸಮಯ ಬಂದಿದೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾಗುವ ಸಮಯ ಬಂದಿದೆ. ಇದನ್ನೇ, ದಿನಾಂಕ ನಿಗದಿಯಾಗಿಲ್ಲ ಎನ್ನುವ ಮೂಲಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೂ ಹೇಳಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಬಿ.ವೈ.ವಿಜಯೇಂದ್ರ ತಿಳಿಸಿದರು.

ಇಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಕುರ್ಚಿಗಾಗಿ ದಿನವೂ ಕಿತ್ತಾಡುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಗ್ಯಾಂಗ್ ಮೊದಲು ನವದೆಹಲಿಗೆ ಹೋದರೆ, ಬಳಿಕ ಡಿಸಿಎಂ ಡಿ.ಕೆ.ಶಿವಕುಮಾರ್ ಗ್ಯಾಂಗ್ ಹೋಗುತ್ತಿದೆ. ಇವರಿಬ್ಬರ ಜಗಳದಲ್ಲಿ ನನಗೇನಾದರೂ ಲಾಭ ಆಗುತ್ತದೆಯೇ ಎಂದು ಮಲ್ಲಿಕಾರ್ಜುನ ಖರ್ಗೆ ಕೂಡ ಟವೆಲ್ ಹಾಕಿದ್ದಾರೆ' ಎಂದು ಟೀಕಿಸಿದರು.

'ರಾಜ್ಯದಲ್ಲಿರುವುದು ಮಾನ ಮರ್ಯಾದೆ ಇಲ್ಲದ ಭ್ರಷ್ಟ ಸರ್ಕಾರ. ಮಾದಕ ವಸ್ತುಗಳ ಹಾವಳಿ ಮಿತಿಮೀರಿದೆ. ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲುತ್ತದೆ ಎಂದು ಆ ಪಕ್ಷದ ಮುಖಂಡರೇ ಹೇಳುತ್ತಿದ್ದಾರೆ. ಇದು ಆ ಪಕ್ಷದ ಸ್ಥಿತಿ' ಎಂದು ಆರೋಪಿಸಿದರು.

'ಉಪಚುನಾವಣೆ ಫಲಿತಾಂಶದ ನಂತರ ಈ ಸರ್ಕಾರಕ್ಕೆ ಜ್ಞಾನೋದಯವಾಗಲಿದೆ' ಎಂದರು.

'ಅಭಿಮಾನೋತ್ಸವ: ರಾಜಕೀಯ ಲಾಭದಾಸೆ ಇಲ್ಲ'

ವಿಜಯೇಂದ್ರ

ಮೈಸೂರು: 'ಚಿತ್ರದುರ್ಗದಲ್ಲಿ ಮೇ 9ರಂದು ಹಮ್ಮಿಕೊಳ್ಳಲಾಗಿರುವ 'ಬಿಎಸ್‌ವೈ ಅಭಿಮಾನೋತ್ಸವ' ದಿಂದ ರಾಜಕೀಯ ಲಾಭ ಪಡೆಯುವ ಆಸೆ ನನಗೂ ಇಲ್ಲ, ಪಕ್ಷಕ್ಕೂ ಇಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಬಿ.ವೈ.ವಿಜಯೇಂದ್ರ ಪ್ರತಿಪಾದಿಸಿದರು.

ಇಲ್ಲಿನ ಸುತ್ತೂರು ಮಠದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಶನಿವಾರ ಭೇಟಿ ಮಾಡಿ, ಕಾರ್ಯಕ್ರಮಕ್ಕೆ ಆಹ್ವಾನಿಸಿದ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

'ಕರ್ನಾಟಕದಲ್ಲಿ ಕೆಲವರು ಅದೃಷ್ಟದಿಂದ ಮುಖ್ಯಮಂತ್ರಿಯಾಗಿದ್ದಾರೆ. ಆದರೆ, ಯಡಿಯೂರಪ್ಪ ಆ ರೀತಿ ಮುಖ್ಯಮಂತ್ರಿಯಾದವರಲ್ಲ. ಸತತ ಹೋರಾಟದಿಂದ ಸ್ಥಾನ ಗಳಿಸಿದವರು. 50 ವರ್ಷಗಳ ರಾಜಕಾರಣದಲ್ಲಿ 45 ವರ್ಷ ಹೋರಾಟವನ್ನೇ ಮಾಡಿದ್ದಾರೆ. ಅದನ್ನು ಸ್ಮರಿಸಲೆಂದೇ ಸಮಾವೇಶ ನಡೆಸುತ್ತಿದ್ದೇವೆ' ಎಂದರು.

'ವಿಧಾನಸಭೆ ಚುನಾವಣೆಗೆ ಆರು ತಿಂಗಳಿದೆ ಎನ್ನುವಾಗ ಸಮಾವೇಶ ನಡೆಸಿದ್ದರೆ, ರಾಜಕೀಯ ಲಾಭದ ಲೆಕ್ಕಾಚಾರ ಹಾಕಬಹುದಿತ್ತು. ಈಗ ಆ ಪ್ರಶ್ನೆ ಉದ್ಭವಿಸುವುದಿಲ್ಲ. ರಾಜಕಾರಣಿಗಳ ಜೊತೆಗೆ, ರಾಜ್ಯದ ಬಹುತೇಕ ಮಠಾಧೀಶರೂ ಭಾಗವಹಿಸುತ್ತಾರೆ. ಸಮಾವೇಶದ ಸಂದೇಶ ಏನೆಂಬುದು ಅದು ಮುಗಿದ ಬಳಿಕ ಗೊತ್ತಾಗಲಿದೆ. 10 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆಯಲ್ಲಿದ್ದೇವೆ' ಎಂದು ತಿಳಿಸಿದರು.

ಯಡಿಯೂರಪ್ಪ – ಬಿ.ಎಲ್.ಸಂತೋಷ್ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಬಿಜೆಪಿ ರಾಷ್ಟ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರ ಮನೆಗೆ ಶನಿವಾರ ಭೇಟಿ ನೀಡಿ, ಮಾತುಕತೆ ನಡೆಸಿದ್ದಾರೆ.

ಯಡಿಯೂರಪ್ಪ ಅವರು ರಾಜಕೀಯ ಜೀವನಕ್ಕೆ ಪದಾರ್ಪಣೆ ಮಾಡಿ ಐದು ದಶಕಗಳನ್ನು ಪೂರೈಸುತ್ತಿರುವ ಈ ಸಮಯದಲ್ಲಿ ಸಂತೋಷ್ ಅವರು ಭೇಟಿ ನೀಡಿದ್ದು, ಅವರ ಮನೆಯಲ್ಲೇ ಉಪಾಹಾರ ಸೇವಿಸಿದ್ದಾರೆ.

ಬಿ.ಎಲ್.ಸಂತೋಷ್ ಅವರು ಬಿ.ಎಸ್.ಯಡಿಯೂರಪ್ಪ ಅವರ ಮನೆಗೆ ಭೇಟಿ ನೀಡಿ, ಚರ್ಚೆ ನಡೆಸಿದರು

ಈ ಕುರಿತು ಪ್ರತಿಕ್ರಿಯೆ ನೀಡಿರುವ ಯಡಿಯೂರಪ್ಪ, 'ಪಕ್ಷವನ್ನು ರಾಷ್ಟ್ರಮಟ್ಟದಲ್ಲಿ ಸಮರ್ಥವಾಗಿ ಸಂಘಟಿಸುತ್ತಿರುವ ಬಿ.ಎಲ್.ಸಂತೋಷ್ ಅವರು ನನ್ನ ಮನೆಗೆ ಭೇಟಿ ನೀಡಿದ್ದು ಖುಷಿ ತಂದಿದೆ. ಅವರ ಸಂಘಟನಾ ಸಾಮರ್ಥ್ಯ-ಚತುರತೆ ಪ್ರತಿಯೊಬ್ಬ ಕಾರ್ಯಕರ್ತನಿಗೂ ಸ್ಫೂರ್ತಿಯ ಸೆಲೆಯಾಗಿದೆ. ನನ್ನ ರಾಜಕೀಯ ಜೀವನದ 50ನೇ ವರ್ಷದ ಪಯಣಕ್ಕೆ ಅವರು ಶುಭಾಶಯ ಸಲ್ಲಿಸಿದರು' ಎಂದಿದ್ದಾರೆ.

'ಈಚೆಗೆ ನಡೆದ ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಕುರಿತು ಚರ್ಚಿಸಿದೆವು. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೇಶ ಸದೃಢವಾಗಿದ್ದು, ಬಿಜೆಪಿ ಗೆಲುವು ಸಾಧಿಸಲಿದೆ ಎಂಬ ವಿಶ್ವಾಸ ವ್ಯಕ್ತವಾಯಿತು' ಎಂದು ಹೇಳಿದ್ದಾರೆ.

ಚಿತ್ರದುರ್ಗದಲ್ಲಿ ಮೇ 9ರಂದು ಬಿಜೆಪಿ 'ಯಡಿಯೂರಪ್ಪ ಅಭಿಮಾನೋತ್ಸವ' ಸಮಾವೇಶ ಆಯೋಜಿಸಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಲಿರುವ ಈ ಕಾರ್ಯಕ್ರಮದ ಮೂಲಕ 10 ಲಕ್ಷ ಜನರನ್ನು ಸೇರಿಸಿ ಶಕ್ತಿ ಪ್ರದರ್ಶನ ಮಾಡಲು ವೇದಿಕೆ ಸಜ್ಜುಗೊಳಿಸಲಾಗಿದೆ.

13 ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲು

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಪಟ್ಟಣ ಸಮೀಪದ ಗಂಜಾಂನಲ್ಲಿ ಮಕ್ಕಳು ಮಾದಕ ವಸ್ತು ಗಾಂಜಾ ಸೇವಿಸುವ ಬಗ್ಗೆ ಮಾಧ್ಯಮಗಳಲ್ಲಿ ಸುದ್ದಿ ಪ್ರಕಟವಾಗಿದ್ದರಿಂದ ಹಿನ್ನೆಲೆಯಲ್ಲಿ ತಹಶೀಲ್ದಾರ್ ಸೇರಿ 13 ಅಧಿಕಾರಿಗಳ ವಿರುದ್ಧ ಲೋಕಾಯುಕ್ತದಲ್ಲಿ 'ಸುಮೊಟೊ' ದೂರು ದಾಖಲಾಗಿದೆ.

ಪಟ್ಟಣ ಠಾಣೆ ಪಿಎಸ್‌ಐ ಜನಾಬಾಯಿ ಕಡಪಟ್ಟಿ, ಸಿಪಿಐ ಬಿ.ಜಿ. ಕುಮಾರ್, ಡಿವೈಎಸ್ಪಿ ಯು.ಡಿ. ಕೃಷ್ಣಕುಮಾರ್, ತಹಶೀಲ್ದಾರ್ ಚೇತನಾ ಯಾದವ್, ಉಪವಿಭಾಗಾಧಿಕಾರಿ ಶ್ರೀನಿವಾಸ್, ಜಿಲ್ಲಾ ಆರೋಗ್ಯಾಧಿಕಾರಿ ಕೆ.ಮೋಹನ್, ತಾಲ್ಲೂಕು ಆರೋಗ್ಯಾಧಿಕಾರಿ ಆಶಾಲತಾ ಎಂ, ಡಿಡಿಪಿಐ ಜಿ.ಎ. ಲೋಕೇಶ್, ಬಿಇಒ ಬಿ.ವಿ. ನಂದೀಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಆಶಾ, ಪುರಸಭೆ ಮುಖ್ಯಾಧಿಕಾರಿ ರಾಜಣ್ಣ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಕಲೇಶ್ವರ್ ವಿರುದ್ಧ ಪ್ರಕರಣ ದಾಖಲಾಗಿದೆ.

ಜೂನ್ 29ರಂದು ಖುದ್ದು ಹಾಜರಾಗಿ ಪೂರಕ ದಾಖಲೆಗಳೊಂದಿಗೆ ಆಕ್ಷೇಪಣೆ ಸಲ್ಲಿಸುವಂತೆ ಅವರಿಗೆ ನಿರ್ದೇಶನ ನೀಡಿದ್ದಾರೆ. ಮಾದಕ ವಸ್ತುಗಳನ್ನು ಆಗಂತಕರು ಸರಬರಾಜು ಮಾಡುತ್ತಿದ್ದು, ಶಾಲೆ, ಕಾಲೇಜಿಗೆ ಹೋಗಬೇಕಾದ ಮಕ್ಕಳು ದುಶ್ಚಟಗಳಿಗೆ ದಾಸರಾಗುತ್ತಿದ್ದರೂ ಪೊಲೀಸ್ ಹಾಗೂ ಇತರ ಇಲಾಖೆಗಳು ನಿರ್ಲಕ್ಷ್ಯ ವಹಿಸಿವೆ. ಈ ಪ್ರಕರಣದಲ್ಲಿ ಅಧಿಕಾರಿಗಳ ಕರ್ತವ್ಯ ಲೋಪ ಕಂಡು ಬರುತ್ತಿದೆ. ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ವಿಚಾರಣೆ ಮತ್ತು ತನಿಖೆ ಅಗತ್ಯವಿರುತ್ತದೆ ಎಂದು ನ್ಯಾಯಮೂರ್ತಿ ಬಿ. ವೀರಪ್ಪ ಹೇಳಿದ್ದಾರೆ.

'ಮೇ 20ರಿಂದ ಬಸ್ ಸಂಚಾರ ಸ್ಥಗಿತ'

ಬೆಂಗಳೂರು: ವೇತನ ಬಾಕಿ ಪಾವತಿಯೂ ಸೇರಿದಂತೆ ಸಾರಿಗೆ ನೌಕರರ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ, ಮೇ 20ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಕರೆ ನೀಡಿದೆ.

ಅಂದು ಬೆಳಿಗ್ಗೆ 6ರಿಂದಲೇ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ನಾಲ್ಕು ನಿಗಮಗಳ ಬಸ್‌ಗಳನ್ನು ರಸ್ತೆಗೆ ಇಳಿಸದಿರಲು ನೌಕರರು ನಿರ್ಧರಿಸಿದ್ದಾರೆ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಜತೆಗೆ ಏಪ್ರಿಲ್ 28ರಂದು ನಡೆದಿದ್ದ ಮಾತುಕತೆ ವಿಫಲವಾದ ಬೆನ್ನಲ್ಲೇ ಮುಷ್ಕರ ನಡೆಸುವುದಾಗಿ ನೌಕರರು ಎಚ್ಚರಿಸಿದ್ದರು. ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷೆ ಜ್ಯೋತಿ ಅನಂತಸುಬ್ಬರಾವ್ ಅವರು ಶನಿವಾರ ನಡೆದ ಪತ್ರಿಕಾಗೋಷ್ಠಿ ಯಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸುವುದಾಗಿ ಅಧಿಕೃತವಾಗಿ ಘೋಷಿಸಿದರು.

'2024ರ ಜನವರಿಯಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಮಾಡಬೇಕು. ಶೇ 25ರಷ್ಟು ವೇತನ ಹೆಚ್ಚಳ ಮಾಡಬೇಕು. ಇತರೆ ಬೇಡಿಕೆಗಳನ್ನು ಕಾಲಮಿತಿಯೊಳಗೆ ಈಡೇರಿಸಬೇಕು ಎಂದು ಸಚಿವರಿಗೆ ಮನವಿ ಮಾಡಿದ್ದೆವು. ಅವರು ಶೇ 7ರಷ್ಟು ವೇತನ ಹೆಚ್ಚಳ ಮಾಡುವುದಾಗಿ, 2025ರ ಏಪ್ರಿಲ್ 1ರಿಂದ ಪರಿಗಣಿಸುವುದಾಗಿ ಹೇಳಿದ್ದರು. ಹಾಗಾಗಿ, ಮಾತುಕತೆ ಫಲಪ್ರದವಾಗಿಲ್ಲ' ಎಂದು ಜ್ಯೋತಿ ಅನಂತ ಸುಬ್ಬರಾವ್ ಮಾಹಿತಿ ನೀಡಿದರು.

'ಸಾರ್ವಜನಿಕರಿಗೆ ತೊಂದರೆಯಾದರೆ ಅದಕ್ಕೆ ರಾಜ್ಯ ಸರ್ಕಾರವೇ ಹೊಣೆ' ಎಂದು ಎಚ್ಚರಿಸಿದರು.

ಕೃಷಿ ಅಧಿಕಾರಿ ನೇಮಕ ಪ್ರಕ್ರಿಯೆ ಸ್ಥಗಿತ

ಬೆಂಗಳೂರು: ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿಗಳ ನೇಮಕಾತಿಗೆ ಹೊರಡಿಸಿದ್ದ ಅಧಿಸೂಚನೆಯನ್ನು ಹಿಂಪಡೆಯಲಾಗಿದ್ದು, ಒಳ ಮೀಸಲಾತಿ ಅನ್ವಯಿಸಿ ಮರು ಆದೇಶ ಹೊರಡಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಕೃಷಿ ಇಲಾಖೆ ಸೂಚಿಸಿದೆ.

'ಕೃಷಿ ಇಲಾಖೆ ಆಯುಕ್ತರ ಕೋರಿಕೆಯಂತೆ ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ. ಪರಿಶಿಷ್ಟ ಜಾತಿಗೆ ಶೇ 15ರಷ್ಟು ಮೀಸಲಾತಿ ನಿಗದಿಪಡಿಸಿ ಸರ್ಕಾರ ಆದೇಶ ಹೊರಡಿಸಿದೆ. ಒಳ ಮೀಸಲಾತಿ ಅಳವಡಿಸಿಕೊಂಡು ಪರಿಷ್ಕೃತ ಅಧಿಸೂಚನೆ ಹೊರಡಿಸಬೇಕಿದೆ' ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಕಲ್ಯಾಣ ಕರ್ನಾಟಕ ವೃಂದದ 258 ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಭರ್ತಿ ಮಾಡಲು ಕೆಇಎ ಅರ್ಜಿ ಆಹ್ವಾನಿಸಿತ್ತು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮೇ 10 ಹಾಗೂ ಶುಲ್ಕ ಪಾವತಿಗೆ ಮೇ 12 ಕೊನೆಯ ದಿನವಾಗಿತ್ತು.

ಸುದ್ದಿ 2 ನಿಮಿಷ

ಕೆಪಿಎಸ್‌ಸಿ ಅಕ್ರಮ: ದೇಶಪಾಂಡೆ ನೇತೃತ್ವದಲ್ಲಿ ಸದನ ಸಮಿತಿ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ನಡೆಯುತ್ತಿರುವ ಅಕ್ರಮಗಳನ್ನು ತಡೆಯಲು ಮತ್ತು ಆಯೋಗದಲ್ಲಿ ಮತ್ತಷ್ಟು ಸುಧಾರಣೆಗಳನ್ನು ತರುವ ಉದ್ದೇಶದಿಂದ ಕಾಂಗ್ರೆಸ್‌ನ ಆರ್.ವಿ. ದೇಶಪಾಂಡೆ ನೇತೃತ್ವದಲ್ಲಿ ವಿಧಾನಸಭೆ ಸದಸ್ಯರನ್ನು ಒಳಗೊಂಡ ಸದನ ಸಮಿತಿ ರಚಿಸಲಾಗಿದೆ.

ಸಮಿತಿಯಲ್ಲಿ ಕಾಂಗ್ರೆಸ್‌ನ ಹಂಪನಗೌಡ ಬಾದರ್ಲಿ, ಎಚ್.ಸಿ. ಬಾಲಕೃಷ್ಣ, ಎ.ಎಸ್. ಪೊನ್ನಣ್ಣ, ಕೆ.ಎಂ. ಶಿವಲಿಂಗೇಗೌಡ, ರಾಘವೇಂದ್ರ ಹಿಟ್ನಾಳ, ಎಂ. ರೂಪಕಲಾ, ಬಿಜೆಪಿಯ ಆರಗ ಜ್ಞಾನೇಂದ್ರ, ಎಸ್. ಸುರೇಶ್‌ಕುಮಾರ್, ಮಹೇಶ್ ಟೆಂಗಿನಕಾಯಿ, ಜೆಡಿಎಸ್‌ನ ಎಂ.ಟಿ. ಕೃಷ್ಣಪ್ಪ ಸದಸ್ಯರಾಗಿದ್ದಾರೆ.



'ಶಿಫಾರಸುಗಳ ಸಹಿತ ವರದಿ ಸಲ್ಲಿಸಲು ಸಮಿತಿಗೆ ಮೂರು ತಿಂಗಳ ಕಾಲಾವಕಾಶ ನೀಡಲಾಗಿದೆ' ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಪಿಎಸ್‌ಸಿ ಅಕ್ರಮಗಳ ಕುರಿತು ಇತ್ತೀಚೆಗೆ ನಡೆದ ವಿಧಾನ ಮಂಡಲ ಅಧಿವೇಶನದಲ್ಲಿ ಸುದೀರ್ಘ ಚರ್ಚೆ ನಡೆದಿತ್ತು. ಅಕ್ರಮಗಳನ್ನು ತಡೆಯಲೇಬೇಕು ಎಂದು ಪಕ್ಷಾತೀತವಾಗಿ ಸದಸ್ಯರು ಪ್ರಸ್ತಾಪಿಸಿದ್ದರು.

ಎಚ್.ಎನ್.ಕೃಷ್ಣ ಆರೋಪ ಮುಕ್ತ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಎಚ್.ಎನ್.ಕೃಷ್ಣ ಸೇರಿದಂತೆ ಆರು ಮಂದಿಯ ವಿರುದ್ಧ ರಾಜ್ಯ ಅಪರಾಧ ತನಿಖಾ ದಳವು (ಸಿಐಡಿ) ಮಾಡಿದ್ದ ಆರೋಪಗಳಿಂದ ಮುಕ್ತಗೊಳಿಸಿ, ಒಂದನೇ ಎಸಿಜೆಎಂ ನ್ಯಾಯಾಲಯವು ಏಪ್ರಿಲ್ 30ರಂದು ಆದೇಶಿಸಿದೆ.

ಪ್ರಕರಣದ ತನಿಖೆ ನಡೆಸಿದ ಸಿಐಡಿ ಪೊಲೀಸರು, 2012ರಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಆರೋಪಿಗಳ ವಿರುದ್ಧ ಪ್ರಾಸಿಕ್ಯೂಷನ್ ಮಾಡಿದ್ದ ಆರೋಪಗಳನ್ನು ಸಾಬೀತು ಪಡಿಸುವಲ್ಲಿ ವಿಫಲವಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಿರುವ ನ್ಯಾಯಾಧೀಶರು, ಆರು ಮಂದಿಯನ್ನು ಖುಲಾಸೆಗೊಳಿಸಿದ್ದಾರೆ.

1998–99ನೇ ಸಾಲಿನಲ್ಲಿ ನಡೆದಿದ್ದ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆಯಲ್ಲಿ ಎಚ್.ಎನ್.ಕೃಷ್ಣ ಅವರು ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿತ್ತು.

2 ಹಾಗೂ 3ನೇ ಆರೋಪಿಗಳಾಗಿದ್ದ ಆಶಾ ಪರ್ವೀನ್ ಹಾಗೂ ಸಲ್ಮಾ ಫಿರ್ದೋಸ್ ಅವರು ಖೊಟ್ಟಿ ದಾಖಲೆಗಳನ್ನು ಸಲ್ಲಿಸಿದ್ದಾರೆ ಹಾಗೂ ಲೋಕಸೇವಾ ಆಯೋಗದ ಸಿಬ್ಬಂದಿಯಾಗಿದ್ದ ಕೆ.ನರಸಿಂಹ, ಪಿ.ಗೋಪಿಕೃಷ್ಣ, ಎಂ.ಬಿ.ಬಣಕಾರ್ ಅವರು ಅಧ್ಯಕ್ಷರಿಗೆ ಸಹಕರಿಸಿದ್ದಾರೆ ಎಂದು ಸಿಐಡಿ ಆರೋಪಿಸಿತ್ತು. ಇವರೆಲ್ಲರ ಮೇಲಿನ ಆರೋಪಗಳನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ.

ಎಚ್.ಎನ್.ಕೃಷ್ಣ ಅವರನ್ನು 2011ರಲ್ಲಿ ಸಿಐಡಿ ತನಿಖಾ ತಂಡ ಬಂಧಿಸಿತ್ತು. ನೇಮಕಾತಿಯಲ್ಲಿ ಅಕ್ರಮ, ಅಧಿಕಾರದ ದುರುಪಯೋಗದ ಆರೋಪಗಳನ್ನು ಹೊರಿಸಲಾಗಿತ್ತು. ಕೃಷ್ಣ ತಮ್ಮ ವಿರುದ್ಧ ದಾಖಲಾದ ಪ್ರಕರಣದ ಸಂಬಂಧ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಅವರ ವಿರುದ್ಧದ ವಿಚಾರಣೆಗೆ ಹೈಕೋರ್ಟ್ ತಾತ್ಕಾಲಿಕವಾಗಿ ತಡೆ ನೀಡಿತ್ತು. ನಂತರ, ನ್ಯಾಯಾಲಯದ ಆದೇಶ ಮೇರೆಗೆ ತನಿಖೆ ನಡೆಸಿದ್ದ ಸಿಐಡಿ, ದೋಷಾರೋಪ ಪಟ್ಟಿಯನ್ನೂ ಸಲ್ಲಿಸಿತ್ತು.

'9 ಅಧಿಕಾರಿಗಳ ವಿರುದ್ಧ ಕ್ರಮ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೆಪಿಟಿಸಿಎಲ್‌ನ ವಿದ್ಯುತ್ ಮಾರ್ಗಕ್ಕೆ ಸಬ್ ಸ್ಟೇಷನ್ ನಿರ್ಮಾಣ ಕಾಮಗಾರಿಗೆ ಅನುಮತಿ ಪಡೆಯದೇ ಕಾವೇರಿ ವನ್ಯಜೀವಿಧಾಮದಲ್ಲಿ ಅರಣ್ಯ ಭೂಮಿ ಬಳಸಿದ ಪ್ರಕರಣದಲ್ಲಿ ಐಎಎಸ್ ಅಧಿಕಾರಿ ಸೇರಿದಂತೆ ಒಂಬತ್ತು ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮದ ವರದಿ ಸಲ್ಲಿಸುವಂತೆ ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯವು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

'ಕಾವೇರಿ ವನ್ಯಜೀವಿಧಾಮದ ಧನಗೂರು ಅರಣ್ಯ ಪ್ರದೇಶದಲ್ಲಿ ಕೆಪಿಟಿಸಿಎಲ್ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರ ನಿರ್ಮಾಣ ಮಾಡುತ್ತಿದೆ. ಕಟ್ಟಡ ನಿರ್ಮಾಣಕ್ಕೆ ಕೆಪಿಟಿಸಿಎಲ್‌ನವರಿಗೆ ಮಂಜೂರಾತಿ ಮಾಡಿರುವ 2 ಎಕರೆ ಜಾಗವು ಕಂದಾಯ ಜಾಗ ಅಲ್ಲ. ಅರಣ್ಯ ಪ್ರದೇಶವನ್ನು ನಿಯಮಬಾಹಿರವಾಗಿ ಮಂಜೂರು ಮಾಡಲಾಗಿದೆ. ಈ ಪ್ರಕರಣದಲ್ಲಿ ಮಂಡ್ಯ ಜಿಲ್ಲಾಧಿಕಾರಿಯಾಗಿದ್ದ ಎಸ್.ಅಶ್ವತಿ, ಉಪವಿಭಾಗಾಧಿಕಾರಿಯಾಗಿದ್ದ ಬಿ.ಸಿ. ಶಿವಾನಂದ ಮೂರ್ತಿ, ತಹಶೀಲ್ದಾರ್ ಎಂ. ವಿಜಯಣ್ಣ ಸೇರಿದಂತೆ ಒಂಬತ್ತು ಅಧಿಕಾರಿಗಳು ಗಂಭೀರ ಲೋಪ ಎಸಗಿದ್ದಾರೆ. ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಕಂದಾಯ ಇಲಾಖೆಗೆ ಶಿಫಾರಸು ಮಾಡಬೇಕು' ಎಂದು ಕೊಳ್ಳೆಗಾಲ ಡಿಸಿಎಫ್ ಅವರು ಪ್ರಸ್ತಾವ ಸಲ್ಲಿಸಿದ್ದರು.

ರಾಜ್ಯ ಅರಣ್ಯ ಇಲಾಖೆಯು ಅರಣ್ಯ ಅನುಮೋದನೆಯ ಪ್ರಸ್ತಾವವನ್ನು ಕೇಂದ್ರ ಅರಣ್ಯ ಸಚಿವಾಲಯಕ್ಕೆ ಕಳುಹಿಸಿತ್ತು. ಈ ಸಂಬಂಧ ಏಪ್ರಿಲ್ 24ರಂದು ವಿವರಣೆ ಕೇಳಿರುವ ಅರಣ್ಯ ಸಚಿವಾಲಯವು, ನಿಯಮ ಉಲ್ಲಂಘನೆ, ಕ್ರಮ ಕೈಗೊಂಡ ವರದಿ, ಲೋಪ ಎಸಗಿದ ಅಧಿಕಾರಿಗಳ ವಿವರವನ್ನು ಸಲ್ಲಿಸಬೇಕು ಎಂದು ತಾಕೀತು ಮಾಡಿದೆ.

ಡಿಸಿಎಫ್ ವರದಿಗೆ ಆಕ್ಷೇಪ: ಇನ್ನೊಂದೆಡೆ, ಬೆಳಗಾವಿ ಪ್ರಕರಣದಲ್ಲಿ ಕೆಪಿಟಿಸಿಎಲ್ ಗೊತ್ತಿಲ್ಲದೇ ಅರಣ್ಯ ಬಳಸಿದೆ ಎಂದು ಬೆಳಗಾವಿ ಡಿಸಿಎಫ್ ವರದಿ ಸಲ್ಲಿಸಿದ್ದಾರೆ. ಬೆಳಗಾವಿ ಡಿಸಿಎಫ್ ದ್ವಂದ್ವ ನಿಲುವು ಮಾಹಿತಿ ಹಕ್ಕು ಕಾರ್ಯಕರ್ತರ ಆಕ್ಷೇಪಕ್ಕೆ ಕಾರಣವಾಗಿದೆ.

'ಬೆಳಗಾವಿಯಲ್ಲಿ ಕೆಪಿಟಿಸಿಎಲ್‌ನವರು ಅನುಮತಿ ಇಲ್ಲದೆ ಅರಣ್ಯ ಭೂಮಿಯನ್ನು ಅರಣ್ಯೇತರ ಚಟುವಟಿಕೆಗೆ 1.87 ಹೆಕ್ಟೇರ್ ಅರಣ್ಯ ಬಳಸಿದ್ದರೂ ಡಿಸಿಎಫ್ ಯಾವುದೇ ಕ್ರಮಕ್ಕೆ ಶಿಫಾರಸು ಮಾಡಿಲ್ಲ. ಅರಣ್ಯ ಭೂಮಿ ಎಂದು ಗೊತ್ತಿದ್ದರೂ ಅರಣ್ಯೇತರ ಚಟುವಟಿಕೆ ತಡೆಯಲು ವಿಫಲರಾದ ಬೆಳಗಾವಿ ಉಪವಿಭಾಗದ ಎಸಿಎಫ್ ಹಾಗೂ ವಲಯ ಅರಣ್ಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಶಿಫಾರಸು ಮಾಡದಿರುವ ಬೆಳಗಾವಿ ಡಿಸಿಎಫ್ ನಡೆ ಕಾನೂನುಬಾಹಿರ ' ಎಂದು ಮಾಹಿತಿ ಹಕ್ಕು ಕಾರ್ಯಕರ್ತ ರಾಮ್ ಎಂಬವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಹಾಗೂ ಈ ಕುರಿತು ಬೆಳಗಾವಿ ಡಿಸಿಎಫ್ ಸೇರಿದಂತೆ ಇತರ ಅಧಿಕಾರಿಗಳ ವಿರುದ್ಧ ಕೇಂದ್ರ ಸರ್ಕಾರಕ್ಕೆ ದೂರು ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಬೆಳಗಾವಿಯ ಇಸ್ಲಾಮ್‌ಪುರದಿಂದ ವಂಟಮುರಿಯವರೆಗೆ ಕೆಪಿಟಿಸಿಎಲ್ 110 ಕೆ.ವಿ. ವಿದ್ಯುತ್ ಮಾರ್ಗ ಕಾಮಗಾರಿ ಕೈಗೆತ್ತಿಕೊಂಡಿದೆ. ಈ ಮಾರ್ಗವು ಹಲವು ಹಳ್ಳಿಗಳ ಮೂಲಕ ಹಾದು ಹೋಗುತ್ತದೆ. ಈ ಯೋಜನೆಗೆ 24 ಎಕರೆ ಅರಣ್ಯ ಭೂಮಿ ಬಳಸಿಕೊಳ್ಳಲಾಗುತ್ತಿದೆ. ಸ್ಥಳ ಪರಿಶೀಲನೆ ನಡೆಸಿದ ಬೆಳಗಾವಿ ಡಿಸಿಎಫ್ ಅವರು, 'ಅರಣ್ಯ ಪ್ರದೇಶದಲ್ಲೇ ವಿದ್ಯುತ್ ಉಪ ಕೇಂದ್ರ ನಿರ್ಮಾಣ ಮಾಡಲಾಗುತ್ತಿದೆ. ಆದರೆ, ಈ ಜಾಗವನ್ನು ಖಾಸಗಿ ಯವರಿಂದ ಕೆಪಿಟಿಸಿಎಲ್‌ನವರು ಖರೀದಿ ಮಾಡಿದ್ದಾರೆ. ಆದರೆ, ಅರಣ್ಯ ಇಲಾಖೆಯ ದಾಖಲೆಗಳ ಪ್ರಕಾರ, ಈ ಜಾಗವು ಮೀಸಲು ಅರಣ್ಯ. ಇದು ಅರಣ್ಯ ಭೂಮಿ ಎಂಬುದು ಕೆಪಿಟಿಸಿಎಲ್‌ನವರಿಗೆ ಗೊತ್ತಿರಲಿಲ್ಲ. ಇದು ಉದ್ದೇಶಪೂರ್ವಕ ಲೋಪ ಅಲ್ಲ' ಎಂದು ವರದಿ ಸಲ್ಲಿಸಿದ್ದಾರೆ. 'ಅರಣ್ಯ ಭೂಮಿ ಬಳಕೆಗೆ ಕೆಪಿಟಿಸಿಎಲ್ ಪ್ರಸ್ತಾವ ಸಲ್ಲಿಸಲಿದೆ. ಹೀಗಾಗಿ, ಅರಣ್ಯ ಭೂಮಿ ಬಳಸಲು ಒಪ್ಪಿಗೆ ನೀಡಬಹುದು' ಎಂದು ಶಿಫಾರಸು ಮಾಡಿದ್ದಾರೆ.

ಮುಖ್ಯಾಂಶಗಳು

- ಕಾಮಗಾರಿಗೆ ಅನುಮತಿ ಪಡೆಯದೇ ಅರಣ್ಯ ಬಳಕೆ
- ನಿಯಮ ಬಾಹಿರವಾಗಿ ಮಂಜೂರಾತಿ– ಪ್ರಾಸಿಕ್ಯೂಷನ್‌ಗೆ ಶಿಫಾರಸಿಗೆ ಸೂಚನೆ

ಭ್ರೂಣಲಿಂಗ ಪತ್ತೆ ಪ್ರಕರಣ: ಶಾಸಕ ಎಚ್.ಟಿ.ಮಂಜು ಪ್ರಶ್ನೆ

ಸಣ್ಣ ನಿರ್ಲಕ್ಷ್ಯಕ್ಕೆ ವೈದ್ಯರ ಬಂಧನ ಸರಿಯೇ?

ಪ್ರಜಾವಾಣಿ ವಾರ್ತೆ

ಎಚ್.ಟಿ. ಮಂಜು

ಮಂಡ್ಯ: 'ತುರ್ತು ಸೇವೆ ನೀಡುವುದು ವೈದ್ಯರ ಕರ್ತವ್ಯ. ಹೀಗಾಗಿ ಕೇಳಿಕೊಂಡು ಬಂದವರಿಗೆ ಸ್ಕ್ಯಾನಿಂಗ್ ಮಾಡಿದ್ದಾರೆ. ಅದರ ಮಾಹಿತಿಯನ್ನು ನೀಡುವಲ್ಲಿ ಸಣ್ಣ ನಿರ್ಲಕ್ಷ್ಯ ತೋರಿದ್ದಾರೆ. ಅಷ್ಟಕ್ಕೇ ವೈದ್ಯರನ್ನು ಬಂಧಿಸುವುದು ಎಷ್ಟು ಸರಿ' ಎಂದು ಕೆ.ಆರ್. ಪೇಟೆ ಶಾಸಕ ಎಚ್.ಟಿ. ಮಂಜು ಪ್ರಶ್ನಿಸಿದರು.

ನಗರದಲ್ಲಿ ಶನಿವಾರ ನಡೆದ ಕೆಡಿಪಿ ಸಭೆಯಲ್ಲಿ '31 ಬಾಲಗರ್ಭಿಣಿಯರಿಗೆ ಅಕ್ರಮ ಸ್ಕ್ಯಾನಿಂಗ್ ಕುರಿತ ಲೋಕಾಯುಕ್ತ ಪ್ರಕರಣ'ವನ್ನು ಪ್ರಸ್ತಾಪಿಸಿ, 'ಭ್ರೂಣಲಿಂಗ ಪತ್ತೆ ಮಾಡಿರುವುದಕ್ಕೆ ದಾಖಲೆ ಇಲ್ಲದಿದ್ದರೂ ವೈದ್ಯರನ್ನು ಬಂಧಿಸಲಾಗಿದೆ' ಎಂದು ದೂರಿದರು.

'ಕೆ.ಆರ್. ಪೇಟೆ ತಾಲ್ಲೂಕು ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಸೌಲಭ್ಯವಿಲ್ಲದ್ದರಿಂದ ವೈದ್ಯರು ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗೆ ಶಿಫಾರಸು ಮಾಡಿದ್ದಾರೆ. ಬಂದ ಗರ್ಭಿಣಿಯರನ್ನು 70 ಕಿ.ಮೀ. ದೂರದ ಜಿಲ್ಲಾಸ್ಪತ್ರೆಗೆ ಕಳಿಸಲು ಸಾಧ್ಯವೇ? ವೈದ್ಯರು ಮಾನಸಿಕವಾಗಿ ಕುಗ್ಗಿ ಹೋಗಿದ್ದಾರೆ. ಕೆಲವರು ಸ್ವಯಂ ನಿವೃತ್ತಿಗೆ ಮುಂದಾಗಿದ್ದಾರೆ. ತಾಲ್ಲೂಕಿನ ಗೌರವಕ್ಕೆ ಧಕ್ಕೆಯಾಗಿದೆ. ಹೀಗಾದರೆ ಸಾರ್ವಜನಿಕರಿಗೆ ಆರೋಗ್ಯ ಸೇವೆ ಒದಗಿಸುವುದು ಹೇಗೆ' ಎಂದು ಕೇಳಿದರು.

'ಭ್ರೂಣಲಿಂಗ ಪತ್ತೆ ಮಾಡುವುದು ಸರಿಯಲ್ಲ. ತಪ್ಪಿತಸ್ಥರಿಗೆ ಶಿಕ್ಷೆಯಾಗಲೇಬೇಕು. ಆದರೆ, ಅನಗತ್ಯವಾಗಿ ವೈದ್ಯರಿಗೆ ಕಿರುಕುಳ ನೀಡಬಾರದು' ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, 'ವೈದ್ಯರ ತಂಡವು ಸಮಸ್ಯೆಯನ್ನು ನನ್ನ ಗಮನಕ್ಕೆ ತಂದಿದೆ. ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿರುವುದರಿಂದ, ಕೆಡಿಪಿ ಸಭೆಯಲ್ಲಿ ನಿರ್ಣಯಿಸುವುದು ಬೇಡ. ಮುಖ್ಯಮಂತ್ರಿಯೊಂದಿಗೆ ಚರ್ಚಿಸುವೆ. ಆರೋಗ್ಯ ಸಚಿವ ದಿನೇಶ್ ಗೂಂಡೂರಾವ್ ಅವರ ಗಮನ ಸೆಳೆದು, ಲೋಕಾಯುಕ್ತ ರಿಜಿಸ್ಟ್ರಾರ್ ಅವರಿಗೆ ಪತ್ರ ಬರೆಸುವೆ. ಅನಗತ್ಯ ಕಿರುಕುಳ ತಪ್ಪಿಸಲಾಗುವುದು' ಎಂದು ಭರವಸೆ ನೀಡಿದರು.

'ಎಫ್‌ಐಆರ್: 12ರಿಂದ 23ಕ್ಕೆ ಏರಿಕೆ'

ಮಂಡ್ಯ: ಭ್ರೂಣಲಿಂಗ ಪತ್ತೆಗಾಗಿ 31 ಬಾಲಗರ್ಭಿಣಿಯರಿಗೆ ಕಾನೂನುಬಾಹಿರವಾಗಿ ಸ್ಕ್ಯಾನಿಂಗ್ ಮಾಡಿರುವ ಆರೋಪದ ಮೇರೆಗೆ ಮೂವರು ವೈದ್ಯರನ್ನು ಪೊಲೀಸರು ಬಂಧಿಸಿ, ಈಗಾಗಲೇ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕೆ.ಆರ್.ಪೇಟೆ ಪಟ್ಟಣ ಮತ್ತು ಗ್ರಾಮಾಂತರ ಠಾಣೆಗಳಲ್ಲಿ ಒಟ್ಟು 17 ಆರೋಪಿಗಳ ವಿರುದ್ಧ 12 ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿದ್ದವು. ಈಗ ಕಿಕ್ಕೇರಿ ಠಾಣೆಯಲ್ಲಿ ದಾಖಲಾದ ಪ್ರಕರಣಗಳು ಸೇರಿ ಎಫ್‌ಐಆರ್‌ಗಳ ಸಂಖ್ಯೆ 23ಕ್ಕೆ ಏರಿಕೆಯಾಗಿದೆ. ಸರ್ಕಾರಿ ವೈದ್ಯೆ, ಮೂವರು ಖಾಸಗಿ ವೈದ್ಯರು, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, ಆಶಾ ಕಾರ್ಯಕರ್ತೆ ಹಾಗೂ ಖಾಸಗಿ ವ್ಯಕ್ತಿಗಳ ವಿರುದ್ಧ ದೂರು ದಾಖಲಾಗಿದೆ. ಲೋಕಾಯುಕ್ತ ಸಂಸ್ಥೆಯಲ್ಲೂ ಸ್ವಯಂಪ್ರೇರಿತ ಪ್ರಕರಣ ದಾಖಲಾಗಿದೆ.

ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ವನ್ಯಜೀವಿಧಾಮದ ಪಿಜಿ ಪಾಳ್ಯ ವನ್ಯಜೀವಿ ವಲಯದ ಲೊಕ್ಕನಹಳ್ಳಿ ಸಫಾರಿ ಪ್ರದೇಶದಲ್ಲಿ ತಾಯಿ ಹುಲಿ ಮೂರು ಮರಿಗಳೊಂದಿಗೆ ಕಾಣಿಸಿಕೊಂಡ ದೃಶ್ಯ

ವೈದ್ಯಕೀಯ ಪ್ರವೇಶ: ಇಂದು ನೀಟ್

ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) 2026–27ನೇ ಸಾಲಿನ ವೈದ್ಯಕೀಯ ಪ್ರವೇಶಕ್ಕೆ ಮೇ 3ರಂದು ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್-ಯುಜಿ) ನಡೆಸುತ್ತಿದೆ.

ಮಧ್ಯಾಹ್ನ 2 ಗಂಟೆಯಿಂದ ಸಂಜೆ 5ರವರೆಗೆ ಪರೀಕ್ಷೆ ನಡೆಯಲಿದ್ದು, ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ ಎರಡು ಗಂಟೆ ಮುಂಚಿತವಾಗಿ ಹಾಜರಿರಬೇಕು. ಗುರುತಿನ ಚೀಟಿ, ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಮತದಾರರ ಗುರುತಿನ ಚೀಟಿ ಅಥವಾ ಇತರೆ ಯಾವುದಾದರೂ ಅಂಗೀಕೃತ ಗುರುತಿನ ಚೀಟಿಯ ಜೊತೆ ಒಂದು ಪೋಸ್ಟ್ ಕಾರ್ಡ್ ಮತ್ತು ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳ ಸಹಿತ ಹಾಜರಾಗಬೇಕು. ನೋಂದಣಿ ಪ್ರಕ್ರಿಯೆ ಪೂರ್ಣಗೊಂಡ ವಿದ್ಯಾರ್ಥಿಗಳು ತಮ್ಮ ರಿಜಿಸ್ಟರ್ ನಂಬರ್ ಇರುವ ಕೊಠಡಿಗೆ ತೆರಳಬೇಕು ಎಂದು ಎನ್‌ಟಿಎ ಹೇಳಿದೆ.

ಕಾಮೆಡ್–ಕೆ: ನೆರೆ ರಾಜ್ಯಗಳಲ್ಲಿ ಪರೀಕ್ಷಾ ಕೇಂದ್ರ!

ಬೆಂಗಳೂರು: ಕರ್ನಾಟಕದ ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ (ಕಾಮೆಡ್–ಕೆ) 2026–27ನೇ ಶೈಕ್ಷಣಿಕ ವರ್ಷದ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಮೇ 9ರಂದು ಪ್ರವೇಶ ಪರೀಕ್ಷೆ ನಡೆಸುತ್ತಿದ್ದು, ರಾಜ್ಯದ ಹಲವು ವಿದ್ಯಾರ್ಥಿಗಳಿಗೆ ನೆರೆ ರಾಜ್ಯಗಳಲ್ಲಿ ಕೇಂದ್ರ ನಿಗದಿ ಮಾಡಲಾಗಿದೆ.

ಕಾಮೆಡ್–ಕೆ ಶನಿವಾರ ಪ್ರವೇಶ ಪತ್ರಗಳನ್ನು ಬಿಡುಗಡೆ ಮಾಡಿದೆ. 'ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಪರೀಕ್ಷೆ ಬರೆಯಲು ಈ ವರ್ಷ ಹೆಚ್ಚುವರಿ 6,000 ಹೆಚ್ಚುವರಿ ಆಸನ ವ್ಯವಸ್ಥೆ ಮಾಡಲಾಗಿದೆ. ಆದರೆ, ಕೊನೆಯ ಕ್ಷಣದಲ್ಲಿ ಅರ್ಜಿ ಸಲ್ಲಿಸಿದವರಿಗೆ ಸಂಪರ್ಕ ಸೌಲಭ್ಯವನ್ನು ಗಮನದಲ್ಲಿಟ್ಟು ಚೆನ್ನೈ, ಹೈದರಾಬಾದ್‌ನಲ್ಲಿ ಕೇಂದ್ರಗಳನ್ನು ನೀಡಲಾಗಿದೆ. ಸುಮಾರು 2,600 ವಿದ್ಯಾರ್ಥಿಗಳಿಗೆ ಅವರ ಆಯ್ಕೆಗೆ ವಿರುದ್ಧವಾಗಿ ಹಂಚಿಕೆಯಾಗಿರಬಹುದು' ಎಂದು ಕಾಮೆಡ್–ಕೆ ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ.

ಬಂಗಾಳ: ಮರುಮತದಾನ ಶಾಂತಿಯುತ

ಡೈಮಂಡ್ ಹಾರ್ಬರ್ ಕ್ಷೇತ್ರದಲ್ಲಿ ಸ್ಥಳೀಯರಿಂದ ಪ್ರತಿಭಟನೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಎರಡು ವಿಧಾನಸಭಾ ಕ್ಷೇತ್ರಗಳ 15 ಮತಗಟ್ಟೆಗಳಲ್ಲಿ ಶನಿವಾರ ಬಹುತೇಕ ಶಾಂತಿಯುತವಾಗಿ ಮರುಮತದಾನ ನಡೆಯಿತು. ಕೆಲವೆಡೆ ಘರ್ಷಣೆ, ಪ್ರತಿಭಟನೆಗಳು ನಡೆದವು.

ಬೆಳಿಗ್ಗೆ 7 ಗಂಟೆಗೆ ಮತದಾನ ಆರಂಭವಾಗಿತ್ತು. ಮಧ್ಯಾಹ್ನ 1 ಗಂಟೆಗೆ ಶೇ 55.57ರಷ್ಟು, 3 ಗಂಟೆಗೆ ಶೇ 72ರಷ್ಟು ಹಾಗೂ 5ಗಂಟೆ ವೇಳೆಗೆ ಶೇ 86.90ರಷ್ಟು ಮತದಾನವಾಗಿತ್ತು. ಒಟ್ಟಾರೆಯಾಗಿ ಸುಮಾರು 90ರಷ್ಟು ಮತದಾನವಾಗಿದೆ.

ಮಗರ್‌ಹಾಟ್ ಪಶ್ಚಿಮ ಕ್ಷೇತ್ರದ 11 ಮತಗಟ್ಟೆಗಳಲ್ಲಿ ಮತ್ತು ಡೈಮಂಡ್ ಹಾರ್ಬರ್ ಕ್ಷೇತ್ರದ ನಾಲ್ಕು ಮತಗಟ್ಟೆಗಳಲ್ಲಿ ಮರುಮತದಾನಕ್ಕೆ ಆಯೋಗ ಆದೇಶಿಸಿತ್ತು.

ಪ್ರತಿಭಟನೆ: ಡೈಮಂಡ್ ಹಾರ್ಬರ್ ಕ್ಷೇತ್ರದ ಚಂದಾ ಪ್ರಾಥಮಿಕ ಶಾಲೆಯ ಮತಗಟ್ಟೆ ಸಂಖ್ಯೆ 179ರಲ್ಲಿ, ಕೇಂದ್ರೀಯ ಪಡೆಗಳು ಅಂಗವಿಕಲ ಮತದಾರ ಮತ್ತು ಅವರ ತಾಯಿಗೆ ಕಿರುಕುಳ ನೀಡಿದವು ಎಂದು ಟಿಎಂಸಿ ಆರೋಪಿಸಿದೆ. ಈ ಸಂಬಂಧ ಪಕ್ಷದ ಕಾರ್ಯಕರ್ತರು ಮತ್ತು ಸ್ಥಳೀಯರು ಪ್ರತಿಭಟನೆ ನಡೆಸಿದರು.

ಏಜೆಂಟ್‌ಗಳೊಂದಿಗೆ ಮಮತಾ ಸಭೆ

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಅವರ ಸಹೋದರ ಸಂಬಂಧಿ, ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರು ಪಕ್ಷದ ಏಜೆಂಟ್‌ಗಳೊಂದಿಗೆ ಶನಿವಾರ ಮಧ್ಯಾಹ್ನ ವರ್ಚುವಲ್ ಸಭೆ ನಡೆಸಿದರು.

ಮತ ಎಣಿಕೆಗೆ ಎರಡು ದಿನ ಬಾಕಿ ಇರುವಾಗಲೇ 291 ಕ್ಷೇತ್ರಗಳ ಏಜೆಂಟ್‌ಗಳೊಂದಿಗೆ ಸಭೆ ನಡೆಸಿ ಚರ್ಚಿಸಿದರು ಎಂದು ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದರು.

ಮತದಾರರ ತಾಯಿ ತಮ್ಮ ಮಗನಿಗೆ ನೆರವಾಗಲು ಮತಗಟ್ಟೆಯೊಳಗೆ ಪ್ರವೇಶಿಸಿದ್ದರು. ಈ ವೇಳೆ ನಿಯಮ ಉಲ್ಲಂಘನೆ ಆರೋಪದ ಮೇಲೆ ಪುತ್ರನನ್ನು ಕೇಂದ್ರೀಯ ಪಡೆ ಕೆಲಹೊತ್ತು ವಶಕ್ಕೆ ಪಡೆದಿತ್ತು ಎಂದು ಟಿಎಂಸಿ ಆರೋಪಿಸಿದೆ.

ಮತದಾನಕ್ಕಾಗಿ ಸರತಿ ಸಾಲಿನಲ್ಲಿ ನಿಂತಿದ್ದ ಮತದಾರರು– ಪಿಟಿಐ ಚಿತ್ರ

ಆಯೋಗಕ್ಕೆ ಟಿಎಂಸಿ ದೂರು

ಇವಿಎಂ ಭದ್ರತಾ ಕೊಠಡಿಯಲ್ಲಿನ (ಸ್ಟ್ರಾಂಗ್ ರೂಮ್) ಮತಪತ್ರಗಳನ್ನು ಅನಧಿಕೃತವಾಗಿ ವಿಂಗಡಿಸಲಾಗಿದೆ ಎಂದು ಚುನಾವಣಾ ಆಯೋಗಕ್ಕೆ ದೂರು ನೀಡಲಾಗಿದೆ ಎಂದು ಟಿಎಂಸಿ ಶನಿವಾರ ತಿಳಿಸಿದೆ.

‘ಮುಂಜಾನೆ 4 ಗಂಟೆಗೆ 8 ಟ್ರಕ್ ಮತಪತ್ರಗಳನ್ನು ತಂದು ಕೋಣೆಯೊಳಗೆ ಕೊಂಡೊಯ್ಯಲಾಯಿತು. ಈ ಪ್ರಕ್ರಿಯೆಯು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ದಾಖಲಾಗಿಲ್ಲ’ ಎಂದು ಪಕ್ಷದ ಕಾರ್ಯಕರ್ತರು ಆರೋಪಿಸಿದ್ದಾರೆ.

ಉತ್ತರ 24 ಪರಗಣ ಜಿಲ್ಲೆಯ ಬರಾಸತ್ ಸರ್ಕಾರಿ ಕಾಲೇಜಿನ ಭದ್ರತಾ ಕೊಠಡಿಯಲ್ಲಿ 17 ನಿಮಿಷ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಆಫ್ ಮಾಡಲಾಗಿತ್ತು ಎಂದು ಟಿಎಂಸಿ ಆರೋಪಿಸಿದೆ. ಈ ಸಂಬಂಧ ಪಕ್ಷದ ಕಾರ್ಯಕರ್ತರು ಪ್ರತಿಭಟನೆಯನ್ನೂ ನಡೆಸಿದರು.

ಆದರೆ ಚುನಾವಣಾ ಅಧಿಕಾರಿಗಳು, ‘ಸಿ.ಸಿ.ಟಿ.ವಿ ಕ್ಯಾಮೆರಾ ಸುಸ್ಥಿತಿಯಲ್ಲಿತ್ತು. ಪಕ್ಷ ಬಯಸಿದರೆ ಆ 17 ನಿಮಿಷ ದೃಶ್ಯಾವಳಿಗಳನ್ನು ಒದಗಿಸುತ್ತೇವೆ’ ಎಂದು ಹೇಳಿದ್ದಾರೆ.

ರಕ್ಷಣೆಗೆ ಆಗ್ರಹಿಸಿ ಗ್ರಾಮಸ್ಥರಿಂದ ಪ್ರತಿಭಟನೆ

‘ಟಿಎಂಸಿ ಕಾರ್ಯಕರ್ತರು ಜೀವ ಬೆದರಿಕೆ ಹಾಕುತ್ತಿದ್ದಾರೆ. ಮತ ಎಣಿಕೆ ಬಳಿಕ ರಕ್ಷಣೆ ಬೇಕಿದೆ’ ಎಂದು ಆಗ್ರಹಿಸಿ ದಕ್ಷಿಣ 24 ಪರಗಣ ಜಿಲ್ಲೆಯ ಫಾಲ್ಟಾದಲ್ಲಿ ನೂರಾರು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಹಲವು ಪ್ರತಿಭಟನಕಾರರು ಬಿಜೆಪಿ ಧ್ವಜ ಹಿಡಿದಿದ್ದರು. ರಸ್ತೆ ತಡೆದು ಅವರು ಆಕ್ರೋಶ ಹೊರಹಾಕಿದರು. ಸ್ಥಳೀಯ ಪಂಚಾಯಿತಿ ಅಧ್ಯಕ್ಷ ಇಸ್ರಾಫಿಲ್ ಅವರು ಟಿಎಂಸಿ ಅಭ್ಯರ್ಥಿ ಜಹಾಂಗೀರ್ ಖಾನ್ ಅವರ ನಿಕಟವರ್ತಿಯಾಗಿದ್ದು, ಚುನಾವಣೆ ಫಲಿತಾಂಶ ಘೋಷಣೆ ಬಳಿಕ ಆಕ್ರಮಣ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದಾರೆ ಎಂದು ಅವರು ಆರೋಪಿಸಿದರು.

ಸಿಆರ್‌ಪಿಎಫ್ ಉಪ ಕಮಾಂಡೆಂಟ್ ಅವರು ಫಾಲ್ಟಾ ಪ್ರದೇಶಕ್ಕೆ ಭೇಟಿ ನೀಡಿ, ಭದ್ರತೆ ನೀಡುವುದಾಗಿ ಭರವಸೆ ನೀಡಿದರು. ಖಾನ್ ಅವರು ತಮ್ಮ ಮೇಲಿನ ಆರೋಪವನ್ನು ಅಲ್ಲಗಳೆದಿದ್ದು, ಪ್ರತಿಭಟನೆ ನಡೆಸಲು ಬಿಜೆಪಿಯೇ ಮಹಿಳೆಯರನ್ನು ಕಳುಹಿಸಿದೆ ಎಂದು ಹೇಳಿದರು.

ಹೆಚ್ಚುವರಿ ವೀಕ್ಷಕರ ನಿಯೋಜನೆ

ಸುರಕ್ಷಿತ ಮತ್ತು ಪಾರದರ್ಶಕ ಮತಎಣಿಕೆ ಪ್ರಕ್ರಿಯೆಗಾಗಿ 165 ಹೆಚ್ಚುವರಿ ಮತಎಣಿಕೆ ವೀಕ್ಷಕರು ಮತ್ತು 77 ಪೊಲೀಸ್ ವೀಕ್ಷಕರನ್ನು ನಿಯೋಜಿಸಲಾಗಿದೆ ಎಂದು ಚುನಾವಣಾ ಆಯೋಗ ಶನಿವಾರ ತಿಳಿಸಿದೆ.

‘ಒಂದಕ್ಕಿಂತ ಹೆಚ್ಚು ಮತಎಣಿಕೆ ಹಾಲ್‌ಗಳನ್ನು ಹೊಂದಿರುವ ವಿಧಾನಸಭಾ ಕ್ಷೇತ್ರಗಳಲ್ಲಿ ಹೆಚ್ಚುವರಿ ಮತಎಣಿಕೆ ವೀಕ್ಷಕರನ್ನು ನಿಯೋಜಿಸಲಾಗುತ್ತದೆ. ಪೊಲೀಸ್ ವೀಕ್ಷಕರು ಮತಎಣಿಕೆ ಕೇಂದ್ರಗಳಲ್ಲಿ ಕಾನೂನು ಸುವ್ಯವಸ್ಥೆ ಮೇಲೆ ನಿಗಾ ಇಡಲಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾಸಾಂತ್ಯಕ್ಕೆ ‘ಇಂಡಿಯಾ’ ಸಭೆ?

ಕ್ಷೇತ್ರ ಪುನರ್‌ವಿಂಗಡಣೆ ಮಸೂದೆ ವಿರುದ್ಧ ಹೊಸ ಕಾರ್ಯತಂತ್ರ

• ಶೆಮಿನ್ ಜಾಯ್

ನವದೆಹಲಿ: ಮಹಿಳಾ ಮೀಸಲಾತಿ ಹೆಸರಿನಲ್ಲಿ ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಮತ್ತೊಮ್ಮೆ ಲೋಕಸಭೆಯಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಮಸೂದೆ ಜಾರಿಗೆ ತರುವ ಸಾಧ್ಯತೆ ಇರುವುದರಿಂದ, ಇದರ ವಿರುದ್ಧ ಕಾರ್ಯತಂತ್ರ ರೂಪಿಸಲು ಈ ಮಾಸಾಂತ್ಯದಲ್ಲಿ ಇಂಡಿಯಾ ಮೈತ್ರಿಕೂಟದ ಸಭೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಆದರೆ, ಮೇ 4ರಂದು ಪ್ರಕಟಗೊಳ್ಳುವ ಚುನಾವಣಾ ಫಲಿತಾಂಶದ ನಂತರವೇ, ನವದೆಹಲಿಯಲ್ಲಿ ಆಯೋಜಿಸಲು ಉದ್ದೇಶಿಸಿರುವ ಈ ಸಭೆಯ ವಿಚಾರ ಅಂತಿಮಗೊಳ್ಳಲಿದೆ. ಕಳೆದ ತಿಂಗಳು ಲೋಕಸಭೆಯಲ್ಲಿ ಬಿಜೆಪಿ ಮಂಡಿಸಿದ್ದ ಕ್ಷೇತ್ರ ಪುನರ್ ವಿಂಗಡಣೆ ಮಸೂದೆಯನ್ನು ವಿರೋಧ ಪಕ್ಷಗಳು ಒಗ್ಗಟ್ಟಿನಿಂದ ಸೋಲಿಸಿದ್ದವು. ಆದರೆ, ವಿಧಾನಸಭಾ ಚುನಾವಣೆಯಲ್ಲಿ ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಮೈತ್ರಿಕೂಟದ ಪಕ್ಷಗಳೇ ಪರಸ್ಪರ ವಿರುದ್ಧವಾಗಿ ಸ್ಪರ್ಧಿಸಿರುವುದರಿಂದ ಲೆಕ್ಕಾಚಾರ ಬದಲಾಗಿದೆ.

ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಶ್ಚಿಮ ಬಂಗಾಳದಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ, ಇಂಡಿಯಾ ಮೈತ್ರಿಕೂಟದಲ್ಲಿ ನಾಯಕತ್ವದ ವಿಚಾರದಲ್ಲಿ ಹೊಸ ಬೇಡಿಕೆಯನ್ನು ಎತ್ತಬಹುದು. ಕೇರಳದಲ್ಲೂ ವಿಧಾನಸಭಾ ಚುನಾವಣೆ ಫಲಿತಾಂಶದ ನಂತರವೇ ಸಿಪಿಎಂ ನಿಲುವು ಸ್ಪಷ್ಟವಾಗಲಿದೆ ಎಂದು ಮೂಲಗಳು ಹೇಳಿವೆ.

‘ಅವರು ಸೋಲಿನಿಂದ ಬಳಲುತ್ತಿದ್ದಾರೆ. ಆದರೆ, ಮಸೂದೆ ಜಾರಿಗೆ ತರುವುದನ್ನು ಅಷ್ಟು ಸುಲಭವಾಗಿ ಕೈಬಿಡುವುದಿಲ್ಲ. ಹಾಗಾಗಿ ನಾವು ಇದರ ವಿರುದ್ಧ ಕಾರ್ಯತಂತ್ರ ಸಿದ್ಧವಾಗಿ ಇಟ್ಟುಕೊಂಡಿರಬೇಕು’ ಎಂದು ವಿರೋಧಪಕ್ಷದ ಮುಖಂಡರೊಬ್ಬರು ಹೇಳಿದ್ದಾರೆ.

‘ಕ್ಷೇತ್ರ ಪುನರ್ ವಿಂಗಡಣೆ ಮಸೂದೆಯನ್ನು 2029ರ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಜಾರಿಗೆ ತರಲು ಬಿಜೆಪಿ ಯತ್ನಿಸುತ್ತಿದೆ. ನಾವು ಇದರ ಹಿಂದಿನ ಉದ್ದೇಶ ಅರಿತಿದ್ದೇವೆ. ಸಮಾಜವಾದಿ ಪಕ್ಷವು ಮಿತ್ರಪಕ್ಷಗಳೊಂದಿಗೆ ಕೈಜೋಡಿಸದೇ ಇರಬಹುದು, ಚುನಾವಣಾ ಪ್ರಚಾರದ ಕಾರಣದಿಂದ ಟಿಎಂಸಿ ಮತ್ತು ಡಿಎಂಕೆ ಸಂಸದರು ಹೆಚ್ಚಿನ ಸಂಖ್ಯೆಯಲ್ಲಿ ಗೈರು ಹಾಜರಾಗುತ್ತಾರೆ ಎಂದು ಅವರು ಭಾವಿಸಿದ್ದರು .ಆದರೆ, ಅದು ಫಲಿಸಲಿಲ್ಲ. ವಿರೋಧ ಪಕ್ಷಗಳಲ್ಲಿ ಇಂತಹ ಒಗ್ಗಟ್ಟನ್ನು ಬಿಜೆಪಿ ನಿರೀಕ್ಷಿಸಿರಲಿಲ್ಲ’ ಎಂದು ಅವರು ಅಭಿಪ್ರಾಯಪಟ್ಟರು.

ಮೈತ್ರಿ ಪಕ್ಷಗಳ ಜೊತೆ ಸ್ಟಾಲಿನ್ ಚರ್ಚೆ

ಚೆನ್ನೈ (ಪಿಟಿಐ): ವಿಧಾನಸಭೆ ಚುನಾವಣೆಯ ಮತ ಎಣಿಕೆ ದಿನ (ಮೇ 4) ಹತ್ತಿರವಾಗುತ್ತಿದ್ದಂತೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಶುಕ್ರವಾರ ಡಿಎಂಕೆ ಮೈತ್ರಿ ಪಕ್ಷಗಳ ಮುಖಂಡರನ್ನು ಭೇಟಿಯಾಗಿ ಗೆಲುವಿನ ನಿರೀಕ್ಷೆಗಳ ಬಗ್ಗೆ ಸಮಾಲೋಚನೆ ನಡೆಸಿದರು.

ಎಂ.ಕೆ.ಸ್ಟಾಲಿನ್

ಮತದಾನದ ದಿನ ಮುಗಿಯುತ್ತಿದ್ದಂತೆ ಕೊಡೈಕೆನಾಲ್‌ನಲ್ಲಿ ನಾಲ್ಕು ದಿನಗಳ ಕಾಲ ವಿಶ್ರಾಂತಿಯಲ್ಲಿದ್ದ ಸ್ಟಾಲಿನ್ ಅವರು, ಈ ವೇಳೆ ಡಿಎಂಕೆ ಮುಖಂಡರ ಜೊತೆ ಎರಡು ಬಾರಿ ಚರ್ಚಿಸಿ ತಮ್ಮ-ತಮ್ಮ ಕ್ಷೇತ್ರಗಳ ಲೆಕ್ಕಾಚಾರದ ಬಗ್ಗೆ ಮಾಹಿತಿ ಪಡೆದಿದ್ದರು.

ಆನಂತರ ಶುಕ್ರವಾರ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಕೆ.ಸೆಲ್ವಪೆರುಂತಗೈ, ಕೊಂಗುನಾಡು ಮಕ್ಕಳ್ ದೇಸೀಯ ಕಚ್ಚಿ (ಕೆಎಂಡಿಕೆ) ಪ್ರಧಾನ ಕಾರ್ಯದರ್ಶಿ ಇ.ಆರ್. ಈಶ್ವರನ್ ಅವರೊಂದಿಗೆ ಡಿಎಂಕೆ ಪಕ್ಷದ ಕಚೇರಿಯಲ್ಲಿ ಮಾತುಕತೆ ನಡೆಸಿದರು. ಡಿಎಂಕೆ ಮುಖಂಡರಾದ ಎ.ರಾಜಾ, ಆರ್.ಎಸ್.ಭಾರತಿ, ಟಿ.ಕೆ. ಎಸ್ ಇಳಂಗೋವನ್, ಟಿ.ಆರ್.ಬಿ.ರಾಜಾ ಸೇರಿ ಹಲವರು ಹಾಜರಿದ್ದರು.

ಮತ ಎಣಿಕೆ ಕೇಂದ್ರಗಳ ಮೇಲೆ ಇಟ್ಟಿರುವ ನಿಗಾ ಮತ್ತು ಮತ ಎಣಿಕೆಯ ಸಿದ್ಧತೆಗಳ ಬಗ್ಗೆಯೂ ಸ್ಟಾಲಿನ್ ಅವರು ಮಾಹಿತಿ ಪಡೆದುಕೊಂಡರು ಎಂದು ಪಕ್ಷದ ಮೂಲಗಳು ತಿಳಿಸಿವೆ. 234 ವಿಧಾನಸಭಾ ಕ್ಷೇತ್ರಗಳ ಪೈಕಿ ಡಿಎಂಕೆ 164, ಕಾಂಗ್ರೆಸ್ 24 ಕ್ಷೇತ್ರಗಳಲ್ಲಿ ಸ್ಪರ್ಧಿಸಿವೆ.

‘ಚರ್ಚೆಗೆ ಅವಕಾಶ ಲಭಿಸಿಲ್ಲ’

ಮಹಿಳಾ ಮೀಸಲು ಕಾನೂನಿಗೆ ತಿದ್ದುಪಡಿ ತರುವ ಸಂವಿಧಾನ (131ನೇ ತಿದ್ದುಪಡಿ) ಮಸೂದೆ–2026 ಅಂಗೀಕಾರಗೊಳ್ಳುವುದನ್ನು ತಡೆದ ನಂತರ, ವಿರೋಧ ಪಕ್ಷಗಳಿಗೆ ಮುಂದಿನ ಕಾರ್ಯತಂತ್ರದ ಬಗ್ಗೆ ಚರ್ಚಿಸಲು ಹೆಚ್ಚಿನ ಅವಕಾಶ ಲಭಿಸಿಲ್ಲ ಎಂದು ಮೂಲಗಳು ಹೇಳಿವೆ. ಕಳೆದ ತಿಂಗಳು ಲೋಕಸಭೆಯಲ್ಲಿ ಈ ಮಸೂದೆಗೆ ಮೂರನೇ ಎರಡರಷ್ಟು ಬಹುಮತ ಸಿಗದೆ ವಿಫಲಗೊಂಡಿತು. ಎನ್‌ಡಿಎ 298 ಮತಗಳನ್ನು ಪಡೆದರೆ ವಿರೋಧ ಪಕ್ಷಗಳು 230 ಮತಗಳನ್ನು ಪಡೆಯಿತು. ಅಸ್ತಿತ್ವದಲ್ಲಿರುವ 543 ಸ್ಥಾನಗಳಲ್ಲಿ ಮಹಿಳಾ ಮೀಸಲಾತಿ ಜಾರಿಗೆ ತರಬೇಕೆಂದು ವಿರೋಧ ಪಕ್ಷಗಳು ಒತ್ತಾಯಿಸುತ್ತಿವೆ.

ಕುಟುಂಬಸ್ಥರಿಗೆ ಮಕ್ಕಳ ಶವ ಹಸ್ತಾಂತರ

ಇಂಫಾಲ್ (ಪಿಟಿಐ): ಮಣಿಪುರದ ವಿಷ್ಣುಪುರ ಜಿಲ್ಲೆಯ ಟ್ರೋಂಗ್ಲಾಬಿಯಲ್ಲಿ ಏಪ್ರಿಲ್ 7ರಂದು ನಡೆದ ಬಾಂಬ್ ದಾಳಿಯಲ್ಲಿ ಮೃತಪಟ್ಟಿದ್ದ ಇಬ್ಬರು ಮಕ್ಕಳ ಶವಗಳನ್ನು ಕುಟುಂಬದ ಸದಸ್ಯರಿಗೆ ಶನಿವಾರ ಹಸ್ತಾಂತರಿಸಲಾಯಿತು.

ಟ್ರೋಂಗ್ಲಾಬಿಗೆ ಹೋಗುವ ದಾರಿಯುದ್ದಕ್ಕೂ ಸಾಲುಗಟ್ಟಿ ನಿಂತಿದ್ದ ನೂರಾರು ಮಂದಿ ಪಾರ್ಥಿವ ಶರೀರಕ್ಕೆ ಪುಷ್ಪನಮನ ಸಲ್ಲಿಸಿದರು. ಬಳಿಕ, ಅಂತ್ಯ ಸಂಸ್ಕಾರ ನೆರವೇರಿಸಲಾಯಿತು.

‘ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿ ಕುಟುಂಬದ ಸದಸ್ಯರು ಮಕ್ಕಳ ಮೃತದೇಹಗಳನ್ನು ಪಡೆಯಲು ನಿರಾಕರಿಸಿದ್ದರು. ಹೀಗಾಗಿ, ಐದು ವರ್ಷದ ಬಾಲಕ ಮತ್ತು ಆತನ ಆರು ತಿಂಗಳ ಸಹೋದರಿಯ ಶವಗಳನ್ನು ಇಂಫಾಲ್‌ನ ಪ್ರಾದೇಶಿಕ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಶವಾಗಾರದಲ್ಲಿ ಇರಿಸಲಾಗಿತ್ತು.

ಆರೋಪಿಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗಿದ್ದು, ಮಕ್ಕಳ ಶವಗಳನ್ನು ಪಡೆಯುವಂತೆ ಮುಖ್ಯಮಂತ್ರಿ ವೈ. ಖೇಮಚಂದ್ ಸಿಂಗ್ ಅವರು ಕುಟುಂಬದ ಸದಸ್ಯರಿಗೆ ಏಪ್ರಿಲ್ 25ರಂದು ಮನವಿ ಮಾಡಿದ್ದರು.

ಬಾಂಬ್ ದಾಳಿ ಬಳಿಕ, ಮಣಿಪುರದ ಐದು ಜಿಲ್ಲೆಗಳಲ್ಲಿ ಹಿಂಸಾತ್ಮಕ ಪ್ರತಿಭಟನೆಗಳು ನಡೆದಿದ್ದವು. ನಂತರ, ಈ ಪ್ರಕರಣವನ್ನು ಎನ್‌ಐಎಗೆ ವಹಿಸಲಾಗಿತ್ತು.

ಇ.ಡಿ: ಕಡಿಮೆಯಾದ ಬಂಧನ ಪ್ರಮಾಣ

ನವದೆಹಲಿ (ಪಿಟಿಐ): ಕಳೆದ ಹಣಕಾಸು ವರ್ಷದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಹಣ ಅಕ್ರಮ ವರ್ಗಾವಣೆ ಕುರಿತು ದಾಖಲಿಸಿದ ಪ್ರಕರಣದಲ್ಲಿ ಶೇಕಡ 27ರಷ್ಟು ಕಡಿಮೆ ಆಗಿದ್ದು, ವಶಪಡಿಸಿಕೊಳ್ಳಲಾದ ಆಸ್ತಿಯ ಮೌಲ್ಯವು ಈ ಅವಧಿಯಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟ ₹81 ಸಾವಿರ ಕೋಟಿ ತಲುಪಿರುವುದು ಅಧಿಕೃತ ಅಂಕಿಅಂಶಗಳಲ್ಲಿ ಕಂಡುಬಂದಿದೆ.

ಮಾರ್ಚ್ 31ಕ್ಕೆ ಮುಕ್ತಾಯಗೊಂಡ ಹಣಕಾಸು ವರ್ಷದ ಪ್ರಕಾರ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಕಠಿಣ ನಿರ್ಬಂಧದ ಅಡಿಯಲ್ಲಿ 2025–26ರ ಅವಧಿಯಲ್ಲಿ 2,896 ದಾಳಿ ಹಾಗೂ ಶೋಧ ಕಾರ್ಯ ನಡೆದಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ದಾಳಿ ಪ್ರಮಾಣ ದ್ವಿಗುಣಗೊಂಡಿದೆ.

ಇದೇ ಅವಧಿಯಲ್ಲಿ ಇ.ಡಿ ವಶಕ್ಕೆ ಪಡೆದಿದ್ದ ಆಸ್ತಿಗಳಲ್ಲಿ ₹32 ಸಾವಿರ ಕೋಟಿಯಷ್ಟು ಮೊತ್ತವನ್ನು ನೈಜ ಮಾಲೀಕರಿಗೆ ಹಿಂತಿರುಗಿಸಲಾಗಿದೆ. 2024–25ರಲ್ಲಿ ₹15 ಸಾವಿರ ಕೋಟಿ ಮೌಲ್ಯದಷ್ಟು ಆಸ್ತಿಯನ್ನು ಮಾಲೀಕರಿಗೆ ಮರಳಿಸಲಾಗಿತ್ತು.

ಪಿಎಂಎಲ್‌ಎ ಕಾಯ್ದೆಯ ಅಡಿಯಲ್ಲಿ ಹಣ ಅಕ್ರಮ ವರ್ಗಾವಣೆಯ ಸಂದರ್ಭದಲ್ಲಿ ಶೋಧ, ಆಸ್ತಿಗಳ ಮುಟ್ಟುಗೋಲು ಹಾಗೂ ವ್ಯಕ್ತಿಗಳ ಬಂಧನಕ್ಕೆ ಇ.ಡಿಗೆ ಅವಕಾಶವಿದೆ. ಆರೋಪಿಯು ತಪ್ಪಿತಸ್ಥನಲ್ಲ, ಜಾಮೀನಿನ ಮೇಲೆ ಮತ್ತೊಂದು ಅಪರಾಧ ಮಾಡುವ ಸಾಧ್ಯತೆಯಿಲ್ಲ ಎಂದು ನ್ಯಾಯಾಲಯಕ್ಕೆ ಖಚಿತವಾದರೆ ಮಾತ್ರ ಆರೋಪಿಗೆ ಜಾಮೀನು ನೀಡಲಾಗುತ್ತದೆ.

ಜಾರಿ ನಿರ್ದೇಶನಾಲಯ (ಇ.ಡಿ) ನಡೆಸಿದ ದಾಳಿಯ ವಿವರ

ವರ್ಷ	ಪ್ರಕರಣ	ಬಂಧನ	ದಾಳಿ	ಮುಟ್ಟುಗೋಲು (₹ಕೋಟಿಗಳಲ್ಲಿ)
2025-26	2,892	156	712	81,422
2024-25	1,491	214	461	30,336
2023-24	698	272	321	12,477

‘ಸಾಕ್ಷ್ಯ ಆಧರಿಸಿದ ಹೆಚ್ಚು ತನಿಖೆಗಳನ್ನು ಕೈಗೊಂಡಿರುವ ಕಾರಣ ಪ್ರಕರಣಗಳ ದಾಖಲಾತಿಯಲ್ಲಿ ಇಳಿಕೆ ಕಂಡಿದೆ’ ಎಂದು ಇ.ಡಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸ್ಫೋಟ: ನಾಲ್ವರು ಪೊಲೀಸರು ಸಾವು

ಕಾಂಕೇರ್ (ಪಿಟಿಐ): ಛತ್ತೀಸಗಢದ ಕಾಂಕೇರ್ ಜಿಲ್ಲೆಯಲ್ಲಿ ಶನಿವಾರ ನೆಲಬಾಂಬ್ ಸ್ಫೋಟಗೊಂಡು ಜಿಲ್ಲಾ ಮೀಸಲು ಪಡೆಯ ಇನ್‌ಸ್ಪೆಕ್ಟರ್ ಸೇರಿ ನಾಲ್ವರು ಪೊಲೀಸರು ಮೃತಪಟ್ಟಿದ್ದಾರೆ.

‘ಕಚ್ಚಾ ಬಾಂಬ್ ಅನ್ನು ನಾಶಗೊಳಿಸಲು ಪ್ರಯತ್ನಿಸುತ್ತಿದ್ದಾಗ ಅದು ಸ್ಫೋಟಗೊಂಡಿತು’ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಛತ್ತೀಸಗಢವನ್ನು ನಕ್ಸಲ್ ಮುಕ್ತ ರಾಜ್ಯ ಎಂದು ಮಾರ್ಚ್ 31ರಂದು ಘೋಷಿಸಲಾಗಿತ್ತು. ಆನಂತರ ನಕ್ಸಲ್ ಚಟುವಟಿಕೆಗೆ ಸಂಬಂಧಿಸಿ ನಡೆದ ಮೊದಲ ಸ್ಫೋಟ ಇದು. ನಾರಾಯಣಪುರ ಜಿಲ್ಲೆಯ ಗಡಿಯಲ್ಲಿರುವ ಚೋಟೆಬೆತಿಯಾ ಪೊಲೀಸ್ ಠಾಣೆ ವ್ಯಾಪ್ತಿಯ ಅದ್ನಾರ್ ಗ್ರಾಮದ ಬಳಿ ಅರಣ್ಯದಲ್ಲಿ ಘಟನೆ ನಡೆದಿದೆ.

ಜಮ್ಮು– ಸೇತುವೆ ಕುಸಿತ: ಮೂವರ ಸಾವು

ಜಮ್ಮು (ಪಿಟಿಐ): ಇಲ್ಲಿನ ಬಂಟಾಲಾಬ್ ಪ್ರದೇಶದ ತುತೇರ್ ಎಂಬಲ್ಲಿ ಭಾಗಶಃ ಕುಸಿದಿದ್ದ ಹಳೆಯ ಸೇತುವೆಯೊಂದರ ಅವಶೇಷಗಳ ಅಡಿಯಿಂದ ಮೂವರ ಮೃತದೇಹಗಳನ್ನು ಹೊರತೆಗೆಯಲಾಗಿದೆ. ಗಾಯಗೊಂಡಿದ್ದ ಒಬ್ಬರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಜನಸೇವೆಗೆಂದೇ ಹುಟ್ಟಿದ ಜನಾನುರಾಗಿ ನಾಯಕ ಬಿ.ಎಸ್.ವೈ



'ತುಂಬಿದ ಕಾರ್ಯಕ್ರಮ. ವೇದಿಕೆಯ ಮೇಲೆ ಅಟಲ್ ಬಿಹಾರಿ ವಾಜಪೇಯಿ ಭಾಷಣ ಮಾಡುತ್ತಿದ್ದಾರೆ. ಶಂಕರಮೂರ್ತಿಯವರು ವಾಜಪೇಯಿ ಭಾಷಣದ ಕನ್ನಡ ಅನುವಾದ ಮಾಡುತ್ತಿದ್ದಾರೆ. ಇದೇ ಭಾಷಣದಲ್ಲಿ ಆ ದಿನ ಭವಿಷ್ಯವೊಂದನ್ನು ವಾಜಪೇಯಿ ನುಡಿದಿದ್ದರು. ಕರ್ನಾಟಕದಲ್ಲಿ ಬಿಜೆಪಿ ಪಕ್ಷ ಅಧಿಕಾರಕ್ಕೆ ಬರುವುದು ನಿಶ್ಚಿತ. ಶಿಕಾರಿಪುರದ ನಿಮ್ಮೆಲ್ಲರ ನೆಚ್ಚಿನ ನಾಯಕ ರಾಜ್ಯದ ಮುಖ್ಯಮಂತ್ರಿಯಾಗುವುದು ನಿಶ್ಚಿತ. ಈ ಮಾತು ಕೇಳುತ್ತಲೇ ಕಾರ್ಯಕರ್ತರ ಚಪ್ಪಾಳೆಯಿಂದ ಇಡೀ ವೇದಿಕೆಯಲ್ಲೊಮ್ಮೆ ವಿದ್ಯುತ್ ಸಂಚಾರವಾದಂತಾಗಿತ್ತು.' ಹೀಗೆ, ಬಿ.ಎಸ್.ಯಡಿಯೂರಪ್ಪನವರ ಕುರಿತು ಅಟಲ್ ಬಿಹಾರಿ ವಾಜಪೇಯಿ ನುಡಿದ ಮಾತುಗಳನ್ನು ಪ್ರಸ್ತಾಪಿಸಿದ್ದು ಬಿಜೆಪಿಯ ಹಿರಿಯ ಮುಖಂಡ, ಮಾಜಿ ಸಚಿವರಾದ ರಾಮಚಂದ್ರೇಗೌಡರು.

ಬಿ.ಎಸ್.ಯಡಿಯೂರಪ್ಪನವರು ಸಾರ್ವಜನಿಕ ಜೀವನ ಬರೋಬ್ಬರಿ 50 ವರ್ಷ ಕಳೆದಿರುವ ಸಂದರ್ಭದಲ್ಲಿ ರಾಮಚಂದ್ರೇಗೌಡರು ಅವರ ನೆನಪಿನ ಬುತ್ತಿಯನ್ನು ತೆರೆದಿಟ್ಟಿದ್ದಾರೆ.

ರಾಜಕೀಯವಾಗಿ ಬಿ.ಎಸ್.ಯಡಿಯೂರಪ್ಪನವರೊಂದಿಗೆ ಸದಾ ನಿಕಟವರ್ತಿಯಾಗಿ ಗುರುತಿಸಿಕೊಂಡಿದ್ದ ರಾಮಚಂದ್ರೇಗೌಡರು ವಿಶೇಷ ಸಂದರ್ಶನ ನೀಡಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ 50 ವರ್ಷಗಳ ಸುದೀರ್ಘ ಸಾರ್ವಜನಿಕ ಜೀವನದಲ್ಲಿ ಅವರೊಂದಿಗೆ ನಿಕಟವರ್ತಿಯಾಗಿದ್ದ ಹಿರಿಯ ನಾಯಕ, ಮಾಜಿ ಸಚಿವ ರಾಮಚಂದ್ರೇಗೌಡರ ಮನದಾಳ

1. ನೀವು ಕಂಡಂತೆ ಬಿ.ಎಸ್.ಯಡಿಯೂರಪ್ಪನವರ ವ್ಯಕ್ತಿತ್ವ?

'ಯಾವುದೇ ಸಂದರ್ಭವಿರಲಿ, ಅದ್ಯಾವುದೇ ಸಮಸ್ಯೆಗಳಿರಲಿ ಸಾಮಾನ್ಯರ ಸಂಕಷ್ಟಗಳಿಗೆ ಮಿಡಿಯುವ ಮನಸ್ಸು ಬಿ.ಎಸ್.ಯಡಿಯೂರಪ್ಪನವರದ್ದು. ವಯಸ್ಸಿನಲ್ಲಿ ನನಗಿಂತ ಚಿಕ್ಕವರಾಗಿದ್ದರೂ ವರ್ಚಸ್ಸಿನಲ್ಲಿ ದೊಡ್ಡವರು. ಅವರಲ್ಲಿನ ಹೃದಯ ಶ್ರೀಮಂತಿಕೆಯ ನಿಜಕ್ಕೂ ಅತ್ಯಂತ ದೊಡ್ಡದು. ರಾಜಕೀಯವಾಗಿ ಸಾಮಾನ್ಯ ಸ್ಥಾನಮಾನದಿಂದ ಅಸಮಾನ್ಯ ಸ್ಥಾನಕ್ಕೇರಿದ ಮುತ್ಸದ್ದಿ ವ್ಯಕ್ತಿತ್ವ ಅವರದ್ದು. ಪಕ್ಷ ಸಂಘಟನೆ, ಸಾಮಾಜಿಕ ಏಳ್ಗೆಯ ಪರಿಕಲ್ಪನೆ, ಸಾಮಾನ್ಯ ಕಾರ್ಯಕರ್ತರ ಶ್ರೇಯಸ್ಸಿಗೆ ಸದಾ ಚಿಂತನೆ ನಡೆಸುವ ಯಡಿಯೂರಪ್ಪನವರು ಸದಾ ಎಲ್ಲರಿಗೂ ಮಾದರಿಯಾದವರು. ರಾಷ್ಟ್ರ ಮಟ್ಟದಲ್ಲಿ ವಿಶ್ವನಾಯಕ ನರೇಂದ್ರ ಮೋದಿಯವರ ಆಳ್ವಿಕೆಯಂತೆ ರಾಜ್ಯದಲ್ಲಿ ಮಾದರಿ ಆಡಳಿತ ನೀಡಿದ ಕೆಲವೇ ಮುಖ್ಯಮಂತ್ರಿಗಳಲ್ಲಿ ಬಿಎಸ್‌ವೈ ಅಗ್ರಗಣ್ಯರು. ಅನೇಕ ಜನಪರ ಕಾರ್ಯಕ್ರಮಗಳ ಮೂಲಕ ಜನಮಾನಸದಲ್ಲಿ ವಿಶೇಷತೆಯನ್ನು ತಮ್ಮದಾಗಿಸಿಕೊಂಡಿದ್ದಾರೆ.

2. ಬಿ.ಎಸ್.ವೈ ರಾಜಕೀಯ ಜೀವನದ ಕುರಿತು ಹೇಳುವುದಾದರೆ?

ಯಡಿಯೂರಪ್ಪನವರ ರಾಜಕೀಯ ಜೀವನ ನಿಜಕ್ಕೂ ಮಹತ್ತರ ಸಾಧನೆಯೇ ಸರಿ. ಏಕೆಂದರೆ, ಹಳ್ಳಿ ಹಳ್ಳಿಗಳಿಗೆ ಸೈಕಲ್‌ನಲ್ಲಿ ಸುತ್ತಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಪಕ್ಷ ಸಂಘಟನೆ ಅಷ್ಟು ಸುಲಭದ ಮಾತಲ್ಲ. ಈ ಕೆಲಸಗಳನ್ನು ಅತ್ಯಂತ ನಿಷ್ಠೆಯಿಂದ ಮಾಡಿದವರು ಬಿ.ಎಸ್.ಯಡಿಯೂರಪ್ಪ. ಮೊದಲ ಬಾರಿಗೆ ಮುಖ್ಯಮಂತ್ರಿ ಸ್ಥಾನಕ್ಕೇರುವಾಗ ರೈತರ ಹೆಸರಿನಲ್ಲಿ ಪ್ರಮಾಣ ಮಾಡಿ ರೈತನಾಯಕರೆನಿಸಿಕೊಂಡರು. ಆದರೆ, ನಾವು ಕಂಡಂತೆ ಬಿ.ಎಸ್.ಯಡಿಯೂರಪ್ಪ ಎಲ್ಲರ ನಾಯಕ. ಜಾತ್ಯಾತೀತವಾಗಿ ಸದಾ ಎಲ್ಲ ವರ್ಗಗಳ ಜನರನ್ನು ಅಭ್ಯುದಯದ ಕಡೆಗೆ ನಡೆಸಿದ ವ್ಯಕ್ತಿ ಬಿ.ಎಸ್.ಯಡಿಯೂರಪ್ಪ. ಇದೇ ಕಾರಣದಿಂದಲೇ ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ಪ್ರತ್ಯೇಕ ಸ್ಥಾನ ಸಂಪಾದಿಸಿಕೊಂಡರು. ಜತೆಗೆ, ಬಿಜೆಪಿ ಪಕ್ಷದಲ್ಲೂ ಬಿಎಸ್‌ವೈ ನಾಯಕತ್ವಕ್ಕೆ ಮಹತ್ವ ಸೃಷ್ಟಿಯಾಯಿತು. ರಾಷ್ಟ್ರೀಯ ನಾಯಕರಾದ ಲಾಲ್‌ಕೃಷ್ಣ ಅಡ್ವಾಣಿಯವರು, ಅಟಲ್ ಬಿಹಾರಿ ವಾಜಪೇಯಿಯವರು ಸೇರಿದಂತೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗುವಂತೆ ಬಿ.ಎಸ್.ಯಡಿಯೂರಪ್ಪನವರು ಜನಸಂಘಟನೆಯನ್ನು ಕೈಗೊಳ್ಳುತ್ತಿದ್ದರು. ಸಾಮಾನ್ಯ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲರನ್ನೂ ಒಟ್ಟಾಗಿ ನಡೆಸುವ ಮಾದರಿ ವ್ಯಕ್ತಿತ್ವ ಬಿ.ಎಸ್.ಯಡಿಯೂರಪ್ಪನವರದ್ದು.

3. ಬಿ.ಎಸ್.ಯಡಿಯೂರಪ್ಪನವರೊಂದಿಗೆ ನಿಮ್ಮ ಒಡನಾಟ ಹೇಗಿದೆ?

ಯಡಿಯೂರಪ್ಪನವರು ಮತ್ತು ನಾನು ರಾಮಲಕ್ಷ್ಮಣರಿದ್ದಂತೆ. ಅವರು ರಾಮ. ನಾನು ಲಕ್ಷ್ಮಣ. ರಾಜ್ಯದಲ್ಲಿ ಪಕ್ಷ ಸಂಘಟನೆಗೆ ಶ್ರಮಿಸಿದ ದಿನಗಳಿಂದಲೂ ಅವರು ನನಗೆ ಪರಿಚಿತರು. ಶಿಕಾರಿಪುರದಿಂದ ಅವರು, ಬೆಂಗಳೂರಿನಿಂದ ನಾನು ಸದಾ ಪಕ್ಷದ ಕೆಲಸಗಳಿಗೆ, ರಾಷ್ಟ್ರೀಯ ವಿಚಾರಧಾರೆಗಳಿಗೆ, ಜನರ ಸಂಕಷ್ಟಕ್ಕೆ ಸ್ಪಂದಿಸುತ್ತಿದ್ದೆವು. ಕಾರ್ಯಕರ್ತರ ಯಾವುದೇ ಸಮಸ್ಯೆಗಳಿಗೆ ದನಿಯಾಗುತ್ತಿದ್ದ ಬಿ.ಎಸ್.ಯಡಿಯೂರಪ್ಪನವರನ್ನು ಮೊದಲ ಬಾರಿಗೆ ಬೆಂಗಳೂರಿನಲ್ಲಿ ಭೇಟಿಯಾಗಿದ್ದೆ. ವಿಶೇಷವೆಂದರೆ, ಅವರ 50 ವರ್ಷದ ಸಾರ್ವಜನಿಕ ಜೀವನದ ಸಂಭ್ರಮದ ಸನ್ಮಾನ ಕಾರ್ಯಕ್ರಮ ನಡೆಯುತ್ತಿದೆ. ಆದರೆ, ಮೊದಲ ಬಾರಿಗೆ ಬಿ.ಎಸ್.ಯಡಿಯೂರಪ್ಪನವರ ಸನ್ಮಾನ ಪತ್ರವನ್ನು ನಾನೇ ಓದಿದ್ದೆ. ಆರಂಭದ ದಿನಗಳಲ್ಲಿ ನಾನು, ಬಿ.ಎಸ್.ಯಡಿಯೂರಪ್ಪನವರು, ಶೋಭಾ ಕರಂದ್ಲಾಜೆಯವರು ರಾಜ್ಯ ವ್ಯಾಪಿ ಪಕ್ಷ ಸಂಘಟನೆಯಲ್ಲಿ ತೊಡಗುತ್ತಿದ್ದೆವು. ಅನೇಕ ಹಳ್ಳಿಗಳಲ್ಲಿ ವಾಸ್ತವ್ಯವಿದ್ದು ಜನರ ಕಷ್ಟಗಳನ್ನು ಅತ್ಯಂತ ಹತ್ತಿರದಿಂದ ತಿಳಿದುಕೊಂಡಿದ್ದೆವು. ವೈಯಕ್ತಿಕವಾಗಿ ಬಿ.ಎಸ್.ಯಡಿಯೂರಪ್ಪ ಜೀತ ಪದ್ಧತಿಯನ್ನು ಕಂಡಿದ್ದರು. ಹೀಗಾಗಿಯೇ, ಅವರಿಗೆ ಬಡವರ ಪರ ಹೆಚ್ಚಿನ ಕಾಳಜಿ. ಸಾಮಾನ್ಯ ಜನರ ಬದುಕು ಬದಲಾಯಿಸಬೇಕೆನ್ನುವ ಮಹತ್ವಾಕಾಂಕ್ಷೆಯ ನೋಟದಲ್ಲೇ ರಾಜಕೀಯದಲ್ಲಿ ತಮ್ಮ ಬದುಕನ್ನು ರಾಜ್ಯಕ್ಕೆ ಅರ್ಪಿಸಿದ್ದಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಅಕ್ಕರೆಯ ಜನನಾಯಕನಿಗೆ ಆತ್ಮೀಯ ಅಭಿನಂದನೆಗಳು!

'ಪ್ರೀತಿಯ ಬಿ.ಎಸ್.ಯಡಿಯೂರಪ್ಪನವರೇ, ರಾಜಕಾರಣದಲ್ಲಿ ನಾಯಕ ಸ್ಥಾನ ಪಡೆಯುವುದು ಎಲ್ಲರಿಗೂ ಸಿದ್ಧಿಸದ ಸಾಧನೆ. ಆದರೆ, ನೀವು ಹುಟ್ಟು ಹೋರಾಟಗಾರರು. ಹೀಗಾಗಿಯೇ ನಿಮಗೆ ರಾಜಕಾರಣದಲ್ಲಿ ಜಯ ಒಲಿದುಬಂದಿದೆ. ನಿಮ್ಮ ನಡೆ, ನುಡಿ ಇಂದಿನ ಅನೇಕ ಯುವಕರಿಗೆ ಆದರ್ಶವಾದುದು. ಜನಸಂಘದಿಂದ ಬಿಜೆಪಿಯವರೆಗೆ ರಾಜ್ಯದಲ್ಲಿ ಪಕ್ಷವನ್ನು ಗಟ್ಟಿಯಾಗಿ ಕಟ್ಟುವಲ್ಲಿ ನಿಮ್ಮೊಂದಿಗೆ ನಾನಿದ್ದೆ ಎನ್ನುವುದೇ ಹೆಮ್ಮೆಯ ಸಂಗತಿ. ವರ್ಷಗಳು ಹೇಗೆ ಉರುಳಿದವೆಂದು ತಿಳಿಯುತ್ತಿಲ್ಲ. ರಾಜ್ಯದಲ್ಲಿ ಬೆರಳೆಣಿಕೆ ಸ್ಥಾನಗಳಿಗೆ ಸೀಮಿತವಿದ್ದ ಪಕ್ಷವನ್ನು ಬಹುಮತ ಪಡೆದು ಸಮರ್ಥವಾಗಿ ಆಡಳಿತ ನಡೆಸುವ ದೊಡ್ಡ ಪಕ್ಷವಾಗಿ ರೂಪಿಸಿದ್ದೀರಿ. ಸಾರ್ವಜನಿಕ ಜೀವನದಲ್ಲಿ 5 ದಶಕಗಳನ್ನು ಕಳೆಯುವುದು ಅಷ್ಟು ಸುಲಭದ ಮಾತಲ್ಲ. ಈ ಸುಸಂದರ್ಭದಲ್ಲಿ ನಿಮಗೆ ಆತ್ಮೀಯ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

-ರಾಮಚಂದ್ರೇಗೌಡ,
ಮಾಜಿ ಸಚಿವರು ಮತ್ತು ಬಿಜೆಪಿ ಹಿರಿಯ ಮುಖಂಡರು.

4. ಪಕ್ಷ ಸಂಘಟನೆ ಸೇರಿದಂತೆ ಬಿ.ಎಸ್.ವೈ ರಾಜಕೀಯ ಪ್ರಮುಖ ಘಟ್ಟಗಳ ಬಗ್ಗೆ ಹೇಳುವುದಾದರೆ?

ರಾಜಕೀಯವಿರಲಿ, ವೈಯಕ್ತಿಕ ಜೀವನವಿರಲಿ ಬಿಎಸ್‌ವೈ ರಿಸ್ಕ್ ತೆಗೆದುಕೊಳ್ಳಲು ಯೋಚನೆ ಮಾಡುವುದಿಲ್ಲ. ಯಾವುದನ್ನೇ ಆಗಲಿ ಸವಾಲಾಗಿ ಸ್ವೀಕರಿಸುವ ಮನೋಭಾವ. ಹೀಗಾಗಿಯೇ ಮುಖ್ಯಮಂತ್ರಿ ಸ್ಥಾನದವರೆಗೆ ಅವರು ನಡೆದು ಯಶಸ್ವಿಯಾದರು. ಜತೆಗೆ, ರಾಷ್ಟ್ರೀಯ ನಾಯಕರೆಲ್ಲರೂ ಕರ್ನಾಟಕದಲ್ಲಿ ಬಿಜೆಪಿ ಎಂದ ಕೂಡಲೇ ಬಿಎಸ್‌ವೈ ನೆನಪಿಸಿಕೊಳ್ಳುತ್ತಾರೆ. ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೆ ತರಲು ಬಿಎಸ್‌ವೈ ಶ್ರಮ, ಪಕ್ಷವನ್ನು ತಳಮಟ್ಟದಿಂದ ಗಟ್ಟಿಗೊಳಿಸಿದ ಪರಿ ಹೀಗೆ ಪ್ರತಿಯೊಂದು ಹಂತದಲ್ಲೂ ಬಿಎಸ್‌ವೈರವರ ನಾಯಕತ್ವ ಗುಣಗಳು ಎದ್ದುತೋರುತ್ತವೆ. ಶಿವಮೊಗ್ಗದಲ್ಲಿ ರೈತ ಸಮ್ಮೇಳನವನ್ನು ಆಯೋಜಿಸಿದ್ದೆವು. ರಾಜಾಸ್ಥಾನದ ಹಿರಿಯ ಮುಖಂಡರಾಗಿದ್ದ ಬೈರೋನ್‌ಸಿಂಗ್ ಶಿಕಾವತ್ ಆ ಕಾರ್ಯಕ್ರಮಕ್ಕೆ ಬಂದಿದ್ದರು. ಕಾರ್ಯಕ್ರಮದ ಆಯೋಜನೆ, ಜನಸಂಘಟನೆಯನ್ನು ಕಂಡು 'ಇದು ಕೇವಲ ಜಿಲ್ಲಾ ಮಟ್ಟದ ಸಮ್ಮೇಳನವಲ್ಲ. ರಾಜ್ಯಮಟ್ಟದ ಸಮ್ಮೇಳನವಾಗಿ ಸ್ವರೂಪ ಪಡೆದಿದೆ. ಮಾದರಿ ಜನಸಂಘಟನೆ' ಎಂದು ಬಿಎಸ್‌ವೈಯವರ ಶ್ರಮವನ್ನು ಹಾಡಿಹೊಗಳಿದ್ದರು. ಜತೆಗೆ, ಬಿಎಸ್‌ವೈ ಭವಿಷ್ಯದಲ್ಲಿ ದೊಡ್ಡ ನಾಯಕರಾಗಿ ಹೊರಹೊಮ್ಮುತ್ತಾರೆಂದು ಭವಿಷ್ಯ ನುಡಿದಿದ್ದರು. ಶಿವಮೊಗ್ಗದಲ್ಲೇ ಮೊತ್ತೊಂದು ಸಂದರ್ಭದಲ್ಲಿ ಅಟಲ್ ಬಿಹಾರಿ ವಾಜಪೇಯಿಯವರು ಸೋತರೆಂದು ಪಕ್ಷದ ಕಾರ್ಯಕರ್ತರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ವೇಳೆ ಅವರ ಕುಟುಂಬಕ್ಕೆ ಸಾಂತ್ವನ ಹೇಳಲು ಅಟಲ್ ಬಿಹಾರಿ ವಾಜಪೇಯಿಯವರನ್ನೇ ಕರೆಸಲಾಯಿತು. ಆಗಲೂ ಬಿಎಸ್‌ವೈ ನಾಯಕತ್ವದಲ್ಲಿ ಕಾರ್ಯಕ್ರಮವನ್ನು ರೂಪಿಸಿದ್ದೆವು. ಹೀಗೆ ರಾಷ್ಟ್ರೀಯ ಮಟ್ಟದ ನಾಯಕರಿಂದ ಸತತ ಮೆಚ್ಚುಗೆ ಪಡೆದುಕೊಂಡ ವ್ಯಕ್ತಿ ಬಿ.ಎಸ್.ಯಡಿಯೂರಪ್ಪನವರು.



ಹಳ್ಳಿಯಿಂದ ವಿಧಾನಸೌಧದವರೆಗೆ ಬಿಎಸ್‌ವೈ ಪಯಣ

ಮಂಡ್ಯ ಜಿಲ್ಲೆಯ ಬೂಕನಕೆರೆಯಲ್ಲಿ ಜನಿಸಿದ ಯಡಿಯೂರಪ್ಪನವರು, ತಾರುಣ್ಯದಲ್ಲೇ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸಿದ್ಧಾಂತಗಳಿಗೆ ಆಕರ್ಷಿತರಾದರು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರಕ್ಕೆ ಬಂದ ನಂತರ ಪುರಸಭೆಯ ಮೂಲಕ ಸಾರ್ವಜನಿಕ ಜೀವನ ಪ್ರವೇಶಿಸಿದರು. 1983ರಲ್ಲಿ ಮೊದಲ ಬಾರಿಗೆ ಶಿಕಾರಿಪುರ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾದ ಅವರು, ಅಲ್ಲಿಂದ ಸತತವಾಗಿ ಎಂಟು ಬಾರಿ ಇದೇ ಕ್ಷೇತ್ರವನ್ನು ಪ್ರತಿನಿಧಿಸಿ ದಾಖಲೆ ಬರೆದಿದ್ದಾರೆ. 80 ಮತ್ತು 90ರ ದಶಕಗಳಲ್ಲಿ ಕರ್ನಾಟಕದಲ್ಲಿ ಬಿಜೆಪಿ ಎನ್ನುವುದು ಕೇವಲ ಬೆರಳೆಣಿಕೆಯಷ್ಟು ಸ್ಥಾನಗಳಿಗೆ ಸೀಮಿತವಾಗಿತ್ತು. ಅಂತಹ ಕಾಲದಲ್ಲಿ ಯಡಿಯೂರಪ್ಪನವರು ಸೈಕಲ್ ತುಳಿಯುತ್ತಾ, ಹಳ್ಳಿ ಹಳ್ಳಿಗಳಿಗೆ ಸಂಚರಿಸಿ ಪಕ್ಷವನ್ನು ತಳಮಟ್ಟದಿಂದ ಕಟ್ಟಿದರು. ಅವರ ಈ ದಣಿವರಿಯದ ಹೋರಾಟವೇ ಅವರನ್ನು ರಾಜ್ಯದ ಪ್ರಭಾವಿ ರೈತ ನಾಯಕನನ್ನಾಗಿ ರೂಪಿಸಿತು. ರೈತರ ಸಮಸ್ಯೆಗಳಿಗಾಗಿ ಅವರು ನಡೆಸಿದ ಪಾದಯಾತ್ರೆಗಳು ಮತ್ತು ಹೋರಾಟಗಳು ಅವರಿಗೆ 'ರೈತ ನಾಯಕ' ಎಂಬ ಬಿರುದನ್ನು ತಂದುಕೊಟ್ಟವು.

ಯಡಿಯೂರಪ್ಪನವರ ರಾಜಕೀಯ ಜೀವನದ ಮಹತ್ತರ ಘಟ್ಟ ಎಂದರೆ 2006ರಲ್ಲಿ ಜೆಡಿಎಸ್ ಜೊತೆಗೂಡಿ ಸಮ್ಮಿಶ್ರ ಸರ್ಕಾರ ರಚಿಸಿದ್ದು. ಆಗ ಉಪಮುಖ್ಯಮಂತ್ರಿಯಾಗಿ ಅವರು ನೀಡಿದ ಆಡಳಿತ ಮೆಚ್ಚುಗೆ ಪಡೆಯಿತು. ಆಡಳಿತದ ಮೂಲಕ ಬಿಎಸ್‌ವೈ ಜನಾನುರಾಗವನ್ನು ಗಳಿಸುವಲ್ಲಿ ಯಶಸ್ವಿಯಾದರು. ಇದರ ಫಲವಾಗಿ 2008ರಲ್ಲಿ ಬಿಜೆಪಿ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬಂದು, ಅವರು ಮೊದಲ ಬಾರಿಗೆ ಪೂರ್ಣ ಪ್ರಮಾಣದ ಮುಖ್ಯಮಂತ್ರಿಯಾದರು. ಅವರ ಅಧಿಕಾರಾವಧಿಯಲ್ಲಿ ಜಾರಿಗೆ ತಂದ 'ಭಾಗ್ಯಲಕ್ಷ್ಮಿ', 'ಸೈಕಲ್ ವಿತರಣೆ', 'ಸಂಧ್ಯಾ ಸುರಕ್ಷಾ' ಮತ್ತು 'ಕೃಷಿ ಬಜೆಟ್' ಅಂತಹ ಯೋಜನೆಗಳು ಮನೆಮಾತಾದವು.

ಕಾಲೇಜು: ಅರ್ಧದಷ್ಟು ಸೀಟು ಖಾಲಿ

ಬೆಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ 270 ಪದವಿ ಕಾಲೇಜುಗಳು

• ಎ.ಎಂ.ಸುರೇಶ

ಬೆಂಗಳೂರು: ಸರ್ಕಾರಿ ಶಾಲೆಗಳಂತೆ ಪದವಿ ಕಾಲೇಜುಗಳಲ್ಲೂ ವಿದ್ಯಾರ್ಥಿಗಳ ದಾಖಲಾತಿ ಕ್ಷೀಣಿಸುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ 270 ಪದವಿ ಕಾಲೇಜುಗಳಲ್ಲಿ ಸುಮಾರು 70 ಸಾವಿರ ಸೀಟುಗಳು ಇವೆ. ಆದರೆ, ಅರ್ಧದಷ್ಟು ಸೀಟುಗಳೂ ಭರ್ತಿಯಾಗುತ್ತಿಲ್ಲ.

ವಿಶ್ವವಿದ್ಯಾಲಯವು ಮೂರಾಗಿ ವಿಭಜನೆಯಾದ ನಂತರ ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಸೇರಿದಂತೆ 270 ಪದವಿ ಕಾಲೇಜುಗಳು ಉಳಿದುಕೊಂಡಿವೆ. ಇವುಗಳಲ್ಲಿ ಬಿ.ಎ, ಬಿ.ಎಸ್ಸಿ, ಬಿಕಾಂ, ಬಿಸಿಎ, ಬಿಬಿಎ ಸೇರಿದಂತೆ ಒಟ್ಟು 220 ಕೋರ್ಸ್‌ಗಳು ಇವೆ. ಆದರೆ, ಹಲವು ಕೋರ್ಸ್‌ಗಳಿಗೆ ದಾಖಲಾಗಲು ವಿದ್ಯಾರ್ಥಿಗಳು ಆಸಕ್ತಿ ತೋರಿಸುತ್ತಿಲ್ಲ.



ವಿಶ್ವವಿದ್ಯಾಲಯದ ವ್ಯಾಪ್ತಿಯ ಪದವಿ ಕಾಲೇಜುಗಳಲ್ಲಿ 2024–25ರಲ್ಲಿ 36 ಸಾವಿರ ವಿದ್ಯಾರ್ಥಿಗಳು ದಾಖಲಾಗಿದ್ದರು. ಆದರೆ, 2025–26ರಲ್ಲಿ ಸುಮಾರು 29 ಸಾವಿರ ಸೀಟುಗಳು ಅಷ್ಟೇ ಭರ್ತಿಯಾಗಿದ್ದವು. ಈ ವರ್ಷದ ದಾಖಲಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ವಿದ್ಯಾರ್ಥಿಗಳನ್ನು ಆಕರ್ಷಿಸಲು ವಿಶ್ವವಿದ್ಯಾಲಯ ಮತ್ತು ಕಾಲೇಜು ಮಟ್ಟದಲ್ಲಿ ಪ್ರಯತ್ನಗಳು ನಡೆದಿವೆ.

ಖಾಸಗಿ ವಿಶ್ವವಿದ್ಯಾಲಯಗಳು ಮತ್ತು ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಕಂಡು ಬರುತ್ತಿರುವುದು, ವಿದ್ಯಾರ್ಥಿಗಳ ಆರ್ಥಿಕ ಹಿನ್ನೆಲೆ ಮತ್ತು ಸಾಂಪ್ರದಾಯಿಕವಾದ ಸಂಯೋಜನೆಗಳನ್ನೇ ಮುಂದುವರಿಸಿರುವುದರಿಂದ ಪದವಿ ಕೋರ್ಸ್‌ಗಳತ್ತ ವಿದ್ಯಾರ್ಥಿಗಳು ಅಷ್ಟಾಗಿ ಆಸಕ್ತಿ ತೋರಿಸುತ್ತಿಲ್ಲ ಎಂದು ಪ್ರಾಧ್ಯಾಪಕರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಬಿ.ಕಾಂ, ಬಿಸಿಎ, ಬಿಬಿಎ ಮೊದಲಾದ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಇದೆ. ಆದರೆ, ಬಿ.ಎಗೆ ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆ ಆಗುತ್ತಿದೆ. ಉದ್ಯೋಗ ಮತ್ತು ಕೌಶಲ ಆಧಾರಿತ ಕೋರ್ಸ್‌ಗಳತ್ತ ಒಲವು ಹೆಚ್ಚಾಗುತ್ತಿದ್ದು ಮಾನವಿಕ ವಿಷಯಗಳಿಗೆ ಬೇಡಿಕೆ ಇಲ್ಲ ಎನ್ನುತ್ತಾರೆ ನಗರದ ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ನಾಗೇಂದ್ರ ಕುಮಾರ್.

‘ಬಿ.ಎಸ್ಸಿಯಲ್ಲಿ ಕೃತಕ ಬುದ್ಧಿಮತ್ತೆ, ಡೇಟಾ ಸೈನ್ಸ್, ಬಿಸಿಎ, ಬಿ.ಕಾಂ ಕೋರ್ಸ್‌ಗಳಿಗೆ ಈಗಲೂ ಬೇಡಿಕೆ ಇದೆ. ಆದರೆ, ಸಾಂಪ್ರದಾಯಿಕವಾದ ಹಳೆಯ ಸಂಯೋಜನೆಯ ಕಲಾ ವಿಷಯಗಳ ಪದವಿ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳು ಆಸಕ್ತಿ ತೋರಿಸುತ್ತಿಲ್ಲ. ಈ ರೀತಿಯ ವಾತಾವರಣ ಎಲ್ಲ ಕಡೆಯೂ ಇದೆ’ ಎಂದು ಪ್ರಾಧ್ಯಾಪಕರೊಬ್ಬರು ಹೇಳಿದರು.

ಆರ್ಥಿಕವಾಗಿ ಹಿಂದುಳಿದ ಕುಟುಂಬದವರ ಮಕ್ಕಳು ಸರ್ಕಾರಿ ಕಾಲೇಜುಗಳಿಗೆ ಬರುತ್ತಾರೆ. ಮನೆಯಲ್ಲಿ ಸಮಸ್ಯೆಯಿರುವ ಕಾರಣ, ಶಿಕ್ಷಣದ ಜೊತೆ ಅರೆಕಾಲಿಕ ಉದ್ಯೋಗದತ್ತ ಆಸಕ್ತಿ ತೋರಿಸುತ್ತಾರೆ. ಹೀಗಾಗಿ ಕೆಲವರು ಮಧ್ಯದಲ್ಲೇ ಶಿಕ್ಷಣ ನಿಲ್ಲಿಸುತ್ತಾರೆ. ಕೆಲವರು ಪಿಯುಸಿ ನಂತರ ಕಾಲೇಜಿಗೆ ಸೇರುವುದಿಲ್ಲ. ಹೀಗಾಗಿ ದಾಖಲಾತಿ ಕಡಿಮೆ ಆಗಿದೆ ಎಂದು ಮತ್ತೊಬ್ಬ ಪ್ರಾಂಶುಪಾಲರು ತಿಳಿಸಿದರು.

ಪಿಯುಸಿ ನಂತರ ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಆದ್ಯತೆ ನೀಡುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದೆ. ಇದಲ್ಲದೆ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯುವ ಪ್ರವೃತ್ತಿ ಹೆಚ್ಚುತ್ತಿದೆ. ವೃತ್ತಿ ಶಿಕ್ಷಣ, ಕೌಶಲ ಆಧಾರಿತ ಕೋರ್ಸ್‌ಗಳಿಗೆ ಹೋಗದ ವಿದ್ಯಾರ್ಥಿಗಳು ಮಾತ್ರ ಪದವಿ ಕಾಲೇಜುಗಳಿಗೆ ಬರುತ್ತಾರೆ. ಈ ಸಮಸ್ಯೆ ಎಲ್ಲ ಕಡೆ ಇದೆ. ಈ ಬಗ್ಗೆ ಗಂಭೀರವಾಗಿ ಚರ್ಚೆ ನಡೆಸಿ ಪರಿಹಾರ ಕಂಡುಕೊಳ್ಳಬೇಕಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಪ್ರಾಂಶುಪಾಲರಿಗೆ ಸೂಚನೆ

ಪದವಿ, ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳನ್ನು ಆಕರ್ಷಿಸುವ ಕುರಿತು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಕೆಲವು ಸಲಹೆ ಸೂಚನೆಗಳನ್ನು ನೀಡಲಾಗಿದೆ. ಹತ್ತಿರದ ಪದವಿ ಪೂರ್ವ ಕಾಲೇಜುಗಳಿಗೆ ಭೇಟಿ ನೀಡಿ, ತಮ್ಮ ಕಾಲೇಜಿನಲ್ಲಿ ಒದಗಿಸುವ ಸೌಲಭ್ಯಗಳು, ಕೋರ್ಸ್‌ಗಳ ಬಗ್ಗೆ ಮಾಹಿತಿ ನೀಡುವಂತೆ ವಿಶ್ವವಿದ್ಯಾಲಯದ ಕುಲಸಚಿವರಾದ ಕೆ.ಟಿ.ಶಾಂತಲಾ ಅವರು ಪ್ರಾಂಶುಪಾಲರಿಗೆ ಸೂಚಿಸಿದ್ದಾರೆ.

2026–27ನೇ ಸಾಲಿನಲ್ಲಿ ರಾಜ್ಯ ಹಾಗೂ ಹೊರ ರಾಜ್ಯದ ವಿದ್ಯಾರ್ಥಿಗಳನ್ನು ಆಕರ್ಷಿಸಿ, ಪ್ರವೇಶ ಸಂಖ್ಯೆಯನ್ನು ಹೆಚ್ಚಿಸುವಂತೆ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರಿಗೆ ಅವರು ತಿಳಿಸಿದ್ದಾರೆ.

ಹೊಸ ಕೋರ್ಸ್‌ಗಳಿಗೆ ಚಾಲನೆ

ಬೆಂಗಳೂರು ವಿಶ್ವವಿದ್ಯಾಲಯವು ಹೊಸದಾಗಿ ಬಿಎಸ್ಸಿ (ಎಲೆಕ್ಟ್ರಾನಿಕ್ ಮಿಡಿಯಾ), ಬಿಸಿಎ (ಕೃತಕ ಬುದ್ಧಿಮತ್ತೆ), ವಿಜ್ಞಾನ ವಿಭಾಗದಲ್ಲಿ ಐದು ವರ್ಷದ ಇಂಟಿಗ್ರೇಟೆಡ್ ಕೋರ್ಸ್ (ಬಿಎಸ್ಸಿ + ಎಂ.ಎಸ್ಸಿ) ಆರಂಭಿಸಿದೆ. ಇದಲ್ಲದೆ ಉದ್ಯಮಗಳೊಂದಿಗೆ ಚರ್ಚೆ ನಡೆಸಿ, ಭವಿಷ್ಯದಲ್ಲಿ ಅವರಿಗೆ ಯಾವ ರೀತಿಯ ಕೌಶಲ ಇರುವ ಉದ್ಯೋಗಿಗಳ ಅವಶ್ಯಕತೆ ಇದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ತಕ್ಕಂತೆ ಕೋರ್ಸ್‌ಗಳನ್ನು ಆರಂಭಿಸಲು ವಿಶ್ವವಿದ್ಯಾಲಯ ಮುಂದಾಗಿದೆ.

ವಿಧಿವಿಜ್ಞಾನ, ಪ್ರಾಣಿಶಾಸ್ತ್ರ, ಸೂಕ್ಷ್ಮಜೀವವಿಜ್ಞಾನ, ಜೈವಿಕ ತಂತ್ರಜ್ಞಾನ, ಆಹಾರ ತಂತ್ರಜ್ಞಾನ, ವಾಣಿಜ್ಯ ನಿರ್ವಹಣೆ ಇತ್ಯಾದಿ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಇದೆ. ವಿಶ್ವವಿದ್ಯಾಲಯದಲ್ಲಿ ಇರುವ ಕೋರ್ಸ್‌ಗಳ ಬಗ್ಗೆ ಮಾಧ್ಯಮಗಳ ಜೊತೆಗೆ, ಸಾಮಾಜಿಕ ಜಾಲತಾಣಗಳ ಮೂಲಕವೂ ಸಾಕಷ್ಟು ಪ್ರಚಾರ ಮಾಡಲಾಗುತ್ತಿದೆ ಎಂದು ಕುಲಪತಿ ಡಾ.ಎಸ್.ಎಂ. ಜಯಕರ ತಿಳಿಸಿದರು.

ಸರ್ಕಾರಕ್ಕೆ ಮೂರು ವರ್ಷ: ಮೇ 20ಕ್ಕೆ ಸಮಾವೇಶ

ತುಮಕೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರಕ್ಕೆ ಮೇ 20ರಂದು ಮೂರು ವರ್ಷ ತುಂಬಲಿದ್ದು ನಗರದಲ್ಲಿ ರಾಜ್ಯಮಟ್ಟದ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಸಮಾವೇಶ ಸಂಘಟನೆ, ಪೂರ್ವಭಾವಿ ಸಿದ್ಧತೆ ಕುರಿತು ಅಧಿಕಾರಿಗಳ ಸಭೆ ನಡೆಸಿ ಚರ್ಚಿಸಿದರು.

ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಲಿದ್ದು, ರಾಜ್ಯದ ವಿವಿಧೆಡೆಗಳಿಂದ ಎರಡು ಲಕ್ಷಕ್ಕೂ ಹೆಚ್ಚು ಫಲಾನುಭವಿಗಳು ಪಾಲ್ಗೊಳ್ಳಲಿದ್ದಾರೆ. ಇದೇ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ವಿವಿಧ ಸವಲತ್ತು ವಿತರಿಸಲಾಗುತ್ತದೆ.

ನಗರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಜನರನ್ನು ಕರೆತರಲು ನಾಲ್ಕು ಸಾವಿರ ಬಸ್ ಒದಗಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಈ ಮೊದಲು ಮೇ 20ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ಜಿಲ್ಲೆಯಲ್ಲಿ ಕಂದಾಯ ಹಾಗೂ ವಿವಿಧ ಇಲಾಖೆಗಳ ಅಭಿವೃದ್ಧಿ ಸಮಾವೇಶ ನಡೆಸಲು ಉದ್ದೇಶಿಸಲಾಗಿತ್ತು. ಅದೇ ದಿನ ರಾಜ್ಯ ಸರ್ಕಾರಕ್ಕೆ ಮೂರು ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದ ಸಮಾವೇಶ ನಡೆಸಲು ಉದ್ದೇಶಿಸಲಾಗಿದೆ ಎಂದು ಪರಮೇಶ್ವರ ತಿಳಿಸಿದರು.

ರಕ್ಷಣಾ ಕಾರ್ಯಾಚರಣೆ

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಯುದ್ಧ, ವೈಮಾನಿಕ ದಾಳಿ, ತುರ್ತು ಸಂದರ್ಭದಲ್ಲಿ ಕೈಗೊಳ್ಳಬೇಕಾದ ಸುರಕ್ಷಾ ಹಾಗೂ ರಕ್ಷಣಾ ಕಾರ್ಯದ ಕುರಿತಾಗಿ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ, ಬೆಂಗಳೂರಿನ ಹಲಸೂರಿನಲ್ಲಿರುವ ಗೃಹರಕ್ಷಕ ಮತ್ತು ಪೌರರಕ್ಷಣಾ ಕೇಂದ್ರದ ಆವರಣದಲ್ಲಿ ಅಣಕು ಕಾರ್ಯಾಚರಣೆ ನಡೆಸಲಾಯಿತು

ಅಕ್ರಮ ಎಸಗಿದ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಘನತ್ಯಾಜ್ಯ: ಟೆಂಡರ್ ರದ್ದತಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಘನತ್ಯಾಜ್ಯ ನಿರ್ವಹಣೆಯ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ಎಸಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಟೆಂಡರ್ ರದ್ದುಪಡಿಸಬೇಕು’ ಎಂದು ಆಗ್ರಹಿಸಿ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

‘ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯ ಸಂಗ್ರಹಣೆ ಮತ್ತು ಸಾಗಣೆಯನ್ನು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ ನಿರ್ವಹಿಸುತ್ತಿದೆ. ಟೆಂಡರ್‌ನಲ್ಲಿ ಅವ್ಯವಹಾರ ನಡೆದಿರುವ ಕುರಿತು ಈಗಾಗಲೇ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿದೆ. ಕೋರ್ಟ್‌ನಲ್ಲೂ ವಿಚಾರಣೆ ನಡೆಯುತ್ತಿದೆ. ಘನತ್ಯಾಜ್ಯ ಹಾಗೂ ವಾಹನಗಳ ನಿರ್ವಹಣೆಯ ಅನುಭವ ಇಲ್ಲದ, ತಾಂತ್ರಿಕ ಸಾಮರ್ಥ್ಯ ಇಲ್ಲದ ಗುತ್ತಿಗೆದಾರರಿಗೆ ಘನತ್ಯಾಜ್ಯ ನಿರ್ವಹಣೆಯ ಗುತ್ತಿಗೆ ನೀಡಲಾಗಿದೆ. ಈ ಕುರಿತು ಸಲ್ಲಿಕೆಯಾದ ದೂರುಗಳನ್ನು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸರಿಯಾಗಿ ವಿಚಾರಣೆ ನಡೆಸಿಲ್ಲ’ ಎಂದು ದೂರಿದ್ದಾರೆ.

ಛಲವಾದಿ ನಾರಾಯಣ ಸ್ವಾಮಿ

‘ಆರ್ಥಿಕ ಇಲಾಖೆ, ಲೋಕೋಪಯೋಗಿ ಇಲಾಖೆ ನಿಯಮಗಳನ್ನು ಉಲ್ಲಂಘಿಸಿ ಅಂದಾಜು ವೆಚ್ಚಕ್ಕಿಂತ ಶೇ 14ರಷ್ಟು ಹೆಚ್ಚುವರಿ ದರಕ್ಕೆ ಟೆಂಡರ್ ನೀಡಲು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಗಮ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಶಿಫಾರಸು ಮಾಡುವಾಗ ನೀಡಿರುವ ಸಮರ್ಥನೆಗಳು ಬಾಲಿಶವಾಗಿವೆ. ಸಾರ್ವಜನಿಕ ತೆರಿಗೆ ಹಣದ ದುರುಪಯೋಗಕ್ಕೆ ನಿಗಮವೇ ಸಹಕಾರ ನೀಡಿದೆ. ಹಾಗಾಗಿ, ಲೋಕಾಯುಕ್ತ ತನಿಖೆ ಮುಗಿಯುವವರೆಗೆ ಟೆಂಡರ್ ರದ್ದು ಮಾಡಬೇಕು’ ಎಂದು ಒತ್ತಾಯಿಸಿದ್ದಾರೆ.

ಸುದ್ದಿ 2 ನಿಮಿಷ

ಶ್ವಾನ ದತ್ತು: ‘ಮೋತಿ’ ಕಾರ್ಯಕ್ರಮ

ಬೆಂಗಳೂರು: ಸಮುದಾಯ ಶ್ವಾನಗಳನ್ನು ದತ್ತು ಪಡೆದುಕೊಳ್ಳಲು ಕೇಂದ್ರ ನಗರ ಪಾಲಿಕೆ ವತಿಯಿಂದ ‘ಮೋತಿ’ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಭಿವೃದ್ಧಿಯ ಆಯುಕ್ತ ದಲ್ಜಿತ್ ಕುಮಾರ್ ತಿಳಿಸಿದರು.

ಸಾರ್ವಜನಿಕರು, ಶ್ವಾನಪ್ರಿಯರು, ಸಂಘ ಸಂಸ್ಥೆಗಳು, ಎನ್‌ಜಿಒಗಳು ಸಮುದಾಯ ಶ್ವಾನಗಳ ದತ್ತು ಪಡೆದುಕೊಳ್ಳಲು ಉತ್ತೇಜಿಸುವ ಸಲುವಾಗಿ ಹಾಗೂ ಸಹಾನುಭೂತಿ– ಜವಾಬ್ದಾರಿಯುತ ನಗರ ಸಹಜೀವನವನ್ನು ಉತ್ತೇಜಿಸುವ ಉಪಕ್ರಮದ ಭಾಗವಾಗಿ ‘ಮೋತಿ’ ಕಾರ್ಯಕ್ರಮ ಆಯೋಜಿಸಲಾಗಿದೆ. ನಂಬಿಕೆ ಮತ್ತು ಒಳಗೊಳ್ಳುವಿಕೆಯ ಆಂದೋಲನ (ಎಂಒಟಿಐ) ವಿಶಿಷ್ಟ ಸಹಜೀವನ ಕಾರ್ಯಕ್ರಮವನ್ನು ಕಬ್ಬನ್ ಉದ್ಯಾನದಲ್ಲಿ ಮೇ 3ರ ಭಾನುವಾರ ಬೆಳಿಗ್ಗೆ 7ರಿಂದ 11ರ ವರೆಗೆ ಆಯೋಜಿಸಲಾಗಿದೆ ಎಂದರು.

‘ಮೋತಿ’ ಎಂಬುದು ‘ಕೇವಲ ಪೋಷ್ಯ ಪ್ರಾಣಿಗಳ ಕಾರ್ಯಕ್ರಮವಲ್ಲ – ಸಹಾನುಭೂತಿ, ಗೌರವ ಮತ್ತು ಸಹಜೀವನದ ಚಳವಳಿ’ ಎಂಬ ಸಂದೇಶದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು. ಸಮುದಾಯದ ಶ್ವಾನಗಳನ್ನು ದತ್ತು ಪಡೆದುಕೊಳ್ಳುವ ಸಂದರ್ಭದಲ್ಲಿ ಅಗತ್ಯ ಲಸಿಕೆಗಳನ್ನು ನೀಡಿ, ಶ್ವಾನಗಳಿಗೆ ಆಹಾರ, ಕುತ್ತಿಗೆ ಪಟ್ಟಿ, ಚೈನ್ ಒಳಗೊಂಡ ಕಿಟ್ ನೀಡಲಾಗುವುದು ಎಂದರು.

ಐಪಿಎಸ್‌ಯೇತರ 30 ಅಧಿಕಾರಿಗಳ ಬಡ್ತಿಗೆ ಆದೇಶ

ಬೆಂಗಳೂರು: ‘ರಾಜ್ಯ ಪೊಲೀಸ್ ಸೇವೆಯಲ್ಲಿದ್ದ 30 ಐಪಿಎಸ್‌ಯೇತರ ಅಧಿಕಾರಿಗಳಿಗೆ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ವೃಂದಕ್ಕೆ ಬಡ್ತಿ ನೀಡಿ’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.

ಎಸ್‌ಪಿ ಹುದ್ದೆಗೆ ಬಡ್ತಿ ನೀಡುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಸ್‌ಎಟಿ) 2025ರ ಆಗಸ್ಟ್ 20ರಂದು ನೀಡಿರುವ ಆದೇಶ ರದ್ದುಗೊಳಿಸುವಂತೆ ಕೋರಿ ರಾಜ್ಯ ಗೃಹ ಇಲಾಖೆ ಸಲ್ಲಿಸಿದ್ದ ರಿಟ್ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಆದೇಶ ನೀಡಿದೆ.

ಕೆಎಸ್‌ಎಟಿ ಆದೇಶವನ್ನು ಮಾರ್ಪಾಡು ಮಾಡಿ ಅರ್ಜಿಯನ್ನು ಭಾಗಶಃ ಪುರಸ್ಕರಿಸಿರುವ ನ್ಯಾಯಪೀಠ, ‘ಕರ್ನಾಟಕ ನಾಗರಿಕ ಸೇವಾ ನಿಯಮ (ಕೆಸಿಎಸ್‌ಆರ್) 45ರ ನಿಯಮದಡಿ ಬಡ್ತಿ ಪರಿಗಣನೆ ಮಾಡಬೇಕು’ ಎಂದು ಆದೇಶಿಸಿದೆ.

‘ಹುದ್ದೆಗಳು ಖಾಲಿ ಇರುವ ಅಂಶವನ್ನು ನ್ಯಾಯಮಂಡಳಿ ಪರಿಗಣಿಸಬೇಕಿತ್ತು. ಎಸ್‌ಪಿ ಹುದ್ದೆಗಳು ಮತ್ತು ಇಲಾಖಾ ಪದೋನ್ನತಿ ಸಮಿತಿ (ಡಿಪಿಸಿ) ಹುದ್ದೆಗಳ ಲಭ್ಯತೆಯನ್ನು ಆಧರಿಸಿ ಗೃಹ ಸಚಿವರ ಅನುಮೋದನೆ ಪಡೆದು ಎರಡು ತಿಂಗಳಲ್ಲಿ ಪ್ರತಿವಾದಿಗಳಿಗೆ ಎಸ್‌ಪಿ ಹುದ್ದೆಗೆ ಬಡ್ತಿ ನೀಡಲು ತೀರ್ಮಾನಿಸಬೇಕು’ ಎಂದು ಆದೇಶದಲ್ಲಿ ವಿವರಿಸಿದೆ.

ಪ್ರಕರಣವೇನು?: 2023ರ ನವೆಂಬರ್ 15ರಂದು ನಡೆದ ಇಲಾಖಾ ಬಡ್ತಿ ಸಮಿತಿ (ಡಿಪಿಸಿ) ಸಭೆಯು ಡಿಎಸ್‌ಪಿಗಳಾಗಿದ್ದ 30 ಮಂದಿ ಪ್ರತಿವಾದಿಗಳಿಗೆ ಐಪಿಎಸ್‌ಯೇತರ ಎಸ್‌ಪಿ ವೃಂದಕ್ಕೆ (ಸಿವಿಲ್) ನೇರವಾಗಿ ಬಡ್ತಿ ನೀಡಲು ತೀರ್ಮಾನಿಸಿತ್ತು. ಆದರೆ, ಸರ್ಕಾರ ನೇರ ಬಡ್ತಿ ನೀಡುವ ಬದಲಿಗೆ ಕೆಸಿಎಸ್‌ಆರ್ ನಿಯಮ 32ರ ಅನ್ವಯ ಎಸ್‌ಪಿಗಳಾಗಿ ಉಸ್ತುವಾರಿ ಹೊಣೆ ನೀಡಿತ್ತು. ಇದನ್ನು ಪ್ರಶ್ನಿಸಿ, ಪ್ರಕರಣದ ಪ್ರತಿವಾದಿಗಳು ಕೆಎಸ್‌ಎಟಿ ಮೊರೆ ಹೋಗಿದ್ದರು. ನ್ಯಾಯಮಂಡಳಿ ಅಷ್ಟೂ ಮಂದಿಗೆ ಎಸ್‌ಪಿ ವೃಂದಕ್ಕೆ ಬಡ್ತಿ ನೀಡುವಂತೆ ಆದೇಶಿಸಿತ್ತು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ELITE PUBLIC SCHOOL Kempegowda Layout Laggere Bengaluru requires MSc (Physics), B-Ed & BCA qualified teachers: 9447727526/ 9980200444

PREMIER HIGH SCHOOL, SRIRAMPURAM (Near Mantri Mall) Requires Experienced Female Teachers for Nursery, Social Science, Hindi (Primary), Drawing, Craft & PE. Call: 9538836721/ 080-23421020

THIRUPATHI EDUCATION SOCIETY (R)

CMN INSTITUTE OF TECHNOLOGY

(Affiliated to VTU-Belagavi, Recognized by GOK and Approved by AICTE - New Delhi)

18, Lingadhiranahalli, D Group Employess Layout, Herohalli, Vishwaneedam Post, Off Magadi Main Road, Bengaluru - 560 091 | Call : 9480339078

RECRUITMENT OF TEACHING & NON-TEACHING STAFF

The above society proposes to establish a new engineering institute titled **"CMN INSTITUTE OF TECHNOLOGY"** with a vision "To inculcate discipline, dedication, and determination in every step of life" from the academic year 2026-27 with the approval from All India Council for Technical Education New Delhi, affiliation from Visvesvaraya Technological University Belagavi, and recognition from Government of Karnataka. The Proposed institute is named after late **SRI C.M. NAGARAJ** Founder of East West Group Institutions and former Mayor of Bengaluru, The new institute intends of focus on developing innovative, adaptable, and ethical engineers ready for global challenges by emphasizing interdisciplinary learning with a culture of innovation, entrepreneurship, and social responsibility. The institute will offer programs such as BE in Computer Science and Engineering / Artificial Intelligence & Machine Learning / Electronics & Communication Engineering / Electronics & Computer Engineering / Masters of Business Administration / Master of Computer Applications.

TEACHING

The new institute invites applications from the competent candidates, with a passion for teaching (Preferably with industry / Research experience) for appointment as

PROFESSORS, ASSOCIATE PROFESSORS, ASSISTANT PROFESSORS, AND FACULTY OF PRACTICE (Who will be responsible for effective teaching, scholarly pursuits, mentoring students, providing concurrent learning experience and ensuring institution well being) in Physics, Chemistry, Mathematics, English, Environmental Science, CSE / AIML / ECE / ECSE / MBA / MCA.

The candidates who have retired from institutions of eminence, reputed industries, and national / global Scientific Research Labs (active and self-driven with less than 70 years of age) are eligible to apply. Preference will be given to PhD candidate with teaching, industry and / or research experience.

7th PAY COMMISSION SCALES

are offered to the deserving candidates and higher start may be considered for accomplished candidates with proven track record

NON-TEACHING

The institute is also inviting applications from the candidates with relevant qualification and experience for recruitment for the position of Librarian, Sports director, accountants, HR Executive, Admission Managers, Instructors, Drivers, Attenders, and System Admins. Salary shall Commensurate with Qualification, Experience and IT Skills.

Interested candidates can mail their resumes to : **careers@cmnit.org** mentioning the "position applied for" in the subject line within 10 days from the date of advertisement

Ref: TES/CMNIT/HR/2025-26/002

Sri C.N. Shashikiran, Secretary, Thirupathi Education Society (R)

ARVIND RESIDENTIAL SCHOOL & PU COLLEGE

Kunigal. Ph: 08132-210000/ 01.
Mob: 9945210041/ 9483683002.
Website: www.arvindinternationalschool.com, www.arvindpucollege.com

REQUIRES DEDICATED & PASSIONATE PROFESSIONALS WITH GOOD COMMUNICATION SKILLS

PRINCIPAL | VICE PRINCIPAL | CO-ORDINATOR | ICSE Maths (H/S)

Experienced in ICSE, CBSE, STATE syllabus (Preferably Karnataka residents only)

Send your resume with recent passport size photo to airsjobs@gmail.com within 5 days

WANTED TEACHERS: Nursery, Primary and High School Classes for all the Subjects including Computer. 'SRI VIDYA KENDRA' Peenya 1st Stage, Bangalore-58 Ph: 9900708182, 28398833, 41179155

SESHADRIPURAM INSTITUTIONS

27, Nagappa Street, Seshadripuram Bengaluru-560 020. Phone: 22955350

Website: www.set.edu.in E-mail: set.edu.in@gmail.com

require **TEACHERS**

for Seshadripuram Primary & High Schools at Seshadripuram and Yelahanka (State syllabus, English Medium)

PRIMARY TEACHERS

- Arts: PUC / B.A., D.Ed. with at least one year experience
- Science: PUC / B.Sc., D.Ed. with at least one year experience
- Mathematics & Science: B.Sc., B.Ed. with at least one year experience

HIGH SCHOOL TEACHERS

- Social Science: B.A. / M.A., B.Ed. with at least two years experience
- English: B.A. / M.A., B.Ed. with at least two years experience
- Hindi: B.A. / M.A., B.Ed. with at least two years experience
- Physics & Mathematics: B.Sc., B.Ed. with at least two years experience
- Physical Education Teacher: Degree with B.P.Ed. with one year experience

Walk-in-Interview on Thursday the 7th May 2026 @ 9:30 a. m.

Venue: Seshadripuram Educational Trust Office, No. 27, Nagappa Street, Seshadripuram, Bengaluru – 560 020.

Eligible candidates should bring handwritten application along with resume, photos & copies of testimonials at the time of Interview.

N. R. Pandith Aradhya, Honorary General Secretary | Dr. Wooday P. Krishna

MIRANDA COMPOSITE P.U College, H.A.L 3rd stage Bengaluru Requires Experienced Principal for P.U College. Experienced Teachers in Kannada and social science for High school Clerk (B.Com) Kannada and English typing Contact:- 9844214780/ 080-25281760

SREE VENKATESHWARA ENGLISH SCHOOL #1, V.S Layout, KR Puram, Bangalore-560036. WANTED: TEACHERS PRIMARY-B.A B.Ed Social, English and Hindi Teacher. Attractive salary, Attend with Original certificates. Contact:080 25611873, 7411135627. Email-svs.krp.bangalore@gmail.com

REQUIRED EXPERIENCED Female Academic Supervisor having 3- 5 years experience, also Primary and High school teachers with B.A., M.A./ B.Ed/ B.Sc., M.Sc./ B.Ed. for Social Science & English. Walk in Interview. Contact: Max Muller Public School, Mahalakshmi Layout, B'lore-96. Mobile: 080-23376050/ 51. Email Id :maxmullerpublicschool.mlayout@gmail.com.

JOB To Place your Classified Ads Contact: 9886213331

ST. FRANCIS COLLEGE | BENGALURU

Permanently Affiliated to Dr. Manmohan Singh Bengaluru City University
Accredited 'B++' Grade by NAAC | Approved by AICTE

P.B.No. 3417, 3rd Block, 8th Main, Koramangala, Bengaluru-560034.
Tel: 080-25531037/38, Cell Ph: 9481857854 / 9449260409
Website: www.stfranciscollege.edu.in

FACULTY RECRUITMENT

Applications are invited for the post of Associate/ Assistant Professors for the following departments

Departments	Specialization	Qualification & Experience
B.Com	Accounting & Finance/ Analytics	Master's Degree with NET/SLET/Ph.D in the relevant subjects with at least 55% marks in Master Degree and above 3 years of experience.
B.B.A.	Finance	
English		
Physical Education Asst. Director (Women)	Basket Ball, Hand Ball, Athletics	
B.C.A	Preference for AI/ ML/ Data Science	
B.V.A. (Visual Arts)	3D Animation with Visual Effects	

Job Location: **KORAMANGALA, BENGALURU**

Interested and Eligible Candidates may send their CV along with recent passport size photograph and copies of qualification and experience certificate to below given

Email-ID: admin@stfranciscollege.edu.in

SARVODAYA NATIONAL PUBLIC SCHOOL

(Affiliated to CISCE [KA-152], New Delhi)
No. 12, 10th Main Road, Binny Layout, Vijayanagar, Bangalore - 560040
Ph.: 080-23148310 / 23506790 www.sarvodayanps.com

Join Our Team Hiring Teachers for the Year 2026-27

We are currently seeking dedicated and enthusiastic teachers for various subjects across all levels. Competitive salary, supportive work environment, modern teaching facilities are some of the things you will have at Sarvodaya.

Current open positions:

- **Middle School**
  - English
  - History, Civics and Geography
  - ATL – Candidate should have B E / B Tech in Electronics, knowledge and experience in Robotics and AI
- **Primary School**
  - Mathematics

Teachers across all levels must possess:

- B.Ed, Post Graduation Degree in respective subjects.
- 3+ years of experience in ICSE/CBSE schools.

Send your updated resume to sarvodayacareers@gmail.com OR Walk in for an interview on **04th MAY 2026**

WANTED TEACHER SOCIAL & ENGLISH Male or Female Primary & High School, Mathikere, Yeshwanthpur, Bangalore. Contact No:- 9379191544.

GURUKULA INTERNATIONAL SCHOOL, Requires English, Science and Computer Teachers for Primary. 7829338292 Near Magadi Road Metro Station, Bangalore-23

CAMLIN HIGH SCHOOL, 6th 'C' Main, 4th Cross, Next to 7th Main Hampinagar Bus Stop, Vijayanagar 2nd Stage, Bangalore-560104, WANTED TRAINED TEACHER in M.Sc./ B.Sc., B.Ed (CBZ) for High School. WALK-IN Interview between 10.00a.m. to 12.30p.m. For immediate appointment. Contact: 23301363

NIRMAN INTERNATIONAL PUBLICSCHOOL-CBSE,7th Block, Vishweshwaraiah Layout, Bangalore-91 Requires Nursery, English and Social Science TEACHERS for all classes. Walk-in all working days. Contact: 8123030731/ 9986055970 Mail: nirmaninfo24@gmail.com

Accounts & Finance

WANTED ACCOUNTANT B.Com Graduate with GST-& TDS`Audit Experience 5-10yrs`Salary 40000`plus Incentive Age`Below 50years`& WANTED HR ADMIN Recent`Retired Employees Salary 30000`plus incentive Call:7338084555 9845053636:Mail glprojects7889 @gmail.com Interview-Time 10am`to`6pm

Multiple Vacancy

WANTED EXPERIENCED MARKETING EXECUTIVES, OFFICE ASSISTANT for Civil Engineer Office, Attur, Yelahanka, 9731135574 Good Salary

Engg/ Production Technical

AEROSPACE COMPONENTS Manufacturing Company requires (1) VMC PROGRAMMER (Autodesk Powermill/ Solidcam/ Mastercam) (2) QUALITY CONTROL ENGINEERS. Qualification: ITI/ Diploma/ B.E. 'MAP SYSTEM (I) PVT LTD' Peenya Industrial Area Contact: 8310411192

Marketing & Sales

VASA SCIENTIFIC CO. Required Sales Executives & Marketing Manager for Bangalore, Tumkur & Mysore. (Local candidate only) Qualification: PUC (Science)/B.Sc Experience: fresher & Minimum 5 Years in Sales/Marketing. Age below 35yrs. Good communication & field experience with two Wheeler. Contact: 8971703434

General

URGENT HIRING. Best Dental and Surgical. Location: Bangalore. Admin Officer, Retired person preferred, Tally Billing Staff, Driver. Contact:- 9448371079/ 7892034756.

MORE **Classifieds** IN SUPPLEMENT

"REQUIRED PETROL BUNK STAFF, CASHIER, ATTENDER Salary:- ₹15000/- to ₹17000/- for Banashankari 6th Stage. Contact: 7760149193

PERSONAL

Change of Name

CHANGE OF NAME
I, **Monisha M** alias **Monisha Mohan Das** D/o K.B.Mohan Kumar and W/o Pavan V, residing at No.144, Raghuram Layout, Ramachandrapura, Jalahalli Post, Bengaluru-560013, have changed my name and shall hereafter be known as **MONISHA MOHAN** vide affidavit dated 02-05-2026 sworn before notary Chandrakala, Bengaluru.

CHANGE OF NAME
I, **ADITYA RAO**, residing at #624/13A, 3rd Cross, 3rd Main, 3rd Phase,Ittamadu Layout, Bengaluru- 560085, have changed my name to **RAO CHAKRADHAR** vide affidavit dated 09-03-2026 sworn before notary Sivakumara M.N, Bengaluru. Henceforth I shall be called as **RAO CHAKRADHAR** only.

CHANGE OF NAME
I, **K.Divya Balan Robert**, R/at # 129, ITC Colony, 6th Cross, Cox Town, Frazer Town, Bengaluru - 560005, have changed my minor daughter's name from **Antonia Reneta Robert** to **ANTONIA RENETA R**, vide affidavit dt: 30.04.2026 before notary Prasad Shetty K B, Bengaluru. Henceforth, she shall be called as **ANTONIA RENETA R** only.

I, TANISH Residing at No.8/5, Ranga Rao Road, Basavangudi, Bangalore -560004 have changed my name to TANISH KUMAR S Vide affidavit dated 30-04-2026 Before Notary Mamatha.N.K, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಶಿಥಿಲ ಕಟ್ಟಡ ತೆರವಿಗೆ ಸೂಚನೆ

ಬಿನ್ನಿಮಿಲ್ ರಸ್ತೆ, ಮಲ್ಲೇಶ್ವರದಲ್ಲಿ ಅಪಾಯಕಾರಿ ಗೋಡೆ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಬೀಳುವ ಹಂತದಲ್ಲಿರುವ ಗೋಡೆಗಳು ಹಾಗೂ ಅಪಾಯಕಾರಿಯಾದ ಕಟ್ಟಡಗಳನ್ನು ತ್ವರಿತವಾಗಿ ಗುರುತಿಸಿ, ತೆರವುಗೊಳಿಸುವಂತೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ನಗರ ಪಾಲಿಕೆಗಳ ಅಧಿಕಾರಿಗಳಿಗೆ ಸೂಚಿಸಿದರು.

ಮಳೆಯ ತೀವ್ರತೆಯಿಂದ ಬೌರಿಂಗ್ ಆಸ್ಪತ್ರೆಯ ಗೋಡೆ ಕುಸಿತದಿಂದ ಏಳು ಮಂದಿ ಮೃತಪಟ್ಟಿರುವುದು ಅತ್ಯಂತ ದುರದೃಷ್ಟಕರ ಸಂಗತಿಯಾಗಿದೆ. ಇದರಿಂದ ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಗಳಿಗೆ ಹಾನಿಯಾಗಿದ್ದು, ಸಾರ್ವಜನಿಕ ಸಂಚಾರಕ್ಕೂ ಅಡಚಣೆ ಉಂಟಾಗಿದೆ. ಜೊತೆಗೆ, ಅನೇಕ ಕಡೆ ಮರಗಳು ಹಾಗೂ ಮರದ ಕೊಂಬೆಗಳು ಮುರಿದು ಬೀಳುವ ಸಂಭವವಿದೆ. ಹೀಗಾಗಿ ಮುಂಜಾಗ್ರತೆ ಕ್ರಮ ಕೈಗೊಳ್ಳಬೇಕು ಎಂದರು.

ಬೀಳುವ ಹಂತದಲ್ಲಿರುವ ಮರಗಳು, ಮರದ ರೆಂಬೆ-ಕೊಂಬೆಗಳು, ಅಪಾಯಕಾರಿಯಾದ ಗೋಡೆಗಳು ಹಾಗೂ ಕಟ್ಟಡಗಳನ್ನು ತಕ್ಷಣವೇ ಗುರುತಿಸಬೇಕು. ಯಾವುದೇ ಅನಾಹುತ ಸಂಭವಿಸದಂತೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದರು.

ಕೇಂದ್ರ ನಗರ ಪಾಲಿಕೆಯ ಬಿನ್ನಿಮಿಲ್ ರಸ್ತೆಯಲ್ಲಿ ಹಳೆಯ ಗೋಡೆಯೊಂದು ಶಿಥಿಲಾವಸ್ಥೆಯಲ್ಲಿದ್ದು, ಬೀಳುವ ಹಂತದಲ್ಲಿತ್ತು. ಇತ್ತೀಚಿನ ಮಳೆಯ ಸಂದರ್ಭದಲ್ಲಿ ಸುಮಾರು 60 ಮೀಟರ್ ಉದ್ದದ 10 ಅಡಿ ಎತ್ತರದ ಗೋಡೆ ಕುಸಿದ ಹಿನ್ನೆಲೆ, 25 ಅಡಿ ಎತ್ತರದ 300 ಮೀಟರ್ ಗೋಡೆಯನ್ನು ಶನಿವಾರ ನೆಲಸಮಗೊಳಿಸಲಾಗಿದೆ. ಜೊತೆಗೆ, 10 ಅಡಿ ಎತ್ತರದ 100 ಮೀಟರ್ ಗೋಡೆಯ ತೆರವು ಕಾರ್ಯಾಚರಣೆ ಪ್ರಗತಿಯಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದರು.

ಪಶ್ಚಿಮ ನಗರ ಪಾಲಿಕೆಯ ಮೈಸೂರು ಲ್ಯಾಂಪ್ಸ್ ಆವರಣದ 8ನೇ ಮುಖ್ಯರಸ್ತೆ, ಮಲ್ಲೇಶ್ವರದಲ್ಲಿರುವ 240 ಮೀಟರ್ ಉದ್ದದ ಕಾಂಪೌಂಡ್ ಶಿಥಿಲಾವಸ್ಥೆಯಲ್ಲಿತ್ತು. ಸುರಕ್ಷತಾ ಕ್ರಮಗಳು, ಮಾನವಶಕ್ತಿ ಹಾಗೂ ಯಂತ್ರೋಪಕರಣಗಳ ಸಹಯೋಗದೊಂದಿಗೆ ತೆರವು ಮಾಡಲಾಯಿತು ಎಂದರು.

ಬಿನ್ನಿಮಿಲ್ ರಸ್ತೆಯಲ್ಲಿ ಹಳೆಯ ಗೋಡೆಯನ್ನು ಕೇಂದ್ರ ನಗರ ಪಾಲಿಕೆ ಸಿಬ್ಬಂದಿ ತೆರವುಗೊಳಿಸಿದರು

ಮೇ ಅಂತ್ಯದೊಳಗೆ ಡಾಂಬರು: ಬೆಂಗಳೂರು ಪಶ್ಚಿಮ ಹಾಗೂ ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಗಳನ್ನು ಮೇ ಅಂತ್ಯದೊಳಗಾಗಿ ಪೂರ್ಣಗೊಳಿಸುವಂತೆ ಮಹೇಶ್ವರ್ ರಾವ್ ಸೂಚಿಸಿದರು.

ಆಯಾ ನಗರ ಪಾಲಿಕೆಗಳ ಕಚೇರಿಗಳಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ರಾಜ್ಯ ಸರ್ಕಾರದ ಅನುದಾನದಡಿ ನಗರದ ಪ್ರಮುಖ ಮುಖ್ಯ, ಉಪ ಮುಖ್ಯ ರಸ್ತೆಗಳು, ವಾರ್ಡ್‌ಗಳ ಡಾಂಬರೀಕರಣ ಮತ್ತು ಸಮಗ್ರ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಪಾದಚಾರಿ ಮಾರ್ಗಗಳ ಹಾಗೂ ಚರಂಡಿ ಕಾಮಗಾರಿಗಳನ್ನು ಆದ್ಯತೆಯೊಂದಿಗೆ ಪೂರ್ಣಗೊಳಿಸಬೇಕು' ಎಂದರು.

ಡ್ಯಾಶ್‌ಬೋರ್ಡ್ ರಚನೆ

ಪ್ರಗತಿಯಲ್ಲಿರುವ ಕಾಮಗಾರಿಗಳ ನಿರಂತರ ಮೇಲ್ವಿಚಾರಣೆಗಾಗಿ 'ಪ್ರಾಜೆಕ್ಟ್ ಮಾನಿಟರಿಂಗ್ ಡ್ಯಾಶ್‌ಬೋರ್ಡ್' ರಚಿಸಬೇಕು. ಕಾಮಗಾರಿಗಳ ಸಂಬಂಧ ಸಲ್ಲಿಸಲಾದ ಆರ್.ಎಫ್.ಐಗಳು, ಗುಣಮಟ್ಟ ಪ್ರಮಾಣಪತ್ರಗಳು ಹಾಗೂ ಕಾಮಗಾರಿಯ ಛಾಯಾಚಿತ್ರಗಳನ್ನು ಪ್ರತಿನಿತ್ಯ ಡ್ಯಾಶ್‌ಬೋರ್ಡ್‌ನಲ್ಲಿ ಅಪ್ಲೋಡ್ ಮಾಡುವ ವ್ಯವಸ್ಥೆಯನ್ನು ಜಾರಿಗೊಳಿಸುವಂತೆ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು. ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಕೆರೆಗಳ ಪೈಕಿ ಅಭಿವೃದ್ಧಿಪಡಿಸಬಹುದಾದ ಕೆರೆಗಳನ್ನು ಗುರುತಿಸಿ, ಅವುಗಳ ಸಮಗ್ರ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆ ರೂಪಿಸುವಂತೆ ಹೇಳಿದರು.

ಚಿಟಿಕೆ ಸುದ್ದಿ

ನೀತಿ ಆಯೋಗಕ್ಕೆ ಡಾ.ಆರ್. ಬಾಲಸುಬ್ರಮಣ್ಯಂ

ನವದೆಹಲಿ (ಪಿಟಿಐ): ನೀತಿ ಆಯೋಗದ ಪೂರ್ಣಾವಧಿ ಸದಸ್ಯರಾಗಿ ವಿದ್ವಾಂಸ, ಲೇಖಕ ಡಾ.ಆರ್. ಬಾಲಸುಬ್ರಮಣ್ಯಂ ಹಾಗೂ ಶಿಕ್ಷಣ ತಜ್ಞರಾದ ಜೋರಾಂ ಅನಿಯಾ ಅವರನ್ನು ಕೇಂದ್ರ ಸರ್ಕಾರ ಶನಿವಾರ ನೇಮಿಸಿದೆ.

ಬಾಲಸುಬ್ರಮಣ್ಯಂ

ಪ್ರಧಾನಿ ನರೇಂದ್ರ ಮೋದಿ ಅವರು ನೀತಿ ಆಯೋಗದ ಅಧ್ಯಕ್ಷರಾಗಿದ್ದಾರೆ. ಈ ಇಬ್ಬರ ನೇಮಕದಿಂದ ಆಯೋಗದ ಸದಸ್ಯರ ಸಂಖ್ಯೆ ಏಳಕ್ಕೆ ಏರಿದೆ.

ಬಾಲಸುಬ್ರಮಣ್ಯಂ ಅವರು ಕರ್ನಾಟಕದವರು. ಸಾರ್ವಜನಿಕ ನೀತಿತಜ್ಞ. ಅಭಿವೃದ್ಧಿ ಕಾರ್ಯಕರ್ತ. ವೈದ್ಯ. ಮೈಸೂರನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಹಲವು ಸಾಮಾಜಿಕ ಚಟುವಟಿಕೆ ನಡೆಸುತ್ತಿದ್ದಾರೆ. ಸ್ವಾಮಿ ವಿವೇಕಾನಂದ ಯುವ ಚಳವಳಿ (ಎಸ್‌ವಿವೈಎಂ) ಹಾಗೂ ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕೆಸಿ ಮೂವ್‌ಮೆಂಟ್ (ಗ್ರಾಮ್) ಸಂಸ್ಥಾಪಕರು. ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಸಾರ್ವಜನಿಕ ಆಡಳಿತದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ಮೇ 6ಕ್ಕೆ ಮೈಸೂರಿನಲ್ಲಿ ಸಿದ್ಧರಾಮೇಶ್ವರ ಜಯಂತಿ

ಬೆಂಗಳೂರು: 'ಕಾಯಕಯೋಗಿ ಸಿದ್ಧರಾಮೇಶ್ವರ ಪ್ರಶಸ್ತಿಗೆ ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಅವರನ್ನು ಆಯ್ಕೆ ಮಾಡಲಾಗಿದ್ದು, ಮೇ 6ರಂದು ಮೈಸೂರಿನ ಕಲಾಮಂದಿರದಲ್ಲಿ ನಡೆಯಲಿರುವ ಸಿದ್ಧರಾಮೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ' ಎಂದು ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ತಿಳಿಸಿದ್ದಾರೆ.

'ಚಿತ್ರದುರ್ಗದ ಭೋವಿ ಗುರುಪೀಠಾಧ್ಯಕ್ಷ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಸಾನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಅದೇ ಕಾರ್ಯಕ್ರಮದಲ್ಲಿ ಸಿದ್ದರಾಮೇಶ್ವರರ ವಚನಗಳ ಸಂಗ್ರಹ ಪುಸ್ತಕವನ್ನು ಬಿಡುಗಡೆ ಮಾಡಲಾಗುತ್ತದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಮೇ 6ರ ಬೆಳಿಗ್ಗೆ 9 ಗಂಟೆಗೆ ಅರಮನೆ ಮುಂಭಾಗದ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಿಂದ ಸಿದ್ದರಾಮೇಶ್ವರರ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ಪೂರ್ಣಕುಂಭ ಮೇಳದೊಂದಿಗೆ ವಿವಿಧ ಕಲಾತಂಡಗಳು ಮೆರವಣಿಗೆಯಲ್ಲಿ ಭಾಗಿಯಾಗಲಿವೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಎಚ್.ಸಿ.ಮಹದೇವಪ್ಪ, ಶಿವರಾಜ ತಂಗಡಗಿ, ಕೆ.ವೆಂಕಟೇಶ್ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ಕಾಂಪೌಂಡ್ ಶಿಥಿಲ

ಪ್ರಜಾವಾಣಿ ವಾರ್ತೆ

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಬಾಣಸವಾಡಿ ಮುಖ್ಯರಸ್ತೆ ರಾಮಸ್ವಾಮಿಪಾಳ್ಯದ ಹಳೆ ಐಟಿಸಿ ವೃತ್ತದಲ್ಲಿರುವ ಹಿಂದಿನ 'ಇಂಡಿಯನ್ ಆಯಿಲ್ ಲೂಬ್ ಗೋಲ್ಡನ್' ಕಾಂಪೌಂಡ್ ಶಿಥಿಲ ಅವಸ್ಥೆಯಲ್ಲಿ ಇದೆ. ಈಗ ಆ ಸ್ವತ್ತು ರೈಲ್ವೆ ಇಲಾಖೆಗೆ ಸಂಬಂಧಪಟ್ಟದ್ದಾಗಿದೆ. ಈ ಸ್ಥಳವನ್ನು ಉಪ ನಗರ ರೈಲು ಇಲಾಖೆ ವಶಪಡಿಸಿಕೊಂಡಿದೆ. ಆದರೆ, ಇಲ್ಲಿ ನಿತ್ಯವೂ ಜನರ ಸಂಚಾರ ಇರುತ್ತದೆ. ಗೋಡೆ ತುಂಬಾ ಶಿಥಿಲವಾಗಿದ್ದು ಯಾವಾಗಬೇಕಾದರೂ ಬೀಳುವ ಹಂತದಲ್ಲಿದೆ. ದಯವಿಟ್ಟು ಸಂಬಂಧಪಟ್ಟವರು ಕೂಡಲೇ ಈ ಗೋಡೆಯನ್ನು ತೆರವುಗೊಳಿಸಬೇಕು ಎಂದು ರಾಮಸ್ವಾಮಿ ಪಾಳ್ಯದ ಬಿ. ಗೋಪಾಲ ರೆಡ್ಡಿ ಒತ್ತಾಯಿಸಿದ್ದಾರೆ.

ರಾಮಸ್ವಾಮಿ ಪಾಳ್ಯದಲ್ಲಿ ರೈಲ್ವೆ ಇಲಾಖೆಗೆ ಸೇರಿದ ಶಿಥಿಲವಾಗಿರುವ ಗೋಡೆ

ಅಪಾಯದ ಸ್ಥಳಗಳಿವೆಯೇ?

ಮಳೆಯಿಂದ ಸಮಸ್ಯೆಯಾಗುವ ಪ್ರದೇಶಗಳು, ಶಿಥಿಲವಾದ ಗೋಡೆ, ಕಟ್ಟಡಗಳು ನಿಮ್ಮ ಸಮೀಪದ ಸ್ಥಳಗಳಲ್ಲಿ ಇದ್ದರೆ, ಯಾವುದಾದರೂ ಪ್ರದೇಶದಲ್ಲಿ ಮಳೆಯಿಂದ ಸಮಸ್ಯೆ ಆಗುತ್ತಿರುವ ಮಾಹಿತಿ ಇದ್ದರೆ, ಚಿತ್ರ ಸಹಿತ 'ಪ್ರಜಾವಾಣಿ'ಗೆ ಕಳುಹಿಸಿ ಕೊಡಿ.
ವಾಟ್ಸ್ ಆ್ಯಪ್: 96060 38256

ಡಿಜಿಟಲ್ ವ್ಯವಸ್ಥೆಯ ಲೋಪದೋಷ ಸರಿಪಡಿಸಲು ಪತ್ರ ಬರಹಗಾರರ ಒಕ್ಕೂಟ ಆಗ್ರಹ

ಕಾಗದರಹಿತ ನೋಂದಣಿ ವ್ಯವಸ್ಥೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಸ್ತಿ ನೋಂದಣಿಗೆ ಕಾವೇರಿ ತಂತ್ರಾಂಶದ ಮೂಲಕ ಜಾರಿಗೆ ತಂದಿರುವ ಕಾಗದರಹಿತ ಡಿಜಿಟಲ್ ನೋಂದಣಿ ವ್ಯವಸ್ಥೆಯು ಲೋಪದೋಷಗಳಿಂದ ಕೂಡಿದ್ದು, ಆಸ್ತಿಗೆ ಭದ್ರತೆ ಇಲ್ಲದೆ ಭೂ ಮಾಫಿಯಾಕ್ಕೆ ಅವಕಾಶ ಮಾಡಿಕೊಡಲಿದೆ' ಎಂದು ಕರ್ನಾಟಕ ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಪರವಾನಗಿ ಪಡೆದ (ದಸ್ತು) ಪತ್ರ ಬರಹಗಾರರ ಒಕ್ಕೂಟ ಆರೋಪಿಸಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಧರ್ಮರಾಜ್ ವಿ. ಏಕಬೋಟೆ, 'ನೂತನ ವ್ಯವಸ್ಥೆಯಿಂದ ಜನರ ಆಸ್ತಿಗೆ ಸೂಕ್ತ ಭದ್ರತೆ ಇಲ್ಲದಂತಾಗಿದೆ. ಆಸ್ತಿ ನೋಂದಣಿ ಆಗಿರುವ ಬಗ್ಗೆ ಯಾವುದೇ ಭೌತಿಕ ಪತ್ರಗಳನ್ನು ಖರೀದಿದಾರರಿಗೆ ನೀಡದೆ ಇರುವುದರಿಂದ, ಡಿಜಿಟಲ್ ಲಾಕರ್‌ನಲ್ಲಿ ಸೇವ್ ಆಗದಿರುವುದರಿಂದ ಆಸ್ತಿ ಖರೀದಿದಾರರಿಗೆ ಯಾವುದೇ ನಿಖರ ದಾಖಲೆಗಳು ಸಿಗುವುದಿಲ್ಲ. ವಿಶ್ವಾಸಾರ್ಹ ಅಲ್ಲದ ಈ ವ್ಯವಸ್ಥೆಯ ಲೋಪದೋಷಗಳನ್ನು ಸರಿಪಡಿಸದಿದ್ದರೆ ರಾಜ್ಯದಾದ್ಯಂತ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಈಗ ಜನಸಾಮಾನ್ಯರ ಆಸ್ತಿ ರಕ್ಷಣೆ ಬಗ್ಗೆ ಗಂಭೀರ ಸವಾಲು ಎದುರಾಗಿದೆ. ತಾಂತ್ರಿಕ ದೋಷಗಳು, ಭದ್ರತಾ ಕೊರತೆ ಹಾಗೂ ಪಾರದರ್ಶಕತೆಯ ಅಭಾವದಿಂದ ಈ ವ್ಯವಸ್ಥೆ ಭೂಮಾಫಿಯಾ ಮತ್ತು ಹ್ಯಾಕರ್‌ಗಳಿಗೆ ನೆರವಾಗಲಿದೆ. ಆಸ್ತಿ ಬಗ್ಗೆ ವಾರಸುದಾರರಿಗೆ ಮಾಹಿತಿಯೇ ಇರುವುದಿಲ್ಲ. ಆಸ್ತಿ ಕಳೆದುಕೊಳ್ಳುವ ಭೀತಿ ಎದುರಾಗಿದೆ. ಆಸ್ತಿ ಖರೀದಿ ಬಗ್ಗೆ ಕುಟುಂಬ ಸದಸ್ಯರಿಗೆ ಸ್ಪಷ್ಟ ಮಾಹಿತಿ ಸಿಗದಿರುವುದರಿಂದ ಮುಂದಿನ ದಿನಗಳಲ್ಲಿ ಆಸ್ತಿಗಳು ಕೈತಪ್ಪುವ ಸಾಧ್ಯತೆಯಿದೆ' ಎಂದರು.



'ಕಾಗದರಹಿತ ವ್ಯವಸ್ಥೆಯು ಭೂಮಾಫಿಯಾ ಚಟುವಟಿಕೆಗಳಿಗೆ ಅನುಕೂಲ ಮಾಡಿಕೊಡಲಿದೆ. ಬ್ಯಾಂಕ್ ಸಾಲಕ್ಕೂ ಅಡೆತಡೆಯಾಗಲಿದೆ. ಮೂಲ ದಾಖಲೆಗಳಿಲ್ಲದೇ ಬ್ಯಾಂಕ್‌ಗಳಲ್ಲಿ ಆಸ್ತಿ ಮೇಲೆ ಸಾಲ ಪಡೆಯುವುದು ಕಷ್ಟಕರವಾಗಿದೆ. ಒಟಿಪಿ ಗೊಂದಲ ಹೆಚ್ಚಾಗಿದ್ದು, ಒಂದೇ ನೋಂದಣಿಗೆ ಅನೇಕ ಬಾರಿ ಒಟಿಪಿ ಅಗತ್ಯವಿರುವುದರಿಂದ ಜನರಲ್ಲಿ ಈ ವ್ಯವಸ್ಥೆ ಆತಂಕ ಮೂಡಿಸುತ್ತಿದ್ದು, ಹ್ಯಾಕಿಂಗ್ ಭೀತಿ ಹೆಚ್ಚಾಗಿದೆ' ಎಂದು ಹೇಳಿದರು.

ಬಿಡಿಎ ಆಸ್ತಿ ಕಬಳಿಕೆ: ಆರೋಪಿಗಳು ಪರಾರಿ

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕೋಟ್ಯಂತರ ಮೌಲ್ಯದ ಆಸ್ತಿಯನ್ನು ಕಬಳಿಸಿದ್ದ ಎಂಟು ಆರೋಪಿಗಳ ವಿರುದ್ಧ ಶೇಷಾದ್ರಿಪುರ ಠಾಣೆಯಲ್ಲಿ ಎರಡು ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ.

ಬಿಡಿಎ ವಿಚಕ್ಷಣಾದಳದ ಡಿವೈಎಸ್‌ಪಿ ಬಿ.ಹನುಮಂತರಾಯ ನೀಡಿದ ದೂರಿನ ಮೇಲೆ ಸಿ.ಲಕ್ಷ್ಮಿನಾರಾಯಣ, ಮೋಹನ್‌ಕುಮಾರ್, ಸೋಮಶೇಖರ್, ಮಾರುತಿ ಕುಮಾರ್, ಎಚ್.ಆರ್.ಉಮೇಶ್, ಎಚ್.ಆರ್.ಪ್ರದೀಪ್, ಎಲ್.ಸಿ.ನಾಗರಾಜ್, ಸಂತೋಷ್ ಕುಮಾರ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಎಂಟು ಆರೋಪಿಗಳೂ ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಸಿ ನ್ಯಾಯಾಲಯಕ್ಕೆ ನಕಲಿ ದಾಖಲೆ ಸಲ್ಲಿಕೆ: ಕೊತ್ತನೂರು ಸರ್ವೆ ನಂಬರ್, 176/1ರಲ್ಲಿ 2 ಎಕರೆ 35 ಗುಂಟೆ ಜಮೀನನ್ನು ಜೆ.ಪಿ.ನಗರ 8ನೇ ಹಂತದ ಬಡಾವಣೆಗಾಗಿ ಪ್ರಾಥಮಿಕ ಅಧಿಸೂಚನೆ ಹಾಗೂ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಆ ಆಸ್ತಿಯ ಖಾತೆದಾರರು ಇಆರ್‌ಆರ್ ಪಾಲ್ಕನ್ ಆಗಿದ್ದರು. ಅವರ ಮರಣದ ನಂತರ ಪತ್ನಿ ಮೇರಿಯಮ್ಮ ಖಾತೆ ಹೊಂದಿದ್ದರು. ಆಸ್ತಿಗೆ ಪರಿಹಾರವನ್ನೂ ಪಡೆದುಕೊಂಡಿದ್ದರು. ಆ ಆಸ್ತಿಗೆ ಸಂಬಂಧಿಸದೇ ಇರುವ ಆರೋಪಿಗಳಾದ ಲಕ್ಷ್ಮಿನಾರಾಯಣ ಹಾಗೂ ಮಾರುತಿ ಕುಮಾರ್ ಸೇರಿಕೊಂಡು 2008ರಲ್ಲಿ ಮಾರುತಿ ಕುಮಾರ್ ವಿಲ್ ಪಡೆದಂತೆ ನಕಲಿ ದಾಖಲೆ ಸೃಷ್ಟಿಸಿದ್ದರು. ನಕಲಿ ದಾಖಲೆಯನ್ನು ಉಪ ವಿಭಾಗಾಧಿಕಾರಿಯಾದ (ಎಸಿ) ಎಲ್.ಸಿ. ನಾಗರಾಜ್ ನ್ಯಾಯಾಲಯಕ್ಕೆ ಸಲ್ಲಿಸಿ ಆದೇಶವನ್ನು ಪಡೆದುಕೊಂಡಿದ್ದರು. ನಕಲಿ ದಾಖಲೆಯ ಮೇಲೆ ನಾರಾಯಣಪ್ಪ ಹಾಗೂ ಗೋವಿಂದಪ್ಪ ಎಂದು ಬರೆದು ನಕಲಿ ವಿಲ್ ಆಧಾರದ ಮೇಲೆ ಬಿಡಿಎ ಆಸ್ತಿಯನ್ನು ಕಬಳಿಸಿದ್ದರು' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ನಕಲಿ ದಾಖಲೆಗಳನ್ನು ಇಟ್ಟುಕೊಂಡು ಪಹಣಿಯಲ್ಲಿ ಅನಧಿಕೃತವಾಗಿ ಹೆಸರು ಬರುವಂತೆ ಮಾಡಿಕೊಳ್ಳಲಾಗಿತ್ತು. ಈ ಕೃತ್ಯದಲ್ಲಿ ಉಪ ವಿಭಾಗಾಧಿಕಾರಿ ಸಹ ಭಾಗಿಯಾಗಿದ್ದು, ನಕಲಿ ದಾಖಲೆಯನ್ನು ಪರಿಶೀಲಿಸದೇ ಆದೇಶ ನೀಡಿ ಕರ್ತವ್ಯ ಲೋಪ ಎಸಗಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಆರೋಪಿಗಳೆಲ್ಲರೂ ಸಮಾನ ಉದ್ದೇಶದಿಂದ ಸಂಚು ರೂಪಿಸಿ ಕೃತ್ಯ ಎಸಗಿದ್ದಾರೆ. ಈಗಾಗಲೇ ಪರಿಹಾರ ಹಣ ವಿತರಣೆ ಆಗಿರುವ ಆಸ್ತಿಗೆ ನಕಲಿ ವಿಲ್ ಸೃಷ್ಟಿಸಿ ಅದರ ಆಧಾರದ ಮೇಲೆ ಸುಳ್ಳು ಆದೇಶವನ್ನು ಪಡೆದುಕೊಂಡು ಕೋಟ್ಯಂತರ ಮೌಲ್ಯದ ಆಸ್ತಿಯನ್ನು ತಮ್ಮ ಹೆಸರಿಗೆ ನೋಂದಣಿ ಮಾಡಿಸಿಕೊಂಡು ಮೋಸ ಮಾಡಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಇದೇ ರೀತಿ ಕೊತ್ತನೂರು ಸರ್ವೆ ನಂಬರ್ 177/1ರಲ್ಲಿನ 10 ಗುಂಟೆ ಜಮೀನಿಗೂ ನಕಲಿ ದಾಖಲೆ ಸೃಷ್ಟಿಸಿ, ವಂಚಿಸಿದ್ದಾರೆ. ಈ ವಂಚನೆ ಪ್ರಕರಣದಲ್ಲಿ ಸಿ.ಲಕ್ಷ್ಮಿನಾರಾಯಣ, ಮೋಹನ್‌ಕುಮಾರ್, ಸೋಮಶೇಖರ್, ಮಾರುತಿ ಕುಮಾರ್, ಎಚ್.ಆರ್.ಉಮೇಶ್ ಭಾಗಿ ಆಗಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಹುಳಿಮಾವು: ನೇಣು ಬಿಗಿದ ಸ್ಥಿತಿಯಲ್ಲಿ ಗೃಹಿಣಿ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಳಿಮಾವು ಹಳೆ ಪೋಸ್ಟ್ ಆಫೀಸ್ ಹತ್ತಿರದ ಮನೆಯಲ್ಲಿ ಗೃಹಿಣಿ ವಂದನಾ (23) ಎಂಬುವವರ ಮೃತದೇಹ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಮೂರು ವರ್ಷಗಳ ಹಿಂದೆ ಹುಳಿಮಾವು ನಿವಾಸಿ ವಿಕ್ರಂ ಶೇಷ ಅವರ ಜತೆ ವಂದನಾ ವಿವಾಹವಾಗಿತ್ತು. ಹುಳಿಮಾವು ಹಳೆ ಪೋಸ್ಟ್ ಆಫೀಸ್ ಸಮೀಪದಲ್ಲಿರುವ ಮನೆಯಲ್ಲಿ ವಂದನಾ, ಕುಟುಂಬ ಸಮೇತ ವಾಸವಾಗಿದ್ದರು. ದಂಪತಿಗೆ ಮೂರು ತಿಂಗಳ ಹಿಂದಷ್ಟೆ ಮಗು ಜನಿಸಿದೆ. ವಿಕ್ರಂ ಹಾಗೂ ಆತನ ಕುಟುಂಬಸ್ಥರು, ವಂದನಾಗೆ ಹಣಕ್ಕಾಗಿ ಕಿರುಕುಳ ನೀಡುತ್ತಿದ್ದರು ಎನ್ನಲಾಗಿದೆ. ಗುರುವಾರ ಸಂಜೆ ಮನೆಯಲ್ಲಿ ಅನುಮಾನಾಸ್ಪದವಾಗಿ ವಂದನಾ ಮೃತಪಟ್ಟಿದ್ದಾರೆ. ಈ ಸಾವಿನ ಹಿಂದೆ ಪತಿ ಹಾಗೂ ಆತನ ಕುಟುಂಬದವರ ಕೈವಾಡ ಇದೆ ಎಂದು ಮೃತಳ ಸಂಬಂಧಿಕರು ಆರೋಪಿಸಿದ್ದಾರೆ. ಹುಳಿಮಾವು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೊರ್ಮುಜ್ ದಾಟಿದ ಭಾರತದ 'ಸರ್ವ ಶಕ್ತಿ'

ನವದೆಹಲಿ: ಭಾರತಕ್ಕೆ ಬರುತ್ತಿರುವ ಎಲ್‌ಪಿಜಿ ಟ್ಯಾಂಕರ್ 'ಸರ್ವ ಶಕ್ತಿ' ಶನಿವಾರ ಹೊರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿದೆ.

ಮಾರ್ಷಲ್ ದ್ವೀಪದ ಧ್ವಜ ಹೊಂದಿರುವ ಈ ಹಡಗಿನಲ್ಲಿ 45 ಸಾವಿರ ಟನ್‌ನಷ್ಟು ಎಲ್‌ಪಿಜಿ ಇದ್ದು, ಇರಾನ್‌ನ ಲಾರಕ್ ಮತ್ತು ಕೆಶ್ಮ್ ದ್ವೀಪಗಳನ್ನು ದಾಟಿ, ಸದ್ಯ ಒಮಾನ್ ಕೊಲ್ಲಿಯತ್ತ ಸಾಗುತ್ತಿದೆ. ಮೇ 13ರ ವೇಳೆಗೆ ಈ ನೌಕೆಯು ವಿಶಾಖಪಟ್ಟಣ ಬಂದರಿಗೆ ಬಂದು ತಲುಪುವ ಸಾಧ್ಯತೆ ಇದೆ. 'ಸರ್ವ ಶಕ್ತಿ' ಟ್ಯಾಂಕರ್‌ನಲ್ಲಿ ಇಂಡಿಯನ್ ಆಯಿಲ್ ಕಾರ್ಪೊರೇಷನ್‌ಗೆ ಸೇರಿದ ಎಲ್‌ಪಿಜಿ ಇದೆ. ಆದರೆ, ಐಒಸಿ ಇದನ್ನು ಖಚಿತಪಡಿಸಿಲ್ಲ.

ಭಾವಪೂರ್ಣ ಶ್ರದ್ಧಾಂಜಲಿ

ಬೆಸ್ಕಾಂ ಜಾಗೃತ ದಳದ ಮಾನ್ಯ ಪೊಲೀಸ್ ಅಧೀಕ್ಷಕರಾದ
ಶ್ರೀಮತಿ ಲಾವಣ್ಯ ನಾರಾಯಣಪ್ಪ ರವರು
ಇಂದು ಮಧ್ಯಾಹ್ನ 3.00 ಗಂಟೆಗೆ
ದೈವಾಧೀನರಾದರೆಂದು ತಿಳಿಸಲು ವಿಷದಿಸುತ್ತೇವೆ.
ಇಂತಿ ದುಃಖತಪ್ತರು
ರತ್ನ ಮಂಜುಳ- ತಾಯಿ, ಪುರುಷೋತ್ತಮ್- ಪತಿ,
ಮಾವಂದಿರು ಮತ್ತು ಕುಟುಂಬ ವರ್ಗದವರು,
ಮೊಬೈಲ್ : 94480 57219

ಉಗ್ರನಿಗೆ 7 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈಲಿನಲ್ಲಿದ್ದುಕೊಂಡು ಉಗ್ರ ಕೃತ್ಯಕ್ಕೆ ಸಂಚು ರೂಪಿಸಿದ್ದ ಹಾಗೂ ಹರಿಯಾಣದಿಂದ ಗ್ರೆನೇಡ್ ತಂದಿದ್ದ ಪ್ರಕರಣದಲ್ಲಿ ಮತ್ತೊಬ್ಬ ಅಪರಾಧಿ ವಿಕ್ರಮ್ ಕುಮಾರ್ ಅಲಿಯಾಸ್ ಛೋಟಾ ಉಸ್ಮಾನ್‌ಗೆ ಎನ್‌ಐಎ ವಿಶೇಷ ನ್ಯಾಯಾಲಯವು ಏಳು ವರ್ಷ ಜೈಲು ಶಿಕ್ಷೆ ಹಾಗೂ ₹30 ಸಾವಿರ ದಂಡ ವಿಧಿಸಿ, ಶನಿವಾರ ಆದೇಶಿಸಿದೆ.

2017ರಲ್ಲಿ ನೂರ್ ಎಂಬಾತನ ಕೊಲೆ ಪ್ರಕರಣದಲ್ಲಿ ಜುನೈದ್ ಅಹಮದ್, ಅಪರಾಧಿ ವಿಕ್ರಮ್ ಮತ್ತಿತರರು ಪರಪ್ಪನ ಅಗ್ರಹಾರ ಜೈಲು ಸೇರಿದ್ದರು. ಅದೇ ಜೈಲಿನಲ್ಲಿದ್ದ ಎಲ್‌ಇಟಿ ಉಗ್ರ ಟಿ.ನಾಸೀರ್ ಸಂಪರ್ಕಕ್ಕೆ ಕೊಲೆ ಆರೋಪಿಗಳು ಬಂದಿದ್ದರು. ಕೊಲೆ ಆರೋಪಿಗಳ ಮನ ಪರಿವರ್ತನೆ ಮಾಡಿದ್ದ ನಾಸೀರ್, ಉಗ್ರ ಕೃತ್ಯಕ್ಕೆ ಸಂಚು ರೂಪಿಸಿದ್ದ. ಜುನೈದ್ ಹಾಗೂ ವಿಕ್ರಮ್ ಜಾಮೀನಿನ ಮೇಲೆ ಹೊರಕ್ಕೆ ಬಂದಿದ್ದರು. ಜುನೈದ್ ವಿದೇಶದಲ್ಲಿ ತಲೆಮರೆಸಿಕೊಂಡಿದ್ದ. ಈತನ ಸೂಚನೆಯಂತೆ ಅಪರಾಧಿಗಳಾದ ವಿಕ್ರಂ, ಸುಹೇಲ್, ಮೊಹಮ್ಮದ್ ಉಮರ್, ಜಾಹೀದ್ ತಬ್ರೇಜ್, ಸೈಯದ್ ಮುದಾಸೀರ್ ಪಾಷಾ, ಮೊಹಮ್ಮದ್ ಫೈಜಲ್ ರಬಾನಿ, ಸನ್ಮಾನ್ ಖಾನ್ ಉಗ್ರ ಸಂಚಿನಲ್ಲಿ ಭಾಗಿ ಆಗಿದ್ದರು. ದೇಶದ ನಾನಾ ಕಡೆ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿದ್ದರು ಎಂದು ಎನ್‌ಐಎ ತನಿಖೆಯಿಂದ ಪತ್ತೆಯಾಗಿತ್ತು.

ವಿದೇಶದಲ್ಲಿದ್ದ ಜುನೈದ್ ಸೂಚನೆಯಂತೆ 2023ರ ಮೇನಲ್ಲಿ ವಿಕ್ರಮ್ ಕುಮಾರ್, ಹರಿಯಾಣದ ಅಂಬಾಲಕ್ಕೆ ತೆರಳಿ ಹ್ಯಾಂಡ್ ಗ್ರೆನೇಡ್ ಮತ್ತು ವಾಕಿ-ಟಾಕಿಗಳಿರುವ ಪಾರ್ಸೆಲ್ ತಂದಿದ್ದ. ಅದನ್ನು ಮತ್ತೊಬ್ಬ ಅಪರಾಧಿ ಸುಹೈಲ್ ಖಾನ್ ಮನೆಯಲ್ಲಿ ಇರಿಸಿದ್ದ. ಬಳಿಕ, ಜುನೈದ್ ಅಹಮದ್, ಜಾಹೀದ್ ತಬ್ರೇಜ್‌ಗೆ ಕೊಡಲಾಗಿತ್ತು. ಆ ಬಳಿಕ ಟಿ.ನಾಸೀರ್‌ನನ್ನು ಜೈಲಿನಿಂದ ನ್ಯಾಯಾಲಯಕ್ಕೆ ಕರೆದೊಯ್ಯುವ ಮಾರ್ಗಮಧ್ಯೆ ಸ್ಫೋಟಿಸಿ ಆತ ತಪ್ಪಿಸಿಕೊಳ್ಳುವ ಹಾಗೆ ಸಂಚು ರೂಪಿಸಲಾಗಿತ್ತು ಎಂಬುದು ಎನ್‌ಐಎ ತನಿಖೆ ವೇಳೆ ಕಂಡುಬಂದಿತ್ತು.

2023ರಲ್ಲಿ ಸಿಸಿಬಿ ಪೊಲೀಸರು ಆರ್.ಟಿ ನಗರದ ಮನೆಯೊಂದರ ಮೇಲೆ ದಾಳಿ ನಡೆಸಿದ್ದರು. ಮನೆಯಲ್ಲಿ ಸ್ಫೋಟಕ ವಸ್ತುಗಳು ಪತ್ತೆ ಆಗಿದ್ದವು. ಬಳಿಕ ಪ್ರಕರಣದ ತನಿಖೆಯನ್ನು ಎನ್‌ಐಎಗೆ ವರ್ಗಾವಣೆ ಮಾಡಲಾಗಿತ್ತು.

ಆರೋಗ್ಯ ಇಲಾಖೆ ನಿರ್ದೇಶಕಿಯಾಗಿ ಡಾ. ರಜನಿ ನೇಮಕ

ಬೆಂಗಳೂರು: ಆರೋಗ್ಯ ಇಲಾಖೆ ನಿರ್ದೇಶಕರಾಗಿ ಡಾ.ರಜನಿ ಎಂ. ನೇಮಕಗೊಂಡಿದ್ದಾರೆ.

ಡಾ.ರಜನಿ ಎಂ.

ಡಾ.ವಸಂತಕುಮಾರ್ ಅವರ ವಯೋನಿವೃತ್ತಿಯಿಂದ ತೆರವಾದ ಈ ಹುದ್ದೆಗೆ, ಇಲಾಖೆಯಲ್ಲಿ ಅಪರ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ರಜನಿ ಅವರನ್ನು ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ ಹೊರಡಿಸಿದೆ. ಮಕ್ಕಳ ತಜ್ಞರಾಗಿರುವ ರಜನಿ ಅವರು, ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ 30ಕ್ಕೂ ಅಧಿಕ ವರ್ಷಗಳಿಂದ ಕಾರ್ಯ-ನಿರ್ವಹಿಸುತ್ತಿದ್ದಾರೆ. ಇಲಾಖೆಯಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿರುವ ಅವರು, ಲೇಖಕಿಯೂ ಆಗಿದ್ದಾರೆ.

ಇಬ್ಬರು ಮಕ್ಕಳನ್ನು ಕೊಂದು ಅರ್ಚಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಕುಣಿಗಲ್: ತಾಲ್ಲೂಕಿನ ಹುತ್ರಿದುರ್ಗ ಹೋಬಳಿ ಆಲ್ಕೆರೆ ಗ್ರಾಮದ ಮಲ್ಲೇಶ್ವರ ದೇಗುಲದ ಅರ್ಚಕ ಶಿವಣ್ಣ (40) ಎಂಬುವರು ಶುಕ್ರವಾರ ರಾತ್ರಿ ತನ್ನ ಇಬ್ಬರು ಮಕ್ಕಳನ್ನು ಉಸಿರುಗಟ್ಟಿಸಿ ಕೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪೊಲೀಸರು ಅರ್ಚಕನ ಪತ್ನಿ ಕಾವ್ಯಾಳನ್ನು(35) ಬಂಧಿಸಿದ್ದು, ಆಕೆಯ ಪ್ರಿಯಕರ ಮೂಗನಪುರ ಹೇಮಂತ್ ಪರಾರಿಯಾಗಿದ್ದಾನೆ. ಕುಣಿಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಲ್ಕೆರೆ ಗ್ರಾಮದ ಮನೆಯಲ್ಲಿ ಪುತ್ರರಾದ ಜೀವನ್ (10) ಹಾಗೂ ಪ್ರಾಣೇಶ್ (5) ಇಬ್ಬರನ್ನೂ ಉಸಿರುಗಟ್ಟಿಸಿ ಸಾಯಿಸಿದ ನಂತರ ಶಿವಣ್ಣ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪತ್ನಿ ಕಾವ್ಯಾ, ಹೇಮಂತ್ ಎಂಬಾತನ ಜತೆ ಅಕ್ರಮ ಸಂಬಂಧ ಹೊಂದಿದ್ದಾಳೆ ಎಂಬ ವಿಚಾರವಾಗಿ ದಂಪತಿ ಮಧ್ಯೆ ಆಗಾಗ ಜಗಳ ನಡೆಯುತ್ತಿತ್ತು. ಕೆಲವು ದಿನಗಳ ಹಿಂದೆ ಇಬ್ಬರು ಮಕ್ಕಳನ್ನು ಕರೆದುಕೊಂಡು ಕಾವ್ಯಾ ಕೊತ್ತಗೆರೆ ಹೋಬಳಿ ಕುರುಡಿಹಳ್ಳಿಯ ತವರು ಮನೆಗೆ ಹೋಗಿದ್ದಳು.

ಶುಕ್ರವಾರ ಸಂಜೆ ಕುರುಡಿಹಳ್ಳಿಯಿಂದ ಮಕ್ಕಳನ್ನು ವಾಪಸ್ ಆಲ್ಕೆರೆಗೆ ಕರೆದುಕೊಂಡು ಬಂದಿದ್ದ ಶಿವಣ್ಣ ತಡರಾತ್ರಿ ಈ ಕೃತ್ಯ ಎಸಗಿದ್ದಾರೆ.

ಶಿವಣ್ಣ ಸಂಬಂಧಿ ಪ್ರಕಾಶ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿದೆ. ಕುಣಿಗಲ್ ಪೊಲೀಸರು ಕಾವ್ಯಾಳನ್ನು ಬಂಧಿಸಿದ್ದಾರೆ. ಹೇಮಂತ್ ಪರಾರಿ ಯಾಗಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ , ಡಿವೈಎಸ್‌ಪಿ ಓಂ ಪ್ರಕಾಶ್, ಸಿಪಿಐ ಮಾದ್ಯಾ ನಾಯಕ್ ಸ್ಥಳಕ್ಕೆ ಭೇಟಿ ನೀಡಿದ್ದರು.

ಪೆಟ್ರೋಲ್ ಸುರಿದು ಪುತ್ರನ ಕೊಲೆಗೆ ಯತ್ನ

ಬೆಂಗಳೂರು: ಪುತ್ರನ ಮೇಲೆ ಪೆಟ್ರೋಲ್ ಸುರಿದು ಕೊಲೆಗೆ ಯತ್ನಿಸಿದ ತಂದೆಯ ವಿರುದ್ಧ ಕುಮಾರಸ್ವಾಮಿ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬನಶಂಕರಿ ಎರಡನೇ ಹಂತದ ಪ್ರಗತಿಪುರ ನಿವಾಸಿ ಮಲ್ಲಿಕಾರ್ಜುನ್ (19) ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೃತ್ಯ ಎಸಗಿದ ಮಲ್ಲಿಕಾರ್ಜುನ್ ತಂದೆ ಆನಂದ್ ದೊಡ್ಡಮನಿ (45) ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಘಟನೆಯಲ್ಲಿ ಆನಂದ್ ದೊಡ್ಡಮನಿಗೂ ಗಾಯವಾಗಿದೆ.

ಇಬ್ಬರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೇ 1ರಂದು ರಾತ್ರಿ 10.30ರ ಸುಮಾರಿಗೆ ಪ್ರಗತಿಪುರದಲ್ಲಿ ಘಟನೆ ನಡೆದಿದೆ ಎಂದು ಪೊಲೀಸರು ಹೇಳಿದರು.

ಆನಂದ್ ದೊಡ್ಡಮನಿ, ಪತ್ನಿ ಈರಮ್ಮ, ಮಕ್ಕಳಾದ ಮಲ್ಲಿಕಾರ್ಜುನ್ ಮತ್ತು ಪರಮೇಶ್ ಜತೆ ಪ್ರಗತಿಪುರದಲ್ಲಿ ನೆಲಸಿದ್ದರು. ಆನಂದ್ ಗಾರೆ ಕೆಲಸ ಮಾಡಿಕೊಂಡಿದ್ದು, ಪುತ್ರ ಮಲ್ಲಿಕಾರ್ಜುನ್ ಟೈಲ್ಸ್ ಕೆಲಸ ಮಾಡುತ್ತಿದ್ದರು. ಮೇ 1ರಂದು ಸಂಜೆ ಮಲ್ಲಿಕಾರ್ಜುನ್ ಬೈಕ್ ತೆಗೆದುಕೊಂಡು ಸ್ನೇಹಿತರ ಜತೆ ಸುತ್ತಾಡಲು ಹೋಗಿದ್ದರು. ಅದನ್ನು ತಿಳಿದ ಆನಂದ್, ಮಗನಿಗೆ ಕರೆ ಮಾಡಿ ಬೈದಿದ್ದರು ಎಂದು ಪೊಲೀಸರು ಹೇಳಿದರು.

ರಾತ್ರಿ ದೇವಸ್ಥಾನದಿಂದ 8.30ರ ಸುಮಾರಿಗೆ ಮಲ್ಲಿಕಾರ್ಜುನ್ ಮನೆಗೆ ಬಂದು ಊಟ ಮಾಡಲು ಕುಳಿತ್ತಿದ್ದರು. ಆಗ ತಂದೆ, ಮಗನಿಗೆ ನಿಂದಿಸಿದ್ದರು. ಅದರಿಂದ ಕೋಪಗೊಂಡ ಮಲ್ಲಿಕಾರ್ಜುನ್, ಊಟ ಮಾಡುವುದನ್ನು ಬಿಟ್ಟು ಹೊರಕ್ಕೆ ಹೋಗಿದ್ದರು. ಅಷ್ಟಕ್ಕೆ ಸುಮನಾಗದ ತಂದೆ, ಬೈಕ್ ಕೀ ಕಸಿದುಕೊಂಡು ತಲೆಗೆ ಹೊಡೆದಿದ್ದರು ಎಂದು ಪೊಲೀಸರು ಹೇಳಿದರು.

ಪೆಟ್ರೋಲ್ ಸುರಿದ ತಂದೆ: ಮಲ್ಲಿಕಾರ್ಜುನ್ ಪ್ರತಿ ದಿನ ಸಂಜೆ ಸ್ನೇಹಿತರ ಜತೆ ಸುತ್ತಾಡಲು ಬೈಕ್‌ನಲ್ಲಿ ಹೋಗುತ್ತಿದ್ದರು. ಅದೇ ಕಾರಣಕ್ಕೆ ಬೈಕ್‌ನಲ್ಲಿದ್ದ ಪೆಟ್ರೋಲ್ ಅನ್ನು ತಂದೆ ತೆಗೆದು ಬಾಟಲಿಯಲ್ಲಿ ಇರಿಸುತ್ತಿದ್ದರು. ಮೇ 1ರಂದು ತಂದೆ-ಮಗನ ಜತೆ ಗಲಾಟೆ ವಿಕೋಪಕ್ಕೆ ಹೋದಾಗ, ಕೋಪಗೊಂಡ ಆನಂದ್, ಬಾಟಲಿಯಲ್ಲಿದ್ದ ಪೆಟ್ರೋಲ್ ತಂದು ಪುತ್ರನ ಮೇಲೆ ಸುರಿದಿದ್ದರು ಎಂದು ಪೊಲೀಸರು ಹೇಳಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಮುಖ್ಯ ನಗರ ಯೋಜಕರು ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು – 560002.

ಸಂಖ್ಯೆ: ಮು.ನ.ಯೋ/ಜಿಬಿಎ/ಪಿಆರ್/688/CLU–7/2025–26/ಇ–210771 ದಿನಾಂಕ: 30–04–2026

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 ರಡಿಯಲ್ಲಿ)

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ಸಾರಿಗೆ ಸಂಪರ್ಕ'** ವಲಯದಿಂದ **'ವಸತಿ ಮತ್ತು ವಾಣಿಜ್ಯ'** ಉಪಯೋಗಕ್ಕಾಗಿ ಭೂ ಉಪಯೋಗ ಮರು ನಿಗಧಿಪಡಿಸುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಮರು ನಿಗಧಿಪಡಿಸುವ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆಯು ಪ್ರಕಟವಾದ ದಿನದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ನರಸಿಂಹರಾಜ ಚೌಕ, ಬೆಂಗಳೂರು** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ (ಎ/ಗುಂ)	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ವೈ. ಬಷೀರ್ ಉಲ್ಲಾಖಾನ್	ಬೆಂಗಳೂರು ಪೂರ್ವ	ಬಿದರಹಳ್ಳಿ	ಕಾಡು ಗೋಡಿ	211/1	01ಎ–18ಗುಂ (00ಎ–01ಗುಂ ಖರಾಬು ಹೊರತುಪಡಿಸಿ)	ಸಾರಿಗೆ ಸಂಪರ್ಕ	ವಸತಿ
2					211/2	02ಎ–10ಗುಂ (00ಎ–10ಗುಂ ಖರಾಬು ಹೊರತುಪಡಿಸಿ)		
3	ಶ್ರೀ ಬಾದಾಮ್ ಮಾದವ ರೆಡ್ಡಿ				214/4	00ಎ–33ಗುಂ	ಸಾರಿಗೆ ಸಂಪರ್ಕ	ವಾಣಿಜ್ಯ
4					214/6	00ಎ–33ಗುಂ		

ಷರಾ:– ಅರ್ಜಿದಾರರು ಸದರಿ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ / ವಾಣಿಜ್ಯ / ಕೈಗಾರಿಕಾ ಬೆಳವಣಿಗೆಗಳು ಬಂದಿದ್ದು / ಬರುತ್ತಲಿರುತ್ತವೆ. "ಉದ್ದೇಶಿತ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ವಾಣಿಜ್ಯ ಮತ್ತು ವಸತಿ ಕಟ್ಟಡ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ, ಅನೇಕ ಉದ್ಯೋಗಾವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿರುತ್ತೇವೆ. ಸದರಿ ಜಮೀನುಗಳಲ್ಲಿ ವಾಣಿಜ್ಯ ಮತ್ತು ವಸತಿ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸ್ಥಳೀಯ ಹಾಗೂ ಸುತ್ತಲಿನ ಸಾರ್ವಜನಿಕರಿಗೆ ಆರ್ಥಿಕವಾಗಿ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ಸಾರಿಗೆ–ಸಂಪರ್ಕ'** ವಲಯದಿಂದ **'ವಸತಿ ಮತ್ತು ವಾಣಿಜ್ಯ'** ಉಪಯೋಗಕ್ಕೆ ಭೂಉಪಯೋಗ ಮರು ನಿಗಧಿಪಡಿಸಲು ಕೋರಿರುತ್ತಾರೆ.

ಸಹಿ/– ಮುಖ್ಯ ನಗರ ಯೋಜಕರು
ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ
MAHARANI CLUSTER UNIVERSITY
ಅರಮನೆ ರಸ್ತೆ, ಬೆಂಗಳೂರು – 560001. Email:mcublr@gmail.com

ಸಂಖ್ಯೆ: ಮಕ್ಲವಿ/EXS-09/Ph.D/2026-27 ದಿನಾಂಕ:29.04.2026

ಪಿಹೆಚ್.ಡಿ ಪ್ರವೇಶಾತಿ ಪ್ರಾರಂಭ

2026–27ನೇ ಶೈಕ್ಷಣಿಕ ವರ್ಷಕ್ಕೆ ಪಿಹೆಚ್.ಡಿ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೋರ್ಸುಗಳು–ಕನ್ನಡ, ಇಂಗ್ಲೀಷ್, ಸಸ್ಯಶಾಸ್ತ್ರ, ಜೈವಿಕತಂತ್ರಜ್ಞಾನ, ಜೀವರಸಾಯನಶಾಸ್ತ್ರ, ರಸಾಯನಶಾಸ್ತ್ರ, ಗಣವಿಜ್ಞಾನ, ವಾಣಿಜ್ಯ ಮತ್ತು ನಿರ್ವಹಣೆ, ವಿದ್ಯುನ್ಮಾನ, ಅರ್ಥಶಾಸ್ತ್ರ, ಆಹಾರ ಮತ್ತು ಪೌಷ್ಟಿಕತೆ, ಇತಿಹಾಸ, ಮಾನವ ವಿಕಾಸ, ಸಂಪನ್ಮೂಲ ನಿರ್ವಹಣೆ ಮತ್ತು ಒಳಾಂಗಣ ವಿನ್ಯಾಸ ಮತ್ತು ಅಲಂಕಾರ, ಗಣಿತಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಮನಃಶಾಸ್ತ್ರ, ಭೌತಶಾಸ್ತ್ರ, ರಾಜ್ಯಶಾಸ್ತ್ರ, ರೇಷ್ಮೆಕೃಷಿ, ಸಮಾಜಶಾಸ್ತ್ರ, ಪ್ರಾಣಿಶಾಸ್ತ್ರ.

ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್‌ಗೆ: https://mcu.karnataka.gov.in/92/ph.d-notification-/en ಭೇಟಿ ನೀಡಲು ಸೂಚಿಸಲಾಗಿದೆ. ಆಫ್‌ಲೈನ್ ಅರ್ಜಿ ಮಾತ್ರ ಸಲ್ಲಿಸಬಹುದು.

ವಿವರಗಳು	ದಿನಾಂಕ
ಅರ್ಜಿ ಸಲ್ಲಿಕೆಯ ಪ್ರಾರಂಭ	02.05.2026
ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕ	02.06.2026

ಸಹಿ/– ಕುಲಸಚಿವರು (ಮೌಲ್ಯಮಾಪನ)
ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ
ಡಿಐಪಿಆರ್/ಸಿಪಿ/470/ಸಿಸಿಎಲ್/2026–27

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/04/2026–27 ದಿನಾಂಕ: 02/05/2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಎಸ್.ಎಫ್.ಸಿ ಹಾಗು ನಗರಸಭಾ ನಿಧಿ ಅಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

Indent: 57843 (ST Reserved), Indent: 57845 (Others), Indent: 57853 (Others), Indent: 57855 (Others) & Indent: 57856 (Others).

ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: 08–05–2026 ಸಂಜೆ 5.30 ಗಂಟೆಯವರೆಗೆ, ಕೆ.ಪಿ.ಪಿ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿಮಾಡಿದ ನಮೂನೆ ಮತ್ತು ಇ.ಎಂ.ಡಿ ಶೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: 11–05–2026 ಸಂಜೆ 5.30 ಗಂಟೆಯವರೆಗೆ ಹಾಗೂ ಸಲ್ಲಿಸಿರುವ ಟೆಂಡರ್‌ಗಳ ಬಿಡ್ ತೆರೆಯುವ ದಿನಾಂಕ 13–05–2026 ಬೆಳಿಗ್ಗೆ 11.00 ಗಂಟೆಗೆ

ಸದರಿ ಟೆಂಡರ್‌ಗೆ ಸಂಬಂದಿಸಿದಂತೆ ಯಾವುದಾದರು ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟ್‌ಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–
ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ
ವಾಸಾಸಂಇ/ವಾಪ್ರಾ/474/ಎಸ್‌ಎಂಸಿಎಲ್/2026–27

ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ಪಟ್ಟಣದ ಶರಾವತಿ ನದಿಯಲ್ಲಿ ದೋಣಿ ವಿಹಾರಕ್ಕೆ ಪ್ರವಾಸಿಗರನ್ನು ಕರೆದೊಯ್ಯುವ ದೋಣಿಗಳು ಸಾಲಾಗಿ ನಿಂತಿರುವುದು

ಕಡಲ ಪ್ರವಾಸೋದ್ಯಮ ನಿಸ್ತೇಜ

ಒಂದನೇ ಪುಟದಿಂದ...

ರಾಜ್ಯ ಸರ್ಕಾರದ ಪ್ರಸಕ್ತ ಬಜೆಟ್‌ನಲ್ಲಿ ಸಮಗ್ರ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆ ಪ್ರಕಟಿಸಲಾಗಿದೆ. ಸೀ ಪ್ಲೇನ್ (ಸಮುದ್ರದ ಮೇಲೆ ಇಳಿಯುವ ಸಣ್ಣ ವಿಮಾನ), ಹೆಲಿ ಟ್ಯಾಕ್ಸಿ ಸೇವೆಗಳ ಮೂಲಕ ಪ್ರಮುಖ ಪ್ರವಾಸಿ ತಾಣಗಳಿಗೆ ವೇಗವಾದ ಸಂಪರ್ಕ ಕಲ್ಪಿಸುವ ಯೋಜನೆ ರೂಪಿಸುವುದಾಗಿ ಘೋಷಿಸಲಾಗಿದೆ.

‘ಪಿಪಿಪಿ ಮಾದರಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಮೂಲಸೌಕರ್ಯ ಅಭಿವೃದ್ಧಿ ಪಡಿಸುವ ಖಾಸಗಿಯವರಿಗೆ ಉತ್ತೇಜನ ನೀಡುವ ಅಗತ್ಯವಿದೆ. ಯೋಜನೆಗಳಿಗೆ ತ್ವರಿತ ಅನುಮೋದನೆ ಆಗಬೇಕಿದೆ. ಪರಿಸರ ಪ್ರವಾಸೋದ್ಯಮ ಹಲವು ಇಲಾಖೆಗಳನ್ನು ಒಳಗೊಳ್ಳುವುದರಿಂದ ಅದಕ್ಕೆ ಸಮಗ್ರ ನೀತಿ ಬೇಕು. ಕರಾವಳಿ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ನೋಡಲ್ ಅಧಿಕಾರಿಯನ್ನು ನೇಮಿಸಬೇಕು. ಅವರು ಪ್ರಾದೇಶಿಕ ಆಯುಕ್ತರ ತತ್ಸಮಾನದ ಹುದ್ದೆಯ ಅಧಿಕಾರಿಯಾಗಿದ್ದರೆ ಜಿಲ್ಲಾ ಆಡಳಿತಗಳು ತ್ವರಿತವಾಗಿ ಸ್ಪಂದಿಸುತ್ತವೆ. ರಾಜ್ಯ ಸರ್ಕಾರ ಇದನ್ನು ತುರ್ತಾಗಿ ಮಾಡಬೇಕು’ ಎಂಬುದು ಈ ಉದ್ಯಮ ವಲಯದಿಂದ ಕೇಳಿಬರುತ್ತಿರುವ ಬೇಡಿಕೆ.

ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಬಳಿಯ ನಂದನಗಡದಿಂದ ದಕ್ಷಿಣ ಕನ್ನಡ ಜಿಲ್ಲೆಯ ತಲಪಾಡಿವರೆಗೆ ರಾಜ್ಯದ ಕರಾವಳಿ ತೀರ ಇದೆ. ಸೂರ್ಯಾಸ್ತದ ಸೊಬಗನ್ನು ಉಣ ಬಡಿಸುವ ಸುಂದರ ಕಡಲ ಕಿನಾರೆಗಳು, ಕುತೂಹಲಕಾರಿ ದ್ವೀಪಗಳು, ಅಳಿವೆಗಳು, ಕಾಂಡ್ಲಾ ಕಾಡುಗಳನ್ನೊಳಗೊಂಡ ಈ ಕರಾವಳಿ ತೀರ ಮನೋಹರ ಪ್ರವಾಸಿ ತಾಣಗಳ ಕಣಜ. ದೇಶ ವಿದೇಶಗಳಿಂದ ಪ್ರವಾಸಿಗರನ್ನು ಸೆಳೆಯುವ ಹತ್ತು ಹಲವು ಅವಕಾಶ ಇವೆ. ಕರಾವಳಿ ದೇವಸ್ಥಾನ– ದೈವಸ್ಥಾನಗಳ ‘ತವರು’. ಇಲ್ಲಿಯ ಧಾರ್ಮಿಕ ಪ್ರವಾಸೋದ್ಯಮ ಉತ್ತುಂಗದಲ್ಲಿದೆ. ಆದರೆ, ಸಾಗರ ಪ್ರವಾಸೋದ್ಯಮ ತೆವಳುತ್ತಾ ಸಾಗಿದೆ.

‘ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ರೈಲು, ನೌಕಾಯಾನ, ಪ್ರಮುಖ ರಾಷ್ಟ್ರೀಯ ಹೆದ್ದಾರಿ ಹೀಗೆ ನಾಲ್ಕೂ ಸ್ತರದ ಸಂಪರ್ಕ ಹೊಂದಿರುವ ನಗರ ಮಂಗಳೂರು. ಆದರೆ, ಪ್ರವಾಸಿಗರ ಅನುಕೂಲಕ್ಕೆ ತಕ್ಕಂತೆ ಸೌಕರ್ಯ ಒದಗಿಸುವ ಪಂಚತಾರಾ ಹೋಟೆಲ್ ಹೊಂದಲು ಇದುವರೆಗೂ ಸಾಧ್ಯವಾಗಿಲ್ಲ. ಐಷಾರಾಮಿ ಕ್ರೂಸ್ ಹಡಗುಗಳ ನಿಲುಗಡೆಗೆ ಅವಕಾಶವಿರುವ ನವಮಂಗಳೂರು ಬಂದರು, ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ವಿದೇಶಿ ಪ್ರವಾಸಿಗರನ್ನು ಸೆಳೆಯುತ್ತಿಲ್ಲ. ಈಗ ವರ್ಷಕ್ಕೆ ಬರುತ್ತಿರುವುದು 6ರಿಂದ 7 ಐಷಾರಾಮಿ ಹಡಗು ಮಾತ್ರ. ಮಂಗಳೂರು– ಲಕ್ಷದ್ವೀಪ ಮಧ್ಯೆ ಹಡಗು ಸೇವೆ ಬಲಪಡಿಸಲು ಮಂಗಳೂರಲ್ಲಿ ನಡೆಯುತ್ತಿರುವ ಜೆಟ್ಟಿ ನಿರ್ಮಾಣ ಕಾಮಗಾರಿ ಇನ್ನೂ ಆಮೆವೇಗದಲ್ಲಿಯೇ ಇದೆ. ಮೂಲಸೌಕರ್ಯ–ದೂರದರ್ಶಿ ಯೋಜನೆ–ಪ್ರಚಾರ– ಪ್ರವಾಸಿಗರನ್ನು ಸೆಳೆಯುವಂತಹ ಚಟುವಟಿಕೆ ಕೊರತೆಗಳಿಂದ ಕರಾವಳಿ ಪ್ರವಾಸೋದ್ಯಮ ಚೇತರಿಸಿಕೊಳ್ಳಲು ಸಾಧ್ಯವಾಗಿಲ್ಲ. ದಕ್ಷಿಣ ಕನ್ನಡ– ಉಡುಪಿ ಜಿಲ್ಲೆಗಳಲ್ಲಿ ಹಿಂದೆ ನಡೆದ ‘ಘಟನಾವಳಿಗಳ’ ಕಾರಣದಿಂದಲೂ ಪ್ರವಾಸಿಗರು ಇಲ್ಲಿಗೆ ಬರಲು ಮನಸ್ಸು ಮಾಡುತ್ತಿಲ್ಲ’... ಹೀಗೆ ಇಲ್ಲಿಯ ಕೊರತೆಗಳ ಪಟ್ಟಿಯನ್ನು ಮುಂದಿಡುತ್ತಾರೆ ಈ ವಲಯದ ಪರಿಣತರು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಹೋಲಿಸಿದರೆ ಆತಿಥ್ಯ ವಲಯದಲ್ಲಿ ಉತ್ತರ ಕನ್ನಡ ಮುಂದಿವೆ. ಗೋಕರ್ಣ, ಕುಮಟಾ ತಾಲ್ಲೂಕಿನ ಬಾಡ, ಭಟ್ಕಳ ತಾಲ್ಲೂಕಿನ ಮುರುಡೇಶ್ವರ ಮತ್ತು ಹೊನ್ನಾವರದ ಕಾಸರಕೋಡ ಕಡಲತೀರಗಳಲ್ಲಿ ನೂರಾರು ರೆಸಾರ್ಟ್, ಹೋಮ್ ಸ್ಟೇಗಳು ತಲೆ ಎತ್ತಿವೆ. ವಿಶ್ವಖ್ಯಾತಿಯ ಗೋಕರ್ಣದಲ್ಲಂತೂ ಕಳೆದ ಒಂದು ದಶಕದಿಂದ ಈಚೆಗೆ 200ಕ್ಕೂ ಅಧಿಕ ರೆಸಾರ್ಟ್, ಹೋಮ್ ಸ್ಟೇಗಳು ನಿರ್ಮಾಣಗೊಂಡಿವೆ. ಒಂದು ಕಾಲದಲ್ಲಿ ಪುರಾಣ ಪ್ರಸಿದ್ಧ ತಾಣವಾಗಿ ಸೀಮಿತವಾಗಿದ್ದ ಗೋಕರ್ಣ ಈಗ ಐಷಾರಾಮಿ ರೆಸಾರ್ಟ್‌ಗಳ ಕಾರಣದಿಂದಾಗಿಯೇ ಪ್ರವಾಸಿಗರನ್ನು ಸೆಳೆಯುತ್ತಿದೆ.

‘ಗೋಕರ್ಣಕ್ಕೆ ಮೊದಲು ಬಂದಾಗ ಕುಡ್ಲೆ ಮತ್ತು ಓಂ ಕಡಲತೀರಕ್ಕೆ ಜನರೇ ಹೋಗುತ್ತಿರಲಿಲ್ಲ. ಸ್ಥಳೀಯರು ಕಟ್ಟಿಕೊಟ್ಟ ತೆಂಗಿನಗರಿಯ ಶೆಡ್‌ನಲ್ಲಿ ವಾಸಿಸಬೇಕಿತ್ತು. ಆದರೆ, ಈಗ ಕಡಲತೀರಗಳಲ್ಲಿ ಐಷಾರಾಮಿ ಕೊಠಡಿಗಳಿವೆ. ಹೊಸ ಜಗತ್ತಿಗೆ ಬಂದ ಅನುಭವ ಆಗುತ್ತಿದೆ’ ಎಂಬುದು ಇಂಗ್ಲೆಂಡ್ ದೇಶದ ಪ್ರವಾಸಿ ಅಂತೋನಿಯಾ ಚೆಟ್ವಿಂಡ್ ಅವರು ಹೆಮ್ಮೆಯಿಂದ ಹೇಳುವ ಮಾತು. ಅವರು ಇಲ್ಲಿಯ ಕಾಯಂ ಅತಿಥಿ. 1976ರಿಂದಲೂ ಅವರು ಗೋಕರ್ಣಕ್ಕೆ ಭೇಟಿ ನೀಡುತ್ತಿದ್ದು, ಈಚೆಗಷ್ಟೆ 50ನೇ ಬಾರಿಗೆ ಇಲ್ಲಿನ ಕಡಲತೀರಗಳಿಗೆ ಭೇಟಿ ನೀಡಿದ್ದರು.

ಗೋವಾ ರಾಜ್ಯದ ಆರ್ಥಿಕತೆ ನಿಂತಿರುವುದು ಪ್ರವಾಸೋದ್ಯಮದ ಮೇಲೆಯೇ. ಆದರೆ, ಮದ್ಯ ಹೊರತುಪಡಿಸಿದರೆ ಉಳಿದೆಲ್ಲವೂ ಅಲ್ಲಿ ದುಬಾರಿ. ಪ್ರವಾಸಿಗರ ಅಗತ್ಯಕ್ಕೆ ತಕ್ಕಂತೆ ಸೌಲಭ್ಯಗಳನ್ನು ಕಲ್ಪಿಸಿ, ಇಲ್ಲಿಯೂ ಪ್ರವಾಸಿಸ್ನೇಹಿ ವಾತಾವರಣ ನಿರ್ಮಿಸಿದರೆ ಆ ಪ್ರವಾಸಿಗರನ್ನು ಇತ್ತ ಸೆಳೆಯಬಹುದು ಎಂಬುದು ಈ ಉದ್ಯಮ ವಲಯದವರ ಅಭಿಪ್ರಾಯ.

ಪೂರಕ ಮಾಹಿತಿ: ಗಣಪತಿ ಹೆಗಡೆ, ಪ್ರವೀಣ್ ಕುಮಾರ್ ಪಿ.ವಿ.



ಮಂಗಳೂರಿನ ಪಣಂಬೂರು ಕಡಲತೀರದಲ್ಲಿ ಪ್ರವಾಸಿಗರು — ಪ್ರಜಾವಾಣಿ ಚಿತ್ರ

ಶರಾವತಿ ನದಿ ದಂಡೆಗೆ ಪ್ರವಾಸಿಗರ ದಂಡು

ಹೊನ್ನಾವರ ಭಾಗದಲ್ಲಿ ದೋಣಿ ವಿಹಾರ, ಪ್ರವಾಸಿ ಚಟುವಟಿಕೆಗಳು ಚಿಗಿತುಕೊಂಡಿವೆ. ಮಹಾನಗರಗಳಲ್ಲಿದ್ದವರು ಊರಿಗೆ ಮರಳಿದ ಬಳಿಕ ಇಲ್ಲಿ ಪ್ರವಾಸಿಗರನ್ನು ಸೆಳೆಯುವ ಉದ್ಯಮ ಆರಂಭಿಸಿದರು. ಕೇವಲ ನಾಲ್ಕೈದು ವರ್ಷದಲ್ಲೇ ಇಲ್ಲಿನ ದೋಣಿ ವಿಹಾರ ಚಟುವಟಿಕೆ ಪ್ರಸಿದ್ಧಿಗೆ ಬಂದಿದೆ. ಪ್ರಿ ವೆಡ್ಡಿಂಗ್ ಫೋಟೊಶೂಟ್, ದೋಣಿ ವಿಹಾರಕ್ಕೆ ಶರಾವತಿ ನದಿ ದಂಡೆಗೆ ಪ್ರವಾಸಿಗರ ದಂಡು ಹರಿದು ಬರುತ್ತಿದೆ. ಹೊನ್ನಾವರ ಪಟ್ಟಣ ವ್ಯಾಪ್ತಿಯಿಂದ ಆರಂಭಿಸಿ ಕೆಳಗಿನೂರು, ತನ್ಮಡಗಿವರೆಗೆ ನದಿಯ ಇಕ್ಕೆಲದಲ್ಲಿ ಸುಮಾರು 15 ಕಿ.ಮೀ ದೂರದವರೆಗೂ ಈ ಚಟುವಟಿಕೆ ಹೆಚ್ಚಿದೆ. ನದಿ ದಡದಲ್ಲೇ ನೂರಾರು ಹೋಮ್ ಸ್ಟೇಗಳು ನಿರ್ಮಾಣಗೊಂಡಿದೆ. ಇದರಿಂದಾಗಿ ಸಣ್ಣ ಹೋಟೆಲ್‌ಗಳು, ಅಂಗಡಿಗಳಿಗೂ ವಹಿವಾಟು ಹೆಚ್ಚುತ್ತಿದೆ.

ಎಂ.ಎನ್. ಗುರುಪ್ರಸಾದ್, ಹೊನ್ನಾವರ

ಗೋಕರ್ಣದಲ್ಲಿ ಮೂಲಸೌಲಭ್ಯದ್ದೇ ಸಮಸ್ಯೆ

ಗೋಕರ್ಣಕ್ಕೆ ನಿರೀಕ್ಷೆಗೂ ಮೀರಿ ಪ್ರವಾಸಿಗರು ಬರುತ್ತಿದ್ದಾರೆ. ಕಡಲ ತೀರಗಳಲ್ಲಿ, ಒಳ ಪ್ರದೇಶಗಳಲ್ಲಿ ರೆಸಾರ್ಟ್, ಹೋಮ್ ಸ್ಟೇಗಳು ಅಭಿವೃದ್ಧಿಯಾಗಿದೆ. ಇಲ್ಲಿನ ಶೇ 90ರಷ್ಟು ಜನರು ಪ್ರವಾಸೋದ್ಯಮವನ್ನೇ ಅವಲಂಬಿಸಿದ್ದಾರೆ. ಆದರೆ, ಅದಕ್ಕೆ ತಕ್ಕಂತೆ ಮೂಲಸೌಕರ್ಯಗಳು ಅಭಿವೃದ್ಧಿಯಾಗಿಲ್ಲ. ಇದರಿಂದ ವಾಹನ ದಟ್ಟಣೆ ಸಮಸ್ಯೆ ಹೆಚ್ಚಿರುವ ಜೊತೆಗೆ ಒಳಚರಂಡಿ ವ್ಯವಸ್ಥೆ ಇಲ್ಲದೆ ಸ್ವಚ್ಛತೆಗೆ ತೊಡಕು ಉಂಟಾಗಿದೆ.

ನಾಗಕುಮಾರ ಗೋಪಿ, ರೆಸಾರ್ಟ್ ಮಾಲೀಕ

ಗ್ರಾ.ಪಂ.ಗಳಿಗೆ ಅಧಿಕಾರ ನೀಡಿ

ಕರಾವಳಿ ಭಾಗದಲ್ಲಿ ರೆಸಾರ್ಟ್, ಹೋಮ್ ಸ್ಟೇಗಳಿಂದ ಪ್ರವಾಸೋದ್ಯಮ ಚಟುವಟಿಕೆ ಗರಿಗೆದರಿದೆ. ಆದರೆ, ಇನ್ನೂ ಅವುಗಳಿಗೆ ಪರವಾನಗಿ ನೀಡುವ ಕೆಲಸ ಪ್ರವಾಸೋದ್ಯಮ ಇಲಾಖೆಯಿಂದ ಸಮರ್ಪಕವಾಗಿ ನಡೆಯುತ್ತಿಲ್ಲ. ಸ್ಥಳೀಯ ಗ್ರಾಮ ಪಂಚಾಯಿತಿಗಳಿಗೆ ಈ ಅಧಿಕಾರ ನೀಡಿದರೆ ಉದ್ಯಮಿಗಳಿಗೆ ಅನುಕೂಲವಾಗುತ್ತದೆ

ಜಾರ್ಜ್ ಫರ್ನಾಂಡಿಸ್, ಉದ್ಯಮಿ

11 ಬೀಚ್‌ಗಳಿಗೆ ಬ್ಲ್ಯೂ ಫ್ಲ್ಯಾಗ್ ಮಾನ್ಯತೆ

ದಕ್ಷಿಣ ಕನ್ನಡ ಜಿಲ್ಲೆಯ ಸೋಮೇಶ್ವರ, ಉಳ್ಳಾಲ, ಸಸಿಹಿತ್ಲು. ಉಡುಪಿ ಜಿಲ್ಲೆಯ ಅಸರೆ,ಬೀಚ್ ಕೋಡಿ, ಪಡುಕೆರೆ, ಶಿರೂರು. ಉತ್ತರ ಕನ್ನಡದ ಬೈಲೂರು, ಅಪ್ಸರಕೊಂಡ, ರವೀಂದ್ರನಾಥ ಟ್ಯಾಗೋರ್ ಬೀಚ್‌ಗಳು ಬ್ಲ್ಯೂ ಫ್ಲ್ಯಾಗ್ ಮಾನ್ಯತೆ ಹೊಂದಿವೆ.

ಜಾರಿಯಾಗಲಿರುವ ಯೋಜನೆಗಳು

ಪ್ರವಾಸೋದ್ಯಮ ತಾಣಗಳಾಗಿ ದ್ವೀಪಗಳು

ಕರ್ನಾಟಕ ಜಲಸಾರಿಗೆ ಮಂಡಳಿಯು ಕರಾವಳಿಯಲ್ಲಿ ಪ್ರವಾಸೋದ್ಯಮ ಅವೃದ್ಧಿಗೆ ₹4,366.24 ಕೋಟಿ ಮೊತ್ತದ ಯೋಜನೆ ಸಿದ್ಧಪಡಿಸಿದೆ. ರಾಜ್ಯದ ಕರಾವಳಿಯ 12 ದ್ವೀಪಗಳನ್ನು ₹313.5 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಮುಂದಾಗಿದೆ. ಉತ್ತರ ಕನ್ನಡ ಜಿಲ್ಲೆಯ ಏಳು ಹಾಗೂ ಉಡುಪಿ ಜಿಲ್ಲೆಯ ದರಿಯ ಬಹದ್ದೂರ್‌ಗಡ, ಮಲ್ಪೆ, ಮಲ್ಪೆ ಸಮೀಪದ ಅಯಬಾ ಸೇರಿದಂತೆ ಐದು ದ್ವೀಪಗಳು ಇದರಲ್ಲಿ ಸೇರಿವೆ.

ಮಂಗಳೂರಿನಲ್ಲಿ ‘ಜಲ ಮೆಟ್ರೊ’

ಮಂಗಳೂರಿನಲ್ಲಿ ಜಲ ಮೆಟ್ರೊ (ವಾಟರ್ ಮೆಟ್ರೊ) ಜಲಸಾರಿಗೆ ಮಂಡಳಿಯ ಇನ್ನೊಂದು ಮಹತ್ವಾಕಾಂಕ್ಷಿ ಯೋಜನೆ. ಇದಕ್ಕಾಗಿ ₹180 ಕೋಟಿ ಮೊತ್ತದ ಯೋಜನೆ ಸಿದ್ಧಪಡಿಸಿದೆ. ನೇತ್ರಾವತಿ ಮತ್ತು ಫಲ್ಗುಣಿ ನದಿಗಳ ಅಳಿವೆ ಪ್ರದೇಶಗಳಲ್ಲಿ ಜಾರಿಯಾಗುವ ಈ ಯೋಜನೆಗೆ ಕಡಲ ನಗರಿ ಮಂಗಳೂರಿಗೆ ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಬಜಾಲ್, ಸೋಮೇಶ್ವರ ದೇವಸ್ಥಾನ, ಜಪ್ಪಿನ ಮೊಗರು, ಉಳ್ಳಾಲ, ಬೀಚ್ ವೀವ್, ಸಿಎಂಎಫ್‌ಆರ್‌ಐ, ಬೆಂಗರೆ, ಹಳೆಬಂದರು, ಸುಲ್ತಾನ್ ಬತ್ತೇರಿ, ತಣ್ಣೀರುಬಾವಿ, ಸುಲ್ತಾನ್ ಬತ್ತೇರಿ–1, ಎನ್‌ಎಂಪಿಎ, ಕೂಳೂರು, ಕೂಳೂರು ಸೇತುವೆ, ಬೈಕಂಪಾಡಿ ಕೈಗಾರಿಕಾ ಪ್ರದೇಶ, ಕುಂಜತ್ತಬೈಲ್, ಮರವೂರು ಸೇತುವೆ ವರೆಗೆ ಜಲ ಮೆಟ್ರೊದಲ್ಲಿ ಸಂಚಾರ ಸಾಧ್ಯವಾಗಲಿದೆ. ಈ ಹಾದಿಯಲ್ಲಿ ಈಗಾಗಲೇ ಮೂರು ಫೆರಿ ಸೌಕರ್ಯಗಳಿದ್ದು, ನಿತ್ಯ 7 ಸಾವಿರದಿಂದ 8 ಸಾವಿರ ಪ್ರಯಾಣಿಕರು ಇವುಗಳನ್ನು ಬಳಸುತ್ತಿದ್ದಾರೆ.

ಕ್ರೂಸ್ ಮತ್ತು ಪ್ರವಾಸೋದ್ಯಮ ಬಂದರು

ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ–ಸೋಮೇಶ್ವರದಲ್ಲಿ ಅಂತರರಾಷ್ಟ್ರೀಯ ಐಷಾರಾಮಿ ಹಡಗು (ಕ್ರೂಸ್) ಟರ್ಮಿನಲ್ ಅಭಿವೃದ್ಧಿಗೆ ₹3,400 ಕೋಟಿ ಯೋಜನೆಯ ರೂಪರೇಷೆ ಸಿದ್ಧವಾಗಿದೆ. ರಾಷ್ಟ್ರೀಯ ಹೆದ್ದಾರಿಯಿಂದ 600 ಮೀಟರ್ ದೂರದಲ್ಲಿರುವ ಈ ತಾಣವು ಕ್ರೂಸ್ ಟರ್ಮಿನಲ್‌ಗೆ ಹೇಳಿ ಮಾಡಿಸಿದಂತಿದೆ. ಈ ಯೋಜನೆಯ ಕಾರ್ಯಸಾಧ್ಯತಾ ಪೂರ್ವ ವರದಿ ಈಗಾಗಲೇ ತಯಾರಾಗಿದೆ. ಸಾಗರ ಮಾಲಾ ಯೋಜನೆಯಡಿಯೂ ಇದಕ್ಕೆ ನೆರವು ಪಡೆಯುವ ಪ್ರಯತ್ನ ನಡೆದಿದೆ. ಇದರಲ್ಲಿ ಒಟ್ಟು 6 ಹಡಗುಕಟ್ಟೆಗಳು (ಬರ್ತ್) ಇರಲಿವೆ.

ಹೊನ್ನಾವರ ಹಳೆ ಬಂದರಿನ ಪೂರ್ವ ದಿಕ್ಕಿನಲ್ಲಿ ಶರಾವತಿ ನದಿಯಲ್ಲಿ ಒಳಾಂಗಣ ಜಲ ಸಾರಿಗೆ ಪ್ರವಾಸೋದ್ಯಮ ಬಂದರು ಅಭಿವೃದ್ಧಿಗೆ ₹48 ಕೋಟಿ ಯೋಜನೆ ಸಜ್ಜಾಗಿದೆ. ಹೊನ್ನಾವರದಿಂದ ಗೇರುಸೊಪ್ಪೆ ಜಲಾಶಯದ ಮೂಲಕ ಜೋಗದವರೆಗೆ ಕಾಡ ನಡುವಿನ ಹಾದಿಯಲ್ಲಿ ನದಿ ಸೆರಗಿನ ಮನೋಹರ ದೃಶ್ಯಗಳನ್ನು ಆಸ್ವಾದಿಸುವ ಅವಕಾಶವನ್ನು ಇದು ಒದಗಿಸಲಿದೆ.

ಮಂಗಳೂರಿನಿಂದ ಮರವಂತೆಗೆ ಪ್ಯಾಸೆಂಜರ್ ಫೆರಿ ಸರ್ವಿಸ್ ಆರಂಭಿಸುವ ₹37.79 ಕೋಟಿಯ ಯೋಜನೆ ಸಿದ್ಧವಾಗಿದೆ. ಹಳೆ ಮಂಗಳೂರು ಬಂದರು, ಹೆಜಮಾಡಿ, ಮಲ್ಪೆ, ಕೋಟ ಹಾಗೂ ಮರವಂತೆಯಲ್ಲಿ ನಿಲುಗಡೆ ಒದಗಿಸುವ ಈ ಯೋಜನೆ ಸಾಗರದಲ್ಲಿ ಸರಕು ಸಾಗಣೆಗೂ ಅನುಕೂಲ ಕಲ್ಪಿಸಲಿದೆ. ಕರಾವಳಿಯ ಪ್ರವಾಸಿ ತಾಣಗಳ ನಡುವೆ ಸಂಪರ್ಕ ಕೊಂಡಿಯಾಗಲಿವೆ.

ಉಡುಪಿ ಜಿಲ್ಲೆಯ ಕೋಟ ಪಡುಕೆರೆಯಲ್ಲಿ ₹350 ಕೋಟಿಯಲ್ಲಿ ಸಮಗ್ರ ಕರಾವಳಿ ಪ್ರವಾಸೋದ್ಯಮ ಮತ್ತು ಸಾಗರೋತ್ತರ ಅಭಿವೃದ್ಧಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಕಾಳಿ ನದಿ ದಂಡೆಯಲ್ಲಿ ಮರಿನಾ ಅಭಿವೃದ್ಧಿಗೆ ₹14 ಕೋಟಿ ಯೋಜನೆ ರೂಪಿಸಲಾಗಿದೆ.

ಕರ್ನಾಟಕ ಮೆರಿಟೈಮ್ ಮ್ಯೂಸಿಯಂ ಸ್ಥಾಪಿಸುವ ₹22.95 ಕೋಟಿ ಮೊತ್ತದ ಯೋಜನೆ ಸಜ್ಜಾಗಿದೆ.

ಸಿಬ್ಬಂದಿ ನೇಮಕ ಆಯೋಗದ ಅಧಿಕಾರ

ಒಂದನೇ ಪುಟದಿಂದ...

ಟಿಎಂಸಿ ಪರ ಹಾಜರಾಗಿ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, ‘ಏಪ್ರಿಲ್ 13ರಂದು ಸುತ್ತೋಲೆ ಹೊರಡಿಸಲಾಗಿತ್ತು. ಏಪ್ರಿಲ್ 29ರಂದು ನಮ್ಮ ಗಮನಕ್ಕೆ ಬಂದಿದೆ. ಕೇಂದ್ರ ಸರ್ಕಾರಿ ನೌಕರರನ್ನು ನೇಮಿಸುವ ಕುರಿತು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಏಪ್ರಿಲ್ 29ರಂದು ತಿಳಿಸಲಾಗಿದೆ. ಕೇಂದ್ರದ ಪ್ರತಿನಿಧಿಗಳಿದ್ದರೂ ಮತ ಎಣಿಕೆಯಲ್ಲಿ ಅಕ್ರಮ ನಡೆಯುವ ಸಾಧ್ಯತೆಯಿದೆ ಎಂದು ಆಯೋಗವು ತಿಳಿಸಿದೆ. ಮತ ಎಣಿಕೆಯ ಪ್ರತಿ ಟೇಬಲ್‌ಗೂ ಕೇಂದ್ರದಿಂದ ನೇಮಕಾತಿ ಮಾಡಿದ ಬಳಿಕ ರಾಜ್ಯದ ಪ್ರತಿನಿಧಿ ನೇಮಿಸುವ ಕುರಿತು ಸುತ್ತೋಲೆಯಲ್ಲಿ ಯಾವುದೇ ಮಾಹಿತಿ ಇಲ್ಲ ಎಂದು ನ್ಯಾಯಾಲಯದ ಗಮನಸೆಳೆದರು.

ಮತ ಎಣಿಕೆಯಲ್ಲಿ ಅಕ್ರಮ ನಡೆಯುವ ಸಂಭವವಿದೆ ಎಂದು ಮುಖ್ಯ ಚುನಾವಣಾಧಿಕಾರಿ ರವಾನಿಸಿರುವ ಸಂದೇಶದ ಕುರಿತು ಪ್ರಶ್ನಿಸಿದ ಅವರು, ‘ಆಯೋಗವು ನೇರವಾಗಿ ರಾಜ್ಯದ ಕಡೆಗೆ ಬೆರಳು ತೋರಿಸುತ್ತಿದೆ. ಈ ರೀತಿ ಹೇಳಬೇಕಾದರೆ ದತ್ತಾಂಶಗಳು ಇರಬೇಕು. ಇದಕ್ಕೆ ಪೂರಕವಾದ ದಾಖಲೆಗಳು ಎಲ್ಲಿವೆ? ಕೇಂದ್ರದ ಪ್ರತಿನಿಧಿಯನ್ನು ನೇಮಿಸುವ ಕುರಿತು ನಮ್ಮ ಗಮನಕ್ಕೆ ಏಕೆ ತಂದಿಲ್ಲ’ ಎಂದು ಕೇಳಿದರು.

ಸಿಬಲ್ ವಾದಕ್ಕೆ ಉತ್ತರಿಸಿದ ನ್ಯಾಯಪೀಠ, ‘ಮತ ಎಣಿಕೆಯ ಮೇಲ್ವಿಚಾರಕರು, ಎಣಿಕೆ ಸಹಾಯಕರ ಕೆಲಸಗಳಿಗೆ ಆಯೋಗವು ಕೇಂದ್ರ ಸರ್ಕಾರಿ ನೌಕರರನ್ನು ನಿಯೋಜಿಸಿದರೂ, ಅದನ್ನು ತಪ್ಪು ಎಂದು ನ್ಯಾಯಾಲಯವು ಪರಿಗಣಿಸುವುದಿಲ್ಲ’ ಎಂದು ಸ್ಪಷ್ಟಪಡಿಸಿತು.

‘ಆಯೋಗಕ್ಕೆ ಆಯ್ಕೆಗಳು ಮುಕ್ತವಾಗಿವೆ. ಎಣಿಕೆಯ ಮೇಲ್ವಿಚಾರಕರು, ಎಣಿಕೆ ಸಹಾಯಕರ ಕೆಲಸಗಳಿಗೆ ಕೇಂದ್ರ ಅಥವಾ ರಾಜ್ಯದ ನೌಕರರನ್ನು ನೇಮಿಸಬಹುದು. ಅಧಿಸೂಚನೆಯು ನಿಯಮಗಳಿಗೆ ವಿರುದ್ಧವಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಇದರಲ್ಲಿ ತಪ್ಪು ಕಂಡುಬರುತ್ತಿಲ್ಲ. ಕೇಂದ್ರ ಅಥವಾ ರಾಜ್ಯ ಸರ್ಕಾರಿ ನೌಕರರನ್ನು ನೇಮಿಸಬಹುದು ಎಂದು ನಿಯಮಗಳೇ ಹೇಳುತ್ತವೆ’ ಎಂದು ಜಾಯ್‌ಮಾಲ್ಯಾ ಬಾಗ್ಚಿ ತಿಳಿಸಿದರು.

294 ಸದಸ್ಯರನ್ನು ಹೊಂದಿರುವ ಪಶ್ಚಿಮ ಬಂಗಾಳ ವಿಧಾನಸಭೆಗೆ ಏಪ್ರಿಲ್ 23 ಹಾಗೂ 29ರಂದು ಮತದಾನ ನಡೆದಿದ್ದು, ಮೇ 4ರಂದು ಫಲಿತಾಂಶ ಪ್ರಕಟಗೊಳ್ಳಲಿದೆ.

ಟಿಎಂಸಿ ಆಕ್ಷೇಪವೇನು?: ಎಣಿಕೆಯ ಮೇಲ್ವಿಚಾರಕರು, ಎಣಿಕೆ ಸಹಾಯಕರ ಕೆಲಸಗಳಿಗೆ ರಾಜ್ಯ ಸರ್ಕಾರಿ ನೌಕರರ ಬದಲಾಗಿ ಕೇಂದ್ರ ಸರ್ಕಾರ ಹಾಗೂ ಸರ್ಕಾರಿ ಸ್ವಾಮ್ಯದ ಉದ್ದಿಮೆ (ಪಿಎಸ್‌ಯು) ನೌಕರರನ್ನು ನಿಯೋಜಿಸುವ ಚುನಾವಣಾ ಆಯೋಗದ ಸುತ್ತೋಲೆಯನ್ನು ಟಿಎಂಸಿ ಪಕ್ಷ ಕಲ್ಕತ್ತ ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

ನೌಕರರನ್ನು ನಿಯೋಜಿಸುವ ಆಯೋಗದ ನಿರ್ಧಾರದಲ್ಲಿ ಯಾವುದೇ ಅಕ್ರಮವಿಲ್ಲ ಎಂದು ತಿಳಿಸಿದ್ದ ಕಲ್ಕತ್ತ ಹೈಕೋರ್ಟ್ ಅರ್ಜಿ ವಜಾಗೊಳಿಸಿತ್ತು.

ಬಿಜೆಪಿ ಟೀಕೆ: ಬಿಜೆಪಿ ನಾಯಕ ಅಮಿತ್ ಮಾಳವೀಯ, ‘ಆಯೋಗದ ನಿರ್ಧಾರದಲ್ಲಿ ಮಧ್ಯ ಪ್ರವೇಶಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದ್ದು, ಟಿಎಂಸಿ ಪಕ್ಷಕ್ಕೆ ಮತ್ತೊಂದು ಹಿನ್ನಡೆಗಿದೆ. ನ್ಯಾಯಾಂಗದ ಹೋರಾಟದಲ್ಲಿ ಮಮತಾ ಅವರಿಗೆ ಮತ್ತೊಮ್ಮೆ ಹಿನ್ನಡೆಯಾಗಿದೆ’ ಎಂದು ತಿಳಿಸಿದ್ದಾರೆ.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 3-5-2001

● 30 ಲಕ್ಷ ಟನ್ ಅಕ್ಕಿ ರಫ್ತಿಗೆ ನಿರ್ಧಾರ

ನವದೆಹಲಿ, ಮೇ 2– ಮೂವತ್ತು ಲಕ್ಷ ಟನ್‌ಗಳಷ್ಟು ಅಕ್ಕಿ ರಫ್ತು ಮಾಡಲು ಕೇಂದ್ರ ಸರ್ಕಾರ ಇಂದು ನಿರ್ಧರಿಸಿದೆ.

ಪ್ರಸಕ್ತ ಸಾಲಿನಲ್ಲಿ ಭಾರತೀಯ ಆಹಾರ ನಿಗಮದ ಬಳಿ ಇರುವ ಹೆಚ್ಚುವರಿ ಸಂಗ್ರಹವನ್ನು ತಕ್ಷಣವೇ ಕಡಿಮೆ ಮಾಡಲು ಕೇಂದ್ರ ಸಚಿವ ಸಂಪುಟ ನಿರ್ಧರಿಸಿದೆ.

ಅಂತರರಾಷ್ಟ್ರೀಯ ಬೆಲೆಯೂ ಸೇರಿದಂತೆ ಹಲವಾರು ಸಂಗತಿಗಳನ್ನು ಗಣನೆಗೆ ತೆಗೆದುಕೊಂಡು ಅಕ್ಕಿಯ ರಫ್ತು ಬೆಲೆ ನಿರ್ಧರಿಸಲಾಗುವುದು ಎಂದು ಸಚಿವ ಮಹಾರಾಜನ್ ನುಡಿದರು.

75 ವರ್ಷಗಳ ಹಿಂದೆ

ಗುರುವಾರ, 3-5-1951

● ಚತುರ್ಮಹಾರಾಷ್ಟ್ರಗಳ ಸಭೆ ಸೇರಿಸಲು ಯತ್ನ

ಪ್ಯಾರಿಸ್, ಮೇ 2– ಅಂತರರಾಷ್ಟ್ರೀಯ ಪ್ರಕ್ಷುಬ್ಧತೆಯನ್ನು ಕೊನೆಗಾಣಿಸಲು ಚತುರ್ಮಹಾರಾಷ್ಟ್ರಗಳ ಸಮ್ಮೇಳನವನ್ನು ಸೇರಿಸಲು, ಪಶ್ಚಿಮ ರಾಷ್ಟ್ರಗಳು ರಷ್ಯಾಕ್ಕೆ ಇಂದು ಅಂತಿಮ ಸಲಹೆಯನ್ನು ನೀಡಿವೆ ಎಂದು ಹೇಳಲಾಗಿದೆ.

ನಾಲ್ಕು ವಿದೇಶಾಂಗ ಮಂತ್ರಿಗಳ ಪ್ರತಿನಿಧಿಗಳು ಒಂಬತ್ತು ವಾರಗಳ ಕಾಲ ಒಪ್ಪಂದಕ್ಕೆ ಬರಲು ಮಾತುಕತೆ ನಡೆಸಿದರೂ, ಪ್ರಯತ್ನವೆಲ್ಲಾ ವಿಫಲವಾಗಿದೆ. ಕೊನೆಯದಾಗಿ ಅಮೆರಿಕ ಪ್ರತಿನಿಧಿ ಡಾ. ಜೆಸಪ್, ರಷ್ಯಾದ ಗ್ರೊಮಿಕೋರಿಗೆ ಹೊಸ ಸಲಹೆಗಳನ್ನು ನೀಡಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

03 ಮೇ 2026 ಭಾನುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು, ತಿಥಿ: ವೈಶಾಖ ಕೃಷ್ಣ ದ್ವಿತೀಯ ಗಂ. 27-02, **ನಕ್ಷತ್ರ:** ವಿಶಾಖ ಗಂ. 7-10, **ಯೋಗ:** ವರೀಯಾನ್ ಗಂ. 22-28, **ಕರಣ:** ತೈತಿಲ 13-55, ಮೇಷ ಮಾಸದ 20 ನೇ ದಿನ. **ಮಳೆ ನಕ್ಷತ್ರ:** ಭರಣಿ 2 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 - 06-00, **ಸೂರ್ಯೋದಯ:** 06-12, **ಸೂರ್ಯಾಸ್ತ:** 06-43, **ಮುಸ್ಲಿಂ ದಿನಾಂಕ:** 15 ಜುಲ್ಕಾದಾ, **ಅದೃಷ್ಟ ಸಂಖ್ಯೆ:** 7, 2.

ಮೇಷ: ರಕ್ತ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವವರು ಚೇತರಿಕೆಯನ್ನು ಹೊಂದುವಿರಿ. ನಿರೀಕ್ಷೆಗೆ ತಕ್ಕಂತೆ ಶುಭ ಕಾಲ ಕೂಡಿಬರಲಿದೆ. ನಿಮ್ಮ ಸಮಸ್ಯೆಗಳಿಗೆ ಧಾರ್ಮಿಕ ಮಾರ್ಗದಲ್ಲಿ ನಡೆದರೆ ಉತ್ತರ ಸಿಗುವುದು.

ವೃಷಭ: ಪ್ರದರ್ಶನ ಮಾರಾಟ ಮಳಿಗೆಯವರಿಗೆ ಲೋಹದ ಉತ್ಪನ್ನ ಮಾರಾಟಗಳಿಂದ ನಿರೀಕ್ಷೆಗೂ ಮೀರಿದ ಲಾಭವಿದೆ. ಸಾಕುಪ್ರಾಣಿಗಳಿಂದ ಸಣ್ಣ-ಪುಟ್ಟ ತೊಂದರೆಗಳಿವೆ. ಕೆಲಸಗಳನ್ನು ಪೂರ್ಣಗೊಳಿಸುವ ಸಂಕಲ್ಪವಿರಲಿ.

ಮಿಥುನ: ಮನರಂಜನೆಯ ವಿಷಯದಲ್ಲಿ ವಿದೇಶಿ ವಸ್ತುಗಳ ಖರೀದಿಗಾಗಿ ಧನ ವ್ಯಯವಾಗುವುದು. ಸಂತೋಷ ಕೂಟದಲ್ಲಿ ಭಾಗವಹಿಸುವಿರಿ. ರಂಗಕರ್ಮಿಗಳಿಗೆ ಹೆಚ್ಚಿನ ಜನಸಂಪರ್ಕವಾಗಲಿದೆ.

ಕರ್ಕಾಟಕ: ಅನಿರೀಕ್ಷಿತ ಸಂಗತಿಗಳು ಜರುಗಿ ಕೆಲಸಗಳು ಪೂರ್ಣಗೊಳ್ಳುವುದು ವಿಳಂಬವಾಗುವುದು. ಕೆಲಸ ಕಾರ್ಯಗಳನ್ನು ಮುಂದೂಡುವ ವಿಚಾರ ಸರಿಯಲ್ಲ. ಮನೆಯಲ್ಲಿ ಎಳ್ಳೆಣ್ಣೆ ದೀಪ ಹಚ್ಚುವುದರಿಂದ ಪಾಪ ಪರಿಹಾರ.

ಸಿಂಹ: ಕಫದ ಅಥವಾ ಉಸಿರಾಟದ ಸಮಸ್ಯೆ ಕಂಡುಬಂದಲ್ಲಿ ನಿರ್ಲಕ್ಷಿಸುವುದು ಸರಿಯಲ್ಲ. ಮುಗ್ಧ ಜನರಿಗೆ ಸಹಾಯ ಮಾಡಿ. ಮನೆಯಲ್ಲಿ ಉದ್ವೇಗದ ವಾತಾವರಣ ಎದುರಾಗಬಹುದು.

ಕನ್ಯಾ: ಇನ್ನೊಬ್ಬರನ್ನು ಅವಹೇಳನ ಮಾಡುವ ಮನಃಸ್ಥಿತಿಯನ್ನು ಬದಲಾಯಿಸಿಕೊಳ್ಳುವುದು ನಿಮ್ಮ ವ್ಯಕ್ತಿತ್ವಕ್ಕೆ ಶೋಭೆ ತರಲಿದೆ. ಹಿರಿಯರ ಕೋರಿಕೆಯಂತೆ ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸಿ.

ತುಲಾ: ವಾದ ಪ್ರತಿವಾದಗಳಿಂದ ಸ್ನೇಹವನ್ನು ಕಳೆದುಕೊಳ್ಳುವಂತಾಗಹುದು. ಸ್ವಚ್ಛತಾ ಕಾರ್ಯಗಳಲ್ಲಿ ಪಾಲ್ಗೊಂಡ ಕಾರಣ ಅಲರ್ಜಿ ಉಂಟಾಗಬಹುದು. ದುರ್ಘಟನೆಯ ನೋವುಗಳು ಕಾಡುವುದು.

ವೃಶ್ಚಿಕ: ವ್ಯವಹಾರದ ಒತ್ತಡವಿದ್ದರೂ ರೀತಿ-ನೀತಿಗಳನ್ನು ಅನುಸರಿಸಿದರೆ ಸಫಲರಾಗುವಿರಿ. ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯ ಹೊಂದುವಿರಿ. ಭೂಮಿಯ ಖರೀದಿಗೆ ಧನ ಸಂಗ್ರಹವಾಗುವುದು.

ಧನು: ಸಂಪೂರ್ಣ ಮನಸ್ಸಿಟ್ಟು ಕೆಲಸ ಕಾರ್ಯಗಳನ್ನು ಮಾಡಿದ್ದಲ್ಲಿ ವ್ಯವಹಾರದಲ್ಲಿ ಹೆಚ್ಚಿನ ಲಾಭವನ್ನು ಗಳಿಸುವಿರಿ, ವಿದೇಶಿ ವ್ಯವಹಾರಗಳು ಲಭಿಸಬಹುದು. ವಿದ್ಯಾಭ್ಯಾಸದಲ್ಲಿ ಅನೇಕ ತೊಂದರೆಯನ್ನು ಎದುರಿಸಬೇಕಾಗುವುದು.

ಮಕರ: ತಂದೆ ತಾಯಿಯ ಆರೋಗ್ಯವು ಉತ್ತಮವಾಗಿ ಸುಧಾರಿಸುವುದರಿಂದ ಮನೆಯಲ್ಲಿ ನೆಮ್ಮದಿಯ ವಾತಾವರಣ ಮೂಡಲಿದೆ. ಕಾಲಕ್ಕೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುವುದು ಬಾಳಿನಲ್ಲಿ ಅನಿವಾರ್ಯವಾಗುತ್ತದೆ.

ಕುಂಭ: ಶೀಘ್ರವಾದ ಹಾಗೂ ಕಾಲಕ್ಕೆ ಸರಿಯಾದ ನಿರ್ಧಾರ ತೆಗೆದುಕೊಳ್ಳುವುದು ಹಣಕಾಸಿನ ಲಾಭವನ್ನು ತರಲಿದೆ. ಮಂಗಳ ಕಾರ್ಯದ ಸಲುವಾಗಿ ಬಂಗಾರ ಖರೀದಿಸುವ ಬಗ್ಗೆ ಮನೆಯಲ್ಲಿ ಮಾತುಕತೆ ನಡೆಯುವುದು.

ಮೀನ: ಅನಾವಶ್ಯಕ ಚಿಂತೆ, ಖರ್ಚು ಹಾಗೂ ಹಾಳು ವ್ಯಸನಗಳು ಈ ದಿನ ನಿಮ್ಮನ್ನು ಆವರಿಸಿಕೊಳ್ಳಬಹುದು, ಎಚ್ಚರದಿಂದಿರಿ. ಸಾಯಂಕಾಲದ ವೇಳೆ ಧನ ಲಾಭವಾಗುವ ಯೋಗವಿದೆ.

ಪದಬಂಧ 6390

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಕೊನೆಗೆ ಪದವಿಟ್ಟರೆ ಮೋಕ್ಷವೇ ಸಿಗುವುದು! (5)
6.ಕಟಕಟೆಯಲ್ಲಿದ್ದವನಿಗೆ ಸಿಕ್ಕಿರುವ ಕೃಪಾದೃಷ್ಟಿ (3)
7.ಗತಿಯಿಲ್ಲದ ಅಸಹಾಯಕ ಸ್ಥಿತಿ (3)
8.ಮಾಲೆ ನೀಡಿ ಪ್ರಾರಂಭಿಸಿದ ಸಲ್ಲಾಪ (3)
12.ಯೋಗವಿಟ್ಟುಕೊಂಡು ಮಾಡಿದ ಹಂಚಿಕೆ (4)
13.ಜೀವಿಸಿದರೂ ಶವದಂತೆ ಇರುವವನು (4)
14.ಒಳ್ಳೆಯ ದಿನವಿದು (3)
16.ಹುತ್ತ ಇಲ್ಲದೆ (3)
18.ಅದ್ಭುತವಾಗಿ ಕಾಣುತ್ತಿರುವ ನೀರ ಮೇಲಿನ ಗುಳ್ಳೆ (3)
20. ಬೆಂಗಳೂರಿನಲ್ಲಿರುವ ಭವ್ಯ ಸರ್ಕಾರಿ ಕಟ್ಟಡ (5)

ಮೇಲಿಂದ ಕೆಳಕ್ಕೆ
1.ಮಂಕರಿ ಹಿಡಿದಿರುವವನು ಹೆಡ್ಡ! (2)
2.ಹದಿನೈದು ದಿನಗಳ ಅವಧಿ (2)
3.ದ್ವೇಷ ಈ ರೀತಿ ಬಂದಿದೆ (3)
4.ನಾದಿನಿಯ ಇಂಪಾದ ಸ್ವರವಿದು (2)
5.ಪ್ರಗತಿಯಲ್ಲಿರುವ ನಕಲು ಕಾಣುತ್ತಿದೆಯೇ (2)
8.ಮಧುರವಾದ ಸ್ವಪ್ನ (5)
9.ಜೊತೆಯಲ್ಲಿ ಬಾಳುವುದು (5)
10.ಯಜ್ಞದಲ್ಲಿ ಅಗ್ನಿಗೆ ಅರ್ಪಿಸುವ ವಸ್ತುಗಳು (3)
11.ಬದಲಾವಣೆಯಲ್ಲಿ ಬಂದಿರುವ ತೊಂದರೆ (3)
15.ದಿನದೊಳಗೆ ಆಗಮಿಸಿದ ಮಂತ್ರಿ (3)
16.ಬಟ್ಟೆ ಇಲ್ಲದೆ (2)
17.ಈತ ಕವಿತೆ ರಚನೆಗಾರ (2)
18.ನವಗ್ರಹಗಳಲ್ಲಿ ಇದೊಂದು (2)
19.ದಡಿಯ ಹಿಡಿದಿರುವ ಕೋಲು (2)



6389ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮನ್ವಂತರ 3.ಪಿಳ್ಳಂಗೋವಿ 5.ತಿಲಕ 7.ಮಿತ್ರ 9.ವನಪಾಲಕ 11.ಸ್ಥಳಪುರಾಣ 13.ತರಿ 16.ಗಾಯಕ 18.ಸನ್ನಿಧಾನ 19.ಸರಿತ್ವತಿ

ಮೇಲಿಂದ ಕೆಳಕ್ಕೆ: 1.ಮರುಭೂಮಿ 2.ರತಿ 3.ಪಿಕ 4.ವಿದ್ವಾಂಸ 6.ಲಶುನ 8.ತ್ರಯಸ್ಥ 10.ಕಡಿತ 12.ರಾಧೇಯ 14.ರಿಯಾಯಿತಿ 15.ಆಯಾಸ 16.ಗಾನ 17.ಕಸ

ಸುಡೊಕು 6773

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7	6		4				9
5			6		9		4	2
2				7		3		
7	8						5	
			4	9		6		7
6		5		8			2	
		7	2				9	5
	5				7			
9				5		2		4

6772ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜೈಪುರಕ್ಕೆ 6,000 ತೆಂಗಿನ ಮ್ಯಾಟ್

ತೆಂಗಿನ ನಾರಿನಿಂದ ತಯಾರಿಸಿದ 'ಕಲ್ಪಕೃತಿ' ಬ್ರ್ಯಾಂಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ತಯಾರಿಸಿದ 'ಕಲ್ಪಕೃತಿ' ಬ್ರ್ಯಾಂಡ್ ಹೆಸರಿನ 6 ಸಾವಿರ ಡಚ್ ಮಾದರಿಯ ಮ್ಯಾಟ್‌ಗಳನ್ನು ಜೈಪುರಕ್ಕೆ ಸರಬರಾಜು ಮಾಡಲಾಯಿತು.

ವಿಧಾನಸೌಧದ ಮುಂಭಾಗ ಶನಿವಾರ ಸರಕು ತುಂಬಿದ ವಾಹನಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹಸಿರು ನಿಶಾನೆ ತೋರಿದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಕಾಶ್ ಮಾತನಾಡಿ, 'ತೆಂಗಿನ ನಾರಿನ ಉತ್ಪನ್ನಗಳಿಗೆ ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ, ಅಸ್ಸಾಂ, ಕೋಲ್ಕತ್ತ ಸೇರಿ ವಿವಿಧ ರಾಜ್ಯಗಳಿಂದ ಬೇಡಿಕೆ ಇದೆ. ಕಳೆದ ಬಾರಿ ದೆಹಲಿಗೆ ಸರಬರಾಜು ಮಾಡಲಾಗಿತ್ತು. ಇದೀಗ ಜೈಪುರಕ್ಕೆ ಪೂರೈಸಲಾಗಿದೆ. ಈ ಉತ್ಪನ್ನಗಳ ತಯಾರಿಕೆಯಿಂದ ಗ್ರಾಮೀಣ ಭಾಗದಲ್ಲಿ ಒಂದೂವರೆ ಸಾವಿರಕ್ಕೂ ಹೆಚ್ಚು ಮಂದಿಗೆ ಉದ್ಯೋಗ ಲಭಿಸಿದೆ' ಎಂದು ತಿಳಿಸಿದರು.

> **ತೆಂಗಿನ ನಾರಿನಿಂದ ತಯಾರಿಸಿದ ಪರಿಸರ ಸ್ನೇಹಿ ಉತ್ಪನ್ನಗಳಿಗೆ ಹೊರ ರಾಜ್ಯಗಳಲ್ಲಿ ವಿಶೇಷ ಬೇಡಿಕೆ ಇದೆ. ಅಂತರರಾಷ್ಟ್ರೀಯ ಮಟ್ಟಕ್ಕೂ ಉತ್ಪನ್ನಗಳ ಮಾರುಕಟ್ಟೆ ವಿಸ್ತರಿಸುವ ಗುರಿ ಇದೆ**
> **ನಟರಾಜ್ ಜಾನಕಿರಾಮ್,** ಅಧ್ಯಕ್ಷ, ತೆಂಗು ನಾರು ಅಭಿವೃದ್ಧಿ ನಿಗಮ

'ಕಲ್ಪಕೃತಿ ಹೆಸರಿನಲ್ಲಿ ನಿಗಮದ ಉತ್ಪನ್ನಗಳನ್ನು ಮಾರಾಟ ಮಾಡಲು ಜೈಪುರದಲ್ಲಿ ಅನಿಲ್ ಕುಮಾರ್ ಎಂಬುವರನ್ನು ಏಜೆಂಟರಾಗಿ ನಿಯೋಜಿಸಿದ್ದು, ಮೇ 9ರಂದು ಮಾರಾಟ ಮಳಿಗೆ ಉದ್ಘಾಟನೆಯಾಗಲಿದೆ. ಮಹಿಳೆಯರು ಕೈಯಿಂದಲೇ ಹೆಣೆದ ತೆಂಗಿನ ನಾರಿನ ಡಚ್ ಮ್ಯಾಟ್‌ಗಳು, ಕಾರಿಡಾರ್ ಮ್ಯಾಟ್, ರೋಲಿಂಗ್ ಮ್ಯಾಟ್, ಕಾಯರ್ ಹಾಸಿಗೆ, ದಿಂಬು ಸೇರಿ ₹15 ಲಕ್ಷ ಮೌಲ್ಯದ ಉತ್ಪನ್ನಗಳನ್ನು ಜೈಪುರಕ್ಕೆ ಸರಬರಾಜು ಮಾಡಲಾಗುತ್ತಿದೆ' ಎಂದು ವಿವರಿಸಿದರು.

ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ತಯಾರಿಸಿದ ಉತ್ಪನ್ನಗಳನ್ನು ಜೈಪುರಕ್ಕೆ ಕೊಂಡೊಯ್ಯುತ್ತಿರುವ ವಾಹನಕ್ಕೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹಸಿರು ನಿಶಾನೆ ತೋರಿದರು. ನಟರಾಜ್ ಜಾನಕಿರಾಮ್, ಸಿ.ಎನ್. ಶಿವಪ್ರಕಾಶ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

'ವಿವಿಧ ಅಳತೆಯ ಏಳು ಬಗೆಯ ಮ್ಯಾಟ್‌ಗಳನ್ನು ತಯಾರಿಸಲಾಗುತ್ತಿದ್ದು, ಉದಾಹರಣೆಗೆ ಒಂದು ಮ್ಯಾಟ್ ತಯಾರಿಕೆಗೆ ₹91 ವೆಚ್ಚವಾದರೆ, ಇದರಲ್ಲಿ ₹45 ಕೆಲಸಗಾರರಿಗೆ ಸಿಗುತ್ತದೆ' ಎಂದು ಮಾರುಕಟ್ಟೆ ವಿಭಾಗದ ವ್ಯವಸ್ಥಾಪಕ ಎಚ್.ಕೆ.ರಾಜಶೇಖರ್ ಮಾಹಿತಿ ನೀಡಿದರು.

ಶಾಲಿನಿ ರಜನೀಶ್ ಮಾತನಾಡಿ, 'ರಾಜ್ಯದ ವಿವಿಧೆಡೆ ತೆಂಗು ಬೆಳೆಯಲಾಗುತ್ತಿದೆ. ರಾಜ್ಯ ತೆಂಗು ನಾರಿನ ಅಭಿವೃದ್ಧಿ ನಿಗಮವು ತೆಂಗಿನ ಕಚ್ಚಾ ವಸ್ತುಗಳನ್ನು ಬಳಸಿ ಡಚ್ ಮ್ಯಾಟ್, ಕಾರಿಡಾರ್ ಮ್ಯಾಟ್ ಸೇರಿದಂತೆ ಹಲವು ಮೌಲ್ಯ ವರ್ಧಿತ ಗೃಹೋಪಯೋಗಿ ಉತ್ಪನ್ನ ತಯಾರಿಸಿ ಮಾರಾಟ ಮಾಡುತ್ತಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಕಸಾಪ ಸಿಬ್ಬಂದಿಯನ್ನು ಕೆಲಸದಿಂದ ತೆಗೆಯಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಿತ ವೇತನದಡಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಸಿಬ್ಬಂದಿಯನ್ನು ಕೆಲಸದಿಂದ ತೆಗೆಯದಂತೆ, 2025ರ ಅಕ್ಟೋಬರ್‌ನಿಂದ ಬಾಕಿ ಉಳಿಸಿಕೊಂಡಿರುವ ವೇತನವನ್ನು ಪಾವತಿಸಲು ಸೂಚಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕನ್ನಡ ನಾಡು ನುಡಿ ಜಾಗೃತಿ ಸಮಿತಿ ಮನವಿ ಮಾಡಿದೆ.

ಈ ಬಗ್ಗೆ, ಸಮಿತಿಯ ಪರವಾಗಿ ಎಲ್. ಹನುಮಂತಯ್ಯ, ಕೆ. ಮರುಳಸಿದ್ಧಪ್ಪ, ಎಸ್.ಜಿ. ಸಿದ್ಧರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ಎಂ. ಪ್ರಕಾಶಮೂರ್ತಿ, ಆರ್.ಜಿ. ಹಳ್ಳಿ ನಾಗರಾಜ್, ಎಸ್.ಆರ್. ನಂಜುಂಡೇಗೌಡ ಪತ್ರ ಬರೆದಿದ್ದಾರೆ.

'ಕಸಾಪ ಅಧ್ಯಕ್ಷರಾಗಿದ್ದ ಮಹೇಶ ಜೋಶಿ ಅವರ ಅವಧಿಯಲ್ಲಿ ಸರ್ವಾಧಿಕಾರಿ ಧೋರಣೆ, ಏಕಚಕ್ರಾಧಿಪತ್ಯ, ಕಾನೂನು ಬಾಹಿರ ನಿಬಂಧನೆಗಳ ತಿದ್ದುಪಡಿ, ಅವ್ಯವಹಾರ ಸೇರಿ ವಿವಿಧ ಆರೋಪಗಳ ತನಿಖೆಗೆ ವಿಚಾರಣಾಧಿಕಾರಿಯನ್ನು ನೇಮಕ ಮಾಡಲಾಗಿತ್ತು. 17 ವಿಚಾರಣಾಂಶಗಳಲ್ಲಿ, ನಿಯಮ ಬಾಹಿರ ಸಿಬ್ಬಂದಿ ನೇಮಕಾತಿಯೂ ಸೇರಿತ್ತು. ಈ ಬಗ್ಗೆ ವಿಚಾರಣಾಧಿಕಾರಿ ವರದಿ ಸಲ್ಲಿಸಿದ್ದಾರೆ. ಹೀಗಾಗಿ, ಹಿಂದಿನ ಆಡಳಿತಾಧಿಕಾರಿ ಕೆ.ಎಂ. ಗಾಯಿತ್ರಿ ಅವರು ಸಂಚಿತ ವೇತನದಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ವೇತನ ಪಾವತಿ ಬಗ್ಗೆ ಸ್ಪಷ್ಟ ನಿರ್ದೇಶನ ನೀಡುವಂತೆ ಆರ್ಥಿಕ ಇಲಾಖೆಗೆ ಪತ್ರ ಬರೆದಿದ್ದರು' ಎಂದು ಪತ್ರದಲ್ಲಿ ತಿಳಿಸಲಾಗಿದೆ.

'22 ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಅನುಸಾರ ನೇಮಕಗೊಂಡಿಲ್ಲದ ಕಾರಣ, ಅವರನ್ನು ಸೇವೆಯಿಂದ ಬಿಡುಗಡೆಗೊಳಿಸುವಂತೆ ಆರ್ಥಿಕ ಇಲಾಖೆ ಸೂಚಿಸಿದೆ. ಆದರೆ, ವಿಚಾರಣಾಂಶವು ಹಿಂದಿನ ಅಧ್ಯಕ್ಷರಿಗೆ ಮಾತ್ರ ಸೀಮಿತವಾಗಿದೆ. 22 ಸಿಬ್ಬಂದಿಯಲ್ಲಿ ಕೆಲವರು 13 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಆದ್ದರಿಂದ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಸೇವೆಯಿಂದ ಬಿಡುಗಡೆಗೊಳಿಸದೆ, ಸಂಚಿತ ವೇತನದಡಿಯೇ ಮುಂದುವರಿಸಬೇಕು. 2025ರ ಅಕ್ಟೋಬರ್ ತಿಂಗಳಿಂದ ಬಾಕಿ ಇರಿಸಿಕೊಂಡಿರುವ ವೇತನ ಪಾವತಿಗೆ ಆರ್ಥಿಕ ಇಲಾಖೆಗೆ ನಿರ್ದೇಶಿಸಬೇಕು' ಎಂದು ಮನವಿ ಮಾಡಲಾಗಿದೆ.

ಮೇ ದಿನ: ಬೊಮ್ಮನಹಳ್ಳಿಯಲ್ಲಿ ಕಾರ್ಮಿಕರಿಂದ ಮೆರವಣಿಗೆ

ಮೇ ದಿನದ ಅಂಗವಾಗಿ ಸಿಐಟಿಯು ಕಾರ್ಯಕರ್ತರು ಬೊಮ್ಮನಹಳ್ಳಿಯಲ್ಲಿ ಮೆರವಣಿಗೆ ನಡೆಸಿದರು

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ವಿಶ್ವ ಕಾರ್ಮಿಕ ದಿನಾಚರಣೆಯ ಅಂಗವಾಗಿ ಸಿಐಟಿಯು ಕಾರ್ಯಕರ್ತರು ಬೊಮ್ಮನಹಳ್ಳಿಯಲ್ಲಿ ಶುಕ್ರವಾರ ಮೆರವಣಿಗೆ ನಡೆಸಿದರು.

ಹೊಸೂರು ರಸ್ತೆಯ ಗಾರೆಬಾವಿ ಪಾಳ್ಯದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ, ಘೋಷಣೆಗಳನ್ನು ಕೂಗುವ ಮೂಲಕ ಮೇ ದಿನವನ್ನು ಆಚರಿಸಿದರು.

ಬಹಿರಂಗ ಸಭೆಯಲ್ಲಿ ಸಿಐಟಿಯು ಬೊಮ್ಮನಹಳ್ಳಿ ವಲಯ ಅಧ್ಯಕ್ಷ ಧರ್ಮೇಗೌಡ ಮಾತನಾಡಿ 'ಕೇಂದ್ರ ಸರ್ಕಾರ ಬಂಡವಾಳದಾರರ ಲಾಭಕ್ಕಾಗಿ ಕಾರ್ಮಿಕ ವರ್ಗವನ್ನು ಗುಲಾಮಗಿರಿಗೆ ನೂಕಲು ಕಾರ್ಮಿಕ ಸಂಹಿತೆಗಳನ್ನು ಜಾರಿ ಮಾಡಿದೆ, ಇತ್ತ ಕಾಂಗ್ರೆಸ್ ಸರ್ಕಾರವು ಈ ಕಾರ್ಮಿಕ ಸಂಹಿತೆಗಳನ್ನು ರಾಜ್ಯದಲ್ಲಿ ಜಾರಿಗೊಳಿಸಲು ಆತುರ ಮಾಡುತ್ತಿದೆ, ಕಾರ್ಮಿಕ ವಿರೋಧಿ ಧೋರಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಒಂದೇ ನಾಣ್ಯದ ಎರಡು ಮುಖಗಳು' ಎಂದು ದೂರಿದರು.

ಸಿಐಟಿಯು ಬೊಮ್ಮನಹಳ್ಳಿ ವಲಯ ಕಾರ್ಯದರ್ಶಿ ಜಾವಿದ್ ಅಹಮದ್ ಮಾತನಾಡಿ 'ಮೇ ದಿನಾಚರಣೆ ವಿಶ್ವದ ಕಾರ್ಮಿಕ ವರ್ಗಕ್ಕೆ ಸ್ಫೂರ್ತಿಯ ಸಂಕೇತವಾಗಿದೆ. ಎಂಟು ಗಂಟೆ ಕೆಲಸದ ಅವಧಿ, ಕಾರ್ಮಿಕರ ಹಕ್ಕುಗಳಿಗಾಗಿ ಪ್ರಾಣತ್ಯಾಗ ಮಾಡಿದ ಹುತಾತ್ಮರನ್ನು ಸ್ಮರಿಸುವ ದಿನವೂ ಕೂಡ ಇದಾಗಿದೆ. ರಾಜ್ಯ ಸರ್ಕಾರ ಕನಿಷ್ಠ ವೇತನವನ್ನು ಪರಿಷ್ಕರಿಸಿ ಕೂಡಲೇ ಜಾರಿ ಮಾಡಬೇಕು, ಅಸಂಘಟಿತ ವಲಯದ ವಿವಿಧ ವಿಭಾಗದ ಕಾರ್ಮಿಕರಿಗೆ ಕಲ್ಯಾಣ ಯೋಜನೆಗಳನ್ನು ಜಾರಿ ಮಾಡಲು ರಾಜ್ಯ ಸರ್ಕಾರ ಹೆಚ್ಚಿನ ಅನುದಾನ ನೀಡಬೇಕು' ಎಂದು ಒತ್ತಾಯಿಸಿದರು.

ಕಟ್ಟಡ ಕಾರ್ಮಿಕರ ಮುಖಂಡ ಜಿ.ಮೂರ್ತಿ, ಆಟೊ ಚಾಲಕರ ಮುಖಂಡ ಮಾಣಿಕ್ಯರಾಜ್, ಸಿಐಟಿಯು ಹಿರಿಯ ಮುಖಂಡ ಕೃಪೇಂದ್ರ ಪಾಟೀಲ್, ಸನ್ ಸೆರಾ ಕಾರ್ಮಿಕ ಸಂಘದ ಮುಖಂಡ ರಾಮಕೃಷ್ಣ ರೆಡ್ಡಿ, ಸಿಪಿಎಂ ಮುಖಂಡ ಸಿ. ಜಗದೀಶ್ ಇದ್ದರು.

ಎಂ.ಎಂ ಹಿಲ್ಸ್‌ನಲ್ಲಿ ಬಿಳಿ ಜಿಂಕೆ ಪತ್ತೆ

ಹನೂರು (ಚಾಮರಾಜನಗರ ಜಿಲ್ಲೆ): ಮಲೆ ಮಹದೇಶ್ವರ ವನ್ಯಧಾಮದ ಹನೂರು ಬಫರ್ ವಲಯದಲ್ಲಿ ಶುಕ್ರವಾರ ಅಜ್ಜೀಪುರ ಸಫಾರಿ ವೇಳೆ ಅಪರೂಪದ, ಬಿಳಿಯ ಬಣ್ಣದ ಜಿಂಕೆ ಕಾಣಿಸಿಕೊಂಡು ಪ್ರವಾಸಿಗರಲ್ಲಿ ಪುಳಕ ಮೂಡಿಸಿತು. ವನ್ಯಧಾಮದ ಪಿ.ಜಿ ಪಾಳ್ಯ ವಲಯದಲ್ಲಿ ಕೆಲವು ದಿನಗಳ ಹಿಂದೆ ಕರಿ ಚಿರತೆಯು ಕಾಣಿಸಿಕೊಂಡಿತ್ತು.

'ಪ್ರಾಣಿಗಳ ದೇಹದಲ್ಲಿ ಮೆಲನಿನ್ ಅಂಶ ಇಲ್ಲವಾದರೆ ಚರ್ಮ ಬಿಳಿಯ ಬಣ್ಣಕ್ಕೆ ತಿರುಗುತ್ತದೆ. ಧಾಮದಲ್ಲಿ ಇದೇ ಮೊದಲ ಬಾರಿಗೆ ಬಿಳಿಯ ಜಿಂಕೆ ಕಾಣಿಸಿಕೊಂಡಿದೆ' ಎಂದು ಡಿಸಿಎಫ್ ಭಾಸ್ಕರ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ನಿಧನ ವಾರ್ತೆ

ರಘುನಾಥ ರೆಡ್ಡಿ

ಬೆಂಗಳೂರು: ಎಚ್‌ಎಎಲ್ ಕಾರ್ಖಾನೆ ನಿವೃತ್ತ ಉದ್ಯೋಗಿ ಸಿ.ರಘುನಾಥರೆಡ್ಡಿ ಶನಿವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರಿ ಹಾಗೂ ಪುತ್ರ, ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಪೃಥ್ವಿ ರೆಡ್ಡಿ ಇದ್ದಾರೆ.

ಎಚ್‌ಎಎಲ್ ಕಾರ್ಖಾನೆಯಲ್ಲಿ ಉನ್ನತ ಶ್ರೇಣಿಯ ಎಂಜಿನಿಯರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ನಿವೃತ್ತಿ ಬಳಿಕ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಆದರ್ಶ ವಿದ್ಯಾಸಂಸ್ಥೆ ಸ್ಥಾಪಿಸಿ, ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಿದರು.

ಮೇ 4ರಂದು ಹೆಬ್ಬಾಳದ ಚಿತಾಗಾರದಲ್ಲಿ ಅಂತ್ಯಸಂಸ್ಕಾರವನ್ನು ನಡೆಸಲಾಗುತ್ತದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

POORNAPRAJNA SAMSHODHANA MANDIRAM
ADARSH SHODH SANSTHAN
Recognised under Central Schemes implemented through
CENTRAL SANSKRIT UNIVERSITY, DELHI
Dr. Vishweshatheertha Swamiji Marg, Katriguppa Main Road, Bengaluru, Karnataka-70
Phone: 080-26694026,26798679 Website: www.ppsm.res.in

Advertisement No.PPSM/Advt/2026-27/109 **Dated: 22.04.2026**

ENGAGEMENT OF POST DOCTORAL FELLOWS (PDFs) - 2

Poornaprajna Samshodhana Mandiram, Adarsh Shodh Sansthan, Dr. Vishweshatheertha Swamiji Marg, Katriguppa Main Road, Bengaluru, Kamataka- 560070 [PPSM(ASSS)] invites applications from Indian Nationals for engagement of 02 Post Doctoral Fellows(PDFs), purely on temporary basis for period of 03 years with no provision for further extension of term.

For detailed guidelines, remuneration, eligibility criteria, and application procedure, please visit institution website: www.ppsm.res.in and www.sanskrit.nic.in

The last date for receipt of application is 20/05/2026 at 6:00 P.M. The date of interview will be communicated to the candidates. Applicants may visit the PPSM website, time to time, for further information in this regard.

Chairperson, Management Committee

ಶಿಕ್ಷಕರ ಸಂಘದ ಚುನಾವಣೆ: ತಡೆ

ಬೆಂಗಳೂರು: ಶಿಕ್ಷಕರ ಸಂಘದ ಚುನಾವಣೆಗೆ ನಗರದ ಸಿವಿಲ್ ಕೋರ್ಟ್ ಪೂರ್ಣ ಪ್ರಮಾಣದ ತಡೆ ನೀಡಿದೆ. ಜೂನ್ 29ರವರೆಗೆ ಚುನಾವಣಾ ಪ್ರಕ್ರಿಯೆ ಮುಂದುವರಿಸುವಂತಿಲ್ಲ ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿ ಕೆ.ನಾಗನಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, '25ಸಾವಿರ ಅರ್ಹ ಶಿಕ್ಷಕರನ್ನು ಮತದಾರರ ಪಟ್ಟಿಯಿಂದ ಹೊರಗಿಟ್ಟು ಚುನಾವಣಾ ಪ್ರಕ್ರಿಯೆ ಆರಂಭಿಸಲಾಗಿತ್ತು. ಕೋರ್ಟ್ ತಡೆಯಾಜ್ಞೆ ಇದ್ದರೂ 10 ಜಿಲ್ಲೆಗಳ ಶಿಕ್ಷಕರ ಸಂಘದ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. ಚುನಾವಣಾ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಬೇಕು. ಮರುಚುನಾವಣೆ ನಡೆಸಬೇಕು ಎಂದು ಸಂಘದ ಸದಸ್ಯರು ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದೆವು. ನ್ಯಾಯಾಲಯ ಸ್ಪಷ್ಟ ನಿರ್ದೇಶನ ನೀಡಿದ್ದು, ಸತ್ಯಕ್ಕೆ ಜಯ ಸಿಕ್ಕಿದೆ' ಎಂದರು.

ಸಂಘದ ಖಜಾಂಚಿ ಸುರೇಶ ಶೆಡಸಾಳ್ ಮಾತನಾಡಿ, 'ಹಲವು ತಾಲ್ಲೂಕುಗಳಲ್ಲಿ ಚುನಾವಣಾ ಕಚೇರಿಯನ್ನು ತೆರೆದಿರಲಿಲ್ಲ. ಚುನಾವಣಾಧಿಕಾರಿ ನೇಮಕ ಮಾಡಿರಲಿಲ್ಲ. ಮತದಾರರ ಪಟ್ಟಿ ನೀಡದೆ ತಮಗೆ ಬೇಕಾದ 50-60 ಶಿಕ್ಷಕರನ್ನು ಸೇರಿಸಿ, ಅಕ್ರಮವಾಗಿ ನಾಮಪತ್ರ ಪಡೆದು ಚುನಾವಣೆ ನಡೆಸಲಾಗುತ್ತಿತ್ತು. ಇಂತಹ ಎಲ್ಲ ಅಕ್ರಮಗಳಿಗೆ ಕಡಿವಾಣ ಹಾಕಲಾಗಿದೆ' ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಡ್ಯ ಜಿಲ್ಲಾ ದಕ್ಷಿಣ ವಲಯ ಅಧ್ಯಕ್ಷ ಚಂದ್ರಶೇಖರ್ ಆರ್ಯ, ವಿಜಯಪುರ ಜಿಲ್ಲೆಯ ಶಿಕ್ಷಕಿ ಜಯಶ್ರೀ ಬೆಣ್ಣಿ ಮತ್ತಿತರರು ಉಪಸ್ಥಿತರಿದ್ದರು.

ರೇಷ್ಮೆ, ಖನಿಜ ಭವನಕ್ಕೆ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೇಷ್ಮೆ ಲಾಭದಾಯಕವಾದ ಕಸುಬಾಗಿದ್ದು, ಕೃಷಿ ಜತೆಗೆ ಅದನ್ನು ಉಪಕಸುಬನ್ನಾಗಿ ಅಳವಡಿಸಿಕೊಳ್ಳಲು ಉತ್ತೇಜನ ನೀಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಓಕಳೀಪುರದಲ್ಲಿ ರೇಷ್ಮೆ ಮತ್ತು ಖನಿಜ ಭವನ ನಿರ್ಮಾಣಕ್ಕೆ ಶನಿವಾರ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

'ರಾಜ್ಯದಲ್ಲಿ ಸುಮಾರು 1.50 ಲಕ್ಷ ಕುಟುಂಬಗಳು ರೇಷ್ಮೆಯನ್ನು ಅವಲಂಬಿಸಿವೆ. ಕೃಷಿಯಿಂದ ವಿಮುಖರಾಗುತ್ತಿರುವ ಯುವಜನರನ್ನು ಸೆಳೆಯಲು ರೇಷ್ಮೆ, ತೋಟಗಾರಿಕೆ, ಪಶುಸಂಗೋಪನೆಗೆ ಸರ್ಕಾರ ಒತ್ತು ನೀಡುತ್ತಿದೆ' ಎಂದರು.

'ದೇಶದಲ್ಲಿ ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕವು ಮೊದಲ ಸ್ಥಾನದಲ್ಲಿದೆ. ದ್ವಿತಳಿ ರೇಷ್ಮೆಗೆ ಹೆಚ್ಚು ಬೇಡಿಕೆ ಇದೆ. ಈ ಅವಕಾಶವನ್ನು ನಾವು ಬಳಸಿಕೊಳ್ಳಬೇಕು. ದ್ವಿತಳಿ ರೇಷ್ಮೆ ಬೆಳೆಯಲು ನೆರವು ನೀಡಲು ಸಿದ್ಧರಿದ್ದೇವೆ. ನಮ್ಮ ಸರ್ಕಾರ ಬಂದ ನಂತರ ದ್ವಿತಳಿ ರೇಷ್ಮೆ ಸಾಗಣೆ ವೆಚ್ಚವನ್ನು ₹10ರಿಂದ ₹20ಕ್ಕೆ ಹೆಚ್ಚಿಸಿ, ರೇಷ್ಮೆ ಬೆಳೆಗಾರರ ಹೊರೆಯನ್ನು ತುಸು ಕಡಿಮೆ ಮಾಡಿದ್ದೇವೆ. ರೇಷ್ಮೆ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲ ರೀತಿಯ ವೈಜ್ಞಾನಿಕ ನೆರವನ್ನು ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ' ಎಂದರು.

ಇತರೆ ಇಲಾಖೆಗಳಿಗೂ ಸ್ಥಳಾವಕಾಶ: 'ರೇಷ್ಮೆ ಇಲಾಖೆಯು ಓಕಳೀಪುರದಲ್ಲಿ 4 ಎಕರೆ 25 ಗುಂಟೆ ವಿಸ್ತೀರ್ಣದ ಜಮೀನನ್ನು 1995ರಲ್ಲಿ ಖರೀದಿಸಿತ್ತು. ರೇಷ್ಮೆ ಇಲಾಖೆಗೆ ಸೇರಿದ ಜಾಗದಲ್ಲಿ, ಖನಿಜ ನಿಗಮದಿಂದ 13 ಅಂತಸ್ತಿನ ಕಟ್ಟಡ ನಿರ್ಮಿಸಲಾಗುತ್ತಿದೆ. ರೇಷ್ಮೆ ಇಲಾಖೆಗೆ ಅಗತ್ಯವಿರುವಷ್ಟು ಜಾಗವನ್ನು ಬಳಸಿಕೊಂಡು, ಇತರೆ ಇಲಾಖೆಗಳಿಗೂ ಈ ಕಟ್ಟಡದಲ್ಲಿ ಸ್ಥಳಾವಕಾಶ ಮಾಡಿಕೊಡಲಾಗುತ್ತದೆ' ಎಂದು ಸಿದ್ದರಾಮಯ್ಯ ಹೇಳಿದರು.

'₹666.75 ಕೋಟಿ ವೆಚ್ಚದಲ್ಲಿ ಕಟ್ಟಡ ನಿರ್ಮಿಸಲಾಗುತ್ತಿದೆ. ಮೂರು ವರ್ಷಗಳಲ್ಲಿ ಕಾಮಗಾರಿ ಮುಗಿಸಬೇಕು ಮತ್ತು ಕಟ್ಟಡವು ಸದೃಢವಾಗಿರಬೇಕು. ಗಡುವಿನೊಳಗೆ ಕಾಮಗಾರಿ ಪೂರ್ಣಗೊಳಿಸದೇ ಇದ್ದರೆ, ನಿಮ್ಮ ವಿರುದ್ಧ ಕ್ರಮವಹಿಸಲಾಗುವುದು' ಎಂದು ಸ್ಥಳದಲ್ಲಿ ಇದ್ದ ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಿದರು.

Government of India

ಕರ್ನಾಟಕದಲ್ಲಿ ಕಾರ್ಮಿಕರಿಗೆ ಆರೋಗ್ಯ ಸೇವೆಯನ್ನು ಬಲಪಡಿಸುವತ್ತ

"ನಮ್ಮ ಸರ್ಕಾರ ಎಲ್ಲಾ ಕಾರ್ಮಿಕರಿಗಾಗಿ ಉದಾರ ಮತ್ತು ಸಮಗ್ರ ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಬದ್ಧವಾಗಿದೆ।"
ನರೇಂದ್ರ ಮೋದಿ
ಪ್ರಧಾನಮಂತ್ರಿ

100 ಹಾಸಿಗೆಗಳ ಇಎಸ್‌ಐಸಿ ಆಸ್ಪತ್ರೆ
ದೊಡ್ಡಬಳ್ಳಾಪುರ, ಕರ್ನಾಟಕ
ಉದ್ಘಾಟನೆ

ಮತ್ತು

100 ಹಾಸಿಗೆಗಳ ಇಎಸ್‌ಐಸಿ ಆಸ್ಪತ್ರೆ
ಬಳ್ಳಾರಿ, ಕರ್ನಾಟಕ
ಶಿಲಾನ್ಯಾಸ

ಇವರಿಂದ
ಡಾ. ಮನ್ಸುಖ್ ಮಾಂಡವಿಯಾ
ಕಾರ್ಮಿಕ ಮತ್ತು ಉದ್ಯೋಗ ಸಚಿವರು ಹಾಗೂ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವರು, ಭಾರತ ಸರ್ಕಾರ

ಗೌರವಾನ್ವಿತ ಉಪಸ್ಥಿತಿ
ಸುಶ್ರೀ ಶೋಭಾ ಕರಂದ್ಲಾಜೆ
ರಾಜ್ಯ ಸಚಿವರು, ಕಾರ್ಮಿಕ ಮತ್ತು ಉದ್ಯೋಗ ಹಾಗೂ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು, ಭಾರತ ಸರ್ಕಾರ

ಭಾನುವಾರ, 3ನೇ ಮೇ, 2026 | ಬೆಳಿಗ್ಗೆ 10:30 ಗಂಟೆಗೆ
ಇಎಸ್‌ಐಸಿ ಆಸ್ಪತ್ರೆ, ದೊಡ್ಡಬಳ್ಳಾಪುರ, ಕರ್ನಾಟಕ

ಮುಖ್ಯ ವೈಶಿಷ್ಟ್ಯಗಳು

- ಆಧುನಿಕ ವೈದ್ಯಕೀಯ ಸೌಲಭ್ಯಗಳೊಂದಿಗೆ ಅತ್ಯಾಧುನಿಕ ಆಸ್ಪತ್ರೆಗಳು
- ಸಮಗ್ರ ಆರೋಗ್ಯ ಸೇವೆಗಳಿಗಾಗಿ ಎಲ್ಲಾ ಸೌಲಭ್ಯಗಳೊಂದಿಗೆ 5 ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗಿದೆ
- ದೊಡ್ಡಬಳ್ಳಾಪುರ ಆಸ್ಪತ್ರೆಯಿಂದ ಸುಮಾರು 1.50 ಲಕ್ಷ ಕಾರ್ಮಿಕರು ಮತ್ತು ಅವರ ಕುಟುಂಬಗಳಿಗೆ ಪ್ರಯೋಜನವಾಗುತ್ತದೆ
- ಬಳ್ಳಾರಿ ಆಸ್ಪತ್ರೆ ನಿರ್ಮಾಣವಾದ ನಂತರ ಸುಮಾರು 64,000 ಕಾರ್ಮಿಕರು ಮತ್ತು ಅವರ ಕುಟುಂಬಗಳಿಗೆ ಪ್ರಯೋಜನವಾಗುತ್ತದೆ

ಭಾರತದಲ್ಲಿ ಇಎಸ್‌ಐ ಯೋಜನೆ

- **167** ಆಸ್ಪತ್ರೆಗಳು
- **1603** ಔಷಧಾಲಯಗಳು
- **728** ಜಿಲ್ಲೆಗಳು ಒಳಗೊಂಡಿವೆ
- **3.84** ಕೋಟಿ ವಿಮಾದಾರರು
- **14.91** ಕೋಟಿ ಫಲಾನುಭವಿಗಳು

ಹೆಚ್ಚಿನ ವಿವರಗಳಿಗೆ ಭೇಟಿ ನೀಡಿ: https://www.esic.gov.in/
ಅಥವಾ ಟೋಲ್-ಫ್ರೀ ಸಂಖ್ಯೆ 1800-11-2526 ಗೆ ಕರೆ ಮಾಡಿ

ನೇರಪ್ರಸಾರವನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಡಿಕೆ ಧಾರಣೆ

ಚಿತ್ರದುರ್ಗ		ಪುತ್ತೂರು			
ಆಪಿ	54719-55129	ಕೋಕ	20000-34500	ಚಾಲಿ	40899-47099
ಬೆಟ್ಟೆ	37649-38099	ಹೊಸತು	30000-47500	ಕೋಕ	20319-31599
ಕೆಂಪುಗೋಟು	31509-31910	ಹಳತು	50000-55000	ಕೆಂಪುಗೋಟು	34229-34800
ರಾಶಿ	54239-54669	ಸಿದ್ದಾಪುರ		ರಾಶಿ	46660-53699
		ಬಿಳಿಗೋಟು	26989-35429	ತಟ್ಟಿಬೆಟ್ಟೆ	30099-30099

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹1510 (1510)
ಸೂರ್ಯಕಾಂತಿ (ರಿಫೈನ್ಡ್)	₹1660 (1660)
ಪಾಮೋಲಿನ್	₹1455 (1455)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹590
	12 ಕ್ಕೆ	₹84
ಮೈಸೂರು	100 ಕ್ಕೆ	₹595

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹322-580
ದ್ವಿತಳಿ (ಬಿ.ವಿ)	₹382-728

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹245
ಆರ್‌ಎಸ್‌ಎಸ್-5	₹240
ಗುಡ್ ಲಾಟ್	₹212

ಮುದ್ರೆಮನೆ ಕಾಫಿ (50 ಕೆ.ಜಿ)

[illegible]	₹23600
ಎಪಿ	₹14050
ಆರ್‌ಪಿ	₹18150
ಆರ್‌ಸಿ	₹9800

ಮಾವು ನಷ್ಟ ಅಧ್ಯಯನಕ್ಕೆ ತಂಡ

ಬಿಸಿಲು, ಮಳೆಯಿಂದ ಇಳುವರಿ ಕುಸಿತ; ವರದಿ ನೀಡಲು ಸೂಚನೆ

• ಉಮೇಶಭಟ್ಟ ಪಿ.ಎಚ್

ಬೆಂಗಳೂರು: ರಾಜ್ಯದಲ್ಲಿ ಹವಾಮಾನ ವೈಪರೀತ್ಯದಿಂದ ಉಷ್ಣಾಂಶ ಏರಿಕೆಯಾಗಿರುವುದು, ಅಕಾಲಿಕ ಮಳೆ ಸುರಿದಿರುವ ಪರಿಣಾಮವು ಮಾವಿನ ಬೆಳೆ ಮೇಲೆ ಆಗಿದೆ. ಹಾನಿ ಪ್ರಮಾಣದ ಅಂದಾಜಿಗೆ ತೋಟಗಾರಿಕೆ ಇಲಾಖೆಯು ಅಧ್ಯಯನ ತಂಡಗಳನ್ನು ರಚಿಸಿದೆ.

ಕೋಲಾರ, ಬೆಳಗಾವಿ, ಬೆಂಗಳೂರು ದಕ್ಷಿಣ, ತುಮಕೂರು, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಕೊಪ್ಪಳ, ಹಾವೇರಿ, ಮಂಡ್ಯ, ಮೈಸೂರು ಸೇರಿದಂತೆ 14 ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾವು ಬೆಳೆಯಲಾಗುತ್ತಿದ್ದು, ಕೆಲವು ಜಿಲ್ಲೆಗಳಲ್ಲಿ ಹೆಚ್ಚಿನ ಹಾನಿಯಾಗಿರುವುದಾಗಿ ಮಾಹಿತಿ ಇದೆ.

ಅದರಲ್ಲೂ, ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಬಿಸಿಲಿಗೆ ಹೆಚ್ಚಿನ ನಷ್ಟವಾಗಿರುವ ಅಂದಾಜಿದೆ. ಮಳೆಯಿಂದಾಗಿ ಕೋಲಾರ ಜಿಲ್ಲೆಯಲ್ಲಿ ಮಾವು ಫಸಲು ಇಳಿಕೆಯಾಗುವ ಆತಂಕ ಎದುರಾಗಿದೆ. ಹಾವೇರಿ ಜಿಲ್ಲೆಯಲ್ಲಿ ಫಂಗಸ್ ಕಾರಣದಿಂದ ಇಳುವರಿ ಕಡಿಮೆಯಾಗಿದೆ.

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಶಿಫಾರಸಿನ ಮೇರೆಗೆ ತೋಟಗಾರಿಕೆ ಇಲಾಖೆ ಕಾರ್ಯದರ್ಶಿ ಆರ್.ಗಿರೀಶ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ನಷ್ಟದ ಅಂದಾಜು ಕೈಗೊಳ್ಳಲು ನಿರ್ಧರಿಸಲಾಗಿದೆ.

ಜಿಲ್ಲಾ ಮಟ್ಟದಲ್ಲಿ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕ, ತಹಶೀಲ್ದಾರ್, ತೋಟಗಾರಿಕೆ ಉಪ ನಿರ್ದೇಶಕರ ನೇತೃತ್ವದಲ್ಲಿ ಒಂದು ವಾರದೊಳಗೆ ಮಾವಿನ ಬೆಳೆ ಹಾನಿಯ ಸ್ಥಿತಿಗತಿ ಅಧ್ಯಯನ ಮಾಡಲಾಗುತ್ತಿದೆ.

'ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮಾವು ನಷ್ಟದ ವರದಿ ಮುಂದಿನ ವಾರದಲ್ಲಿ ಸಿಗಲಿದೆ. ಹಾನಿ ಪ್ರಮಾಣ ಶೇ 30ಕ್ಕೂ ಅಧಿಕ ಇರುವ ರೈತರಿಗೆ ಪರಿಹಾರವನ್ನು ಕೇಂದ್ರ ಸರ್ಕಾರ ನೀಡಲಿದೆ. ನಷ್ಟದ ವರದಿ ಆಧರಿಸಿ ರಾಷ್ಟ್ರೀಯ ಪ್ರಕೃತಿ ವಿಪತ್ತು ನಿರ್ವಹಣಾ ನಿಧಿಯಡಿ ಪರಿಹಾರ ಪಡೆಯಲು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು' ಎಂದು ಗಿರೀಶ್ ತಿಳಿಸಿದರು.

ರಾಜ್ಯದಲ್ಲಿ ಮಾವು ಕೂಡ ಪ್ರಮುಖ ಬೆಳೆ. ತೋತಾಪುರಿ, ರಸಪೂರಿ, ಸೇಂದೂರ, ಮಲ್ಲಿಕಾ, ನೀಲಂ, ಬಾದಾಮಿ ಸಹಿತ 10ಕ್ಕೂ ಹೆಚ್ಚು ಬಗೆಯ ಮಾವನ್ನು ದಕ್ಷಿಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಬೆಳೆಯುತ್ತಾರೆ.

ಬೆಂಗಳೂರು ನಗರ ಮಾತ್ರವಲ್ಲದೇ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಈ ಬಾರಿ ಉಷ್ಣಾಂಶ ವಾಡಿಕೆಗಿಂತ 4–5 ರಿಂದ ಡಿಗ್ರಿ ಸೆಲ್ಸಿಯಸ್ ವರೆಗೆ ಏರಿಕೆ ಕಂಡು ಬಂದಿದೆ. ಇದರ ಪರಿಣಾಮ ಮಾವಿನ ಮೇಲೆ ಈ ಬಾರಿ ಹೆಚ್ಚಾಗಿದೆ. ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಸುಮಾರು 2.50 ಲಕ್ಷ ಟನ್ ಮಾವು ಉತ್ಪಾದನೆಯಾಗುತ್ತದೆ. ಬಿಸಿಲು ಹೆಚ್ಚು ಇಲ್ಲಿ ಅರ್ಧದಷ್ಟು ಉತ್ಪಾದನೆ ಕುಸಿದಿದೆ.

'ಬಿಸಿಲಿನ ಕಾರಣದಿಂದ ಮಾವಿನ ಮರಗಳಲ್ಲಿ ತೇವಾಂಶ ಕಡಿಮೆಯಾದರೆ ಹೂವುಗಳು ಕಟ್ಟುವುದಿಲ್ಲ. ಅರ್ಧದಲ್ಲಿಯೇ ಉದುರುವುದರಿಂದ ಇಳುವರಿ ಕುಸಿತವಾಗುತ್ತದೆ. ಈ ಬಾರಿ ಹವಾಮಾನ ವೈಪರೀತ್ಯದ ಪರಿಣಾಮ ಹೆಚ್ಚಾಗಿದೆ' ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಮಾವು ನೋಟ

- **1.60** ಲಕ್ಷ ಹೆಕ್ಟೇರ್ ಬೆಳೆ ಪ್ರದೇಶ
- **14.50** ಲಕ್ಷ ಟನ್ ಉತ್ಪಾದನ ಪ್ರಮಾಣ
- **7** ಲಕ್ಷ ಟನ್ ನಷ್ಟದ ಅಂದಾಜು
- **₹22,500** ಪರಿಹಾರ ಪ್ರತೀ ಹೆಕ್ಟೇರ್‌ಗೆ

ಮೇ 7ಕ್ಕೆ ಮಾವು ಮೇಳ

ಮಾವಿನ ಉತ್ಪಾದನೆಯಲ್ಲಿ ಕುಂಠಿತವಾಗಿದ್ದರೂ, ರೈತರನ್ನು ಉತ್ತೇಜಿಸಲು ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಮೇ 7ರಿಂದ ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಮಾವು ಮೇಳ ಹಮ್ಮಿಕೊಂಡಿದೆ. ಬೆಂಗಳೂರು ದಕ್ಷಿಣ ಜಿಲ್ಲೆ ಮಾವು ಬೆಳೆಗಾರರಿಗೆ ಇಲ್ಲಿ ಅವಕಾಶ ಸಿಗಲಿದೆ. 'ಮೇ ಅಂತ್ಯಕ್ಕೆ ಕರ್ನಾಟಕದ ಎಲ್ಲಾ ಬೆಳೆಗಾರರನ್ನು ಪ್ರೋತ್ಸಾಹಿಸಲು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಮೇಳ ಆಯೋಜಿಸಲು ನಿರ್ಧರಿಸಲಾಗಿದೆ' ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ವೇದಮೂರ್ತಿ ತಿಳಿಸಿದ್ದಾರೆ.

> ಬಿಸಿಲಿನ ಕಾರಣದಿಂದ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾವು ಹಾಳಾಗಿದೆ. ಮಳೆಯಿಂದ ಶ್ರೀನಿವಾಸಪುರ ತಾಲ್ಲೂಕು ಬೆಳೆಗಾರರು ತೊಂದರೆಗೆ ಸಿಲುಕಿದ್ದಾರೆ
> **ವೇದಮೂರ್ತಿ,** ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ

ಮತ್ತೆ ಯುದ್ಧ ಸಾಧ್ಯತೆ

ಒಂದನೇ ಪುಟದಿಂದ...

ಹೀಗಾಗಿ, ಉಭಯ ದೇಶಗಳ ನಡುವೆ ಹೊಸದಾಗಿ ಸಂಘರ್ಷ ಆರಂಭವಾಗುವ ಎಲ್ಲ ಸಾಧ್ಯತೆಗಳಿವೆ' ಎಂದು ಸೇನೆಯ ಕೇಂದ್ರ ಕಮಾಂಡ್‌ನ ಹಿರಿಯ ಅಧಿಕಾರಿ ಮೊಹಮ್ಮದ್ ಜಾಫರ್ ಅಸಾದಿ ಶನಿವಾರ ತಿಳಿಸಿದ್ದಾಗಿ ಇರಾನ್‌ನ ಸುದ್ದಿಸಂಸ್ಥೆ ಫಾರ್ಸ್ ವರದಿ ಮಾಡಿದೆ.

ಏನಿದು ಹೊಸ ಪ್ರಸ್ತಾವ?: 'ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರಕ್ಕೆ ಇರಾನ್ ಮುಕ್ತ ಅವಕಾಶ ನೀಡಬೇಕು. ಇರಾನ್ ಮೇಲೆ ವಿಧಿಸಿರುವ ದಿಗ್ಬಂಧನವನ್ನು ಅಮೆರಿಕ ರದ್ದುಪಡಿಸಬೇಕು. ಇರಾನ್‌ನ ಅಣ್ವಸ್ತ್ರ ಯೋಜನೆ ಕುರಿತ ಮಾತುಕತೆಯನ್ನು ಆನಂತರ ನಡೆಸಬೇಕು ಎಂಬ ಅಂಶಗಳನ್ನು ಹೊಸ ಪ್ರಸ್ತಾವ ಒಳಗೊಂಡಿದೆ.

ಮುಂಬೈ ಧಾರಣೆ (ಶೇಂಗಾ)

02-05-2026

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9200-9300
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಪಾಮ್ ವಾರದ ಡೆಲಿವರಿ	1453 (1453)
ಸೂರ್ಯಕಾಂತಿ ಎಣ್ಣೆ ಕಚ್ಚಾ	1555 (1555)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,49,000 (1,48,400)
ಬೆಳ್ಳಿ ಕೆ.ಜಿಗೆ	2,47,000 (2,44,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ವಾಣಿಜ್ಯ ಸಿಲಿಂಡರ್ ದರ ಏರಿಕೆ ಮಾಡಲು ಪಂಚರಾಜ್ಯ ಚುನಾವಣೆ ಮುಗಿಯುವುದನ್ನೇ ಕಾದಿತ್ತೇ ಕೇಂದ್ರ ಸರ್ಕಾರ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹20000-25000
ಸುಳ್ಯ	₹20000-32000

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ

ಶ್ರೀ ಸಿ. ರಘುನಾಥ ರೆಡ್ಡಿ
30.11.1926 - 2.5.2026

ಪೂಜ್ಯ ನನ್ನ ಪತಿಯವರಾದ ಶ್ರೀ ಸಿ. ರಘುನಾಥ ರೆಡ್ಡಿ ಅವರ ನಿಧನವನ್ನು ಅತ್ಯಂತ ದುಃಖತಪ್ತರಾಗಿ ತಿಳಿಸ ಬಯಸುತ್ತಿದ್ದೇವೆ. ಶ್ರೀಯುತರ ಅಂತ್ಯಸಂಸ್ಕಾರವನ್ನು ದಿನಾಂಕ : 4-5-2026, ಸೋಮವಾರ ಮಧ್ಯಾಹ್ನ 1-00 ಗಂಟೆಗೆ ಸ್ಥಳ : ಚಿರ ಶಾಂತಿಧಾಮ, ಹೆಬ್ಬಾಳ ಎಲೆಕ್ಟ್ರಿಕ್ ಚಿತಾಗಾರದಲ್ಲಿ ನಡೆಸಲಾಗುತ್ತದೆ.

ಶೋಕತಪ್ತರು:
ಶ್ರೀಮತಿ ಗಾಯತ್ರಿ ರೆಡ್ಡಿ,
ಮಕ್ಕಳು ಹಾಗೂ ಮೊಮ್ಮಕ್ಕಳು ದೀಪಾ, ಕ್ರಿಸ್ಟೋಫ್, ದೇವಿ, ಪೃಥ್ವಿ, ಪ್ರತಿಮಾ, ಪುಣ್ಯ ಮತ್ತು ಪ್ರಾರ್ಥನಾ.

ಸುದ್ದಿ 2 ನಿಮಿಷ

ಚೀನಾ: ಎಫ್‌ಡಿಐಗೆ ಅನುಮತಿ

ನವದೆಹಲಿ (ಪಿಟಿಐ): ಚೀನಾದವರ ಷೇರುಪಾಲು ಶೇ 10ರವರೆಗೆ ಇರುವ ವಿದೇಶಿ ಕಂಪನಿಗಳು ಭಾರತದಲ್ಲಿ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೂಡಿಕೆ ಮಾಡುವುದಕ್ಕೆ ಅವಕಾಶ ಕಲ್ಪಿಸುವ ನಿಯಮವನ್ನು ಕೇಂದ್ರವು ಅಧಿಸೂಚನೆಯಲ್ಲಿ ಪ್ರಕಟಿಸಿದೆ.

ಇಂತಹ ಕಂಪನಿಗಳು 'ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ'ಯ (ಫೆಮಾ) ಅಡಿಯಲ್ಲಿ ಈ ಹೂಡಿಕೆ ಮಾಡಬಹುದಾಗಿದೆ.

ಇದರ ಪ್ರಕಾರ ಚೀನಾ ಅಥವಾ ಹಾಂಗ್ ಕಾಂಗ್‌ನವರ ಹೂಡಿಕೆ ಶೇ 10ರವರೆಗೆ ಇರುವ ವಿದೇಶಿ ಕಂಪನಿಗಳು ಎಫ್‌ಡಿಐ ಅವಕಾಶ ಇರುವ ವಲಯಗಳಲ್ಲಿ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೂಡಿಕೆ ಮಾಡಬಹುದಾಗಿದೆ.

ಆದರೆ ಈ ನಿಯಮಗಳು ಚೀನಾ ಅಥವಾ ಹಾಂಗ್ ಕಾಂಗ್‌ನಲ್ಲಿ ನೋಂದಣಿ ಆಗಿರುವ ಅಥವಾ ಭಾರತದ ಜೊತೆ ಗಡಿ ಹಂಚಿಕೊಂಡಿರುವ ಸಂಸ್ಥೆಗಳಿಗೆ ಅನ್ವಯ ಆಗುವುದಿಲ್ಲ.

ವಿಮಾ ವಲಯದಲ್ಲಿ ಎಫ್‌ಡಿಐ: ಸರ್ಕಾರದ ಪೂರ್ವಾನುಮತಿಯ ಅಗತ್ಯ ಇಲ್ಲದೆ ವಿಮಾ ವಲಯದಲ್ಲಿ ಶೇಕಡ 100ರಷ್ಟು ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಹೂಡಿಕೆಗೆ ಅವಕಾಶ ಕಲ್ಪಿಸಿ ಕೇಂದ್ರ ಹಣಕಾಸು ಸಚಿವಾಲಯವು ಶನಿವಾರ ಅಧಿಸೂಚನೆ ಪ್ರಕಟಿಸಿದೆ.

ವಿಮಾ ವಲಯದಲ್ಲಿ ಶೇ 100ರಷ್ಟು ಹೂಡಿಕೆ ಮಾಡಲು ಅವಕಾಶ ಕಲ್ಪಿಸಲಾಗಿದ್ದರೂ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಪಾಲಿಗೆ ಶೇ 20ರಷ್ಟು ಮಿತಿ ಇರಲಿದೆ.

4.73 ಲಕ್ಷ ವಾಹನಗಳ ಮಾರಾಟ: ಟಿವಿಎಸ್

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಏಪ್ರಿಲ್ ತಿಂಗಳಿನಲ್ಲಿ 4.73 ಲಕ್ಷ ವಾಹನಗಳನ್ನು ತಾನು ಮಾರಾಟ ಮಾಡಿರುವುದಾಗಿ ವಾಹನ ತಯಾರಿಕಾ ಕಂಪನಿ ಟಿವಿಎಸ್ ಮೋಟರ್ ಶನಿವಾರ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ 4.43 ಲಕ್ಷ ವಾಹಗಳು ಮಾರಾಟವಾಗಿದ್ದವು. ಇದಕ್ಕೆ ಹೋಲಿಸಿದರೆ ಈ ಬಾರಿ ವಾಹನಗಳ ಮಾರಾಟದಲ್ಲಿ ಶೇ 7ರಷ್ಟು ಹೆಚ್ಚಳವಾಗಿದೆ ಎಂದು ಕಂಪನಿ ತಿಳಿಸಿದೆ.

ದ್ವಿಚಕ್ರ ವಾಹನಗಳ ಮಾರಾಟದಲ್ಲಿ ಶೇ 6ರಷ್ಟು ಏರಿಕೆಯಾಗಿದ್ದು, 4.55 ಲಕ್ಷ ವಾಹನಗಳು ಮಾರಾಟವಾಗಿವೆ. ಈ ಪೈಕಿ ಸ್ಕೂಟರ್ ಮಾರಾಟದಲ್ಲಿ ಶೇ 24ರಷ್ಟು ಹೆಚ್ಚಳವಾಗಿದ್ದು, 2.11 ಲಕ್ಷ ಮಾರಾಟವಾಗಿವೆ. ವಿದ್ಯುತ್‌ಚಾಲಿತ ದ್ವಿಚಕ್ರ ವಾಹನಗಳ ಮಾರಾಟದಲ್ಲಿ ಶೇ 36ರಷ್ಟು ಜಿಗಿತವಾಗಿದ್ದು, 37,771 ವಾಹನಗಳು ಮಾರಾಟವಾಗಿವೆ. ಕಳೆದ ವರ್ಷದ ಏಪ್ರಿಲ್‌ನಲ್ಲಿ 27,684 ವಾಹನಗಳು ಮಾರಾಟವಾಗಿದ್ದವು.

ತ್ರಿಚಕ್ರ ವಾಹನಗಳ ಮಾರಾಟದಲ್ಲಿ ಶೇ 37ರಷ್ಟು ಹೆಚ್ಚಳವಾಗಿದ್ದು, 18,637 ವಾಹನಗಳು ಮಾರಾಟವಾಗಿವೆ. ವಾಹನಗಳ ರಫ್ತು ಶೇ 3ರಷ್ಟು ಏರಿಕೆಯಾಗಿದ್ದು, 1.20 ಲಕ್ಷ ವಾಹನಗಳು ರಫ್ತಾಗಿವೆ ಎಂದು ತಿಳಿಸಿದೆ.

ಪ್ರಯಾಣಿಕ ವಾಹನ: ಹೊಸ ವರ್ಷ ಶುಭಾರಂಭ

ನವದೆಹಲಿ (ಪಿಟಿಐ): ಹೊಸ ಆರ್ಥಿಕ ವರ್ಷದ ಮೊದಲ ತಿಂಗಳಲ್ಲಿ ದೇಶದ ಕಾರು ತಯಾರಿಕಾ ಕಂಪನಿಗಳ ವಾಹನ ಮಾರಾಟ ಪ್ರಮಾಣವು ಶೇ 27ರಷ್ಟು ಹೆಚ್ಚಳ ಕಂಡಿರುವ ಅಂದಾಜು ಇದೆ. ವಿವಿಧ ಕಂಪನಿಗಳಿಂದ ಒಟ್ಟು 4.5 ಲಕ್ಷ ವಾಹನಗಳ ಮಾರಾಟ ಆಗಿರುವ ಅಂದಾಜು ಮಾಡಲಾಗಿದೆ.

ಜಿಎಸ್‌ಟಿ ದರ ಪರಿಷ್ಕರಣೆ ಪ್ರಯೋಜನ, ರೆಪೊ ದರ ಇಳಿಕೆಯ ಲಾಭ ಹಾಗೂ ಆದಾಯ ತೆರಿಗೆ ವಿನಾಯಿತಿಯನ್ನು ಹೆಚ್ಚು ಮಾಡಿದ್ದರ ಅನುಕೂಲವು ಕಾರು ತಯಾರಿಕಾ ಕಂಪನಿಗಳಿಗೆ ಲಭಿಸುವುದು ಮುಂದುವರಿದಿದೆ ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿಯ ಮಾರುಕಟ್ಟೆ ಮತ್ತು ಮಾರಾಟ ವಿಭಾಗದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಪಾರ್ಥೊ ಬ್ಯಾನರ್ಜಿ ಹೇಳಿದ್ದಾರೆ.

ಕಳೆದ ವರ್ಷದ ಏಪ್ರಿಲ್ ತಿಂಗಳಲ್ಲಿ ದೇಶದ ಮಾರುಕಟ್ಟೆಯಲ್ಲಿ ಪ್ರಯಾಣಿಕ ವಾಹನಗಳ ಮಾರಾಟ ಸಂಖ್ಯೆ 3.54 ಲಕ್ಷದಷ್ಟಿತ್ತು.

ಈ ಬಾರಿಯ ಏಪ್ರಿಲ್ ತಿಂಗಳಲ್ಲಿ ಮಾರುತಿ ಸುಜುಕಿ ಕಂಪನಿಯು ಒಟ್ಟು 1.92 ಲಕ್ಷ ವಾಹನಗಳನ್ನು ಮಾರಾಟ ಮಾಡಿದೆ. 'ನಾವು ಈ ವರ್ಷದ ಆರಂಭವನ್ನು ಭರ್ಜರಿಯಾಗಿ ಮಾಡಿದ್ದೇವೆ. ಸಣ್ಣ ಕಾರುಗಳು ಮಾರಾಟ ಸಂಖ್ಯೆಗೆ ದೊಡ್ಡ ಕೊಡುಗೆ ನೀಡಿವೆ' ಎಂದು ಬ್ಯಾನರ್ಜಿ ತಿಳಿಸಿದ್ದಾರೆ.

ಕಂಪನಿಯ ಸಣ್ಣ ಕಾರುಗಳ ಮಾರಾಟ ಪ್ರಮಾಣವು ಶೇ 74.4ರಷ್ಟು ಹೆಚ್ಚಳ ಕಂಡಿದೆ. ಇದು ಸಣ್ಣ ಕಾರುಗಳ ಭವಿಷ್ಯದ ಬಗ್ಗೆ ಜನರಲ್ಲಿ ಇದ್ದ ಅನುಮಾನಗಳನ್ನು ತಿಳಿಗೊಳಿಸಿದೆ. ಆದರೆ ಪೆಟ್ರೋಲ್ ಬೆಲೆ ಹೆಚ್ಚಳವಾದಲ್ಲಿ ಕಾರು ಮಾರಾಟದ ಮೇಲೆ ಪರಿಣಾಮ ಉಂಟಾಗಬಹುದು ಎಂದು ತಿಳಿಸಿದ್ದಾರೆ.

ಮಾರುತಿ ಸುಜುಕಿ ಕಂಪನಿ ಇನ್ನೂ 1.65 ಲಕ್ಷ ಕಾರುಗಳನ್ನು ಗ್ರಾಹಕರಿಗೆ ವಿತರಣೆ ಮಾಡಬೇಕಿದೆ. ಸಣ್ಣ ಕಾರುಗಳಿಗೆ ಗ್ರಾಹಕರು ಕಾಯಬೇಕಿರುವ ಅವಧಿಯು ಒಂದು ತಿಂಗಳಿಗೆ ವಿಸ್ತರಣೆ ಆಗಿದೆ.

ಏಪ್ರಿಲ್‌ನಲ್ಲಿ ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ಸ್ ಲಿ. ಕಂಪನಿಯು ಒಟ್ಟು 59 ಸಾವಿರ ವಾಹನಗಳನ್ನು ಮಾರಾಟ ಮಾಡಿದೆ. ಕಳೆದ ವರ್ಷದ ಏಪ್ರಿಲ್‌ನಲ್ಲಿ ಕಂಪನಿಯು 45 ಸಾವಿರ ವಾಹನಗಳನ್ನು ಮಾರಾಟ ಮಾಡಿತ್ತು.

ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಪ್ರಯಾಣಿಕ ವಾಹನ ಮಾರಾಟ ಪ್ರಮಾಣವು ಏಪ್ರಿಲ್‌ನಲ್ಲಿ ಶೇ 8ರಷ್ಟು ಹೆಚ್ಚಳ ಕಂಡಿದ್ದು 56,331ಕ್ಕೆ ತಲುಪಿದೆ. ಹುಂಡೈ ಮೋಟರ್ ಇಂಡಿಯಾ ಕಂಪನಿಯ ವಾಹನ ಮಾರಾಟ ಪ್ರಮಾಣ ಶೇ 17ರಷ್ಟು ಹೆಚ್ಚಳ ಆಗಿದ್ದು 51,902ಕ್ಕೆ ತಲುಪಿದೆ.

ಹುಂಡೈ ಕಂಪನಿಯು ಆರಂಭ ಆದಾಗಿನಿಂದ ಇಷ್ಟು ದೊಡ್ಡ ಸಂಖ್ಯೆಯಲ್ಲಿ ವಾಹನ ಮಾರಾಟ ಮಾಡಿರುವುದು ಇದೇ ಮೊದಲು. ಕಿಯಾ ಇಂಡಿಯಾ ಕಂಪನಿಯು 27,286 ವಾಹನಗಳನ್ನು ಮಾರಾಟ ಮಾಡಿದ್ದು ಶೇ 17ರಷ್ಟು ಬೆಳವಣಿಗೆ ಸಾಧಿಸಿದೆ. ಟೊಯೊಟಾ ಕಿರ್ಲೋಸ್ಕರ್ ಮೋಟರ್ ಕಂಪನಿಯ ವಾಹನ ಮಾರಾಟ ಪ್ರಮಾಣವು ಶೇ 21ರಷ್ಟು ಜಾಸ್ತಿ ಆಗಿದೆ.

ಡಾಲರ್ ಕಂಪನಿಯ ಸ್ಥಾಪಕ ಗುಪ್ತಾ ನಿಧನ

ಕೋಲ್ಕತ್ತ (ಪಿಟಿಐ): ಒಳ ಉಡುಪು ತಯಾರಿಕಾ ಕಂಪನಿ ಡಾಲರ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಸ್ಥಾಪಕ ಮತ್ತು ಗೌರವಾಧ್ಯಕ್ಷ ದೀನ್‌ದಯಾಳ್ ಗುಪ್ತಾ ಅವರು (88) ವಯೋಸಹಜ ಕಾಯಿಲೆಯಿಂದ ಶನಿವಾರ ನಿಧನರಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಗುಪ್ತಾ ಅವರಿಗೆ ಪತ್ನಿ, ನಾಲ್ವರು ಪುತ್ರರು ಇದ್ದಾರೆ.

ಹರಿಯಾಣದ ಭಿವಾನಿ ಜಿಲ್ಲೆಯ ಮನ್ಹೇರು ಗ್ರಾಮದಲ್ಲಿ 1937ರ ಸೆಪ್ಟೆಂಬರ್ 13ರಂದು ದೀನ್‌ದಯಾಳ್ ಗುಪ್ತಾ ಜನಿಸಿದ್ದರು. 1962ರಲ್ಲಿ ಕೋಲ್ಕತ್ತದಲ್ಲಿ ಒಳ ಉಡುಪು ತಯಾರಿಕೆ–ಮಾರಾಟ ಆರಂಭಿಸಿದರು. 1972ರಲ್ಲಿ ಡಾಲರ್ ಇಂಡಸ್ಟ್ರೀಸ್ ಸ್ಥಾಪಿಸಿದರು.

ಹಿರಿಯ ಅಧಿಕಾರಿಗಳೇ ಹೊಣೆ–ಏಕಸದಸ್ಯ ಸಮಿತಿ

ತಿರುಪತಿ ಲಡ್ಡು ಪ್ರಸಾದಕ್ಕೆ ಕಲಬೆರಕೆ ತುಪ್ಪ ಬಳಕೆ ಪ್ರಕರಣ: ಕ್ರಮಕ್ಕೆ ಶಿಫಾರಸು

ಪ್ರಜಾವಾಣಿ ವಾರ್ತೆ

ಹೈದರಾಬಾದ್ : ತಿರುಪತಿ ಲಡ್ಡು ಪ್ರಸಾದಕ್ಕೆ ಕಲಬೆರಕೆ ತುಪ್ಪ ಬಳಸಿದ್ದ ಪ್ರಕರಣಕ್ಕೆ ಸಂಬಂಧಿಸಿ ಆಂಧ್ರ ಪ್ರದೇಶ ಸರ್ಕಾರ ನೇಮಿಸಿದ್ದ ಏಕಸದಸ್ಯ ಸಮಿತಿ ವರದಿ ಸಲ್ಲಿಸಿದ್ದು, ಅಧಿಕಾರಿಗಳು ಮತ್ತು ಖರೀದಿ ಸಮಿತಿಯ ಗಂಭೀರವಾದ ಆಡಳಿತ ವೈಫಲ್ಯವನ್ನು ಪತ್ತೆ ಮಾಡಿದೆ.ಕಲಬೆರಕೆ ತುಪ್ಪ ಪೂರೈಕೆದಾರರನ್ನು ತಕ್ಷಣದಿಂದಲೇ ಕಪ್ಪುಪಟ್ಟಿಗೆ ಸೇರಿಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ಸಿಬಿಐ ನೇತೃತ್ವದ ವಿಶೇಷ ತನಿಖಾ ತಂಡ (ಎಸ್‌ಐಟಿ) ಉಲ್ಲೇಖಿಸಿದ್ದ ಅಂಶಗಳನ್ನು ಪರಿಶೀಲಿಸಿ ಲೋಪ ಪತ್ತೆ ಮಾಡುವ ಜವಾಬ್ದಾರಿಯನ್ನು ಮಾಜಿ ಮುಖ್ಯಕಾರ್ಯದರ್ಶಿ ದಿನೇಶ್ ಕುಮಾರ್ ಅವರ ನೇತೃತ್ವದ ಸಮಿತಿಗೆ ನೀಡಲಾಗಿತ್ತು.

ಏಕ ಸದಸ್ಯ ಸಮಿತಿಯು ಮಾಜಿ ಕಾರ್ಯನಿರ್ವಾಹಕ ಅಧಿಕಾರಿ ಎ.ವಿ. ಧರ್ಮಾರೆಡ್ಡಿ ಅವರನ್ನು ಮುಖ್ಯ ಹೊಣೆಗಾರರನ್ನಾಗಿ ಮಾಡಿದೆ. ಗುತ್ತಿಗೆ ನಿಯಮಗಳ ಉಲ್ಲಂಘನೆ, ಕಲಬೆರಕೆ ಖಚಿತಪಟ್ಟರೂ ಕ್ರಮ ಕೈಗೊಳ್ಳದಿರುವುದು ಮತ್ತು ಶಂಕಿತ ಪೂರೈಕೆದಾರರನ್ನೇ ಮುಂದುವರಿಸಿದ ಆರೋಪವನ್ನು ರೆಡ್ಡಿ ಅವರ ಮೇಲೆ ಹೊರಿಸಲಾಗಿದೆ.

ಮತ್ತೊಬ್ಬ ಮಾಜಿ ಕಾರ್ಯನಿರ್ವಹಣಾಧಿಕಾರಿ ಅನಿಲ್ ಕುಮಾರ್ ಸಿಂಘಾಲ್ ಸೇರಿದಂತೆ ಟಿಟಿಡಿಯ ಅಂದಿನ ಖರೀದಿ ಸಮಿತಿ ಈ ಎಲ್ಲಾ ಅಕ್ರಮಕ್ಕೆ ಸಹಕಾರ ನೀಡಿದೆ ಎಂದು ವರದಿ ಉಲ್ಲೇಖಿಸಿದೆ.

2022ರ ಆಗಸ್ಟ್‌ನಲ್ಲೇ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (ಸಿಎಫ್‌ಟಿಆರ್‌ಐ) ಕಲಬೆರಕೆಯನ್ನು ಖಚಿತಪಡಿಸಿತ್ತು. ವೈಜ್ಞಾನಿಕ ಸಾಕ್ಷ್ಯ ಇದ್ದರೂ ಕಲಬೆರಕೆ ತುಪ್ಪದ ಬಳಕೆಗೆ ಅವಕಾಶ ನೀಡಲಾಗಿತ್ತು. 70 ಲಕ್ಷ ಕೆ.ಜಿಗೂ ಹೆಚ್ಚು ತುಪ್ಪವನ್ನು ಅಗತ್ಯ ಪರೀಕ್ಷೆ ನಡೆಸದೆ ಬಳಸಲಾಗಿತ್ತು. ಪ್ರಯೋಗಾಲಯದ ಪರೀಕ್ಷಾ ವರದಿ ಬರುವ ಮೊದಲೇ ಶ್ರೀವಾರಿ ಲಡ್ಡುಪ್ರಸಾದ ತಯಾರಿಸಲು ಕಲಬೆರಕೆ ತುಪ್ಪ ಬಳಸಲಾಗಿತ್ತು ಎಂದು ಹೇಳಿದೆ.

ಅಮಾನತು ನಂತರವೂ ಪೂರೈಕೆ: ಕಲಬೆರಕೆ ತುಪ್ಪ ಬಳಕೆ ಪತ್ತೆ ನಂತರ ಪೂರೈಕೆದಾರರನ್ನು ಅಮಾನತು ಮಾಡಿದ ನಂತರವೂ ಅದೇ ಸಂಸ್ಥೆಯಿಂದ ಪೂರೈಕೆ ಮುಂದುವರಿದಿತ್ತು ಎಂದು ಏಕ ಸದಸ್ಯ ಸಮಿತಿ ಆತಂಕ ವ್ಯಕ್ತಪಡಿಸಿದೆ.

ಉತ್ತರಾಖಂಡ ಮೂಲದ ಭೋಲೆ ಬಾಬಾ ಆರ್ಗ್ಯಾನಿಕ್ ಡೇರಿ ಮಿಲ್ಕ್ ಪ್ರೈವೆಟ್ ಲಿಮಿಟೆಡ್ ಅನ್ನು ಗುತ್ತಿಗೆ ಪಡೆದ ಏಳು ತಿಂಗಳಲ್ಲೇ (2021) ಅನರ್ಹ ಎಂದು ಘೋಷಿಸಲಾಗಿತ್ತು. ಆದರೂ ಕಂಪನಿಯು ಸುಮಾರು ಒಂದು ಲಕ್ಷ ಕೆ.ಜಿ.ಯಷ್ಟು ತುಪ್ಪವನ್ನು ಪೂರೈಕೆ ಮಾಡಿದೆ ಎಂದು ಸಮಿತಿ ವರದಿಯಲ್ಲಿ ಉಲ್ಲೇಖಿಸಿದೆ.

ಎಲ್‌ಪಿಜಿ: ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿಕೆ

ದರ ಏರಿಕೆ ಕಂಪನಿಗಳ ತೀರ್ಮಾನ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ವಿಶ್ವದಾದ್ಯಂತ ಇಂಧನದ ಬಿಕ್ಕಟ್ಟು ತಲೆದೂರಿದೆ. ಜಾಗತಿಕ ಸ್ಥಿತಿಗತಿ ಆಧರಿಸಿ ಕಂಪನಿಗಳು ಎಲ್‌ಪಿಜಿ ಬೆಲೆ ಹೆಚ್ಚಿಸಿವೆ. ಯುದ್ಧ ಕೊನೆಗೊಂಡ ಬಳಿಕ ಬೆಲೆ ಇಳಿಯಲಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

ಪ್ರಹ್ಲಾದ ಜೋಶಿ

'2004ರಿಂದ 2014ರವರೆಗೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಇಂಧನ ಬೆಲೆ ಪರಿಷ್ಕರಿಸುವ ಅಧಿಕಾರವನ್ನು ಕಂಪನಿಗಳಿಗೆ ನೀಡಿದೆ. ಈ ಅಧಿಕಾರ ಬಳಸಿಕೊಂಡು ಕಂಪನಿಗಳು ನಿರ್ಧಾರ ಕೈಗೊಳ್ಳುತ್ತಿವೆ. ಆದರೂ, ಗೃಹಬಳಕೆ ಎಲ್‌ಪಿಜಿ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ ಆಗದಂತೆ ಕೇಂದ್ರ ಸರ್ಕಾರ ನೋಡಿಕೊಳ್ಳುತ್ತಿದೆ' ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಭಾರತಕ್ಕೆ ಅಗತ್ಯವಿರುವ ಅರ್ಧದಷ್ಟು ಇಂಧನ ವಿದೇಶದಿಂದ ಆಮದು ಆಗುತ್ತದೆ. ಹೊರ್ಮುಜ್ ಜಲಸಂಧಿಯಲ್ಲಿ ತೊಂದರೆಯಾಗಿದ್ದು ಇಂಧನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಶೀಘ್ರದಲ್ಲೇ ಬಗೆಹರಿಯುವ ವಿಶ್ವಾಸವಿದೆ' ಎಂದರು.

'ಜೋಶಿ ಹೇಳಿಕೆ ಆಡಳಿತದ ಅಜ್ಞಾನವೇ?'

ಬೆಂಗಳೂರು: 'ಎಲ್‌ಪಿಜಿ ಬೆಲೆ ಏರಿಸುವುದು ಕಂಪನಿಗಳೇ ಹೊರತು ಕೇಂದ್ರ ಸರ್ಕಾರವಲ್ಲ' ಎನ್ನುವ ಕೇಂದ್ರ ಸಚಿವ ಪ್ರಲ್ಹಾದ ಜೋಶಿಯವರದ್ದು ಆಡಳಿತದ ಅಜ್ಞಾನವೋ, ಜನರನ್ನು ಮೂರ್ಖರನ್ನಾಗಿಸುವ ವ್ಯರ್ಥ ಪ್ರಯತ್ನವೊ?' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ವ್ಯಂಗ್ಯವಾಡಿದ್ದಾರೆ.

ಎಲ್‌ಪಿಜಿ ಬೆಲೆ ಏರಿಕೆ ಕುರಿತಂತೆ ಜೋಶಿ ನೀಡಿರುವ ಹೇಳಿಕೆಗಳ ಸಹಿತ 'ಎಕ್ಸ್' ಮಾಡಿರುವ ಅವರು, 'ಎಲ್‌ಪಿಜಿ ಬೆಲೆ ಏರಿಕೆಯಿಂದ ಕುಟುಂಬಗಳೇ ನಲುಗಿ ಹೋಗುತ್ತಿವೆ. ಹೋಟೆಲ್‌ಗಳಲ್ಲಿ ಊಟದ ಬೆಲೆ ಗಗನಕ್ಕೇರುವ ಪರಿಸ್ಥಿತಿ ಎದುರಾಗಿದೆ. ಇದು ಕೇವಲ ಕೇಂದ್ರ ಸರ್ಕಾರದ ಆರ್ಥಿಕ ದಿವಾಳಿತನ ಮಾತ್ರವಲ್ಲ, ಜನರ ನಿತ್ಯದ ಬದುಕಿನ ಮೇಲೆ ನೇರ ದಾಳಿ. ಜೋಶಿಯವರೇ, ಯಾವ ಕಂಪನಿಗಳು ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಸಿವೆ' ಎಂದು ಪ್ರಶ್ನಿಸಿದ್ದಾರೆ.

'ಐಒಸಿ, ಬಿಪಿಸಿ, ಎಚ್‌ಪಿಸಿ ಇವೆಲ್ಲವೂ ಸರ್ಕಾರದ ನಿಯಂತ್ರಣದಲ್ಲಿಲ್ಲವೇ? ಈ ಕಂಪನಿಗಳ ಮಂಡಳಿ ನೇಮಕಾತಿ, ನೀತಿ, ಮಾರ್ಗದರ್ಶನ ಈ ಎಲ್ಲದರ ಮೇಲೆ ಸರ್ಕಾರದ ಹಿಡಿತ ಇಲ್ಲವೇ? ಎಲ್‌ಪಿಜಿ ದರದಲ್ಲಿ ಅಬಕಾರಿ ಸುಂಕ, ಸಹಾಯಧನ ಕಡಿತ ಎಲ್ಲವೂ ಕೇಂದ್ರದ ನಿರ್ಧಾರಗಳಲ್ಲವೇ' ಎಂದೂ ಪ್ರಶ್ನಿಸಿದ್ದಾರೆ.

ಶೃಂಗೇರಿ: ಅಂಚೆ ಮತ ಮರು ಎಣಿಕೆ ಕಗ್ಗಂಟು

ಚಿಕ್ಕಮಗಳೂರು: ಹೈಕೋರ್ಟ್ ನಿರ್ದೇಶನದಂತೆ ಶನಿವಾರ ನಡೆದ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಎಣಿಕೆ ಕಾರ್ಯ ಪೂರ್ಣಗೊಳ್ಳದೆ ತಡರಾತ್ರಿವರೆಗೂ ಕಗ್ಗಂಟಾಗಿ ಉಳಿದಿತ್ತು.

2023ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡ 201 ಮತಗಳಿಂದ ಜಯ ಸಾಧಿಸಿದ್ದರು. 1,822 ಅಂಚೆ ಮತಗಳಲ್ಲಿ 279 ಮತಗಳು ತಿರಸ್ಕೃತಗೊಂಡಿದ್ದವು. ಇದರ ವಿರುದ್ಧ ಬಿಜೆಪಿ ಪರಾಜಿತ ಅಭ್ಯರ್ಥಿ ಡಿ.ಎನ್.ಜೀವರಾಜ್ ಹೈಕೋರ್ಟ್ ಮೊರೆ ಹೋಗಿದ್ದರು.

ಜೆಡಿಎಸ್ ಅಭ್ಯರ್ಥಿಯಾಗಿದ್ದ ಸುಧಾಕರಶೆಟ್ಟಿ ಅವರು ಮಧ್ಯಾಹ್ನ ಮತ ಎಣಿಕೆ ಕೇಂದ್ರದಿಂದ ಹೊರ ಬಂದು, 'ತಿರಸ್ಕೃತ ಮತಗಳ ಪರಿಶೀಲನೆ ಶೇ 70ರಷ್ಟು ಮುಗಿದಿದೆ. ಯಾವುದೇ ಮತಪತ್ರ ಪುರಸ್ಕೃತವಾಗಿಲ್ಲ. ಈ ಮರು ಎಣಿಕೆಯಿಂದ ಫಲಿತಾಂಶದಲ್ಲಿ ವ್ಯತ್ಯಾಸ ಆಗುವುದಿಲ್ಲ' ಎಂದು ಮಾಧ್ಯಮಗಳಿಗೆ ಮಾಹಿತಿ ನೀಡಿದರು. ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಿಸಿದರು.

ಆರಂಭದ 350 ಮತಗಳ ಎಣಿಕೆಯ ವೇಳೆಗೆ ಟಿ.ಡಿ.ರಾಜೇಗೌಡ ಮತ್ತು ಡಿ.ಎನ್.ಜೀವರಾಜ್ ಇಬ್ಬರಿಗೂ ಗುರುತು ಹಾಕಿರುವ 50 ಮತ ಪತ್ರ ದೊರಕಿದವು. '2023ರಲ್ಲಿ ನಡೆದ ಎಣಿಕೆ ವೇಳೆ ಮಾನ್ಯವಾಗಿದ್ದ ಮತಪತ್ರಗಳಲ್ಲಿ ಈಗ ಇಬ್ಬರ ಹೆಸರಿಗೂ ಗುರುತು ಹಾಕಲಾಗಿದೆ ಎಂದರೆ ಮತಪತ್ರಗಳನ್ನು ವಿರೂಪಗೊಳಿಸಲಾಗಿದೆ. ಮತ ಎಣಿಕೆ ಮಾಡಲು ಅವಕಾಶ ನೀಡುವುದಿಲ್ಲ' ಎಂದು ರಾಜೇಗೌಡ ಪಟ್ಟು ಹಿಡಿದರು ಎಂದು ಮೂಲಗಳು ತಿಳಿಸಿವೆ.

ರಾಜೇಗೌಡ ಅವರು ಎಣಿಕೆಗೆ ಅಡ್ಡಿಪಡಿಸುತ್ತಿದ್ದು, ಅವರನ್ನು ಹೊರಗೆ ಕಳುಹಿಸಿ ಎಣಿಕೆ ಮಾಡಬೇಕು ಎಂದು ಬಿಜೆಪಿಯವರು ಪ್ರತಿಭಟನೆ ನಡೆಸಿದರು.

ಕೋಟಕ್‌ಗೆ ₹5,423 ಕೋಟಿ ಲಾಭ

ಮುಂಬೈ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಖಾಸಗಿ ವಲಯದ ಕೋಟಕ್ ಮಹೀಂದ್ರ ಬ್ಯಾಂಕ್ ₹5,423 ಕೋಟಿ ನಿವ್ವಳ ಲಾಭ ಗಳಿಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹4,933 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 10ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್ ಶನಿವಾರ ತಿಳಿಸಿದೆ.

ನಿವ್ವಳ ಬಡ್ಡಿ ವರಮಾನವು ಶೇ 8ರಷ್ಟು ಏರಿಕೆಯಾಗಿದ್ದು, ₹7,876 ಕೋಟಿಯಷ್ಟಾಗಿದೆ. ಬ್ಯಾಂಕ್‌ನ ಸಾಲ ನೀಡಿಕೆ ಪ್ರಮಾಣದಲ್ಲಿ ಶೇ 16ರಷ್ಟು ಏರಿಕೆಯಾಗಿದ್ದು, ₹4.96 ಲಕ್ಷ ಕೋಟಿ ಸಾಲ ನೀಡಿದೆ. ಒಟ್ಟು ಠೇವಣಿಯು ₹5.73 ಲಕ್ಷ ಕೋಟಿಯಷ್ಟಾಗಿದ್ದು, ಶೇ 15ರಷ್ಟು ಬೆಳವಣಿಗೆ ದಾಖಲಿಸಿದೆ.

ಜೈನ್ ಆರ್‌ಬಿಐ ಡೆಪ್ಯುಟಿ ಗವರ್ನರ್

ನವದೆಹಲಿ (ಪಿಟಿಐ): ರೋಹಿತ್ ಜೈನ್ ಅವರನ್ನು ಕೇಂದ್ರ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಡೆಪ್ಯುಟಿ ಗವರ್ನರ್ ಆಗಿ ಮೂರು ವರ್ಷಗಳ ಅವಧಿಗೆ ನೇಮಕ ಮಾಡಿದೆ.

ಟಿ. ರವಿಶಂಕರ್ ಅವರಿಂದ ತೆರವಾಗಿರುವ ಸ್ಥಾನವನ್ನು ಜೈನ್ ಅವರು ತುಂಬಲಿದ್ದಾರೆ. ಜೈನ್ ಅವರ ನೇಮಕವನ್ನು ಕೇಂದ್ರ ಸಂಪುಟದ ನೇಮಕಾತಿಗಳ ಸಮಿತಿಯು ಅನುಮೋದಿಸಿದೆ ಎಂದು ಮೂಲಗಳು ಹೇಳಿವೆ.

ವಾಣಿಜ್ಯ ಎಲ್‌ಪಿಜಿ: ಜಿಎಸ್‌ಟಿ ಶೇ 5ಕ್ಕೆ ಇಳಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಮೇಲಿನ ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಶೇಕಡ 18ರಿಂದ ಶೇಕಡ 5ಕ್ಕೆ ಇಳಿಸುವಂತೆ ರಾಜ್ಯ ಹೋಟೆಲ್ ಅಸೋಸಿಯೇಷನ್ (ಕೆಎಸ್‌ಎಚ್‌ಎ) ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

'ಈಗ ಪ್ರತಿ ಸಿಲಿಂಡರಿಗೆ ₹500 ತೆರಿಗೆ ವಸೂಲಿ ಮಾಡಲಾಗುತ್ತಿದೆ. ಈ ಭಾರವನ್ನು ಕಡಿಮೆ ಮಾಡಬೇಕು. ಕೇಂದ್ರವು ತೈಲ ಮಾರಾಟ ಕಂಪನಿಗಳ ಮೂಲಕ 60 ದಿನಗಳಲ್ಲಿ ಸಿಲಿಂಡರ್ ಬೆಲೆಯನ್ನು ₹1,308 ಹೆಚ್ಚಿಸಿದೆ. ಇದು ಇತ್ತೀಚಿನ ವರ್ಷಗಳಲ್ಲಿ ಮಾಡಲಾದ ಅತಿ ದೊಡ್ಡ ಏರಿಕೆ' ಕೆಎಸ್‌ಎಚ್‌ಎ ಅಧ್ಯಕ್ಷ ಜಿ.ಕೆ.ಶೆಟ್ಟಿ ಹೇಳಿದ್ದಾರೆ.

'ಯುದ್ಧ ಸೇರಿದಂತೆ ವಿವಿಧ ಕಾರಣಗಳಿಗೆ ಸರಬರಾಜು ಸರಪಳಿಗಳ ಮೇಲೆ ಗಂಭೀರ ಪರಿಣಾಮ ಬಿದ್ದಿದೆ. ವಾಣಿಜ್ಯ ಎಲ್‌ಪಿಜಿಯ ಕೊರತೆ ಹಾಗೂ ಬೆಲೆಗಳ ಭಾರಿ ಏರಿಕೆ ರಾಜ್ಯದಾದ್ಯಂತ ಹೋಟೆಲ್‌ಗಳ ಕಾರ್ಯಾಚರಣಾ ವೆಚ್ಚಗಳನ್ನು ಗಣನೀಯವಾಗಿ ಹೆಚ್ಚಿಸಿದೆ. ಸರ್ಕಾರ ತಕ್ಷಣ ಮಧ್ಯಪ್ರವೇಶಿಸದಿದ್ದರೆ, ಬೆಲೆ ಏರಿಕೆಯ ಒತ್ತಡವನ್ನು ಗ್ರಾಹಕರ ಮೇಲೆ ವರ್ಗಾಯಿಸುವುದರ ಹೊರತಾಗಿ ಇತರ ಯಾವುದೇ ಮಾರ್ಗೋಪಾಯ ಇಲ್ಲ. ಇದರಿಂದ ಜನ ಸಾಮಾನ್ಯರ ಮೇಲೆ ಅಧಿಕ ಒತ್ತಡ ಬೀಳಲಿದ್ದು, ಉದ್ಯಮದ ಮೇಲೆ ದುಷ್ಪರಿಣಾಮ ಬೀರಲಿದೆ' ಎಂದು ಅವರು ಎಚ್ಚರಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

HRBR Layout

2ND BLOCK BDA SITE 1200SQFT 5D MAIN 203 EAST FACING NEAR RAJKUMAR PARK Call 7760032242

ಉದ್ಯೋಗಾವಕಾಶ

Wanted

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ನೈವೇದ್ಯ ಪ್ರಸಾದ ಮಾಡಲು ಗೊತ್ತಿರುವ ಅರ್ಚಕರಿಗೆ ಆದ್ಯತೆ ನೀಡಲಾಗುತ್ತದೆ. ವಯೋಮಿತಿ 50 ವರ್ಷ, ಸಂಪರ್ಕಿಸಿ: 7019132200, 080-25300714

ಪ್ರವಾಸ

Travel Agencies

13 ದಿನಗಳ ಚಾರ್ ಧಾಮ್ ಪ್ರವಾಸ 26/5, 9 ದಿನ ನೇಪಾಳ ಪ್ರವಾಸ 21/5, 9 ದಿನಗಳ ಕುಲ್ಲು ಮನಾಲಿ ಪ್ರವಾಸ 14/5, 7 ದಿನ ಭೂತನ್ ಪ್ರವಾಸ 8/5, 4 ದಿನ ಕಾಶಿ ಪ್ರವಾಸ 4/6 ಸುವರ್ಣಯಾತ್ರಾ 6360146483/ 9008381022

Travel

22.5.2026 ನೇಪಾಳ ಮುಕ್ತಿನಾಥ ಕಾಶಿ ವೈದ್ಯನಾಥ (ವಿಮಾನ) 9.6.26 ಶಿರಡಿ ಮೂರು ಜ್ಯೋತಿರ್ಲಿಂಗ (ವಿಮಾನ) 19.6.26 ರಾಜಸ್ಥಾನ ವಿಮಾನ ಪ್ರವಾಸ ಮಲ್ಲಿಕಾರ್ಜುನ ಪ್ಯಾಕೇಜ್ ಮೊ: 8496044942/ 8277409101

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಮೈಸೂರು ನಗರ ವಿಭಾಗ, ಮೈಸೂರು

ಸಂ: ಕಾರಸಾ/ಮೈನವಿ/ಸಂ/ವಾ/259/2026-27 ದಿನಾಂಕ: 30.04.2026

ಇ–ಟೆಂಡರ್ ಪ್ರಕಟಣೆ ಸಂಖ್ಯೆ: 03/2026 (ಇ–ಪ್ರೊಕ್ಯೂರ್‌ಮೆಂಟ್ ಮತ್ತು ನೇರವಾಗಿ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಮೈಸೂರು ನಗರ ವಿಭಾಗದ ವ್ಯಾಪ್ತಿಯ ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಖಾಲಿ ಇರುವ/ ಖಾಲಿಯಾಗಲಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆ, ಕೊಠಡಿ, ಜನರಲ್ ಸ್ಟಾಲ್ (ವ್ಯಾಪಾರ/ಕಛೇರಿ) ನಡೆಸಲು ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಇ–ಟೆಂಡರ್ ಪ್ರಕಟಣೆ ಸಂಖ್ಯೆ: 03/2026 ದಿನಾಂಕ: 30.04.2026 ಅನ್ನು ಹೊರಡಿಸಲಾಗಿದೆ. ಶಾಶ್ವತ ಮಳಿಗೆ, ಕೊಠಡಿಗಳನ್ನು ಐದು (05) ವರ್ಷಗಳ ಅವಧಿಗೆ "ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ" ಆಧಾರದ ಮೇಲೆ ಪರವಾನಗಿಯನ್ನು ನೀಡಲಾಗುವುದು.

ಇ–ಟೆಂಡರ್ ಪ್ರಕಟಣೆಯ ವಿವರ: 1) ಇ–ಟೆಂಡರ್ ಕುರಿತು ವಿಚಾರಣೆಗೆ ಕಡೆಯ ದಿನಾಂಕ: 18.05.2026, ಸಮಯ 17.00 ಗಂಟೆಗೆ. 2) ಇ–ಟೆಂಡರ್/ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 20.05.2026, ಸಮಯ 15.00 ಗಂಟೆಗೆ. 3) ಇ–ಟೆಂಡರ್ ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 22.05.2026, ಸಮಯ 15.00 ಗಂಟೆಗೆ. 4) ಇ–ಟೆಂಡರ್ ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 26.05.2026, ಸಮಯ 16.00 ಗಂಟೆಗೆ. 5) ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸಲು ಕಡೆಯ ದಿನಾಂಕ: 20.05.2026, ಸಮಯ 17.00 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ ವಿಭಾಗಿಯ ಕಛೇರಿ, ಕ.ರಾ.ರ.ಸಾ. ನಿಗಮ, ಮೈಸೂರು ನಗರ ವಿಭಾಗ (ಸಂಚಾರ ಶಾಖೆ), ನೆಲ್ಸನ್‌ಮಂಡೆಲಾ ರಸ್ತೆ, ಬನ್ನಿಮಂಟಪ, ಮೈಸೂರು, ಇವರನ್ನು ಸಂಪರ್ಕಿಸಲು ಕೋರಲಾಗಿದೆ (ದೂ: 9480665919/ 8904436359/9606978102).

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಮೈಸೂರು ನಗರ ವಿಭಾಗ.

ವಾ.ಸಾ.ಸಂ.ಇ/ವಾಪ್ರ/471/ಆಕಾರ್/2026-27

ವಿಯೆಟ್ನಾಂ ಯುದ್ಧ ಕಾಲದ ಕಾನೂನು ಅನ್ವಯಿಸಬೇಕಿಲ್ಲ; ಅಮೆರಿಕದ ಅಧ್ಯಕ್ಷ ಟ್ರಂಪ್ ಪ್ರತಿಪಾದನೆ

'ಇರಾನ್ ಯುದ್ಧ; ಸಂಸತ್ತಿನ ಅನುಮತಿ ಬೇಕಿಲ್ಲ'

ವಾಷಿಂಗ್ಟನ್ (ಎಎಫ್‌ಪಿ/ಎಪಿ): 'ಇರಾನ್ ಮೇಲೆ ಮತ್ತೆ ಯುದ್ಧ ಮುಂದುವರಿಸಬೇಕಾದರೆ, ಅಮೆರಿಕ ಸಂಸತ್ತಿನ ಅನುಮತಿ ಬೇಕಾಗಿಲ್ಲ' ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

'ಯುದ್ಧವು ಕದನ ವಿರಾಮದಲ್ಲಿದೆ. ಈಗ ಮತ್ತೆ ಸೇನಾ ಕಾರ್ಯಾಚರಣೆ ಮುಂದುವರಿಸಲು ವಿಯೆಟ್ನಾಂ ಯುದ್ಧ ಕಾಲದ ಕಾನೂನನ್ನು ಅನ್ವಯಿಸಬೇಕಿಲ್ಲ' ಎಂದು ಸಂಸತ್ತಿನ ಸ್ಪೀಕರ್‌ಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

ಸ್ಪೀಕರ್ ಮೈಕ್ ಜಾನ್ಸನ್ ಹಾಗೂ ಸೆನೆಟ್‌ನ ಹಂಗಾಮಿ ಅಧ್ಯಕ್ಷರಾದ ಛುಕ್ ಗ್ರೆಸ್ಲೆಗೆ ಅವರು ಪತ್ರ ಬರೆದಿದ್ದು, ಏ.7ರಂದು ಘೋಷಿಸಿದ್ದ ಕದನ ವಿರಾಮವು ತಾತ್ಕಾಲಿಕವಾಗಿ ಸ್ಥಗಿತದಲ್ಲಿದೆ. ಮತ್ತೆ ಯುದ್ಧ ಆರಂಭಿಸಲು ಅನುಮತಿ ಬೇಕಿಲ್ಲ ಎಂದು ಟ್ರಂಪ್ ತಿಳಿಸಿದ್ದಾರೆ' ಎಂದು ಅಮೆರಿಕದ ದೈನಿಕ 'ನ್ಯೂಯಾರ್ಕ್ ಟೈಮ್ಸ್' ವರದಿ ಮಾಡಿದೆ.

ಅನುಮತಿ ಅಗತ್ಯ: ಇರಾನ್ ಜೊತೆಗಿನ ಅಮೆರಿಕ ಘೋಷಿಸಿರುವ 60 ದಿನಗಳ ಕದನ ವಿರಾಮವು ಮೇ 1ಕ್ಕೆ ಕೊನೆಗೊಂಡಿದೆ. ಯುದ್ಧ ಮುಂದುವರಿಸುವುದಾದರೆ, ಡೊನಾಲ್ಡ್ ಟ್ರಂಪ್ ಸರ್ಕಾರವು ಸಂಸತ್ತಿನ ಅನುಮೋದನೆ ಪಡೆಯುವುದು ಅನಿವಾರ್ಯವಾಗಿದೆ.

ಇರಾನ್ ಮೇಲೆ ಅಮೆರಿಕ ದಾಳಿ ನಡೆಸಿದ ಕುರಿತು ಟ್ರಂಪ್ ಮಾರ್ಚ್ 2ರಂದು ಸಂಸತ್ತಿಗೆ ತಿಳಿಸಿದ್ದು, ಮೇ 1ಕ್ಕೆ 60 ದಿನ ಪೂರ್ಣಗೊಂಡಿದೆ. ಯುದ್ಧ ಮುಂದುವರಿಸಲು ಸಂಸತ್ತಿನ ಅನುಮೋದನೆ ಪಡೆಯದ ಹೊರತು, ಅಮೆರಿಕ ಸಶಸ್ತ್ರ ಪಡೆಗಳ ಬಳಕೆಯನ್ನು 60 ದಿನಗಳಲ್ಲಿ ಕೊನೆಗೊಳಿಸಬೇಕು ಎಂದು ದೇಶದ ಕಾನೂನು ಹೇಳುತ್ತದೆ ಎಂದು ಅಮೆರಿಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಡಲ್ಗಳ್ಳರಂತೆ ವರ್ತಿಸಿ ಕಾರ್ಯಾಚರಣೆ: ಹೊರ್ಮುಜ್ ಜಲಸಂಧಿಯಲ್ಲಿ ಹಡಗನ್ನು ವಶಪಡಿಸಿಕೊಳ್ಳುವುದಕ್ಕಾಗಿ ನಡೆಸಿದ್ದ ಕಾರ್ಯಾಚರಣೆ ವೇಳೆ ಅಮೆರಿಕ ನೌಕಾಪಡೆ ಸಿಬ್ಬಂದಿ 'ಕಡಲ್ಗಳ್ಳರಂತೆ' ವರ್ತಿಸಿದ್ದರು ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

'ನಾವು ಇರಾನ್‌ನ ಹಡಗಿನ ಮೇಲೆ ಇಳಿದೆವು ಮತ್ತು ಅದನ್ನು ನಮ್ಮ ವಶಕ್ಕೆ ಪಡೆದು, ಅದರಲ್ಲಿದ್ದ ಸರಕು ಮತ್ತು ತೈಲವನ್ನು ಸ್ವಾಧೀನಪಡಿಸಿಕೊಂಡೆವು' ಎಂದು ಟ್ರಂಪ್ ಅವರು ಫ್ಲಾರಿಡಾದಲ್ಲಿ ನಡೆದ ರ‍್ಯಾಲಿಯಲ್ಲಿ ಹೇಳಿದ್ದಾರೆ.

'ಹೊರ್ಮುಜ್: ಶುಲ್ಕ ನೀಡಿದರೆ ನಿರ್ಬಂಧ'

ದುಬೈ: ಹೊರ್ಮುಜ್ ಜಲಸಂಧಿ ಮೂಲಕ ಸುರಕ್ಷಿತವಾಗಿ ಸಾಗಲು ಇರಾನ್‌ಗೆ ಶುಲ್ಕ ಪಾವತಿಸಿದರೆ ನಿರ್ಬಂಧ ಎದುರಿಸಬೇಕಾಗುತ್ತದೆ ಎಂದು ಹಡಗು ಕಂಪನಿಗಳಿಗೆ ಅಮೆರಿಕ ಎಚ್ಚರಿಕೆ ನೀಡಿದೆ. ಯುದ್ಧವನ್ನು ಕೊನೆಗೊಳಿಸುವ ಇರಾನ್‌ನ ಇತ್ತೀಚಿನ ಪ್ರಸ್ತಾವವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿರಸ್ಕರಿಸಿದ ಬಳಿಕ ಈ ಎಚ್ಚರಿಕೆ ಸಂದೇಶ ಹೊರಬಂದಿದೆ.

ದೋಣಿ ದುರಂತ: ಮೃತರ ಸಂಖ್ಯೆ 11ಕ್ಕೆ ಏರಿಕೆ

ಜಬಲ್ಪುರ್ (ಪಿಟಿಐ): ಮಧ್ಯಪ್ರದೇಶದ ಜಬಲ್ಪುರ್‌ನಲ್ಲಿ ಪ್ರವಾಸಿಗರಿದ್ದ ದೋಣಿ ಮಗುಚಿದ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 11ಕ್ಕೆ ಏರಿಕೆಯಾಗಿದೆ. ನಾಪತ್ತೆಯಾಗಿರುವ ಇಬ್ಬರಿಗಾಗಿ ಶೋಧ ಕಾರ್ಯಾಚರಣೆ ಮುಂದುವರಿದಿದೆ.

ವಿರಾಜ್ ಸೋನಿ (6) ಹಾಗೂ ತಮಿಳ್ (5) ಅವರ ಶವಗಳನ್ನು ಹೊರತೆಗೆಯಲಾಗಿದೆ. ತಮಿಳ್ ತಂದೆ ಕಾಮರಾಜ್ ಹಾಗೂ ಅವರ ಸೋದರಳಿಯ ಮಯೂರಂ (5) ನಾಪತ್ತೆಯಾಗಿದ್ದು, ಅವರ ಪತ್ತೆಗೆ ಯತ್ನ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಲ್ಲೆಯ ಬಾರ್ಗಿ ಜಲಾಶಯದಲ್ಲಿ 41 ಮಂದಿ ಪ್ರಯಾಣಿಕರಿದ್ದ ದೋಣಿ ಮಗುಚಿತ್ತು. 28 ಮಂದಿಯನ್ನು ಗುರುವಾರ ರಾತ್ರಿ ರಕ್ಷಿಸಲಾಗಿತ್ತು. ಘಟನೆ ಸಂಬಂಧ ಎಫ್‌ಐಆರ್ ದಾಖಲಿಸಲಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ನರ್ಮದಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಜಲಾಶಯದಲ್ಲಿ ಶೋಧದ ವ್ಯಾಪ್ತಿಯನ್ನು 5 ಕಿ.ಮೀಗೆ ವಿಸ್ತರಿಸಲಾಗಿದೆ. ಸೇನೆಯ 20 ಮುಳುಗುತಜ್ಞರು ಹಾಗೂ ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆಗಳ ಸಿಬ್ಬಂದಿಯು ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ. ಮೃತರ ಮರಣೋತ್ತರ ಪರೀಕ್ಷೆ ಪೂರ್ಣಗೊಂಡಿದೆ ಎಂದು ತಿಳಿಸಿದ್ದಾರೆ.

ಸುರಕ್ಷತಾ ಲೋಪಗಳ ಆರೋಪದ ಬಳಿಕ ಪ್ರವಾಸೋದ್ಯಮ ಇಲಾಖೆಯ ಮೂವರನ್ನು ಅಮಾನತುಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ.

ಬಾಲಕಿ ಮೇಲೆ ಅತ್ಯಾಚಾರ, ಕೊಲೆ

ಪ್ರಜಾವಾಣಿ ವಾರ್ತೆ

ಮುಂಬೈ: ನಾಲ್ಕು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿರುವ 65 ವರ್ಷದ ವೃದ್ಧನೊಬ್ಬನು ಆಕೆಯನ್ನು ಬರ್ಬರವಾಗಿ ಕೊಂದಿದ್ದಾನೆ.

ಪುಣೆ ಜಿಲ್ಲೆಯ ಭೋರ್ ತಾಲ್ಲೂಕಿನ ನಸ್ರಾಪುರದಲ್ಲಿ ಈ ದುರ್ಘಟನೆ ನಡೆದಿದೆ. ಆರೋಪಿಯು ಬಾಲಕಿಯನ್ನು ದನದ ಕೊಟ್ಟಿಗೆಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದಾನೆ. ತನ್ನ ದುಷ್ಕೃತ್ಯ ಮರೆಮಾಚಲು ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ್ದಾನೆ. ಶವವನ್ನು ಸಗಣಿ ರಾಶಿಯೊಳಗೆ ಹೂತು ಹಾಕಿದ್ದಾನೆ ಎನ್ನಲಾಗಿದೆ.

ಆರೋಪಿ ವೃದ್ಧನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಜೆಪಿ ಸೇರಿದ್ದ ಪಾಠಕ್ ವಿರುದ್ಧ ಪ್ರಕರಣ ದಾಖಲು

ಚಂಡೀಗಢ (ಪಿಟಿಐ): ಎಎಪಿ ತೊರೆದು ಇತ್ತೀಚೆಗೆ ಬಿಜೆಪಿಗೆ ಸೇರಿದ್ದ ಪಂಜಾಬ್‌ನ ರಾಜ್ಯಸಭಾ ಸದಸ್ಯ ಸಂದೀಪ್ ಪಾಠಕ್ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

ಪಾಠಕ್ ವಿರುದ್ಧ ಜಾಮೀನು ರಹಿತ ಪ್ರಕರಣ ದಾಖಲಾಗಿದೆ ಎಂದು ಮೂಲಗಳು ಶನಿವಾರ ತಿಳಿಸಿವೆ. ಯಾವ ಕಾರಣಕ್ಕೆ ಪ್ರಕರಣ ದಾಖಲಾಗಿದೆ ಎಂಬ ಮಾಹಿತಿ ಲಭ್ಯವಾಗಿಲ್ಲ.

ಬಿಜೆಪಿ ಆಕ್ರೋಶ: ಸಂದೀಪ್ ಪಾಠಕ್ ವಿರುದ್ಧ ಪ್ರಕರಣ ದಾಖಲಿಸಿರುವುದನ್ನು ಬಿಜೆಪಿ ಖಂಡಿಸಿದ್ದು, 'ಎಎಪಿ ಸಂಯೋಜಕ ಅರವಿಂದ ಕೇಜ್ರಿವಾಲ್ ದ್ವೇಷದ ರಾಜಕೀಯ ಮಾಡುತ್ತಿದ್ದಾರೆ' ಎಂದು ಆರೋಪಿಸಿದೆ.

ವಿಳಂಬ ಧೋರಣೆ: ಸಿ.ಎಂ ಚಾಟಿ

ಒಂದನೇ ಪುಟದಿಂದ...

'ಸಾರ್ವಜನಿಕ ಕುಂದುಕೊರತೆಯಡಿ 3,27,052 ಅರ್ಜಿಗಳಲ್ಲಿ 3,17,576 ವಿಲೇವಾರಿ ಮಾಡಲಾಗಿದೆ. 1,828 ಅರ್ಜಿಗಳ ವಿಲೇವಾರಿ ನಿಗದಿತ ಕಾಲಾವಧಿ ಮುಗಿದಿದೆ. ಸಾರ್ವಜನಿಕರ ಕುಂದುಕೊರತೆಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡದಿದ್ದರೆ ಸರ್ಕಾರದ ಮೇಲಿನ ನಂಬಿಕೆಯೇ ಹೊರಟು ಹೋಗುತ್ತದೆ. ಅದಕ್ಕೆ ಅವಕಾಶ ನೀಡಬಾರದು. ಸಕಾಲ ಅಡಿ ಸ್ವೀಕರಿಸುವ ಅರ್ಜಿಗಳನ್ನೂ ಸಕಾಲದಲ್ಲಿಯೇ ವಿಲೇವಾರಿ ಮಾಡಬೇಕು' ಎಂದರು.

'ಕೇಂದ್ರ ಪುರಸ್ಕೃತ ವಿವಿಧ ಕಾರ್ಯಕ್ರಮಗಳಡಿಯಲ್ಲಿ 2025-26ನೇ ಸಾಲಿನಲ್ಲಿ ರಾಜ್ಯ ಸರ್ಕಾರ ತನ್ನ ಪಾಲಿನ ₹22,768 ಕೋಟಿ ಬಿಡುಗಡೆ ಮಾಡಿದೆ. ಕೇಂದ್ರ ಸರ್ಕಾರ ₹16,729 ಕೋಟಿ ಬಿಡುಗಡೆ ಮಾಡಿದೆ. ಕೇಂದ್ರದಿಂದ ₹11,367 ಕೋಟಿ ಅನುದಾನ ಬಿಡುಗಡೆಗೆ ಬಾಕಿಯಿದೆ. ಈ ಅವಧಿಯಲ್ಲಿ ಒಟ್ಟಾರೆ ₹42,222 ಕೋಟಿ ಲಭ್ಯ ಅನುದಾನವಿದ್ದು, ₹ 38,236 ಕೋಟಿ ವೆಚ್ಚ ಮಾಡಲಾಗಿದೆ. ಅನುದಾನವನ್ನು ನಿಗದಿತ ಅವಧಿಯ ಒಳಗೆ ಖರ್ಚು ಮಾಡಲು ಕ್ರಮ ತೆಗೆದುಕೊಳ್ಳಬೇಕು' ಎಂದರು.

'ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಮ್ಮ ವ್ಯಾಪ್ತಿಯ ಜಿಲ್ಲೆಯಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಗ್ಗೆ ನಿರಂತರ ನಿಗಾ ವಹಿಸಬೇಕು. ಈ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜೊತೆ ಸಭೆ ನಡೆಸಬೇಕು' ಎಂದು ಸೂಚನೆ ನೀಡಿದರು.

ತಕ್ಷಣ ಕ್ರಮ ಕೈಗೊಳ್ಳಿ: 'ಈಗಾಗಲೇ ಮಂಜೂರಾತಿ ನೀಡಿರುವ ಹುದ್ದೆಗಳ ಭರ್ತಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು. ಕೆಲವು ಇಲಾಖೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆ ಬಾಕಿಯಿದ್ದು, ಅದನ್ನೂ ಮುಗಿಸಬೇಕು' ಎಂದರು.

'ರಾಜಕಾರಣಿಗಳ ಓಲೈಕೆ ಸಲ್ಲ'

'ಅಧಿಕಾರಿಗಳು ಕಾನೂನು ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು. ಆ ವ್ಯಾಪ್ತಿಯೊಳಗೆ ಸಚಿವರಿಗೆ ಸಲಹೆಗಳನ್ನು ನೀಡಬೇಕು. ಹಿರಿಯ ಅಧಿಕಾರಿಗಳು ತಮ್ಮ ಅಭಿಪ್ರಾಯಗಳನ್ನು ನಿರ್ಭಯವಾಗಿ, ಸ್ವತಂತ್ರವಾಗಿ, ಸತ್ಯವಾಗಿ ಹೇಳಬೇಕು. ಸರ್ಕಾರಕ್ಕೆ ಯಾವತ್ತೂ ತಪ್ಪು ಮಾಹಿತಿ ನೀಡಬಾರದು ಹಾಗೂ ತಪ್ಪು ಹಾದಿಗೆ ಎಳೆಯಬಾರದು. ನಮ್ಮ ನಿಲುವುಗಳು, ತೀರ್ಮಾನಗಳು ಯಾವತ್ತೂ ಜನಪರವಾಗಿರಬೇಕು' ಎಂದೂ ಮುಖ್ಯಮಂತ್ರಿ ಸಲಹೆ ನೀಡಿದರು.

ಪ್ರಸಾರ ಭಾರತಿ ಅಧ್ಯಕ್ಷರಾಗಿ ಪ್ರಸೂನ್ ಜೋಶಿ

ನವದೆಹಲಿ (ಪಿಟಿಐ): ಖ್ಯಾತ ಗೀತರಚನೆಕಾರ, ಬರಹಗಾರ ಮತ್ತು ಸಂವಹನ ತಜ್ಞ ಪ್ರಸೂನ್ ಜೋಶಿ ಅವರನ್ನು 'ಪ್ರಸಾರ ಭಾರತಿ'ಯ ಅಧ್ಯಕ್ಷರನ್ನಾಗಿ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ನೇಮಿಸಿದೆ.

ಆಗಸ್ಟ್ 2017ರಿಂದ ಜೋಶಿ ಅವರು ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಯ (ಸಿಬಿಎಫ್‌ಸಿ) ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಸಂ.ಕಾನಿಇಂ/ಪಿಬಿ/ಗುತ್ತಿಗೆ/8443/2026–27/491 ದಿನಾಂಕ : 02–05–2026

ಮುಂದೂಡಿದ ಪ್ರಕಟಣೆ ನಂ.01

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.ಪಿಬಿ/ಗುತ್ತಿಗೆ/8443/2026–27/103/ ದಿನಾಂಕ : 07–04–2026ರಲ್ಲಿನ ಕಾಮಗಾರಿಗಳ ಕ್ರಸಂ.01 (ನಂ.35506) ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನಂತೆ ದಿನಾಂಕಗಳನ್ನು ಮರು ನಿಗದಿಪಡಿಸಲಾಗಿದೆ. (1) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **20–05–2026**ರ ಸಾಯಂಕಾಲ 04–00 ಗಂಟೆಯವರೆಗೆ (2) ಕಾಮಗಾರಿಯ ಗುತ್ತಿಗೆ ಪತ್ರಗಳನ್ನು ತೆರೆಯುವ ದಿನಾಂಕ : **21–05–2026**ರ ಸಾಯಂಕಾಲ 04–30 ಗಂಟೆಗೆ (3) ಕಾಮಗಾರಿಯ ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ : **22–05–2026** ರ ಮುಂಜಾನೆ 11–00 ಗಂಟೆಗೆ

ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/72/2026–27

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
4ನೇ ಮಹಡಿ, ಟಿಟಿಎಂಸಿ ಕಟ್ಟಡ "ಎ" ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು–560027. ದೂ:080–22483636/38/39
ಸಂಖ್ಯೆ:ಹೆಚ್‌ಆರ್–14014/2021/ಮಾನವ ಸಂಪನ್ಮೂಲಗಳು/ಕರಾಪಾನಿನಿ/6140 ದಿನಾಂಕ:30–04–2026

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಪಾನೀಯ ನಿಗಮವು (ಕೆಎಸ್‌ಬಿಸಿಎಲ್) ಕೆಟಿಪಿಪಿ ಕಾಯಿದೆ 1999 ಮತ್ತು ನಿಯಮಗಳು 2000 ರಂತೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದೆ. ಹೆಚ್ಚಿನ ಮಾಹಿತಿಗಾಗಿ **www.kppp.karnataka.gov.in** ಅಥವಾ **www.ksbcl.com**ಗೆ ಭೇಟಿ ನೀಡಿ.

ಸೇವೆಯ ಹೆಸರು: ಎಸ್ಕಾರ್ಟ್ ಭದ್ರತಾ ಸಿಬ್ಬಂದಿಗಳ (ಎಸ್ಕಾರ್ಟ್ ಐಎಂಎಲ್ ಸ್ಪಿರಿಟ್‌ಗಳಿಗೆ ಭದ್ರತಾ ಸಿಬ್ಬಂದಿಗಳು) ಸೇವೆಯನ್ನು ಒದಗಿಸುವ ಬಗ್ಗೆ.

ಟೆಂಡರ್ ವೇಳಾಪಟ್ಟಿಯು ಈ ಕೆಳಕಂಡಂತಿರುತ್ತದೆ.
(1) ಪೂರ್ವಭಾವಿ ಸಭೆಯ ದಿನಾಂಕ:**05.05.2026**ರ ಬೆಳಿಗ್ಗೆ **11:30 ಗಂಟೆಗೆ.**
(2) ಟೆಂಡರ್ ಕುರಿತು ಪ್ರಶ್ನಾವಳಿ/ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ **14.05.2026**ರ ಸಂಜೆ **4:30 ಗಂಟೆಗೆ.**
(3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **16.05.2026**ರ ಸಂಜೆ **4:30 ಗಂಟೆಗೆ.**
(4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:**18.05.2026**ರ ಬೆಳಿಗ್ಗೆ **10:30 ಗಂಟೆಗೆ.**
(5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:**20.05.2026**ರ ಬೆಳಿಗ್ಗೆ **10:30 ಗಂಟೆಗೆ.**

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು (ಹೆಚ್‌ಆರ್ & ಅಡ್ಮಿನ್)

ಡಿಐಪಿಆರ್/ಸಿಪಿ/469/ಸಿಸಿಎಲ್/2026–27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)
ಸಂ:ಬಿ31/ಅಇಂ(ಐಟಿ)/ಕಾನಿಇಂ(ಐಟಿ–4)/66245/2026–27 ದಿನಾಂಕ:02.05.2026

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಬಿಡ್ ವಿಚಾರಣೆ ಸಂಖ್ಯೆ: **KPTCL/B31/SEE(IT)/66247/16/2025-26/CALL-2**ರ ಅನ್ವಯ **"Engaging Technical Manpower for Transmission Asset Digitization Works at GIS Cell in KPTCL"** ಸಲುವಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್‌ನ್ನು ಆಹ್ವಾನಿಸಿದೆ. ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ ಬಿಡ್‌ಗಳನ್ನು ಸ್ವೀಕರಿಸಲಾಗುವುದು. ವಿಚಾರಣೆಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯ ಸಂಪೂರ್ಣ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in**ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ **https://kppp.karnataka.gov.in** ನಲ್ಲಿ **ದಿನಾಂಕ: 04.05.2026 ರ ಸಂಜೆ 5:00 ಗಂಟೆಗೆ** ಅಥವಾ ನಂತರ ಪಡೆಯಬಹುದು. ಹೆಚ್ಚುವರಿ ಮಾಹಿತಿಗಾಗಿ ಈ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಕವಿಪ್ರನಿನಿ, ನಿಗಮ ಕಛೇರಿ, 11ನೇ ಮಹಡಿ, ಇಂಧನ ಭವನ,
ಆನಂದ್‌ರಾವ್ ವೃತ್ತ, ಬೆಂಗಳೂರು–560009.

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಕ್ಯೂಎ/ಕ್ಯೂಸಿ), ವಲಯ–1, 4ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 30ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಜಯನಗರ 4ನೇ ಬ್ಲಾಕ್, ಬೆಂಗಳೂರು – 560011.
ಸಂಖ್ಯೆ:ಕಾಅ(ಕ್ಯೂಎ/ಕ್ಯೂಸಿ)/ವ–1/ಬೆಂದನಪಾ/ಟೆಂಡರ್/05/2026–27 ದಿನಾಂಕ: 02–05–2026

ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗ, ವಲಯ–1, ಬೆಂದನಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನಾ ನಿರ್ವಹಣೆಗೆ ಸಮಾಲೋಚನಾ ಸೇವೆಗಳಿಗಾಗಿ ಇದೇ ವಿಧದ ಕಾಮಗಾರಿಗಳನ್ನು ನಿರ್ವಹಿಸಿರುವ ಆಸಕ್ತ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ಮನವಿ ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ವಾರ್ಡ್ ಸಂಖ್ಯೆ. 182, ಬೈರಸಂದ್ರದ ಕಾವೇರಮ್ಮ ದೇವಸ್ಥಾನ 2ನೇ ಅಡ್ಡರಸ್ತೆ, ಬೈರಸಂದ್ರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳು, ಕಲ್ವರ್ಟ್‌ಗಳ ಸುಧಾರಣೆಗಳ ಕಾಮಗಾರಿಗೆ ಮೇಲ್ವಿಚಾರಣೆ ಹಾಗೂ ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನೆಯ ಮೊತ್ತ (ರೂ. ಲಕ್ಷಗಳಲ್ಲಿ): 200.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,000/–**
2	ವಾರ್ಡ್ ಸಂಖ್ಯೆ. 184, ಜಯನಗರ ಪೂರ್ವದ ಬ್ಲಾಕ್ ಸಂಖ್ಯೆ. 52.2, 22.1. 22 2 52 1. 23 1, 58 2, 23 2, 57 1, 50 2 ಮತ್ತು 18 ಇಲ್ಲಿನ ಕಾರ್ಪೋರೇಷನ್ ಕಾಲೋನಿ 29ನೇ 'ಎ' ಮುಖ್ಯರಸ್ತೆ, 29ನೇ ಮುಖ್ಯರಸ್ತೆ, 28ನೇ 'ಬಿ' ಮುಖ್ಯರಸ್ತೆ, 28ನೇ 'ಎ' ಮುಖ್ಯರಸ್ತೆ ಮತ್ತು 28ನೇ ಮುಖ್ಯರಸ್ತೆ, 41ನೇ ಅಡ್ಡರಸ್ತೆಯ ಮಾರೇನಹಳ್ಳಿ ರಿಂಗ್ ರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಪಾದಚಾರಿಮಾರ್ಗ, ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆಗಳ ಕಾಮಗಾರಿಗೆ ಮೇಲ್ವಿಚಾರಣೆ ಹಾಗೂ ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನೆಯ ಮೊತ್ತ (ರೂ. ಲಕ್ಷಗಳಲ್ಲಿ): 300.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 7,500/–**
3	ವಾರ್ಡ್ ಸಂಖ್ಯೆ. 188, ಶಾಕಾಂಬರಿನಗರದ ಜೆ.ಪಿ. ನಗರ 1ನೇ ಫೇಸ್, 2ನೇ ಫೇಸ್ ಲೇಔಟ್, ಶಾಕಾಂಬರಿನಗರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಇತರೆ ಅಭಿವೃದ್ಧಿ ಕೆಲಸಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ಮೇಲ್ವಿಚಾರಣೆ ಹಾಗೂ ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನೆಯ ಮೊತ್ತ (ರೂ. ಲಕ್ಷಗಳಲ್ಲಿ): 210.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,250/–**
4	ವಾರ್ಡ್ ಸಂಖ್ಯೆ. 187, ಸಾರಕ್ಕಿಯ ಜೆ.ಪಿ. ನಗರ 1ನೇ ಫೇಸ್, 2ನೇ ಫೇಸ್ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಇತರೆ ಅಭಿವೃದ್ಧಿ ಕೆಲಸಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ಮೇಲ್ವಿಚಾರಣೆ ಹಾಗೂ ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನೆಯ ಮೊತ್ತ (ರೂ. ಲಕ್ಷಗಳಲ್ಲಿ): 290.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 7,250/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **04–05–2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **08–05–2026 ರಂದು ಬೆಳಿಗ್ಗೆ 11.30 ಗಂಟೆಗೆ ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ) ಕಛೇರಿ, ಬೆಂದನಪಾ, 4ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 30ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಜಯನಗರ 4ನೇ ಬ್ಲಾಕ್, ಬೆಂಗಳೂರು – 560011 ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **14–05–2026 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **15–05–2026 ರಂದು ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ), ವಲಯ–1, ಬೆಂದನಪಾ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜನೀಯರರವರ ಕಛೇರಿ, ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ–3, ನಾರಾಯಣಪೂರ ತಾ: ಹುಣಸಗಿ
Office of the EXECUTIVE ENGINEER, KBJNL, Dam Safety Unit-3 Narayanpur-585219
KBJNL/DSU-3/PB/AWP/2026-27/120 Dated:-02.05.2026

ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಆಲಮಟ್ಟಿ/ಬೆಂಗಳೂರು ಇವರ ಪರವಾಗಿ ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ–3, ನಾರಾಯಣಪೂರ ಅಡಿ ಅನುಮೋದನೆಗೊಂಡಿರುವ ಟೆಂಡರು ಪ್ರಕಟಣೆ ಸಂ. 76 ದಿನಾಂಕ: 21.04.2026 ಈ ವಿಭಾಗದಡಿಯಲ್ಲಿ ಬರುವ ವಾರ್ಷಿಕ ನಿರ್ವಹಣೆ ಕಾಮಗಾರಿಗಾಗಿ Two E-Document System ನ ಟೆಂಡರ್‌ಗಾಗಿ ಇ–ಪೋರ್ಟಲ್ https://kppp.karnataka.gov.in ಮುಖಾಂತರ ಅರ್ಜಿಯನ್ನು ಆಹ್ವಾನಿಸಲಾಗಿದ್ದು, Qualification criteria ನಲ್ಲಿ ನಮೂದಿಸಿರುವಂತೆ ಎಲ್ಲಾ ದಾಖಲೆಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ಹೊಂದಿರುವ ಅರ್ಹ ದರ್ಜೆ ಗುತ್ತಿಗೆದಾರರು ಭಾಗವಹಿಸತಕ್ಕದ್ದು. ಟೆಂಡರ್ ಪ್ರಕ್ರಿಯೆಯು ಈ ಕೆಳಗಿನಂತೆ ಇರುತ್ತದೆ.

ಕ್ರ. ಸಂ.	ವಿವರ	ಟೆಂಡರ್ ಪ್ರಕ್ರಿಯೆಯ ದಿನಾಂಕ
1.	ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಲು ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ದಿ: 02.05.2026 ರಿಂದ ದಿ: 20.05.2026 ಸಂಜೆ 5.00 ಗಂಟೆಯವರೆಗೆ
2.	ಗುತ್ತಿಗೆದಾರರು ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ	ದಿ: 20.05.2026 ಸಂಜೆ 5.00 ಗಂಟೆಯವರೆಗೆ
3.	ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಕಾರ್ಯನಿರ್ವಾಹಕ ಇಂಜನೀಯರರು, ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ–3, ನಾರಾಯಣಪೂರ ಇವರ ಕಚೇರಿಯಲ್ಲಿ)	ದಿ: 22.05.2026 ಬೆಳಿಗ್ಗೆ 11.00 ಗಂಟೆಗೆ
4.	ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ (ಕಾರ್ಯನಿರ್ವಾಹಕ ಇಂಜನೀಯರರು, ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ–3, ನಾರಾಯಣಪೂರ ಇವರ ಕಚೇರಿಯಲ್ಲಿ)	ದಿ: 25.05.2026 ಬೆಳಿಗ್ಗೆ 11.00 ಗಂಟೆಗೆ

ಆಸಕ್ತಿ ಹೊಂದಿದ ನೋಂದಾಯಿತ ಅರ್ಹ ಗುತ್ತಿಗೆದಾರರು ಇ–ಪೋರ್ಟಲ್ https://kppp.karnataka.gov.in ಮುಖಾಂತರ ಅರ್ಜಿಗಳನ್ನು ಸಲ್ಲಿಸಬಹುದು ಹಾಗೂ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜನೀಯರರು, ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ–3, ನಾರಾಯಣಪೂರ ಇವರಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– **ಕಾರ್ಯನಿರ್ವಾಹಕ ಇಂಜನೀಯರರು,**
ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ–3,
ನಾರಾಯಣಪೂರ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ ಬೆಂಗಳೂರು – 560 009. ದೂ.ಸಂಖ್ಯೆ : 080–22265383, website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–11/324/2026–27 ದಿನಾಂಕ: 02.05.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನ ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ವಿದ್ಯುನ್ಮಾನ ಪೋರ್ಟಲ್ ಮೂಲಕ ಐಟಂ ದರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : 1) ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕೂರ್ಗಳ್ಳಿ ಕೈಗಾರಿಕಾ ಪ್ರದೇಶದ ಉಪ ಬಡಾವಣೆ–8ರ ರಸ್ತೆ ಸಂಖ್ಯೆ. 1,2,& 11 ರಲ್ಲಿ ಆರ್‌ಸಿಸಿ ರಸ್ತೆ ಬದಿ ಚರಂಡಿ, ಡೆಕ್ ಸ್ಲ್ಯಾಬ್ ಮತ್ತು ನೀರು ಸರಬರಾಜು ಕೊಳವೇ ಮಾರ್ಗ ನಿರ್ಮಾಣ ಸೇರಿದಂತೆ ಡಾಂಬರು ರಸ್ತೆ ರಚನೆ ಕಾಮಗಾರಿ. 2) ಕೋಲಾರ ಜಿಲ್ಲೆ, ಕೆಜಿಎಫ್ ತಾಲ್ಲೂಕು, ಬಂಗಾರದಗಣಿ ಗ್ರಾಮ, ಕೆಜಿಎಫ್ ಕೈಗಾರಿಕಾ ಪ್ರದೇಶ ಉಪ ಬಡಾವಣೆಗೆ ಸೆಕ್ಟರ್–1 ರಲ್ಲಿ ರಸ್ತೆಗಳು, ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಆರ್.ಸಿ.ಸಿ ಅಡ್ಡಚರಂಡಿ, ತಡೆಗೋಡೆ ನಿರ್ಮಾಣ ಮತ್ತು ಹೆಚ್.ಡಿ.ಇ.ಪಿ ನೀರು ಸರಬರಾಜು ಕೊಳವೆ ಮಾರ್ಗ ನಿರ್ಮಾಣದೊಂದಿಗೆ ಕೈಗಾರಿಕಾ ಬಡಾವಣೆಯನ್ನು ರಚನೆ ಮಾಡುವ ಕಾಮಗಾರಿ. 3) ಕೋಲಾರ ಜಿಲ್ಲೆ, ಕೆಜಿಎಫ್ ತಾಲ್ಲೂಕು, ಬಂಗಾರದಗಣಿ ಗ್ರಾಮ, ಕೆಜಿಎಫ್ ಕೈಗಾರಿಕಾ ಪ್ರದೇಶ ಉಪ ಬಡಾವಣೆಗೆ ಸೆಕ್ಟರ್–2 ರಲ್ಲಿ ರಸ್ತೆಗಳು, ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಆರ್.ಸಿ.ಸಿ ಅಡ್ಡಚರಂಡಿ, ತಡೆಗೋಡೆ ನಿರ್ಮಾಣ ಮತ್ತು ಹೆಚ್.ಡಿ.ಇ.ಪಿ ನೀರು ಸರಬರಾಜು ಕೊಳವೆ ಮಾರ್ಗ ನಿರ್ಮಾಣದೊಂದಿಗೆ ಕೈಗಾರಿಕಾ ಬಡಾವಣೆಯನ್ನು ರಚನೆ ಮಾಡುವ ಕಾಮಗಾರಿ. 4) ಕೋಲಾರ ಜಿಲ್ಲೆ, ಕೆಜಿಎಫ್ ತಾಲ್ಲೂಕು, ಬಂಗಾರದಗಣಿ ಗ್ರಾಮ, ಕೆಜಿಎಫ್ ಕೈಗಾರಿಕಾ ಪ್ರದೇಶ ಉಪ ಬಡಾವಣೆಗೆ ಸೆಕ್ಟರ್–3 ರಲ್ಲಿ ರಸ್ತೆಗಳು, ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಆರ್.ಸಿ.ಸಿ ಅಡ್ಡಚರಂಡಿ, ತಡೆಗೋಡೆ ನಿರ್ಮಾಣ ಮತ್ತು ಹೆಚ್.ಡಿ.ಇ.ಪಿ ನೀರು ಸರಬರಾಜು ಕೊಳವೆ ಮಾರ್ಗ ನಿರ್ಮಾಣದೊಂದಿಗೆ ಕೈಗಾರಿಕಾ ಬಡಾವಣೆಯನ್ನು ರಚನೆ ಮಾಡುವ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 18.05.2026 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/475/Zen/2026-27

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–2 ರವರ ಕಛೇರಿ,
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052.
ಸಂಖ್ಯೆ: ಉಪ್ರವ್ಯ–2/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/03/2026–27 ದಿನಾಂಕ: 02–05–2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

1) ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ರವರು ವ್ಯವಸ್ಥಾಪಕ ನಿರ್ದೇಶಕರು, **ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು** ರವರ ಪರವಾಗಿ, ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗಾಗಿ ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸುತ್ತಿದ್ದಾರೆ. ಬಿಡ್ಡುದಾರರು ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ (**ಅಂದರೆ https://kppp.karnataka.gov.in**) ಮೂಲಕ ಕೆಳಗಿನ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಬಿಡ್‌ಗಳನ್ನು ಸಲ್ಲಿಸಬಹುದು. ಬಿಡ್ಡುದಾರರು ಒಪ್ಪಂದದ ಪ್ರದಾನಕ್ಕೆ ಅರ್ಹತೆ ಪಡೆಯಲು ಬಿಡ್‌ದಾರರಿಗೆ ಸೂಚನೆಗಳ ಷರತ್ತು–3 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಸಲಹೆ ನೀಡಲಾಗುತ್ತದೆ.
3) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
4) ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) ಜಿಎಸ್‌ಟಿಯನ್ನು ಹೊರತುಪಡಿಸಿ	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಬಿಡ್ ಡಾಕ್ಯೂಮೆಂಟ್ ವೆಚ್ಚ	ಗುತ್ತಿಗೆ ಪೂರ್ಣಗೊಳಿಸಲು ಅವಧಿ
1	Storm Water Drain from Kannur-Chikkagubbi-Doddagubbi-Rampura Lake-Yelemale Chatty Lake and Culverts Approch Roads.	8005.49	ರೂ. 1,00,000/– ಅನ್ನು ಈ ಕೆಳಗಿನವುಗಳ ಅಡಿಯಲ್ಲಿ ಇ–ಪಾವತಿಯ ಮೂಲಕ ಅಂದರೆ ಆನ್‌ಲೈನ್ / ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಮತ್ತು ಉಳಿದ ರೂ. 79,05,490/– ಅನ್ನು ರಾಷ್ಟ್ರೀಕೃತ / ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡಲಾದ ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್ ಮೂಲಕ ಪಾವತಿಸುವುದು.	ಕೆ.ಪಿ.ಪಿ. ಪೋರ್ಟಲ್ ಅನುಸಾರ	11 ತಿಂಗಳು

1) ಬಿಡ್ ಪೂರ್ವಭಾವಿ ಸಭೆ ದಿನಾಂಕ: **12–05–2026 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ಟೆಕ್) ರವರ ಕಚೇರಿ, ಬಿಎಸ್‌ಡಬ್ಲ್ಯೂಎಂಎಲ್, ಬಿಬಿಎಂಪಿ ಕಟ್ಟಡ, 1ನೇ ಮಹಡಿ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052 ಈ ಕಚೇರಿಯಲ್ಲಿ ನಡೆಯಲಿದೆ.**
2) ಟೆಂಡರ್ ಡಾಕ್ಯೂಮೆಂಟ್ ಪ್ರಕಾರ ಅಗತ್ಯ ಮಾಹಿತಿ / ದಾಖಲೆಗಳೊಂದಿಗೆ ತಾಂತ್ರಿಕ ದಾಖಲೆಗಳನ್ನು ದಿನಾಂಕ: **22–05–2026 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ** ಕೆ.ಪಿ.ಪಿ. ಪೋರ್ಟಲ್ **https://kppp.karnataka.gov.in** ಗೆ ಅಪ್‌ಲೋಡ್ ಮಾಡಬೇಕು. ತಾಂತ್ರಿಕ ಬಿಡ್‌ನ್ನು ಹೊಂದಿರುವ ಫಸ್ಟ್ ಫೋಲ್ಡರ್‌ನ್ನು ಬಿಡ್ಡುದಾರರು ಅಥವಾ ಆರಂಭಿಕ ಪ್ರಕ್ರಿಯೆಗೆ ಹಾಜರಾಗಲು ಬಯಸುವ ಅವರ ಅಧಿಕೃತ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಕೆ.ಪಿ.ಪಿ. ಪೋರ್ಟಲ್ ಮೂಲಕ ದಿನಾಂಕ: **25–05–2026 ರಂದು 16.30 ಗಂಟೆಯ ನಂತರ ನಿಗದಿತ ಸ್ಥಳದಲ್ಲಿ ತೆರೆಯಲಾಗುತ್ತದೆ.** ನಿರ್ದಿಷ್ಟಪಡಿಸಿದಂತೆ ಟೆಂಡರ್‌ಗಳನ್ನು ತೆರೆಯುವ ದಿನಾಂಕದಂದು ಕಚೇರಿಗೆ ರಜೆ ಇದ್ದಲ್ಲಿ, ಟೆಂಡರ್‌ಗಳನ್ನು ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ತೆರೆಯಲಾಗುತ್ತದೆ.
3) ತನ್ನ ನಿಯಂತ್ರಣವನ್ನು ಮೀರಿ ಸಿಸ್ಟಮ್ ವೈಫಲ್ಯದ ಕಾರಣದಿಂದ ಯಾವುದೇ ವಿಳಂಬಗಳಿಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳನ್ನು ಟೆಂಡರ್‌ದಾರರಿಗೆ ತಿಳಿಸಲು ಸಿಸ್ಟಮ್ ಪ್ರಯತ್ನಿಸಿದರೂ ಸಹ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆ.ಪಿ.ಪಿ. ಪೋರ್ಟಲ್‌ನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಸಹಾಯವಾಣಿಯ ಇ–ಮೇಲ್ ವಿಳಾಸ: **hphelpdesk.blr@intarvo.com** ಕೆ.ಪಿ.ಪಿ. ಪೋರ್ಟಲ್ ಹೆಲ್ಪ್‌ಡೆಸ್ಕ್ ದೂರವಾಣಿ ಸಂಖ್ಯೆ: **080–22371090 / 22373788**. ಟೆಂಡರ್‌ದಾರರು ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. ಇಂಟರ್ನೆಟ್ ಸಂಪರ್ಕದ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆ.ಪಿ.ಪಿ. ಪೋರ್ಟಲ್‌ಗೆ ಪ್ರವೇಶಿಸಲಾಗದಿರುವಿಕೆಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ.
4) ಯಾವುದೇ ಕೊರಿಜೆಂಡಮ್/ಅಡೆಂಡಮ್ ಅನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–2
ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/462/ಅಡ್ವರ್ಟೋರ್/2026–27

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗಾಂಧಿನಗರ ವಿಭಾಗ,
2ನೇ ಮಹಡಿ, ಬಿಬಿಎಂಪಿ ಸಂಕೀರ್ಣ, ಧನ್ವಂತರಿ ರಸ್ತೆ, ಬೆಂಗಳೂರು – 560009.
ಸಂಖ್ಯೆ: ಕಾಅ/ಜಿಎನ್‌ಆರ್/ಟೆಂಡರ್/ಕೆಪಿಪಿಪಿ/001/2026–27 ದಿನಾಂಕ: 02–05–2026

ತಿದ್ದುಪಡಿ–01

ವಿಷಯ: ಟೆಂಡರ್ ಮುಂದೂಡಲಾದ ಬಗ್ಗೆ.
ಉಲ್ಲೇಖ: 1) ಟೆಂಡರ್ ಪ್ರಕಟಣೆ ಸಂಖ್ಯೆ: ಕಾಅ/ಜಿಎನ್‌ಆರ್/ಟೆಂಡರ್/ಕೆಪಿಪಿಪಿ/001/2026–27, ದಿನಾಂಕ: 04–04–2026.

ತಾಂತ್ರಿಕ ಕಾರಣಗಳಿಂದಾಗಿ ಮೇಲ್ಕಂಡ ಟೆಂಡರ್‌ನ್ನು ಮುಂದೂಡಲಾಗಿದೆ.
ಪರಿಷ್ಕೃತ ಟೆಂಡರ್ ವೇಳಾಪಟ್ಟಿ: 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **13–05–2026 ರಂದು ಸಂಜೆ 4.00 ಗಂಟೆಯವರೆಗೆ.** 2) ಟೆಂಡರ್‌ನ್ನು ತೆರೆಯುವ ದಿನಾಂಕ: **15–05–2026 ರಂದು ಮಧ್ಯಾಹ್ನ 12.30 ಗಂಟೆಗೆ.** ಉಳಿದಂತೆ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗಾಂಧಿನಗರ ವಿಭಾಗ, ಬೆಂಕೇನಪಾ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ
ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ಟೆಂಡರ–01/2026–27/392 ದಿನಾಂಕ : 29–04–2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ–4) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 13–05–2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 14–05–2026 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 15–05–2026 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 18–05–2026 17.00 ಗಂಟೆವರೆಗೆ

ಕಾಮಗಾರಿಯ ಹೆಸರು: ಲೆಕ್ಕಶೀಷಿಕೆ: Mitigation-8443-Deposite Contribution During 2025-26 ವರ್ಕ ಇನಡೆಂಟ್ (1) PWD/2025-26/FP/WORK_INDENT 33701 (2) PWD/2025-26/FP/WORK_INDENT34502

(ಕೆಡಬ್ಲೂ–4) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "https://kppp.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMCA/97/26-27 dt. 30.04.2026

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಹಟ್ಟಿ – 584 115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ , ಕರ್ನಾಟಕ.
ದೂರವಾಣಿ: 08537-275041,
CIN No. U85110KA1947SGC001321

ಕಾನೂನು ಸಲಹೆಗಾರರ (Legal Consultant) ನೇಮಕಾತಿ

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತವು ಕರ್ನಾಟಕ ಸರ್ಕಾರದ ಸೌಮ್ಯಕ್ಕೊಳಪಟ್ಟ ಉದ್ದಿಮೆಯಾಗಿದ್ದು, ಕಂಪನಿಯಲ್ಲಿ ಕಾನೂನು ಸಲಹೆಗಾರರಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಇಚ್ಛಿಸುವ ನಿವೃತ್ತ ನ್ಯಾಯಾಧೀಶರ ನೇಮಕಾತಿಗೆ ಸಂಬಂಧಿಸಿದಂತೆ, ಅರ್ಹತೆ ಮತ್ತು ಇನ್ನಿತರ ವಿವರಗಳಿಗಾಗಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ವೆಬ್‌ಸೈಟ್ : **https://huttigold.karnataka.gov.in**ನ್ನು ವೀಕ್ಷಿಸಿ, ನಿವೃತ್ತ ನ್ಯಾಯಾಧೀಶರು **ದಿನಾಂಕ 11.05.2026 ರಂದು** ನೇರ ಸಂದರ್ಶನಕ್ಕೆ ಆಡಳಿತ ಕಛೇರಿ, ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ ಹಟ್ಟಿ –584115 ತಾಲ್ಲೂಕು: ಲಿಂಗಸುಗೂರು, ಜಿಲ್ಲಾ: ರಾಯಚೂರು ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

ಸಹಿ/–ಕಾರ್ಯನಿರ್ವಾಹಕ ನಿರ್ದೇಶಕರು

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಯಲಹಂಕ ವಿಭಾಗ,
ಬೆಂಗಳೂರು–560064
ನಂ.: ಬೆಂಉನಪಾ/ಕಾಪಾಅ/ಯಲಹಂಕ/ಕೆಪಿಪಿಪಿ/03/2026–27 ದಿನಾಂಕ: 02.05.2026

ಟೆಂಡರ್ ಆಹ್ವಾನ (ಐಎಫ್‌ಟಿ)
(ದ್ವಿ ಲಕೋಟೆ ಪದ್ಧತಿ)
(ಅಲ್ಪಾವಧಿ – ಟೆಂಡರ್ ಪ್ರಕಟಣೆ)
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್‌ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ, ಬೆಂಉನಪಾ ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯು–4)

ಕ್ರ. ಸಂ.	ಕಾಮಗಾರಿಯ ಹೆಸರು
1	ಯಲಹಂಕ ವಿಭಾಗದ ರಸ್ತೆಗಳು, ಚರಂಡಿಗಳು, ಪಾದಚಾರಿ ಮಾರ್ಗಗಳು, ಉದ್ಯಾನವನಗಳು, ಆಟದ ವ್ಯವಸ್ಥೆಗಳು ಮತ್ತು ಶೈಕ್ಷಣಿಕ ಕಟ್ಟಡಗಳ ಸಮಗ್ರ ಅಭಿವೃದ್ಧಿ. **ಟೆಂಡರ್‌ಗಿಟ್ಟ ಮೊತ್ತ ಲಕ್ಷಗಳಲ್ಲಿ: 3,526.88, ಇಎಂಡಿ ರೂ.ಗಳಲ್ಲಿ: 35,26,886.00.**
2	ವಾರ್ಡ್ ನಂ. 03 & 04ರಲ್ಲಿ ಮುಖ್ಯ ರಸ್ತೆಗಳಿಗೆ ಅಲಂಕಾರಿಕ ಕಂಬಗಳು, ದೀಪಗಳು ಎಬಿ ಕೇಬಲ್‌ಗಳು ಮತ್ತು ಸ್ವಿಚ್‌ಗಳು ಮತ್ತು ಅಲಂಕಾರಿಕ ಕಂಬಗಳು ಮತ್ತು ಪೋಸ್ಟ್‌ಟಾಪ್ ಲ್ಯಾಂಟರ್ನ್ / ದೀಪಗಳನ್ನು ಒದಗಿಸುವುದು. **ಟೆಂಡರ್‌ಗಿಟ್ಟ ಮೊತ್ತ ಲಕ್ಷಗಳಲ್ಲಿ: 241.45, ಇಎಂಡಿ ರೂ.ಗಳಲ್ಲಿ: 3,62,175.00.**

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯ ದಿನಾಂಕ: **11.05.2026**ರ **ಮಧ್ಯಾಹ್ನ 3:00 ಗಂಟೆ**ಗೆ. (3) ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **30.05.2026**ರ **ಸಂಜೆ 4:00 ಗಂಟೆ**ಯೊಳಗೆ ಸಲ್ಲಿಸತಕ್ಕದ್ದು ಮತ್ತು ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ & ಸಮಯ: **01.06.2026**ರ **ಸಂಜೆ 04:00 ಗಂಟೆ**ಯ ನಂತರ. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ **https://kppp.karnataka.gov.in** ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಯಲಹಂಕ ವಿಭಾಗ, ಬೆಂಗಳೂರು ಉತ್ತರ ನಗರ ಪಾಲಿಕೆ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ,
ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.
ಸಂಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ/ 5ನೇ ಟೆಂಡರ್ ಪ್ರಕಟಣೆ ಸಂಖ್ಯೆ: 11/2025–26/ ದಿ: 27.04.2026

ಅಲ್ಪಾವಧಿ ಟೆಂಡರ್ ಪಕಟಣೆ – 5ನೇ ಕರೆ

ಉಲ್ಲೇಖ: 1) ಸಂ:ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ / ಟೆಂಡರ್ ಪ್ರಕಟಣೆ ಸಂಖ್ಯೆ: 11/2025–26/ ದಿ: 06.10.2025 **2)** ಸಂ:ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ /2ನೇ ಟೆಂಡರ್ ಪ್ರಕಟಣೆ ಸಂಖ್ಯೆ: 11/2025–26/ ದಿ:: 28.11.2025 **3)** ಸಂ:ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ /3ನೇ ಟೆಂಡರ್ ಪ್ರಕಟಣೆ ಸಂಖ್ಯೆ: 11/2025–26/ ದಿ:: 28.01.2026 **4)** ಸಂ:ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ /4ನೇ ಟೆಂಡರ್ ಪ್ರಕಟಣೆ ಸಂಖ್ಯೆ: 11/2025–26/ ದಿ:: 23.03.2026

ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1. ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು: 29.04.2026 ರಿಂದ 15.05.2026 ರವರೆಗೆ 17.30 ಗಂಟೆಗೆ
2. Pre-Bid Meeting ದಿ : 12.05.2026 ರಂದು 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 16.05.2026 ರಂದು 17.30 ಗಂಟೆಗೆ
4. ಆರ್ಥಿಕ ಬಿಡ್ ತರೆಯುವ ದಿನಾಂಕ : After obtaining approval of technical bid from competent authority 5. ಕಾಲಾವಧಿ 18 ತಿಂಗಳು (ಮಳೆಗಾಲ ಸಹಿತ) 6. ಟೆಂಡರಿಗಿಟ್ಟ ಮೊತ್ತ ರೂ.4225.15 ಲಕ್ಷಗಳು 7. ಇ.ಎಂ.ಡಿ ಮೊತ್ತ ರೂ.42.25 ಲಕ್ಷಗಳು (Rs.1.00 lakhs e-cash balance amt e-BIG Rs.41.25 lakhs)

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಪೋನ್– 8660573513

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ., ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/140/04/166

ಕೊಪ್ಪಳದ ಬೆವರಿನ ಮಾರುಕಟ್ಟೆ

ಸೂರ್ಯ ಮೂಡುವ ಮೊದಲೇ ಅವರು ಬಂದು ನಿಲ್ಲುತ್ತಾರೆ–ಕೈಯಲ್ಲಿ ಪಿಕಾಸಿ, ಎದೆಯಲ್ಲಿ ಆಸೆ, ಕಣ್ಣಲ್ಲಿ ನಿರೀಕ್ಷೆ. ಕೂಲಿ ಸಿಕ್ಕರೆ ಮನೆಯಲ್ಲಿ ಒಲೆ ಉರಿಯುತ್ತದೆ; ಇಲ್ಲದಿದ್ದರೆ ಇಲ್ಲ. ಕೊಪ್ಪಳದ ಮೂರು ವೃತ್ತಗಳಲ್ಲಿ ಕಂಡ ಕೂಲಿಕಾರರ ಬದುಕಿನ ಒಳನೋಟವಿದು.

ಕೆಲಸಕ್ಕಾಗಿ ಚರ್ಚೆಯಲ್ಲಿ ತೊಡಗಿರುವ ಕಾರ್ಮಿಕರು
ಚಿತ್ರಗಳು: ಭರತ್ ಕಂದಕೂರ

• ಪ್ರಮೋದ ಕುಲಕರ್ಣಿ

ಸೂರ್ಯೋದಯಕ್ಕೂ ಮೊದಲು ಕೊಪ್ಪಳದ ಲಾಲ್ ಬಹದ್ದೂರ್ ಶಾಸ್ತ್ರಿ ವೃತ್ತದತ್ತ ಕಣ್ಣುಹಾಯಿಸಿದರೆ ಸಾಕು; ಅಲ್ಲಿ ಸೇರುವ ನೂರಾರು ಜನ ಕೂಲಿಕಾರ್ಮಿಕರು, ಅವರು ಉಟ್ಟ ಲುಂಗಿ, ಮಾಸಿದ ಅಂಗಿ, ಕೈಯಲ್ಲಿ ಚೀಲ, ಪಿಕಾಸಿ, ಕೆಲಸಕ್ಕಾಗಿ ಹಂಬಲಿಸುವ ನಿರೀಕ್ಷೆಯ ಕಣ್ಣುಗಳು, ಅವುಗಳ ಹಿಂದಿನ ವೇದನೆಗಳು, ಕಬ್ಬಿಣದ ಸುತ್ತಿಗೆ, ತಲೆಯ ಮೇಲೊಂದು ಟವಲ್ ಸುತ್ತಿಕೊಂಡು ದುಡಿಮೆಗಾಗಿ ಹಾಗೂ ಅಂದಿನ ಅನ್ನಕ್ಕಾಗಿ ಆಸೆಗಣ್ಣಿನಿಂದ ಕಾಯುವ ಚಿತ್ರಣ ಕಣ್ಣೆದುರು ಬರುತ್ತದೆ. ಗಡಿಯಾರ ಕಂಬ ಹಾಗೂ ಭಾಗ್ಯನಗರದ ಪಟ್ಟಣ ಪಂಚಾಯಿತಿಯ ಮುಂಭಾಗದಲ್ಲಿಯೂ ಇಂಥದ್ದೇ ಚಿತ್ರಣ...

ಆ ಕಾರ್ಮಿಕರಲ್ಲಿ ಬಹುತೇಕರು ಶಾಲೆಯ ಮುಖವನ್ನೇ ನೋಡಿಲ್ಲ. ಚೆಂದದ ನಾಳೆಗಾಗಿಯೊ, ಭವಿಷ್ಯದಲ್ಲಿ ಆಸ್ತಿ ಮಾಡಬೇಕು ಎನ್ನುವ ಆಸೆ ಅವರಲ್ಲಿಲ್ಲ. ಹೊಟ್ಟೆ ಹೊರೆಯಲು ಅಂದು ಕೂಲಿ ಕೆಲಸ ಸಿಕ್ಕರೆ ಸಾಕು ಎನ್ನುವ ಸಣ್ಣ ನಿರೀಕ್ಷೆಯಷ್ಟೇ.

ಕೊಪ್ಪಳದ ಈ ಮೂರು ಸ್ಥಳಗಳಲ್ಲಿ ಕಾರ್ಮಿಕರು ಸೇರುವುದು ಆರಂಭವಾಗುತ್ತದೆ. ರಭಸದಿಂದ ಸಾಗುವ ವಾಹನಗಳ ನಡುವೆ ರಸ್ತೆ ಮೇಲೆ ನಿಂತು ಉದ್ಯೋಗದಾತರ ನಿರೀಕ್ಷೆಯಲ್ಲಿ ಇರುತ್ತಾರೆ. ಕೂಲಿ ಕೆಲಸವನ್ನೂ ಅತ್ಯಂತ ಗೌರವಯುತವಾಗಿ ಮಾಡಿ ಬದುಕು ಕಟ್ಟಿಕೊಳ್ಳಬೇಕು ಎನ್ನುವ ಹಂಬಲ ಅವರದ್ದು.

ಅನಿಶ್ಚಿತತೆಯ ಬದುಕಿನ ನಡುವೆಯೂ ಅವರದ್ದು ಇಂದಿಗೆ ಕೆಲಸ ಸಿಕ್ಕರೆ ತಮ್ಮನ್ನು ನಂಬಿಕೊಂಡವರ ಹೊಟ್ಟೆ ತುಂಬಿಸಬಹುದು ಎನ್ನುವ ಆಸೆ. ಕುಟುಂಬದವರನ್ನು ಸಾಕಲು, ಅವರನ್ನು ಖುಷಿ ಪಡಿಸಲು ಮಳೆ, ಬಿಸಿಲು, ಹಗಲಿರುಳು ಎನ್ನದೇ ಕೆಲಸ ಮಾಡುತ್ತಾರೆ. ಅವರ ನಿರೀಕ್ಷೆ, ಕನಸುಗಳೆಲ್ಲವೂ ಉತ್ತಮ ಜೀವನಮಟ್ಟ, ಘನತೆಯ ಬದುಕು, ಮಕ್ಕಳ ಶಿಕ್ಷಣ, ಸಾಮಾಜಿಕ ಭದ್ರತೆಯ ಸುತ್ತಲೇ ಗಿರಕಿಹೊಡೆಯುತ್ತವೆ. ಕಠಿಣ ದುಡಿಮೆಯ ನಡುವೆಯೂ ಸ್ವಂತ ಸೂರು, ಉತ್ತಮ ಆರೋಗ್ಯ, ಮತ್ತು ಗೌರವಯುತ ಬದುಕಿಗಾಗಿ ಅವರದ್ದು ನಿತ್ಯ ಹೋರಾಟ. ಇದಕ್ಕಾಗಿ ಎಲ್ಲ ನೋವುಗಳನ್ನು ಸಹಿಸಿಕೊಳ್ಳುತ್ತಾರೆ.

‘ಆಲ್‌ರೌಂಡರ್’ ಕಾರ್ಮಿಕರು

ತಮ್ಮೂರಿನಲ್ಲಿ ನಿತ್ಯ ಕೆಲಸ ಸಿಗದ ಕಾರಣಕ್ಕೆ ಇವರು ತಮಗೆ ಸಿಗುವ ಯಾವ ಕೆಲಸವನ್ನಾದರೂ, ಎಲ್ಲಿಯಾದರೂ ಮಾಡುವುದನ್ನು ಕಲಿತುಕೊಂಡಿದ್ದಾರೆ. ಅನ್ನದ ಅನಿವಾರ್ಯತೆ ಅವರನ್ನು ಸಿಮೆಂಟ್ ಮಿಶ್ರಣ, ಗೋಡೆ ಕಟ್ಟುವುದು, ಕಬ್ಬಿಣದ ಕಂಬಿಗಳನ್ನು ಕಟ್ಟುವುದು, ಕಾಂಕ್ರೀಟ್ ಹಾಕುವುದು, ಪೇಂಟಿಂಗ್, ಪ್ಲಂಬಿಂಗ್, ವಿದ್ಯುತ್ ವೈರಿಂಗ್, ವಿದ್ಯುತ್ ಉಪಕರಣಗಳ ಅಳವಡಿಕೆ, ಕುಡಿಯುವ ನೀರಿನ ಟ್ಯಾಂಕರ್ ಸ್ವಚ್ಛಗೊಳಿಸುವುದು, ಮನೆಯ ಸುತ್ತಲಿನ ಸ್ಥಳದಲ್ಲಿ ಕಸ ವಿಲೇವಾರಿ, ಚರಂಡಿ ಸ್ವಚ್ಛ ಮಾಡುವುದು...ಹೀಗೆ ‘ಆಲ್‌ರೌಂಡರ್’ಗಳನ್ನಾಗಿ ರೂಪಿಸಿದೆ.

ಮೂರು ದಶಕಗಳಿಂದ ಕೆಲಸ ಒದಗಿಸುವ ತಾಣವಾಗಿರುವ ಲಾಲ್ ಬಹದ್ದೂರ್ ಶಾಸ್ತ್ರಿ ವೃತ್ತವನ್ನು ಕೊಪ್ಪಳದ ಜನ ‘ಲೇಬರ್ ಸರ್ಕಲ್’ ಎಂದೇ ಕರೆಯುತ್ತಾರೆ. ಈ ಸ್ಥಳಗಳಿಗೆ ಹೋದರೆ ಸಾಕು ಗುತ್ತಿಗೆದಾರರ ಬೇಡಿಕೆಗೆ ಅನುಗುಣವಾಗಿ ಮನೆ ನಿರ್ಮಾಣ, ಸ್ವಚ್ಛತೆಯ ಕೆಲಸ ಮಾಡುವ ಕಾರ್ಮಿಕರು ಸಿಕ್ಕೇ ಸಿಗುತ್ತಾರೆ ಎನ್ನುವ ಭರವಸೆ ಜನರದ್ದು ಕೂಡ ಆಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ ತಮ್ಮನ್ನೇ ನಂಬಿಕೊಂಡ ಮಕ್ಕಳ ಕಣ್ಣಿನಲ್ಲಿ ಖುಷಿ ಕಾಣುವಂತೆ ಮಾಡಲು ಕಾರ್ಮಿಕರು ಬೆವರು ಸುರಿಸುತ್ತಾರೆ. ಕೆಲಸ ಮುಗಿಸಿಕೊಂಡು ವಾಪಸ್ ಮನೆಗೆ ಬರುವಾಗ ಅಪ್ಪ–ಅವ್ವ ತಮಗಾಗಿ ತಿನ್ನಲು ತರುತ್ತಾರೆ ಎನ್ನುವ ಆಸೆಗಣ್ಣುಗಳಿಂದ ಕಾಯುತ್ತಿರುವ ಮಕ್ಕಳಿಗಾಗಿ ಕಾರ್ಮಿಕರು ದೈಹಿಕವಾಗಿ ಕಷ್ಟವಾಗುವ ಎಲ್ಲ ಕೆಲಸವನ್ನೂ ಮಾಡಲು ಸಿದ್ಧರಾಗಿಯೇ ಬಂದಿರುತ್ತಾರೆ. ಅನಕ್ಷರಸ್ಥರಾದರೂ ಬದುಕಿನ ಸಂಕಟಕ್ಕೆ ಕೆಲಸ ಕೊಡುವ ಮಾಲೀಕನನ್ನು ಒಲಿಸಿಕೊಳ್ಳುವ ಅವರ ಜಾಣ್ಮೆಯೇ ಸೋಜಿಗ.

ಬೆಳಗಿನ ಜಾವ ಬೈಕ್ ಅಥವಾ ಕಾರು ಹತ್ತಿಕೊಂಡು ಲೇಬರ್ ಸರ್ಕಲ್ ಬಳಿ ಹೋದರೆ ಸಾಕು, ‘ನಡ್ರೀ ಸರ್ರ ಹೋಗೋಣ, ಬೇಗ ನಿಮ್ಮ ಮನಿ ತೋರುಸ್ರಿ, ಏನ್ ಕೆಲಸ ಐತಿ ಬಡಬಡ ಮಾಡಿ ಮುಗಿಸ್ತೀನ್ರಿ...’ ಎಂದು ಒಂದೇ ಉಸಿರಿನಲ್ಲಿ ಹೇಳುವ ಕಾರ್ಮಿಕರು ನಮ್ಮ ಅನುಮತಿಯನ್ನೂ ಕೇಳದೆ ವಾಹನವೇರಿ ಕುಳಿತುಕೊಂಡು ವೇಗವಾಗಿ ಮುಂದಕ್ಕೆ ಹೋಗುವಂತೆ ಆಜ್ಞಾಪಿಸುತ್ತಾರೆ. ಮತ್ತೆ ಯಾರಾದರೂ ತಮ್ಮ ಕೆಲಸ ಕಸಿದುಕೊಂಡಾರು ಎನ್ನುವ ಆತಂಕ ಅವರದ್ದು. ಅಷ್ಟರಲ್ಲಿಯೇ ನೂರಾರು ಕಾರ್ಮಿಕರ ಪೈಕಿ ಹತ್ತಾರು ಜನ ಕ್ಷಣಾರ್ಧದಲ್ಲಿ ಓಡೋಡಿ ಬಂದು ಸುತ್ತುವರಿಯುತ್ತಾರೆ. ಅದರಲ್ಲೊಬ್ಬ ‘ಸಾಹೇಬ್ರು ಮೊದಲಿನಿಂದಲೂ ನಂಗೆ ಪರಿಚಯದವ್ರು, ಅವರ ಮನೀ ಕೆಲ್ಸ ಕಾಯಂ ಆಗಿ ನಾನೇ ಮಾಡೋದು, ಹೌದಲ್ಲೇನ್ರಿ’ ಎಂದು ಮಾಲೀಕನತ್ತ ನೋಡಿದವನೇ ಕಣ್ಣು ಮಿಟುಕಿಸಿ ಕೆಲಸ ಗಿಟ್ಟಿಸಿಕೊಳ್ಳುವ ಕಸರತ್ತು ಮಾಡುತ್ತಾನೆ. ಕೆಲಸಕ್ಕಾಗಿನ ಪೈಪೋಟಿ ಗಮನಿಸುವ ಹಲವರ ನಡುವೆಯೇ ನುಸಳುವ ಇನ್ನಷ್ಟು ಜನ ‘ಇವತ್ತಿನ ಕೆಲಸಕ್ಕೆ ನಾನ್ ಬರ್ತೀನ್ರೀ, ಬಹಳ ಚೊಲೊ ಕೆಲ್ಸ ಮಾಡ್ತೀನ್ರಿ...’ ಎನ್ನುತ್ತಾರೆ. ಇದೆಲ್ಲವೂ ಕಾರ್ಮಿಕರು ತಮ್ಮ ಅಂದಿನ ದುಡಿಮೆ ಗಿಟ್ಟಿಸಿಕೊಳ್ಳಲು ಮಾಡುವ ಕಸರತ್ತುಗಳು.

ಯುವಕರು, ಮಧ್ಯವಯಸ್ಕರು ಹಾಗೂ ಅನೇಕ ಮಹಿಳೆಯರು ಕೆಲಸದ ಆಸೆ ಇಟ್ಟುಕೊಂಡು ಒಂದೆಡೆ ಸೇರುತ್ತಾರೆ. ಕೆಲವರು ಒಂದೇ ಊರಿನಿಂದ ಏಳೆಂಟು ಜನರ ತಂಡ ಕಟ್ಟಿಕೊಂಡು ಬಂದರೆ, ಕೆಲವರು ಇಬ್ಬರು, ಮೂವರು ಮಾತ್ರ ಜೊತೆಯಾಗಿ ಬರುತ್ತಾರೆ.

ಅಣ್ಣಾ... ಯಾಕಿನ್ನು ಯಾರೂ ಕೆಲ್ಸಕ್ಕೆ ಕರ್ಕಂಡು ಹೋಗೋಕೆ ಬಂದಿಲ್ಲ...

11ನೇ ಪುಟಕ್ಕೆ...

ಮಾರುಕಟ್ಟೆಯಿಂದ ಗ್ರಾಹಕರತ್ತ...

ಮದ್ದೂರು ಮಾಲ್... ಎಲ್ಲೆಲ್ಲೂ ಕಮಾಲ್

• ಸಿದ್ದು ಆರ್.ಜಿ.ಹಳ್ಳಿ

ಬೆಳಿಗ್ಗೆ ಮದ್ದೂರಿನ ಎಪಿಎಂಸಿ ಮಾರುಕಟ್ಟೆಗೆ ಕಾಲಿಟ್ಟ ಕ್ಷಣವೇ ಒಂದು ವಿಷಯ ಸ್ಪಷ್ಟವಾಗುತ್ತದೆ. ಇಲ್ಲಿ ದಿನವನ್ನು ಗಡಿಯಾರವಲ್ಲ, ಲಾರಿಗಳ ಸರದಿ ನಿರ್ಧರಿಸುತ್ತದೆ. ತೋಟಗಳಿಂದ ಬಂದ ಎಳನೀರು ಗೊನೆಗಳ ರಾಶಿಗಳು ಒಂದರ ಹಿಂದೆ ಒಂದಾಗಿ ಇಳಿಯುತ್ತವೆ. ಕೂಲಿ ಕಾರ್ಮಿಕರ ಕೈಗಳು ನಿಲ್ಲುವುದೇ ಇಲ್ಲ. ಒಂದು ಲಾರಿ ಖಾಲಿಯಾಗುವಷ್ಟರಲ್ಲಿ ಮತ್ತೊಂದು ಲಾರಿ ಸರದಿಗೆ ಬರುತ್ತದೆ. ಹರಾಜು ಕಟ್ಟೆಗಳ ಬಳಿ ದರ ಮಾತುಕತೆಗಳು ನಡೆಯುತ್ತಿರುತ್ತವೆ. ಲಾರಿಗಳ ಸರದಿ ನಿಧಾನವಾಗಿ ಮುಂದೆ ಸರಿಯುತ್ತಾ, ಈ ಜಾಗದ ದಿನಚರಿಯನ್ನು ನಿರ್ಧರಿಸುತ್ತದೆ.

ಮಂಡ್ಯ ಸಮೀಪವಿರುವ ಮದ್ದೂರಿನ ಈ ಎಪಿಎಂಸಿ ಮಾರುಕಟ್ಟೆ ದೇಶದ ಪ್ರಮುಖ ಎಳನೀರು ವಹಿವಾಟು ಕೇಂದ್ರಗಳಲ್ಲಿ ಒಂದಾಗಿದೆ. ಬೆಂಗಳೂರು–ಮೈಸೂರು ಹೆದ್ದಾರಿಯ ಚನ್ನೇಗೌಡನದೊಡ್ಡಿ ಸಮೀಪ ಹರಡಿರುವ 6.12 ಎಕರೆ ಪ್ರಾಂಗಣ, ಬೇಸಿಗೆಯಲ್ಲಿ ತನ್ನ ಗರಿಷ್ಠ ಚಟುವಟಿಕೆಯನ್ನು ಕಾಣುತ್ತದೆ. ದಿನಕ್ಕೆ 150ಕ್ಕೂ ಹೆಚ್ಚು ಲಾರಿಗಳು ಲೋಡ್ ಆಗುವುದು ಇಲ್ಲಿ ಸಾಮಾನ್ಯ. ತಾಪಮಾನ ಏರಿದಂತೆ ಬೇಡಿಕೆ ಏರಿಕೆಯಾಗುತ್ತದೆ. ಅದಕ್ಕೆ ಅನುಗುಣವಾಗಿ ದರವೂ ಬದಲಾಗುತ್ತದೆ.

ಮದ್ದೂರಿನ ಎಳನೀರು ತನ್ನ ಗುಣಮಟ್ಟದಿಂದಲೇ ದೂರದ ಮಾರುಕಟ್ಟೆಗಳನ್ನು ತಲುಪಿದೆ. ಹೆಚ್ಚು ನೀರಿನ ಪ್ರಮಾಣ, ಸಿಹಿ ಮತ್ತು ತಾಜಾತನವೇ ಇದಕ್ಕೆ ವಿಶೇಷ ಬೇಡಿಕೆಯನ್ನು ತಂದಿವೆ. ಬೆಂಗಳೂರು, ದೆಹಲಿ, ಮುಂಬೈ, ಕೋಲ್ಕತ್ತಾ, ಹೈದರಾಬಾದ್, ಗೋವಾ, ಅಹಮದಾಬಾದ್, ಚಂಡೀಗಡ, ಲಖನೌ ಹಾಗೂ ಜೈಪುರ ಸೇರಿದಂತೆ ಹಲವು ನಗರಗಳಿಗೆ ಇಲ್ಲಿಂದ ಸರಬರಾಜು ಆಗುತ್ತದೆ. ಮದ್ದೂರು ಎನ್ನುವ ಹೆಸರು ರಾಜ್ಯದೊಳಗೆ ‘ವಡೆ’ಯಿಂದ ಪ್ರಸಿದ್ಧಿಯಾದರೆ, ಹೊರ ರಾಜ್ಯಗಳಲ್ಲಿ ಈ ಎಳನೀರು ‘ಮದ್ದೂರು ಮಾಲ್’ ಎಂದೇ ಹೆಸರಾಗಿದೆ.

ಈ ಮಾರುಕಟ್ಟೆಯ ಚಟುವಟಿಕೆ ವರ್ಷಪೂರ್ತಿ ಒಂದೇ ತರಹ ಇರುವುದಿಲ್ಲ. ಮಳೆಗಾಲ ಮತ್ತು ಚಳಿಗಾಲದಲ್ಲಿ ಚಟುವಟಿಕೆ ಕುಂಠಿತವಾಗಿರುತ್ತದೆ. ಆದರೆ ಫೆಬ್ರುವರಿಯಿಂದ ಜುಲೈವರೆಗೆ ವಹಿವಾಟು ಉತ್ತುಂಗದಲ್ಲಿರುತ್ತದೆ. ಗಾತ್ರ, ರುಚಿ, ನೀರಿನ ಪ್ರಮಾಣ ಈ ಅಂಶಗಳ ಆಧಾರದ ಮೇಲೆ ದರ ನಿಗದಿಯಾಗುತ್ತದೆ.

ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ತೋಟಗಳಿಂದ ಇಲ್ಲಿಗೆ ಎಳನೀರು ತರಲಾಗುತ್ತದೆ. ರೈತರಿಂದ ನೇರವಾಗಿ ಖರೀದಿ ಮಾಡುವುದಕ್ಕಿಂತ ಮಧ್ಯವರ್ತಿಗಳ ಪಾತ್ರವೇ ಹೆಚ್ಚು. ಅವರು ತೋಟಗಳಿಗೆ ತೆರಳಿ ಸ್ಥಳದಲ್ಲೇ ಹಣ ನೀಡಿ ಕೊಯ್ಲು ಮಾಡಿಸಿ ಮಾರುಕಟ್ಟೆಗೆ ತರುತ್ತಾರೆ. 367 ಪರವಾನಗಿ ಪಡೆದ ವರ್ತಕರು ಗುಣಮಟ್ಟದ ಆಧಾರದ ಮೇಲೆ ದರ ನಿಗದಿಪಡಿಸುತ್ತಾರೆ. ಹರಾಜು ಕಟ್ಟೆಗಳಲ್ಲಿ ನಡೆಯುವ ಮಾತುಕತೆಗಳ ನಂತರ, ಎಳನೀರನ್ನು ಲಾರಿಗಳ ಮೂಲಕ ವಿವಿಧ ನಗರಗಳಿಗೆ ಕಳುಹಿಸಲಾಗುತ್ತದೆ. ಈ ಪ್ರಕ್ರಿಯೆ ಪ್ರತಿದಿನವೂ ಒಂದೇ ರೀತಿಯಲ್ಲಿ ನಡೆಯುತ್ತಿದ್ದರೂ, ಅದರ ಹಿಂದೆ ಇರುವ ಶ್ರಮ ದೊಡ್ಡದು.

13ನೇ ಪುಟಕ್ಕೆ...

> **ಎರಡು ವರ್ಷಗಳ ಹಿಂದೆ ಉತ್ತಮ ಗುಣಮಟ್ಟದ ಎಳನೀರು ₹62ಕ್ಕೆ ಖರೀದಿಯಾಗುತ್ತಿತ್ತು. ಮಳೆ ಕೊರತೆ ಮತ್ತು ನುಸಿ ರೋಗದಿಂದ ಪೂರೈಕೆ ಕಡಿಮೆಯಾಗಿದ್ದರಿಂದ ದರ ಏರಿತ್ತು. ಈ ಬಾರಿ ಇಳುವರಿ ಚೆನ್ನಾಗಿದ್ದು, ಉತ್ತಮ ಗುಣಮಟ್ಟದ ಎಳನೀರು ಹೆಚ್ಚು ಬರುತ್ತಿವೆ. ಪ್ರಸ್ತುತ ₹52ರವರೆಗೂ ಖರೀದಿಯಾಗುತ್ತಿದೆ.**
> **ಉಮೇಶ್**, ವರ್ತಕರ ಸಂಘದ ಉಪಾಧ್ಯಕ್ಷ

ಮದ್ದೂರು ಎಪಿಎಂಸಿ ಮಾರುಕಟ್ಟೆಗೆ ಎಳನೀರು ತುಂಬಿಕೊಂಡು ಬಂದ ವಾಹನಗಳು

ಶರಾವತಿ ಹಿನ್ನೀರಿನ ಕೇಬಲ್ ಸೇತುವೆ ಒಂದು ಯುಗವನ್ನೇ ಬದಲಾಯಿಸಿದೆ. ಇಲ್ಲಿನ ಜನರ ಬದುಕು ಕ್ಷಣಾರ್ಧದಲ್ಲಿ ಹೊಸ ದಿಕ್ಕಿಗೆ ತಿರುಗಿದೆ. ಆದರೆ ಅದೇ ದಡದ ಸಮೀಪ, ಇನ್ನೊಂದು ಲಾಂಚ್ ಇನ್ನೂ ಹಳೆಯ ಹಾದಿಯನ್ನು ಹಿಡಿದು ಸಾಗುತ್ತಿದೆ...

ಸೇತುವೆಯ ಹೊಸ ಗುರುತು ಮುಪ್ಪಾನೆಯ ಮೂಕವೇದನೆ

ಸೇತುವೆ ನಿರ್ಮಾಣಗೊಂಡ ಬಳಿಕ ದಡ ಸೇರಿದ ಲಾಂಚ್‌ಗಳು...

• ಚಿತ್ರ–ಬರಹ: ಜಯಪ್ರಕಾಶ ತಲವಾಟ

ಇನ್ನೂ ಚುಮು ಚುಮು ಬೆಳಗು. ಕಾಡಿನ ಮರಗಳಲ್ಲಿ ಹಕ್ಕಿಗಳ ಚಿಲಿಪಿಲಿ. ಶರಾವತಿ ನದಿಯ ದಡದಲ್ಲಿ ದಿನದ ಮೊದಲ ಚಟುವಟಿಕೆ ಶುರುವಾಗುತ್ತಿತ್ತು. ಆದರೆ ಅದು ತಣ್ಣನೆಯ ಆರಂಭವಲ್ಲ, ಬದುಕಿನ ಗಡಿಬಿಡಿಯ ಆರಂಭ.

ಅಂಬಾರಗೋಡ್ಲು–ಕಳಸವಳ್ಳಿ ಕಡವು ಮಾರ್ಗದ ಲಾಂಚ್ ದಡದಲ್ಲಿ ಜನ ಸೇರುತ್ತಿದ್ದರು. ಶಂಕರಯ್ಯ ಅಡಿಕೆ ಚೀಲಗಳನ್ನು ಎತ್ತಿನಬಂಡಿಯಲ್ಲಿ ತುಂಬಿಕೊಂಡು ಸಾಗರದತ್ತ ಹೊರಟಿದ್ದರು. ಅವರ ಮನಸ್ಸಿನಲ್ಲಿ ಒಂದೇ ಯೋಚನೆ–ಲಾಂಚ್‌ನಲ್ಲಿ ರಷ್ ಕಡಿಮೆ ಇರಲಿ. ಈ ದ್ವೀಪದ ಕಲ್ಲುಮಣ್ಣು ರಸ್ತೆಯನ್ನು ದಾಟಿ, ಹೊಳೆಬಾಗಿಲಿಗೆ ತಲುಪುವಷ್ಟರಲ್ಲಿ ಇನ್ನೂ ಒಂದು ಗಂಟೆ ಬೇಕು. ಅಲ್ಲಿಂದ ಲಾಂಚ್ ಹಿಡಿದು ಆಚೆ ದಡ ಸೇರಿದರೆ ಮುಂದಿನ ಪ್ರಯಾಣ ಆರಂಭವಾಗುತ್ತದೆ. ‘ಇದಕ್ಕೆಲ್ಲ ಮುಕ್ತಿ ಯಾವಾಗ?’ ಎಂಬ ಪ್ರಶ್ನೆ ಅವರೊಳಗೆ ಮೌನವಾಗಿ ಹರಿಯುತ್ತಿತ್ತು.

ಅದೇ ದಡದಲ್ಲಿ ಗಣಪತಿ ತನ್ನ ಅನಾರೋಗ್ಯಪೀಡಿತ ತಾಯಿಯನ್ನು ಸಾಗರದ ಆಸ್ಪತ್ರೆಗೆ ಕರೆದೊಯ್ಯಲು ಬಂದಿದ್ದರು. ‘ಹೋಗುವಾಗ ಸೀಟು ಸಿಕ್ಕೀತು, ಬರುವಾಗ ತಾಯಿಗೆ ಕುಳಿತುಕೊಳ್ಳಲು ಜಾಗ ಸಿಕ್ಕರೆ ಸಾಕು’ ಎಂಬುದು ಅವರ ಚಿಂತೆ. ಜಯರಾಮ ಕಬ್ಬಿಣದ ಬೀರು ಸಾಗಿಸುವ ಗೊಂದಲದಲ್ಲಿದ್ದರು. ಸುಬ್ಬಣ್ಣ ಸಾಗರದ ಸಂತೆ ಕೆಲಸ ಮುಗಿಸಿ ಅಂಗಡಿಗೆ ಬೇಕಾದ ಸಾಮಾನುಗಳ ಪಟ್ಟಿಯನ್ನು ಜೇಬಿನಲ್ಲಿ ಇಟ್ಟುಕೊಂಡಿದ್ದರು. ಕೃಷ್ಣಮೂರ್ತಿ ಪರೀಕ್ಷೆಗೆ ಹೋಗುವ ಆತುರದಲ್ಲಿದ್ದರು. ಶಿಕ್ಷಕರು, ವೈದ್ಯರು, ನರ್ಸ್‌ಗಳು, ಗ್ರಾಮಲೆಕ್ಕಿಗರು, ಮೀನು ವ್ಯಾಪಾರಿಗಳು–ಎಲ್ಲರೂ ಒಂದೇ ಕ್ಯೂನಲ್ಲಿ ನಿಂತಿದ್ದರು. ಎಲ್ಲರಿಗೂ ಈ ನದಿ ದಾಟುವುದು ದಿನನಿತ್ಯದ ಅವಶ್ಯಕತೆ, ಆದರೆ ಒಂದೇ ಲಾಂಚ್‌ನಲ್ಲಿ ಅದು ಒಂದು ಹೋರಾಟ.

ಶರಾವತಿ ನದಿಯ ಆ ದಡದಲ್ಲಿ ನೀರು ಗಂಗೆಯಂತಿದ್ದರೂ, ಅದರ ಮೇಲೆ ಹರಿಯುವ ಬದುಕು ಸದಾ ಗೊಂದಲಮಯ. ಒಂದು ಲಾಂಚ್–ಅನೇಕ ಬದುಕುಗಳು.

ದಶಕಗಳ ಕಾಲ ಇದೇ ಬದುಕು ಮುಂದುವರಿಯಿತು. 2010ರ ನಂತರ ಸಿಗಂದೂರು ದೇವಾಲಯದ ಹೆಸರು, ಪ್ರವಾಸೋದ್ಯಮದ ಬೆಳವಣಿಗೆ ಮತ್ತು ಮಾಧ್ಯಮದ ಪ್ರಚಾರ ಈ ಪ್ರದೇಶದ ಚಿತ್ರಣವನ್ನೇ ಬದಲಿಸಿತು. ಪ್ರವಾಸಿಗರ ಪ್ರವಾಹ ದಿಢೀರನೆ ಹೆಚ್ಚಾಯಿತು. ಒಂದೇ ಇದ್ದ ಅಂಗಡಿ ಹಲವಾರು ಗೂಡಂಗಡಿಗಳಾಗಿ ಬೆಳೆದವು. ಚಹಾ ಹೋಟೆಲ್‌ಗಳು, ಪಾನ್ ಶಾಪ್‌ಗಳು, ಜೀಪ್ ಸೇವೆಗಳು ಶುರುವಾದವು. ದಡದ ಎರಡೂ ಬದಿಯಲ್ಲಿ ಜನಸಂದಣಿ ಹೆಚ್ಚಾಗಿ ಲಾಂಚ್ ಹತ್ತುವುದು ಸವಾಲಾಯಿತು.

ಈ ಬೆಳವಣಿಗೆಯ ಜೊತೆ ಸಮಸ್ಯೆಗಳೂ ಹೆಚ್ಚಿದವು. ಪ್ರವಾಸಿಗರು ಮತ್ತು ಸ್ಥಳೀಯರ ನಡುವೆ ವಾಗ್ವಾದಗಳು, ತಳ್ಳಾಟ, ವಿಳಂಬ, ಗೊಂದಲಗಳು ಸಾಮಾನ್ಯವಾದವು. ಕೆಲ ದಿನಗಳಲ್ಲಿ ಶರಾವತಿ ದಡವು ‘ರಣಾಂಗಣ’ದಂತೆ ಕಾಣತೊಡಗಿತು. ಸ್ಥಳೀಯರಿಗೆ ಇದು ಕೇವಲ ಪ್ರವಾಸಿ ತಾಣವಲ್ಲ, ಅವರ ಬದುಕಿನ ಅವಶ್ಯಕತೆ. ಆದರೆ ಪ್ರವಾಸಿಗರಿಗೆ ಇದು ಒಂದು ದಿನದ ಮೋಜಿನ ಸ್ಥಳ. ಈ ಎರಡು ಜಗತ್ತುಗಳು ಒಂದೇ ದಡದಲ್ಲಿ ಮುಖಾಮುಖಿಯಾದವು.

ಇದುವೇ ನೋಡಿ ಬದುಕು ಹೊತ್ತೊಯ್ಯುವ ಮುಪ್ಪಾನೆಯ ಲಾಂಚ್...

ಆದರೆ ಸಮಸ್ಯೆಗಳ ನಡುವೆ ಒಂದು ಸ್ಪಷ್ಟ ಬೇಡಿಕೆ ಹುಟ್ಟಿತು, ಅದು ಸೇತುವೆ ಬೇಕು. ವರ್ಷಗಳ ಹೋರಾಟ, ಒತ್ತಡ, ಮನವಿಗಳ ನಂತರ ಕೇಬಲ್ ಸೇತುವೆಯ ನಿರ್ಮಾಣ ಆರಂಭವಾಯಿತು. ಕಾಲ ಕಳೆದಂತೆ ಸೇತುವೆ ರೂಪುಗೊಂಡಿತು. ಅದು ಕೇವಲ ಮೂಲಸೌಕರ್ಯವಲ್ಲ, ಒಂದು ಯುಗದ ಬದಲಾವಣೆ.

ಸೇತುವೆ ಕಾರ್ಯಾರಂಭವಾದ ದಿನ, ದ್ವೀಪದ ಜನರ ಕಣ್ಣಲ್ಲಿ ಕೇವಲ ಸಂತೋಷವಿರಲಿಲ್ಲ; ಅದು ಕಷ್ಟಗಳ ಗೆಲುವಿನ ಕಣ್ಣೀರು. ಐವತ್ತು ವರ್ಷಗಳ ಲಾಂಚ್ ಬದುಕು ಒಂದು ಕ್ಷಣದಲ್ಲಿ ಹೊಸ ದಿಕ್ಕಿಗೆ ತಿರುಗಿತು. ಜನರು ಈಗ ಸುಲಭವಾಗಿ ನಡೆದು, ವಾಹನಗಳಲ್ಲಿ ನದಿ ದಾಟತೊಡಗಿದರು. ಆಸ್ಪತ್ರೆಗೆ ಹೋಗುವುದು, ಸಂತೆ, ಕೆಲಸ ಈಗ ಎಲ್ಲವೂ ವೇಗವಾಗಿದೆ. ಎಲ್ಲವೂ ಸರಾಗ, ಸುರಕ್ಷಿತ ಹಾಗೂ ನಿರೀಕ್ಷಿತವಾಗಿದೆ.

ಆದರೆ ಲಾಂಚ್‌ಗಳ ಬದುಕು ನಿಧಾನವಾಗಿ ನಿಂತಿತು. ಒಮ್ಮೆ ಗಡಿಬಿಡಿಯಿಂದ ತುಂಬಿದ್ದ ದಡಗಳು ಈಗ ಮೌನವಾಗಿವೆ. ಮೂರು ಲಾಂಚ್‌ಗಳು ದಡದಲ್ಲಿ ನಿಂತಿವೆ, ತುಕ್ಕು ಹಿಡಿಯತೊಡಗಿದೆ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತ(ಕೆಪಿಸಿಎಲ್) ನೀಡಿರುವ ಒಂದು ಲಾಂಚ್ ಕಳೆದ 10 ವರ್ಷಗಳಿಂದ ಬಳಕೆಯಾಗದೆ ಹಾಳಾಗಿ ಬಿದ್ದಿದೆ. ಸಿಬ್ಬಂದಿಗಳು ಅತಂತ್ರರಾಗಿದ್ದಾರೆ. ದಡದ ಅಂಗಡಿಗಳು, ಜೀಪ್ ಸೇವೆಗಳು, ಚಹಾ ಹೋಟೆಲ್‌ಗಳು ಇವೆಲ್ಲವೂ ತಮ್ಮ ಸಹಜ ಲಯವನ್ನು ಕಳೆದುಕೊಂಡಿವೆ.

‘ಇಷ್ಟು ದಿನ ನಮ್ಮನ್ನು ದಡ ಸೇರಿಸಿದವು’ ಎಂಬ ಕೃತಜ್ಞತೆ ಒಂದು ಕಡೆ, ‘ಇದೀಗ ಅವು ಕೆಲಸವಿಲ್ಲದೆ ನಿಂತಿವೆ’ ಎಂಬ ನೋವು ಇನ್ನೊಂದು ಕಡೆ.

ಸೇತುವೆ ಬಂದ ಸಂತೋಷ ಮತ್ತು ಲಾಂಚ್‌ಗಳ ಮೌನ ಒಂದೇ ದಡದಲ್ಲಿ ಸೇರಿದೆ. ಅಭಿವೃದ್ಧಿಯ ಬೆಳಕು ಕಂಡರೂ, ಅದರ ನೆರಳಿನಲ್ಲಿ ಕೆಲವು ಬದುಕುಗಳು ಮೌನವಾಗಿ ಮಾಯವಾಗಿವೆ.

ಇದೇ ಸಮಯದಲ್ಲಿ ಮುಪ್ಪಾನೆ–ಹಲ್ಕೆ ಭಾಗದಲ್ಲಿ ಇನ್ನೊಂದು ಲಾಂಚ್ ಇನ್ನೂ ಬದುಕನ್ನು ಹೊತ್ತೊಯ್ಯುತ್ತಿದೆ. ಜೋಗ ಜಲಪಾತದಿಂದ ಸುಮಾರು 25 ಕಿ.ಮೀ ದೂರದ ಈ ಪ್ರದೇಶದಲ್ಲಿ ಶರಾವತಿ ನದಿ ಇನ್ನೂ ಸಂಪರ್ಕದ ನಾಡಿಯಾಗಿದೆ. ಸಾಗರ–ಭಟ್ಕಳ ಮಾರ್ಗ ಮಧ್ಯದಲ್ಲಿರುವ ಮುಪ್ಪಾನೆ, ಸಾಗರದಿಂದ ಸುಮಾರು 48 ಕಿ.ಮೀ ದೂರದಲ್ಲಿದೆ. ಆದರೆ ಮುಪ್ಪಾನೆ ತಲುಪಲು ಸರಿಯಾದ ರಸ್ತೆ ವ್ಯವಸ್ಥೆ ಇಲ್ಲ. ಸುಮಾರು 3 ಕಿ.ಮೀ ಮಣ್ಣಿನ ರಸ್ತೆ ಹೊಂಡ–ಗುಂಡಿಗಳಿಂದ ಕೂಡಿದ್ದು, ವಿಶೇಷವಾಗಿ ಮಳೆಗಾಲದಲ್ಲಿ ಸಂಚಾರ ಕಷ್ಟಕರವಾಗುತ್ತದೆ. ಕುದರೂರು, ತುಮರಿ, ಸಂಕಣ್ಣ ಶಾನುಭೋಗ ಹಳ್ಳಿಗಳ ಜನರಿಗೆ ಇದೇ ಲಾಂಚ್ ಆಧಾರ.

2017ರಲ್ಲಿ ಆರಂಭವಾದ ಈ ಲಾಂಚ್, ಅದಕ್ಕೂ ಮೊದಲು ಇದ್ದ ದೋಣಿ ಬದುಕಿನ ಮುಂದುವರಿಕೆ. ಆಗ ಜನ, ಬೈಕ್, ರೋಗಿಗಳು–ಎಲ್ಲರನ್ನೂ ಸಣ್ಣ ದೋಣಿಗಳಲ್ಲಿ ದಾಟಿಸಲಾಗುತ್ತಿತ್ತು, ಅನಿಶ್ಚಿತತೆಯ ನಡುವೆ. ಈಗ ಸಣ್ಣ ಲಾಂಚ್‌ನಲ್ಲಿ ಕೆಲ ಕಾರುಗಳು, ಬೈಕ್‌ಗಳು ಮತ್ತು ಜನರನ್ನು ದಾಟಿಸಲಾಗುತ್ತದೆ. ದಿನದಲ್ಲಿ ಹಲವಾರು ಬಾರಿ ಸಂಚಾರ ನಡೆಯುತ್ತದೆ.

ಆದರೆ ಇಲ್ಲಿಯೂ ಬದುಕು ಸುಲಭವಲ್ಲ. ಮಳೆಗಾಲದಲ್ಲಿ ನೀರಿನ ಏರಿಕೆ, ಬೇಸಿಗೆಯಲ್ಲಿ ನೀರಿನ ಕೊರತೆ, ಮರದ ದಿಮ್ಮಿಗಳು, ಮರಳು ದಿಬ್ಬಗಳಿಂದ ಉಂಟಾಗುವ ತಾಂತ್ರಿಕ ಸಮಸ್ಯೆ–ಇವೆಲ್ಲವೂ ಸೇವೆಯ ಮೇಲೆ ಪರಿಣಾಮ ಬೀರುತ್ತವೆ. ತಕ್ಷಣದ ನಿರ್ವಹಣೆಗೆ ವ್ಯವಸ್ಥೆಯ ಕೊರತೆಯೂ ಇದೆ. ಆದರೂ ಈ ಲಾಂಚ್ ಇನ್ನೂ ಜೀವಂತವಾಗಿದೆ. ಅದು ನಿಂತ ವ್ಯವಸ್ಥೆಯಲ್ಲ, ಇನ್ನೂ ಹರಿಯುತ್ತಿರುವ ಅಗತ್ಯ.

ಶರಾವತಿ ನದಿ ತನ್ನ ದಾರಿಯನ್ನು ಬದಲಿಸಿಲ್ಲ. ಆದರೆ ಅದನ್ನು ದಾಟುವ ಬದುಕು ಬದಲಾಗಿದೆ. ಲಾಂಚ್‌ಗಳು ಒಂದು ಯುಗದ ನೆನಪುಗಳು. ಸೇತುವೆ ಹೊಸ ಯುಗದ ಗುರುತು. ಮತ್ತು ಮುಪ್ಪಾನೆಯ ಲಾಂಚ್ ಇನ್ನೂ ನಡೆಯುತ್ತಿರುವ ಹಳೆಯ ಬದುಕಿನ ಮೂಕವೇದನೆ.

ದುಶ್ಚಟಗಳಿಂದ ದೂರವಿರುವುದೇ ನನ್ನ ದೇಹ-ದಾರ್ಢ್ಯತೆಯ ಗುಟ್ಟು. ಆಹಾರಕ್ಕೂ ಶಿಸ್ತೇ ಮುಖ್ಯ. ಸ್ಪರ್ಧೆಗಳ ಸಮಯದಲ್ಲಿ ನಾಲ್ಕು ಗಂಟೆ, ಇತರ ದಿನಗಳಲ್ಲಿ ಒಂದು ಗಂಟೆ ವ್ಯಾಯಾಮ ಮಾಡುತ್ತೇನೆ. ಇದೇ ಶಿಸ್ತೇ ನನ್ನ ಜೀವನದ ಪಯಣವನ್ನು ಸಾಗಿಸುತ್ತಿದೆ.

ಬಾಬು ಪೂಜಾರಿ

ಬಾಬು ಪೂಜಾರಿಗೆ 66 ಕೇವಲ ಸಂಖ್ಯೆಯಷ್ಟೆ!

ದೇಹದಾರ್ಢ್ಯ ಸ್ಪರ್ಧೆಗೆ ಸಿದ್ಧವಾಗುತ್ತಿರುವ ಬಾಬು ಪೂಜಾರಿ

• ನವೀನ್ ಕುಮಾರ್ ಜಿ.

ಬೆಳಗಿನ ಜಾವ ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಉಪ್ಪುಂದ ಪಟ್ಟಣದ ಬೀದಿಗಳಲ್ಲಿ ಚಟುವಟಿಕೆ ನಿಧಾನವಾಗಿ ಪ್ರಾರಂಭವಾಗುತ್ತದೆ. ಆದರೆ ಗೋಲ್ಡನ್ ಮಲ್ಟಿ ಜಿಮ್ ಒಳಗೆ ಇಷ್ಟರಲ್ಲಾಗಲೇ ಒಂದು ವಿಭಿನ್ನ ಲೋಕ ಎಚ್ಚರಗೊಂಡಿತ್ತು. ಡಂಬೆಲ್‌ಗಳು ಪರಸ್ಪರ ತಾಕುವ ಸದ್ದು–'ಕ್ಲ್ಯಾಂಕ್... ಕ್ಲ್ಯಾಂಕ್...' ಅಲ್ಲಿ ಬೆಳಗಿನ ಮೌನವನ್ನು ತುಂಡರಿಸುತ್ತಿತ್ತು.

ಒಳಗೆ ಬೆಳಕು, ಬೆವರಿನ ವಾಸನೆ, ರಬ್ಬರ್ ಮ್ಯಾಟ್‌ಗಳ ವಾಸನೆ ಸೇರಿ ಒಂದು ವಿಶಿಷ್ಟ ವಾತಾವರಣ ಸೃಷ್ಟಿಯಾಗಿತ್ತು. ಆ ವಾತಾವರಣದ ಮಧ್ಯೆ, ಕನ್ನಡಿ ಎದುರು ನಿಂತು ತನ್ನದೇ ದೇಹದ ಜೊತೆ ಮಾತಾಡುತ್ತಿರುವಂತೆ ಕಾಣುವ ವ್ಯಕ್ತಿಯೇ ಶಿರೂರಿನ ಬಾಬು ಪೂಜಾರಿ.

ಡಂಬೆಲ್‌ಗಳನ್ನು ನಿಧಾನವಾಗಿ ಎತ್ತುವಾಗ ಕೈಯಲ್ಲಿ ನರಗಳು ಉಬ್ಬಿ ಕಾಣಿಸುತ್ತವೆ. ಉಸಿರಾಟ ಒಂದು ಲಯದಲ್ಲಿ ಸಾಗುತ್ತದೆ. ಪ್ರತಿಯೊಂದು ಚಲನೆಯಲ್ಲಿ ನಿಯಂತ್ರಣ; ಪ್ರತಿಯೊಂದು ಪುನರಾವರ್ತನೆಯಲ್ಲಿ ಶಿಸ್ತಿನ ಮುದ್ರೆ. ಅರವತ್ತಾರು ವರ್ಷಗಳ ಜೀವನದ ಗುರುತುಗಳು ದೇಹದ ಮೇಲೆ ಇದ್ದರೂ, ಅವು ದೌರ್ಬಲ್ಯದ ಗುರುತುಗಳಲ್ಲ, ಅವು ಶಕ್ತಿಯ ಕಥನಗಳು.

ಒಮ್ಮೆ ಅವರು ವೇಯ್ಟ್‌ಲಿಫ್ಟ್ ಅನ್ನು ನೆಲಕ್ಕೆ ಇಡುತ್ತಾರೆ. ಕಣ್ಣು ಮುಚ್ಚಿ ಸ್ವಲ್ಪ ಉಸಿರನ್ನು ಎಳೆದುಕೊಳ್ಳುತ್ತಾರೆ. ಮತ್ತೆ ಆರಂಭ. ಇದು ನಿಲ್ಲದ ಪಯಣ.

ಒಂದು ಕಾಲದಲ್ಲಿ ಅವರು ಕೇವಲ ಜಿಮ್‌ನ ವ್ಯಕ್ತಿಯಾಗಿರಲಿಲ್ಲ. ಅವರು ಸ್ಪರ್ಧಿ. ವೇದಿಕೆಯ ಮಧ್ಯೆ ನಿಂತು, ತನ್ನ ದೇಹವನ್ನು ಶಿಲ್ಪದಂತೆ ರೂಪಿಸಿ ಪ್ರದರ್ಶಿಸಿದ ಕಲಾವಿದ. 'ಭಾರತ್ ಶ್ರೀ', 'ಮಿಸ್ಟರ್ ಸರ್ವಿಸಸ್'–ಈ ಪದಗಳು ಅವರ ಬದುಕಿನ ಶ್ರಮಕ್ಕೆ ಸಿಕ್ಕ ಮನ್ನಣೆ.

ಭಾರತೀಯ ನೌಕಾಪಡೆಯಲ್ಲಿ ಹದಿನೈದು ವರ್ಷಗಳ ಸೇವೆ. ಚೀಫ್ ಪೆಟ್ಟಿ ಆಫೀಸರ್ ಆಗಿ ನಿವೃತ್ತಿ. ಆ ಅವಧಿಯಲ್ಲೇ ಇಂಡಿಯನ್ ನೇವಿ ಬಾಡಿಬಿಲ್ಡಿಂಗ್ ತಂಡದ ಸದಸ್ಯತ್ವ. ಸತತ ಹದಿನೈದು ವರ್ಷಗಳು 'ಮಿಸ್ಟರ್ ಸರ್ವಿಸಸ್' ಪ್ರಶಸ್ತಿಯ ಗರಿ! ಇದು ಕೇವಲ ಶಾರೀರಿಕ ಶಕ್ತಿ ಅಲ್ಲ; ಇದು ಮನಸ್ಸಿನ ಶಿಸ್ತು.

ಯೌವ್ವನದಲ್ಲಿ ಬಾಬು ಪೂಜಾರಿ

ಇಂದು, ಉಪ್ಪುಂದದ ಈ ಜಿಮ್ ಅವರ ಹೊಸ ಪ್ರಪಂಚ. ಇಲ್ಲಿ ದೊಡ್ಡ ಪ್ರೇಕ್ಷಕವರ್ಗ ಇಲ್ಲ; ಸ್ಪರ್ಧೆಯ ಗದ್ದಲ ಇಲ್ಲ. ಆದರೆ ಶ್ರಮ ಅದೇ, ಶಿಸ್ತು ಅದೇ.

ಒಬ್ಬ ಯುವಕ ಟ್ರೆಡ್‌ಮಿಲ್ ಮೇಲೆ ಓಡುತ್ತಿದ್ದಾನೆ. ಇನ್ನೊಬ್ಬ ಕನ್ನಡಿಯಲ್ಲಿ ತನ್ನ ದೇಹವನ್ನು ಹೆಮ್ಮೆಯಿಂದ ನೋಡಿಕೊಳ್ಳುತ್ತಿದ್ದಾನೆ. ಅವರ ನಡುವೆ ಬಾಬು ಪೂಜಾರಿ ಎಲ್ಲವನ್ನೂ ಶಾಂತವಾಗಿ ಗಮನಿಸುತ್ತಾರೆ.

ಒಬ್ಬ ಯುವಕ ಪ್ರೋಟಿನ್ ಪೌಡರ್ ಬಾಟಲ್ ಹಿಡಿದು ಬರುತ್ತಾನೆ. ಬಾಬು ಅವನತ್ತ ನೋಡಿ ಸಣ್ಣಗೆ ನಗುತ್ತಾರೆ. 'ಇದಕ್ಕೆ ಇಷ್ಟು ಬೇಗ ಹೋಗಬೇಡ' ಎಂದು ಮೆಲ್ಲಗೆ ಹೇಳುತ್ತಾ ಬಾಟಲ್ ಅನ್ನು ಕೆಳಗೆ ಇಡಿಸುತ್ತಾರೆ. 'ಮೊಟ್ಟೆ, ಹಾಲು, ಬಾಳೆಹಣ್ಣು ಇವೇ ಮೊದಲ ಹೆಜ್ಜೆಗಳು. ದೇಹವನ್ನು ಸ್ವಾಭಾವಿಕವಾಗಿ ಬೆಳೆಸು' ಎಂದು ಅವರು ಸಲಹೆ ನೀಡುತ್ತಾರೆ. 'ಒಮ್ಮೆಲೆ ಬದಲಾವಣೆ ಬೇಕೆಂದರೆ ದೇಹವೇ ಪ್ರತಿಕ್ರಿಯಿಸುತ್ತದೆ' ಎಂದು ಎಚ್ಚರಿಸುತ್ತಾರೆ. ಅವರ ಮಾತಿನಲ್ಲಿ ಅನುಭವದ ತೂಕ ಇದೆ.

ಕನ್ನಡಿಯ ಮುಂದೆ ಅವರು ಮತ್ತೆ ನಿಂತಿದ್ದಾರೆ. ಒಂದು ಪೋಸ್–ಬೈಸೆಪ್ಸ್ ಗಟ್ಟಿ, ನರಗಳು ಸ್ಪಷ್ಟ. ಒಂದು ಪೋಸ್‌ನಲ್ಲಿ ಎದೆ ಅಗಲವಾಗಿ ತೋರಿಸುತ್ತಾರೆ; ಮತ್ತೊಂದರಲ್ಲಿ ಬೆನ್ನಿನ ಮಾಂಸಖಂಡಗಳು ಸ್ಪಷ್ಟವಾಗಿ ಮೂಡಿಬರುತ್ತವೆ. ಆ ಕ್ಷಣದಲ್ಲಿ ಅವರು ಅರವತ್ತಾರು ವರ್ಷದವರಲ್ಲ; ಅವರು ಇನ್ನೂ ಸ್ಪರ್ಧಿಯೇ. ಅವರ ಚಲನೆಗಳಲ್ಲಿ ಇನ್ನೂ ಅದೇ ಆತ್ಮವಿಶ್ವಾಸ.

ಯುವಕರಿಗೆ ಪಾಠ

'ಈಗ ಗ್ರಾಮೀಣ ಪ್ರದೇಶದಲ್ಲೂ ಫಿಟ್ನೆಸ್ ಬಗ್ಗೆ ಜಾಗೃತಿ ಬಂದಿದೆ. ಆದರೆ ಸಹನೆ ಕಡಿಮೆ' ಅವರ ಮಾತು ಸರಳ, ಆದರೆ ಅರ್ಥ ಗಂಭೀರ. 'ಪ್ರೋಟಿನ್ ಪೌಡರ್, ಇಂಜೆಕ್ಷನ್ ಇವುಗಳೆಲ್ಲಾ ನಂತರದ ವಿಷಯ. ಮೊದಲು ದೇಹವನ್ನು ತಿಳಿದುಕೊಳ್ಳಬೇಕು. ವೈದ್ಯರ ಸಲಹೆ ಇಲ್ಲದೇ ಏನೂ ತೆಗೆದುಕೊಳ್ಳಬಾರದು'–ಜಿಮ್‌ನಲ್ಲಿ ಅವರ ಈ ಮಾತುಗಳನ್ನು ಕೇಳುವ ಹುಡುಗರ ಕಣ್ಣುಗಳಲ್ಲಿ ಹೊಳಪು ಕಾಣುತ್ತದೆ. ಅವರು ಕೇವಲ ತರಬೇತುದಾರರಲ್ಲ; ಜೀವಂತ ಉದಾಹರಣೆ.

'ನಲವತ್ತೆರಡು ವರ್ಷಗಳಿಂದ ನಾನು ಇದನ್ನೇ ಮಾಡ್ತಾ ಇದ್ದೇನೆ' ಎಂದು ಅವರು ಹೇಳುತ್ತಾರೆ. ಈ ಮಾತಿನಲ್ಲಿ ಹೆಮ್ಮೆ ಇದೆ; ಆದರೆ ಅದಕ್ಕಿಂತ ಹೆಚ್ಚು ತೃಪ್ತಿ ಇದೆ.

ರೇಮಂಡ್ ಡಿಸೋಜ ಮೊದಲಾದವರ ಜೊತೆ ಸ್ಪರ್ಧಿಸಿದ ದಿನಗಳ ನೆನಪು ಇನ್ನೂ ತಾಜಾ. ಇತ್ತೀಚೆಗೆ ಉಡುಪಿ, ಉಚ್ಚಿಲ, ಹೊನ್ನಾವರ, ಭಟ್ಕಳ, ನಂಜನಗೂಡು ಮೊದಲಾದೆಡೆ ನಡೆದ ಸ್ಪರ್ಧೆಗಳಲ್ಲೂ ಭಾಗವಹಿಸಿರುವ ಅವರಲ್ಲಿ ಅದೇ ಉತ್ಸಾಹ ಇಂದು ಕೂಡ ಕಾಣಿಸುತ್ತದೆ.

ಜಿಮ್‌ನ ಬಾಗಿಲು ಹೊರಗೆ ಸೂರ್ಯಕಿರಣಗಳು ಹರಡುತ್ತವೆ. ಕಿಟಕಿಗಳ ಮೂಲಕ ಒಳಗೆ ನುಗ್ಗಿದ ಬೆಳಕು ಅಲ್ಲಿನ ಪರಿಕರಗಳ ಮೇಲೆ ಬೀಳುತ್ತದೆ. ಬಾಬು ಪೂಜಾರಿ ತಮ್ಮ ವ್ಯಾಯಾಮವನ್ನು ಮುಗಿಸುತ್ತಾರೆ. ಟವೆಲ್ ತೆಗೆದು ಬೆವರನ್ನು ಒರೆಸಿಕೊಳ್ಳುತ್ತಾರೆ. ಕನ್ನಡಿಯಲ್ಲಿ ತಮ್ಮ ಪ್ರತಿಬಿಂಬವನ್ನು ಒಂದು ಕ್ಷಣ ನೋಡುತ್ತಾರೆ. ಅದು ಕೇವಲ ದೇಹವಲ್ಲ; ಅದು ಒಂದು ಪಯಣ.

ಉಪ್ಪುಂದದ ಆ ಸಣ್ಣ ಜಿಮ್‌ನಲ್ಲಿ ಪ್ರತಿದಿನ ಬೆಳಿಗ್ಗೆ ಒಂದು ಸಂದೇಶ: ವಯಸ್ಸು ಒಂದು ಸಂಖ್ಯೆ ಮಾತ್ರ. ಶಿಸ್ತು–ಅದೇ ನಿಜವಾದ ಶಕ್ತಿ.


ಗುಮ್ಮಟದ ಹೊರನೋಟ

ಗುಮ್ಮಟದೊಳಗೆ ಉಳಿದ ಕಥೆಗಳು

• ಚಿತ್ರ–ಬರಹ: ಈರಣ್ಣ ಬೆಂಗಾಲಿ

ರಾಯಚೂರು ಇತಿಹಾಸವನ್ನು ತನ್ನೊಳಗೆ ಬಚ್ಚಿಟ್ಟು-ಕೊಂಡಿರುವ ನಗರ. ಕೋಟೆ, ಕೊತ್ತಲಗಳು, ಪಾಳೆಯದ ಅವಶೇಷಗಳು... ಇವೆಲ್ಲದರ ನಡುವೆ ನಿಂತಿರುವ ಒಂದು ಗುಮ್ಮಟ, ಕಾಲದ ಹೆಜ್ಜೆ ಗುರುತುಗಳನ್ನು ಇನ್ನೂ ತನ್ನೊಳಗೆ ಉಳಿಸಿಕೊಂಡಿದೆ.

ಒಮ್ಮೆ ಏಕಾಂಗಿಯಾಗಿ ನಿಂತಿದ್ದ ಈ ಗುಮ್ಮಟದ ಸುತ್ತ ಬಳಿಕ ಜನವಸತಿ ಬೆಳೆಯಿತು; ಇಂದು ಅದೇ ಹಾಜಿ ಕಾಲೋನಿಯಾಗಿ ರೂಪುಗೊಂಡಿದೆ. ಮೊದಲ ನೋಟಕ್ಕೆ ಸಾಮಾನ್ಯ ಕಟ್ಟಡದಂತೆ ತೋರುತ್ತದೆ. ಆದರೆ ಅದರತ್ತ ಇನ್ನೊಂದು ಕ್ಷಣ ಕಣ್ಣು ನೆಟ್ಟರೆ, ಅದರೊಳಗೆ ಮಡುಗಟ್ಟಿರುವ ಇತಿಹಾಸ ನಿಧಾನವಾಗಿ ತೆರೆದುಕೊ-ಳ್ಳುತ್ತದೆ.

ರಾಯಚೂರಿನಿಂದ ಕಲಬುರಗಿ ಕಡೆಗೆ ರೈಲು ಚಲಿಸ-ಲಾರಂಭಿಸಿದ ಕ್ಷಣಗಳಲ್ಲಿ, ನಗರ ನಿಧಾನವಾಗಿ ಹಿಂದೆ ಸರಿಯುತ್ತಲೇ, ತುಸು ದೂರದಲ್ಲಿ ಬಲಭಾಗಕ್ಕೆ ಈ ಗುಮ್ಮಟ ಕಣ್ಣಿಗೆ ಬೀಳುತ್ತದೆ. ಅನೇಕ ಪ್ರಯಾಣಿಕರಿಗೆ ಅದು ಕೇವಲ ಒಂದು ಹಳೆಯ ಕಟ್ಟಡವಾಗಿರಬಹುದು. ಆದರೆ ಇತಿಹಾಸಾಸಕ್ತರಿಗೆ ಅದು ಒಂದು ಕಾಲಘಟ್ಟದ ಸಾಕ್ಷಿ.

ಶೋಧಕರ ಅಭಿಪ್ರಾಯದ ಪ್ರಕಾರ, ಇದು ಬಹಮನಿ ಆಡಳಿತದ ಕಾಲಕ್ಕೆ ಸೇರಿದ ಮಲ್ಲುಖಾನ್ ಅವರ ಗೋರಿಯಾಗಿರಬಹುದು. 15ನೇ ಶತಮಾನದ ಹೊತ್ತಿಗೆ, ವಿಶೇಷವಾಗಿ ಸುಮಾರು 1480ರ ಅವಧಿಯಲ್ಲಿ ನಿರ್ಮಾ-ಣವಾಗಿರಬಹುದೆಂದು ಊಹಿಸಲಾಗಿದೆ. ರಾಯಚೂರು ಕೋಟೆಯ ಎರಡನೇ ಸುತ್ತಿನ ನಿರ್ಮಾಣದಲ್ಲಿ ಆಡಳಿತಾ-ಧಿಕಾರಿಯಾಗಿ ಮಲ್ಲುಖಾನ್ ಪ್ರಮುಖ ಪಾತ್ರವಹಿಸಿದ್ದನು. ಬಹಮನಿ ಸುಲ್ತಾನರ ಅಧೀನದಲ್ಲಿ ನಡೆದ ಆ ಮಹತ್ವದ ಕಾರ್ಯದಲ್ಲಿ ಅವನು ತನ್ನ ಜೀವವನ್ನೇ ಅರ್ಪಿಸಿದ್ದಿರಬ-ಹುದೆಂಬ ಮಾತುಗಳೂ ಕೇಳಿಬರುತ್ತವೆ.

ಈ ಗುಮ್ಮಟವು ಕೇವಲ ಒಂದು ಗೋರಿಯಲ್ಲ; ಅದು ಬಹಮನಿ ವಾಸ್ತುಶಿಲ್ಪದ ಆರಂಭಿಕ ಹಂತವನ್ನು ಪ್ರತಿನಿಧಿಸುವ ಅಪರೂಪದ ಕಟ್ಟಡ. ತುಘಲಕ್ ಶೈಲಿಯ ಪ್ರಭಾವವನ್ನು ಒಳಗೊಂಡಿರುವ ಇದರ ವಿನ್ಯಾಸ, ದಕ್ಷಿಣ ಭಾರತದ ಇಸ್ಲಾಮಿಕ್ ವಾಸ್ತುಶಿಲ್ಪದ ಬೆಳವಣಿಗೆಯ ಸುಳಿವನ್ನೂ ನೀಡುತ್ತದೆ.

ಐದು ಅಡಿ ಎತ್ತರದ ಜಗುಲಿಯ ಮೇಲೆ ನಿಂತಿರುವ ಈ ಚೌಕಾಕಾರದ ತಳಹದಿಯ ಗುಮ್ಮಟ, ಸುಮಾರು 25 ಅಡಿ ವ್ಯಾಪ್ತಿಯಾಗಿದೆ. ಹೊರಗಡೆಯ ಕಲ್ಲಿನ ಗೋಡೆಗಳಲ್ಲಿ ತಲಾ ಮೂರು ಕಮಾನುಗಳು ಅಲಂಕಾರಿಕ ಫಲಕಗಳೊಂದಿಗೆ ಕಾಣಿಸುತ್ತವೆ. ಸುಮಾರು ನಲವತ್ತು ಅಡಿ ಎತ್ತರಕ್ಕೆ ಏರಿದ ಇದರ ಗುಮ್ಮಟ, ಕಾಲದ ಹೊಡೆತಗಳನ್ನೂ ಮೀರಿ ಇನ್ನೂ ತನ್ನ ರೂಪವನ್ನು ಕಾಪಾಡಿಕೊಂಡಿದೆ. ಪೂರ್ವಭಾಗದಲ್ಲಿ ಇನ್ನೆರಡು ಗೋರಿಗಳು ಕಾಣಿಸಿಕೊಳ್ಳುತ್ತವೆ. ಇವು ಈ ಸ್ಥಳದ ಇತಿಹಾಸವನ್ನು ಮತ್ತಷ್ಟು ಗಾಢಗೊಳಿಸುತ್ತವೆ.

ಒಳಗೆ ಕಾಲಿಟ್ಟರೆ, ವಿಶಾಲವಾದ ಖಾಲಿ ಜಾಗ ಸಿಗುತ್ತದೆ. ಅಲ್ಲಿ ನಿಶ್ಶಬ್ದತೆಯದೇ ಸಾಮ್ರಾಜ್ಯ. ಗಾಳಿಯಾಡಲು ಕಲ್ಪಿಸಿದ ವಾತಾಯನಗಳು, ಒಳ ಹಾಗೂ ಹೊರಗಡೆಯ ಕಮಾನುಗಳು ಒಂದೊಂದು ಕಾಲದ ಕಲಾತ್ಮಕ ಸ್ಪರ್ಶವನ್ನು ನೆನಪಿಸುತ್ತವೆ. ಕಲ್ಲಿನಿಂದ ನಿರ್ಮಿತ ಗೋಡೆಗಳು ಮತ್ತು ಇಟ್ಟಿಗೆಗಳಿಂದ ನಿರ್ಮಿಸಲಾದ ಗುಮ್ಮಟ, ಆ ಕಾಲದ ನಿರ್ಮಾಣ ಕೌಶಲ್ಯಕ್ಕೆ ಸಾಕ್ಷಿಯಾಗಿವೆ. ಆದರೆ, ಈ ಇತಿಹಾಸದ ಮೌಲ್ಯವನ್ನು ಹೊತ್ತಿರುವ ಗುಮ್ಮಟ ಇಂದು ನಿರ್ಲಕ್ಷ್ಯದ ನೆರಳಿನಲ್ಲಿ ನಿಂತಿದೆ. ಸುತ್ತಮುತ್ತ ಮನೆಗಳು ಎದ್ದುನಿಂತು, ಈ ಸ್ಮಾರಕವನ್ನು ನಿಧಾನವಾಗಿ ನುಂಗುತ್ತಿರುವಂತೆ ಕಾಣುತ್ತದೆ. ಒಮ್ಮೆ ಸುಣ್ಣಬಣ್ಣದಿಂದ ಮಿನುಗುತ್ತಿದ್ದ ಗೋಡೆಗಳು ಈಗ ಮಸುಕಾಗಿ ಹೋಗಿವೆ. ಪ್ಲಾಸ್ಟರ್ ಕಿತ್ತುಬಿದ್ದು, ಒಳಗಿನ ಕಲ್ಲು-ಇಟ್ಟಿಗೆಗಳು ಬಯಲಾಗಿವೆ. ತನ್ನ ಘನತೆಯನ್ನು ಕಳೆದುಕೊಳ್ಳುತ್ತಾ, ಮೌನವಾಗಿ ಕಾಲದ ಕಾದಾಟವನ್ನು ಅನುಭವಿಸುತ್ತಿದೆ ಈ ಗುಮ್ಮಟ.

ಇದೊಂದು ಕೇವಲ ಕಟ್ಟಡವಲ್ಲ, ಇದು ಒಂದು ಕಥೆ. ಕಾಲ, ಸಂಸ್ಕೃತಿ, ಶ್ರಮ ಮತ್ತು ಮರೆಯಾದ ಸ್ಮೃತಿಗಳ ಕಥೆ. ಇಂತಹ ಸ್ಮಾರಕಗಳು ನಮ್ಮ ಇತಿಹಾಸದ ಕಣಜಗಳು. ಅವುಗಳನ್ನು ಕಾಪಾಡುವುದು ಕೇವಲ ಪುರಾತತ್ವ ಇಲಾಖೆಯ ಹೊಣೆಗಾರಿಕೆ ಮಾತ್ರವಲ್ಲ, ನಮ್ಮೆಲ್ಲರ ಜವಾಬ್ದಾರಿಯೂ ಹೌದು.

ಈ ಗುಮ್ಮಟದ ನಿಖರ ಇತಿಹಾಸವನ್ನು ಅನಾವರ-ಣಗೊಳಿಸಲು ಇನ್ನಷ್ಟು ಸಂಶೋಧನೆ ಅಗತ್ಯವಿದೆ. ಅದು ನಡೆದಾಗ, ಈ ಮೌನ ಸ್ಮಾರಕವು ಮತ್ತೆ ಮಾತಾಡಬಹುದು, ತನ್ನ ಕಳೆದುಹೋದ ಘನತೆಯನ್ನು ಮತ್ತೆ ಪಡೆಯುವ ನಿರೀಕ್ಷೆಯೊಂದಿಗೆ.

ಶಿಥಿಲಗೊಂಡಿರುವ ಗೋಡೆ

...ಬೆವರಿನ ಮಾರುಕಟ್ಟೆ

10ನೇ ಪುಟದಿಂದ...

ಎಲ್ಲ ಕೆಲಸ ಮಾಡಲು ಅವರು ಸಿದ್ಧರಿದ್ದರೂ ಬಹುತೇಕರಿಗೆ ಕಟ್ಟಡ ಕಟ್ಟುವ ಕೆಲಸಗಾರರಿಗೆ ಸಹಾಯಕರಾಗುವ ಕೆಲಸ ಸಿಗುತ್ತದೆ.

ಮೂರು ದಶಕಗಳಿಂದ ಕೊಪ್ಪಳದ ಅಪಾರ ಕಾರ್ಮಿಕರಿಗೆ ಕೆಲಸ ಒದಗಿಸಲು ವೇದಿಕೆಯಾಗಿರುವ ಮೂರು ವೃತ್ತಗಳು ತನ್ನ ಒಡಲಲ್ಲಿ ಕಾರ್ಮಿಕರ ನೋವಿನ ಕಥನಗಳನ್ನು ಇಟ್ಟುಕೊಂಡಿವೆ. ಕೊಪ್ಪಳದ ಜನರಿಗೆ ತಮ್ಮ ಮನೆ ಕೆಲಸಗಳನ್ನು ಮಾಡಿಕೊಳ್ಳಲು ಹಾಗೂ ಗುತ್ತಿಗೆದಾರರಿಗೆ ಕಾರ್ಮಿಕರನ್ನು ಸುಲಭವಾಗಿ ಕರೆದುಕೊಂಡು ಹೋಗಲು ಈ ವೃತ್ತ ಎಲ್ಲರಿಗೂ ಕೇಂದ್ರಬಿಂದು.

ಕೆಲಸಕ್ಕಾಗಿ ಹಂಬಲಿಸುವ ಕಾರ್ಮಿಕರಿಗೆ ತಮ್ಮೂರಿನಲ್ಲಿಯೇ ಕೆಲಸಗಳು ಸಿಗುವುದು ಕಡಿಮೆ. ಕೃಷಿ ಚಟುವಟಿಕೆಯ ಋತು ಆರಂಭವಾದಾಗ ಒಂದಷ್ಟು ಜನ ಹೊಲಗಳಿಗೆ ಹೋಗುತ್ತಾರೆ. ಕೆಲಸ ಹುಡುಕಿಕೊಂಡು ಬರುವ ಕಾರ್ಮಿಕರಲ್ಲಿ ಹಲವರಿಗೆ ಹೊಲಗಳಿವೆ. ಈಗ ನೀರಿನ ಕೊರತೆಯಿರುವ ಕಾರಣ ಕೃಷಿಯಿಂದ ಕೈ ಸುಟ್ಟುಕೊಳ್ಳುವುದು ಬೇಡವೆಂದು ಕೆಲಸ ಅರಿಸಿಕೊಂಡು ಜಿಲ್ಲಾಕೇಂದ್ರಕ್ಕೆ ಬರುತ್ತಾರೆ. ಮಳೆಗಾಲ ಆರಂಭವಾದರೆ ಒಂದಷ್ಟು ಕಾರ್ಮಿಕರು ಹೊಲಗಳ ಕೆಲಸದಲ್ಲಿ ತೊಡಗಿಕೊಂಡರೆ, ಬಹಳಷ್ಟು ಜನ ಅನ್ನ ಅರಿಸಿ ಕೊಪ್ಪಳಕ್ಕೆ ಬಂದು ದಿನದ ದುಡಿಮೆ ಸಿಗುವ ಆಸೆಯಿಂದ ಕಾಯುತ್ತಾರೆ.

ಬೇರೆ ಊರುಗಳಿಂದ ಬರುವ ಕಾರ್ಮಿಕರು ಸಂಜೆಯಾಗುತ್ತಿದ್ದಂತೆ ತಮ್ಮೂರಿಗೆ ವಾಪಸ್ ಹೋಗಿ ಮರುದಿನ ಮತ್ತೆ ಕೆಲಸ ಸಿಗುವ ಸ್ಥಳಗಳಿಗೆ ಬರುವವರು ಒಂದಷ್ಟು ಜನರಾದರೆ, ಇನ್ನಷ್ಟು ಜನ ನಗರದಲ್ಲಿ ಎಲ್ಲೆಂದರಲ್ಲಿ ಮಲಗಿ ಮತ್ತೆ ಕೆಲಸ ದೊರೆತ ಕೂಲಿ ಹಣದಲ್ಲಿ ತುಸು ಉಳಿಸಿಕೊಂಡು ವಾರಕ್ಕೊಂದು ಬಾರಿ ತಮ್ಮೂರಿಗೆ ಹೋಗಿ ಬರುವವರೂ ಇದ್ದಾರೆ. ಹೊಟ್ಟೆಗೆ ಹಿಟ್ಟೇ ಬೇಗ ಸಿಗುವುದಿಲ್ಲ. ಇನ್ನು ಶುಚಿಯಾದ ಬಟ್ಟೆಗಳು ಗಗನ ಕುಸುಮ.

ಕೊಪ್ಪಳ ಸಮೀಪದ ಲಕಮಾಪುರದ ಮಧ್ಯವಯಸ್ಕ ಮಲ್ಲಪ್ಪ ಎರಡೂವರೆ ದಶಕಗಳಿಂದ ಲೇಬರ್ ವೃತ್ತಕ್ಕೆ ಬಂದು ನಿತ್ಯ ಕೆಲಸ ಹುಡುಕಿಕೊಳ್ಳುತ್ತಿದ್ದಾರೆ. ಮೊದಲು ತಮ್ಮೂರಿನಲ್ಲಿ ಹೊಲದ ಕೆಲಸ ಮಾಡಿಕೊಂಡಿದ್ದ ಅವರಿಗೆ ಈಗ ಇದ್ದೂರಿನಲ್ಲಿಯೇ ಕೆಲಸ ಸಿಗುತ್ತಿಲ್ಲ. ಸಾಕಷ್ಟು ಪ್ರಮಾಣದಲ್ಲಿದ್ದ ಹೊಲಗಳು ನಿವೇಶನಗಳಾಗಿ ಬದಲಾಗಿವೆ.

'ಕೊಪ್ಪಳಕ್ಕೆ ಬಂದರೆ ಕೆಲಸ ನಿಶ್ಚಿತ ಎನ್ನುವ ಕಾರಣಕ್ಕಾಗಿ ನಿತ್ಯ ಬರುತ್ತೇನೆ. ಕೆಲಸ ಕೊಟ್ಟವರು ಸಂಜೆಯಾದ ಬಳಿಕ ಕೂಲಿ ಹಣ ನೀಡಲು ಸತಾಯಿಸುತ್ತಾರೆ. ಮೊದಲೇ ಮಾತನಾಡಿದಷ್ಟು ಕೊಡುವುದಿಲ್ಲ, ಮೂರ್ನಾಲ್ಕು ದಿನ ಬಿಟ್ಟು ಬಂದು ಕೂಲಿ ಕೊಡುತ್ತೇವೆ ಎಂದು ಹೇಳುತ್ತಾರೆ. ನಮಗೆ ಮತ್ತೆ ಕೆಲಸ ಬೇಕು; ಹೀಗಾಗಿ ಹೆಚ್ಚು ಒತ್ತಡ ಹೇರುವಂತೆಯೂ ಇಲ್ಲ. ಹಣ ಕೊಟ್ಟಾಗ ತೆಗೆದುಕೊಂಡು ಹೋಗಬೇಕು, ಅನೇಕ ಬಾರಿ ಹಣದ ಕೊರತೆಯಿಂದಾಗಿ ಊರಿಗೆ ನಡೆದುಕೊಂಡೇ ಹೋಗಿದ್ದೇನೆ' ಎಂದು ತಮ್ಮ ಕಷ್ಟಗಳನ್ನು ಮಲ್ಲಪ್ಪ ಹಂಚಿಕೊಂಡರು.

ಕೆಲಸಕ್ಕಾಗಿ ಕಾದು ನಿಂತಿರುವ ಕಾರ್ಮಿಕರು

ಹುಲಿಗಿಯಲ್ಲಿ ಹಬ್ಬ

ನಿತ್ಯ ಕಷ್ಟಗಳನ್ನು ಎದುರಿಸುವ ಕಾರ್ಮಿಕರಿಗೆ ವಾರದಲ್ಲಿ ಎರಡು ಖುಷಿಯ ದಿನಗಳೂ ಬರುತ್ತವೆ ಎನ್ನುವುದು ವಿಶೇಷ. ಪ್ರತಿದಿನವೂ ನೂರಾರು ಸಂಖ್ಯೆಯಲ್ಲಿ ಸೇರುವ ಕಾರ್ಮಿಕರು ಮಂಗಳವಾರ ಹಾಗೂ ಶುಕ್ರವಾರದ ದಿನಗಳಂದು ತುಸು ಕಡಿಮೆ ಪ್ರಮಾಣದಲ್ಲಿರುತ್ತಾರೆ. ಈ ಎರಡೂ ದಿನಗಳಂದು ಕೊಪ್ಪಳದ ಸಮೀಪದಲ್ಲಿರುವ ಹುಲಿಗಿಯ ಹುಲಿಗೆಮ್ಮ ದೇವಿಯ ದರ್ಶನ ಪಡೆಯುವ ಸಂಬಂಧಿಕರು, ಸ್ನೇಹಿತರು, ಪರಿಚಯದವರು ಹಾಗೂ ತಮ್ಮೂರಿನವರು ಮಾಡಿಸುವ ಬ್ಯಾಟಿ (ಮಾಂಸದೂಟ) ಸವಿಯಲು ಹೋಗುತ್ತಾರೆ.

ದೇವಿಯ ವಾರದ ದಿನಗಳಂದು ಹುಲಿಗಿಯಲ್ಲಿ ಸೇರುವ ಕಾರ್ಮಿಕರು ಅಲ್ಲಿಯೇ ತುಂಗಭದ್ರಾ ನದಿಯಲ್ಲಿ ಮಿಂದು, ದೇವಿಯ ದರ್ಶನ ಪಡೆದು ಬಂಧುಗಳು, ಸ್ನೇಹಿತರ ಜೊತೆ ಹರಟೆ ಹೊಡೆಯುತ್ತಾರೆ. ಜೀವನಪೂರ್ತಿ ದುಡಿದು ದಣಿಯುವ ಅವರಿಗೆ ವಾರದ ದಿನಗಳು ಬಂದರೆ ಹಬ್ಬ. ಬೆಳಿಗ್ಗೆ ಪೂಜಾ ಕಾರ್ಯ ಮುಗಿಸುವ ಹೊತ್ತಿಗೆ ಮಧ್ಯಾಹ್ನದ ಬ್ಯಾಟಿಯ ರುಚಿಯ ಪರಿಮಳ ಬರುತ್ತದೆ. ಜೊತೆಯಲ್ಲಿದ್ದವರೊಂದಿಗೆ ಹರಟುತ್ತ ಮಾಂಸದೂಟ ಸವಿಯುತ್ತ ತಮ್ಮ ನೋವುಗಳನ್ನು ಮರೆಯುತ್ತ, ಎಲ್ಲರೊಳಗೆ ಒಂದಾಗಿ ತಮ್ಮ ಬದುಕಿನಲ್ಲಿ ಒಂದಷ್ಟಾದರೂ ಸಂತಸದ ಕ್ಷಣಗಳಿವೆ ಎಂದು ಸಂಭ್ರಮ ಪಡುತ್ತಾರೆ. ದಿನಪೂರ್ತಿ ಹುಲಿಗಿಯಲ್ಲಿ ಕಳೆದು ರಾತ್ರಿಗೆಲ್ಲ ಮನೆಗೆ ಸೇರುವ ಹೊತ್ತಿಗೆ ಮಧ್ಯರಾತ್ರಿ. ಮರುದಿನ ಮತ್ತೆ ಅನ್ನಕ್ಕಾಗಿ ಅಲೆದಾಡುವ ಎಂದಿನಂತೆ ಕಾಯಕ ಆರಂಭಿಸುತ್ತಾರೆ. ಹೀಗಾಗಿ ದೇವಿಯ ವಾರದ ದಿನಗಳು ಕಾರ್ಮಿಕರಿಗೆ ಮನಸ್ಸಿಗೆ ಮಹದಾನಂದ ಉಂಟು ಮಾಡುತ್ತವೆ.

'ಏನೇ ಕೆಲಸ ಕೊಟ್ಟರೂ ಮಾಡುತ್ತೇನೆ. ಹಬ್ಬ, ಹರಿದಿನ ಯಾವುದನ್ನೂ ಲೆಕ್ಕಿಸದೇ ಕೆಲಸ ಮಾಡುವ ನಮಗೆ ವಾರದಲ್ಲಿ ಒಂದು ದಿನವಾದರೂ ಹುಲಿಗಿಗೆ ಹೋಗಿ ಬ್ಯಾಟಿ ತಿನ್ನಬೇಕು ಎನ್ನುವ ಆಸೆ. ಬದುಕಿರುವ ಕೊನೆಯ ದಿನದ ತನಕವೂ ಅಂದಿನ ಕೂಲಿ ಅಂದೇ ದುಡಿಯಬೇಕಾದ ಅನಿವಾರ್ಯತೆಯ ಸಂಕಷ್ಟದ ಬದುಕು ನಮ್ಮದು. ವಾರದಲ್ಲಿ ಒಂದು ದಿನವಾದರೂ ದೇವಿ ಹೆಸರಿನಲ್ಲಿ ಖುಷಿ ಅನುಭವಿಸುವುದು ಬೇಡವೇ' ಎಂದು ಕಾರ್ಮಿಕ ಮಲ್ಲಪ್ಪ ಪ್ರಶ್ನಿಸಿದರು.

ಮೇಘರಾಜನ ಬವಣೆ

ಕೊಪ್ಪಳ ಸಮೀಪದ ಬಹದ್ದೂರ್ ಬಂಡಿ ಗ್ರಾಮದ ಮೇಘರಾಜ ಕುಮಾರನಿಗೆ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಎಲ್ಲ ಕೆಲಸಗಳು ಬರುತ್ತದೆ. ಆತನ ದುಡಿಮೆ ಮೇಲೆಯೇ ಕುಟುಂಬ ಅವಲಂಬಿತವಾಗಿದೆ. ಇಬ್ಬರು ಮಕ್ಕಳಿದ್ದು ಊರಿನಲ್ಲಿರುವ ಸ್ವಂತ ಮನೆಯೇ ದೊಡ್ಡ ಆಸರೆ. ಅವರಿವರನ್ನು ಕಾಡಿಬೇಡಿಯಾದರೂ ನಿತ್ಯ ಕೆಲಸ ಹುಡುಕಿಕೊಳ್ಳುತ್ತಾರೆ. ಮೇಘರಾಜ ತನ್ನ ಬದುಕಿನ ಕಥೆ ಹೇಳಿಕೊಳ್ಳುತ್ತ: 'ಇಬ್ಬರು ಮಕ್ಕಳಿದ್ದಾರೆ, ಅವರನ್ನು ಸರ್ಕಾರಿ ಶಾಲೆಗಳಿಗೆ ಕಳಿಸುತ್ತಿದ್ದೇನೆ. ಎಲ್ಲರಂತೆಯೂ ನನ್ನ ಮಕ್ಕಳನ್ನು ಇಂಗ್ಲಿಷ್ ಕಾನ್ವೆಂಟ್‌ಗೆ ಕಳಿಸಬೇಕೆನ್ನುವ ಆಸೆಯಿದ್ದರೂ ಅಲ್ಪ ದುಡಿಮೆಯಿಂದ ಅದು ಸಾಧ್ಯವಾಗುವುದಿಲ್ಲ. ಮಕ್ಕಳ ಸಣ್ಣ ಆಸೆಯೂ ಈಡೇರಿಸಲು ಆಗುವುದಿಲ್ಲವೆನ್ನುವ ಬೇಸರವಿದ್ದರೂ ಶಾಲೆ ಮಾತ್ರ ಬಿಡಿಸಿಲ್ಲ' ಎಂದು ಹೇಳಿದರು.

ಅವರು ಬದುಕಿನ ಬವಣೆ, ತಾವು ಎದುರಿಸಿದ ನೋವುಗಳನ್ನು ಹಂಚಿಕೊಳ್ಳುವ ಉಮೇದಿಯಲ್ಲಿದ್ದರು. ಅಷ್ಟರಲ್ಲೇ ಬೈಕ್ ಮೇಲೆ ಬಂದ ಕೆಲಸ ಕೊಡುವ ಮಾಲೀಕ 'ಗೋಡೆ ಕಟ್ಟಲು ಬರ್ತೀಯಾ' ಎಂದು ಕರೆದ. ಎಂದಿನಂತೆ ಹತ್ತಾರು ಜನ ಮಾಲೀಕನ ಬೈಕ್ ಸುತ್ತುವರಿದರು. ಬೈಕ್‌ಗೆ ಅಡ್ಡಲಾಗಿ ನಿಂತರು. ಅದನ್ನು ಲೆಕ್ಕಿಸದೆ ಮಾಲೀಕ ಮೇಘರಾಜನನ್ನು ಬೈಕ್ ಮೇಲೆ ಹತ್ತಿಸಿಕೊಂಡು ತಮ್ಮ ಮನೆಯತ್ತ ಹೊರಟ. ಮಾಲೀಕ ತನ್ನನ್ನೇ ಕೆಲಸಕ್ಕೆ ಆಯ್ಕೆ ಮಾಡಿಕೊಂಡಿದ್ದಕ್ಕೆ ಮೇಘರಾಜನ ಕಣ್ಣುಗಳಲ್ಲಿ ಅಂದಿನ ಅನ್ನ ಸಿಕ್ಕ ಖುಷಿ. ಉಳಿದ ಕಾರ್ಮಿಕರ ಕಣ್ಣುಗಳಲ್ಲಿ ನಮ್ಮನ್ನೂ ಯಾರಾದರೂ ಕೆಲಸಕ್ಕೆ ಕರೆಯುತ್ತಾರೆ ಎನ್ನುವ ನಿರೀಕ್ಷೆ...

ಗಡಿಯಾರ ಕಂಬ, ಲೇಬರ್ ವೃತ್ತ, ಪಟ್ಟಣ ಪಂಚಾಯಿತಿಯ ಮುಂಭಾಗ–ಇವು ಕೇವಲ ಸ್ಥಳಗಳಲ್ಲ; ನೂರಾರು ಕುಟುಂಬಗಳ ಹಸಿವು, ಹಂಬಲ, ಹೋರಾಟ ಒಂದೆಡೆ ಒಟ್ಟುಗೂಡುವ ತಾಣಗಳು. ಇಲ್ಲಿ ಪ್ರತಿ ಮುಂಜಾವೂ ಒಂದು ಪ್ರಶ್ನೆಯೊಂದಿಗೆ ಹುಟ್ಟುತ್ತದೆ; ಇಂದು ಕೆಲಸ ಸಿಗುತ್ತದೆಯೇ? ಆ ಪ್ರಶ್ನೆಗೆ ಉತ್ತರ ಸಿಕ್ಕರೆ ಒಂದು ಮನೆಯಲ್ಲಿ ಒಲೆ ಹೊತ್ತಿಕೊಳ್ಳುತ್ತದೆ; ಇಲ್ಲದಿದ್ದರೆ ನಿರಾಶೆ ಕವಿಯುತ್ತದೆ. ಕೆಲಸ ಸಿಕ್ಕವನ ಕಣ್ಣಲ್ಲಿ ಗೆದ್ದ ಸಂಭ್ರಮ; ಸಿಗದವನ ಕಣ್ಣಲ್ಲಿ ನಾಳೆಯ ನಿರೀಕ್ಷೆ. ಆ ನಿರೀಕ್ಷೆಯೇ ಅವರನ್ನು ಮರುದಿನ ಇದೇ ವೃತ್ತಕ್ಕೆ ಕರೆತರುತ್ತದೆ. ಹೀಗೆ, ಸೂರ್ಯ ಮುಳುಗಿ ಮತ್ತೆ ಮೂಡುವಂತೆ, ಲೇಬರ್ ವೃತ್ತ ಕಾರ್ಮಿಕರ ಬದುಕಿನಲ್ಲಿ ನಿತ್ಯ ಮರುಹುಟ್ಟು ಪಡೆಯುತ್ತಲೇ ಇರುತ್ತದೆ.

ಮುನ್ನೋಟ 03-05-2026 ರಿಂದ 09-05-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಬಹಳ ಬುದ್ಧಿವಂತಿಕೆಯಿಂದ ನಿಮ್ಮ ಕಾರ್ಯ ಸಾಧನೆ ಮಾಡುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ನಿಮ್ಮ ಕೆಲಸಗಳಿಗೆ ಗುರುಹಿರಿಯರ ಬೆಂಬಲ ದೊರಕುತ್ತದೆ. ಭೂಮಿ ಖರೀದಿ ವಿಚಾರದಲ್ಲಿ ಎಚ್ಚರವಾಗಿರಿ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ. ಪಾದಗಳಲ್ಲಿ ನೋವು ಕಾಣಿಸಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ನಿಮ್ಮ ದೇಹಾಲಂಕಾರಕ್ಕೆ ಹೆಚ್ಚು ಪ್ರಾಮುಖ್ಯ ನೀಡುವಿರಿ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಕೃಷಿಭೂಮಿಯನ್ನು ಕೊಳ್ಳಬಹುದು ಅಥವಾ ಅಭಿವೃ-ದ್ಧಿಪಡಿಸಬಹುದು. ವಿದ್ಯಾರ್ಥಿಗಳಿಗೆ ಅಪೇಕ್ಷಿತ ಫಲಿತಾಂಶ ಸಿಗುವುದು ಕಷ್ಟ. ಮೂತ್ರ ಸಂಬಂಧಿ ದೋಷಗಳು ಕೆಲವರಿಗೆ ಕಾಣಿಸಬಹುದು. ಪ್ರೀತಿ, ಪ್ರೇಮದಲ್ಲಿರುವವರಿಗೆ ಹಿರಿಯರ ಒಪ್ಪಿಗೆ ಸಿಗುತ್ತದೆ. ಅನಿರೀಕ್ಷಿತ ಆದಾಯ ಲಭಿಸುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ಖರ್ಚು ಹೆಚ್ಚಾಗುವ ಸಂದರ್ಭವಿದೆ. ಆಸ್ತಿ ವಿಚಾರದಲ್ಲಿ ಮೋಸ ಹೋಗುವ ಸಾಧ್ಯತೆ ಇದೆ, ಎಚ್ಚರವಾಗಿರಿ. ಈಗ ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶ ಇರುತ್ತದೆ. ಶೀತ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ನಿಮ್ಮೆಲ್ಲ ಕೆಲಸಗಳಿಗೆ ನಿಮ್ಮ ಸಂಗಾತಿಯ ಸಹಕಾರ ಸಿಗುತ್ತದೆ. ವಿದೇಶಿ ವ್ಯವಹಾರಗಳಲ್ಲಿ ಪಾಲು ದೊರೆಯುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಮನಸ್ಸಿನಲ್ಲಿ ಧೈರ್ಯವಿದ್ದು, ಎಲ್ಲಾ ಕಾರ್ಯಗಳಲ್ಲಿ ಉತ್ಸಾಹ ತೋರುವಿರಿ. ಆದಾಯವು ಕಡಿಮೆ ಇರುತ್ತದೆ. ಧರ್ಮ ಕಾರ್ಯಗಳನ್ನು ಮಾಡಿಸುವವರ ಆದಾಯ ಹೆಚ್ಚುತ್ತದೆ. ಬಂಧುಗಳ ನಡುವಿನ ಅಂತರ ಹೆಚ್ಚಾಗುತ್ತದೆ. ಕಟ್ಟಡ ಕಾರ್ಮಿಕರ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಒಳ್ಳೆಯ ಫಲಿತಾಂಶ ಪಡೆಯುವ ಯೋಗವಿದೆ. ವಾಯು ಪ್ರಕೋಪ ಕೆಲವರನ್ನು ಕಾಡಬಹುದು. ಸರ್ಕಾರಿ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವಾರದ ಆರಂಭದಲ್ಲಿ ವಿಪರೀತ ಆಲಸ್ಯ ಇರುತ್ತದೆ. ಆದಾಯವು ಕಡಿಮೆ ಇದ್ದು, ಅದರಲ್ಲೇ ನಿಭಾಯಿಸಬೇಕಾಗಿರುತ್ತದೆ. ಹಿರಿಯ ಮಹಿಳಾ ಅಧಿಕಾರಿ ಸಹಾಯದಿಂದ ವೃತ್ತಿಯಲ್ಲಿ ಮೇಲೆ ಬರಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಫಲಿತಾಂಶ ದೊರೆಯುತ್ತದೆ. ಉಷ್ಣಸ್ಥಾವರಗಳಲ್ಲಿ ಕೆಲಸ ಮಾಡುವವರು ಈಗ ಎಚ್ಚರಿಕೆಯಿಂದ ಮಾಡಿರಿ. ವಿದೇಶಿ ಸಂಗಾತಿಯನ್ನು ಬಯಸುತ್ತಿರುವವರಿಗೆ ಸಂಬಂಧಗಳು ಕೂಡಿಬರುತ್ತವೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಕೆಲಸ ಮಾಡುವ ಉತ್ಸಾಹ ಕಡಿಮೆಯಾಗಿರುತ್ತದೆ. ಆದಾಯವು ಕಡಿಮೆಯಿದ್ದು, ಹಿರಿಯರ ಸಹಕಾರದಿಂದ ಆದಾಯ ಹೆಚ್ಚಿಸಿಕೊಳ್ಳಬಹುದು. ತಾಯಿಯ ಸಹಕಾರ ಈಗ ಸಂಪೂರ್ಣವಾಗಿ ಸಿಗುತ್ತದೆ. ಸಂಗಾತಿಯ ಕೆಲವು ಮಾತು ನಿಮಗೆ ಇಷ್ಟವಾಗುವುದಿಲ್ಲ. ಸರ್ಕಾರಿ ಗುತ್ತಿಗೆ ವ್ಯವಹಾರಗಳಲ್ಲಿ ನಿಧಾನಗತಿ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಸ್ವಗೌರವ ಹೆಚ್ಚಿಸಿಕೊಳ್ಳಲು ಪ್ರಯತ್ನಪಡುವಿರಿ. ಆದಾಯ ನಿಮ್ಮ ಖರ್ಚನ್ನು ಸರಿದೂಗಿ-ಸುವಷ್ಟು ಇರುತ್ತದೆ. ವಿದೇಶದಲ್ಲಿ ಓದಬೇಕೆನ್ನುವವರ ಆಸೆ ಈಡೇರುತ್ತದೆ. ಕೆಲವರಿಗೆ ಕಾಲುಗಳಲ್ಲಿ ಗಾಯವಾಗಬಹುದು ಎಚ್ಚರವಾಗಿರಿ. ಸಂಗಾತಿ ಜತೆಗೂಡಿ ಮಾಡಿದ ವ್ಯವಹಾರಗ-ಳಲ್ಲಿ ಲಾಭವಿರುತ್ತದೆ. ಆಭರಣ ತಯಾರಕರಿಗೆ ಹೆಚ್ಚು ಲಾಭ ದೊರೆಯುವ ಸಾಧ್ಯತೆಗಳಿವೆ. ನಿಮ್ಮ ಹಿರಿಯರಿಂದ ನಿರೀಕ್ಷಿಸಿದ ಆರ್ಥಿಕ ಸಹಕಾರ ದೊರೆಯುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವಾರದ ಆರಂಭದಲ್ಲಿ ಬಹಳ ಆನಂದ ಇರುತ್ತದೆ. ಆದಾಯವು ಸಾಮಾನ್ಯಗತಿಯ-ಲ್ಲಿರುತ್ತದೆ. ನಿಮ್ಮ ತಂತ್ರಗಳಿಂದ ಶತ್ರುಗಳನ್ನು ದಿಕ್ಕು ತಪ್ಪಿಸಬಹುದು. ವಿದೇಶದಲ್ಲಿ ಭೂಮಿಯ ವ್ಯವಹಾರ ಮಾಡುವವರ ಆದಾಯವು ಹೆಚ್ಚುತ್ತದೆ. ಕೆಲವರಿಗೆ ತಲೆನೋವು ಹೆಚ್ಚು ಕಾಡಬಹುದು. ಸಂಗಾತಿಯು ಪ್ರಾಮಾಣಿಕವಾಗಿ ನಿಮಗೆ ಸಹಕಾರ ನೀಡುತ್ತಾರೆ. ಹಣಕಾಸಿನ ವ್ಯವಹಾರಗಳು ಅಷ್ಟು ಒಳಿತಲ್ಲ. ವೃತ್ತಿ ಸ್ಥಳದಲ್ಲಿ ಉತ್ತಮ ಹೆಸರನ್ನು ಪಡೆಯುವ ಯೋಗವಿದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಮನಸ್ಸಿನಲ್ಲಿ ಧೈರ್ಯ ಹೆಚ್ಚಿರುತ್ತದೆ. ಆದಾಯವು ಕಡಿಮೆ ಇದ್ದರೂ, ತೊಂದರೆ ಇರುವುದಿಲ್ಲ. ಬಂಧುಗಳು ನಿಮ್ಮ ತಾಳ್ಮೆಯನ್ನು ಪರೀಕ್ಷಿಸಲು ಪ್ರಯತ್ನಪಡುವರು. ಹಿರಿಯರ ಆಸ್ತಿಯಲ್ಲಿ ತಗಾದೆ ಹೆಚ್ಚಾಗಬಹುದು. ಅಲಂಕಾರಿಕ ವಸ್ತುಗಳನ್ನು ಮಾರುವವರಿಗೆ ಬೇಡಿಕೆ ಕಡಿಮೆಯಾಗಬಹುದು. ಸಂಗಾತಿಯಿಂದ ನಿರೀಕ್ಷೆ ಮಾಡಿದ್ದಷ್ಟು ಆರ್ಥಿಕ ಸಹಾಯ ದೊರೆಯುತ್ತದೆ. ಹಾಲಿನ ಉತ್ಪನ್ನ ಮಾರಾಟಗಾರರ ಆದಾಯ ಕಡಿಮೆಯಾಗಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಬಹಳ ಉತ್ಸಾಹಿಗಳಾಗಿ ಕೆಲಸ ಕಾರ್ಯಗಳನ್ನು ಮಾಡುವಿರಿ. ವಿದೇಶಿ ವ್ಯವಹಾರ ಮಾಡುವವರ ಆದಾಯ ನಿರೀಕ್ಷೆ ಮೀರಿ ಹೆಚ್ಚುತ್ತದೆ. ಹಿತಶತ್ರುಗಳನ್ನು ಸರಿಯಾಗಿ ಎದುರಿಸುವಿರಿ. ಸರ್ಕಾರಿ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಕೇಶಾಲಂಕಾರ ಮತ್ತು ವಸ್ತ್ರಾಲಂಕಾರ ಮಾಡುವವರ ಆದಾಯ ಹೆಚ್ಚುತ್ತದೆ. ಸಂಗಾತಿಯ ಸಹಕಾರದಿಂದ ನಿಮ್ಮ ಮನೋಸ್ಥೈರ್ಯ ಹೆಚ್ಚುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವಿದೇಶಿ ಭಾಷೆಗಳನ್ನು ಕಲಿಯಲು ಆಸಕ್ತಿ ಹೆಚ್ಚಾಗುತ್ತದೆ. ಆದಾಯ ಕಡಿಮೆ ಇದ್ದು, ಅದರಲ್ಲೇ ನಿಭಾಯಿಸಬೇಕಾದ ಪರಿಸ್ಥಿತಿ ಇದೆ. ಹಿರಿಯರಿಗೆ ಸಮಾಜದಿಂದ ಹೆಚ್ಚು ಸಹಕಾರ ದೊರೆಯುತ್ತದೆ. ರೇಷ್ಮೆ ಬಟ್ಟೆ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಿರುತ್ತದೆ. ವಿದ್ಯಾರ್ಥಿಗ-ಳಿಗೆ ಅತಿ ಹೆಚ್ಚು ಯಶಸ್ಸು ದೊರೆಯುತ್ತದೆ. ಉದ್ಯೋಗಸ್ಥರಿಗೆ ಉದ್ಯೋಗ ಸ್ಥಳದಲ್ಲಿ ಕಿರುಕುಳ ಹೆಚ್ಚಾಗಬಹುದು. ಹಾಲಿನ ಉತ್ಪನ್ನಗಳನ್ನು ಮಾರುವವರ ಆದಾಯ ಹೆಚ್ಚುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಮನಸ್ಸಿನಲ್ಲಿ ಸಾಕಷ್ಟು ದ್ವಂದ್ವವಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಆಸ್ತಿ ಕೊಳ್ಳುವ ಆಲೋಚನೆಗೆ ಪುಷ್ಟಿ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಸ್ವಲ್ಪ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಹೃದಯಕ್ಕೆ ಸಂಬಂಧಿಸಿದ ದೋಷಗಳು ಕೆಲವರನ್ನು ಕಾಡಬಹುದು. ಕಸೂತಿ ಕೆಲಸ ಮಾಡುವವರ ಆದಾಯ ಹೆಚ್ಚುತ್ತದೆ.

ಪದಬಂಧ 2942

ಮೇಲಿಂದ ಕೆಳಕ್ಕೆ
1.ವಿನೋದ ಮಾಡುತ್ತಾ ನೀರಿನಂತೆ ಹರಿವವಳು 3
2. ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡುವ ಪರಿಣತಿ 3
3. ಸಮುದ್ರದಂಚಿನಲ್ಲಿ ಹೇರಳವಾದ ಮರಳು 3
4. ಕಾಲಿಗೆ ಗೆಜ್ಜೆ ಕಟ್ಟಿ ಹಾವಭಾವ ತುಂಬಿದ ಕುಣಿತ 3
7. ಶಿವನಿಂದ ಆಗುವ ಅಪಹರಣ 3
9. ಶಾಖ ಅಲ್ಪವಾದ ವಿಶೇಷ ತಾರೆ 3
10. ಕಣ್ಣಿಗೆ ಇದನ್ನು ಹಚ್ಚಿದರೆ ಅಗೋಚರವೆಲ್ಲಾ ಗೋಚರವಾಗುತ್ತದೆ 3
11. ರಣದಲ್ಲಿ ಬರುವ ರಮೆಯ ಗಂಡ 3
12. ಜನಕರಾಜನ ಮಗಳು ಸೀತೆ 3
13. ಹೊಳೆ ಹೊಳೆವ ಉಪ್ಪಿನಂತಹ ಬೆಡಗಿ 3
16. ಬಹುಕಾಲ ಎದುರು ನೋಡುವಿಕೆ 3
18. ನಾಲಿಗೆಯ ಮೇಲೆ ಚಿರವಾಗಿ ಉಳಿಯುವ ರುಚಿ 3
19. ಗ್ರಾಮ ಪಂಚಾಯ್ತಿಯಲ್ಲಿ ಶಾನುಭೋಗನ ಜೊತೆಗಾರ 3
20. ಕಾದಂಬರಿಕಾರ್ತಿ ಇಂದಿರಾ ಅವರ ಜೋಡಿ ಮೂಳೆಯಂತ ಮೊದಲೆರಡಕ್ಷರಗಳು 3
21. ಬ್ರಹ್ಮನ ನಾಲ್ಕು ಮಾನಸ ಪುತ್ರರಲ್ಲಿ ಅಗ್ರಜ 3
22. ಈಶ್ವರನಿಗಾಗಿ ಕಟ್ಟುವ ಮುಡುಪು ಮೀಸಲು 3

ಎಡದಿಂದ ಬಲಕ್ಕೆ
1.ಕೊಳದಲ್ಲಿ ಹುಟ್ಟಿರುವ ತಾವರೆಯಂತಹ ಕಣ್ಣುಳ್ಳವ! ದಾಸವಾಣಿಯಂತೆ ಸಕಲ ಗ್ರಹಬಲ ಪಡೆದವನು 5
3. ನಗರದಲ್ಲಿನ ಹೂದೋಟ ಕಾಡಾಗಿದೆ 5
5. ಒತ್ತು ಕಳೆದುಕೊಂಡು ಹಗುರಾದ ಆಂತರ್ಯ 3
6. ಎಲ್ಲರೂ ಒಟ್ಟಾಗಿ ಸೇರಿ ಹಾಡುವ ಹಾಡು 5
8. ಕರ್ಣನಂತೆ ಜಾತಿಯನ್ನು ಕಳೆದುಕೊಂಡವನು 5
10. ಪತ್ರಿಕೆಯ ಕಾಲಂ ಹಿಡದು ಪ್ರಸಿದ್ಧನಾದ ಲೇಖಕ 5
12. ಹುಟ್ಟಿನ ಹನ್ನೆರಡು ಮನೆಯ ಕುಂಡಲಿಯಿಂದಾಗುವ ಪರಿಣಾಮ 5
14. ಅಜ್ಜ ಮಾಡುವ ಮಹಾ ಸ್ನಾನ 3
15. ದೇಶವನ್ನಾಗಲೀ ಕಟ್ಟಡವನ್ನಾಗಲೀ ಹೊಸದಾಗಿ ಕಟ್ಟಿದ್ದು 5
17. ಕಪ್ಪ ಕೊಡುವುದನ್ನು ನಿರಾಕರಿಸಿದ ಕನ್ನಡದ ವೀರ ಅರಸಿ 5
19. ಪರೀಕ್ಷೆ ಎದುರಿಸುವಾಗ ಉಂಟಾಗುವ ಭೀತಿ, ಆತಂಕ 5
21. ಯುದ್ಧದಲ್ಲಿ ಕೇಸರಿಯಂತೆ ಘರ್ಜಿಸಿ ಹೋರಾಡುವ ವೀರ 5
23. ಮನವಾಯಿತೆ ಕಲುಷಿತ? 3
24. ಉತ್ಸಾಹ ಉಲ್ಲಾಸದ ಮೆರಗು 5
25. ನಮ್ಮ ನಾಡ ನುಡಿಯನ್ನು ಪೊರೆವ ತಾಯಿ 5



ಪದಬಂಧ ಉತ್ತರ -2941

ಮೇಲಿಂದ ಕೆಳಕ್ಕೆ
1.ಕ್ಷಮೆಯಿರಲಿ 2.ಲಕ್ಷ್ಮೀಪತಿ 3.ಮಕರಂದ 4.ವರುಣ 6.ರಕ್ಷಣ 7.ಜಾಲಂಧರ 8.ವಾದವಿವಾದ 9.ಕಲಿಮಾ 10.ವಾಕರಿಕೆ 11.ಸಿದ್ಧಾಸ್ತ 13.ಲಾವಣ್ಯ 15.ಹಸ್ತಿನಾವತಿ 16.ಹೆಣಗಾಡು 17.ರಿಯಾಯಿತಿ 18.ಪುನೀತ

ಎಡದಿಂದ ಬಲಕ್ಕೆ
1.ಕ್ಷಮಾಶೀಲ 3.ಮಹಾನುಭಾವ 5.ರಂಗಾಭರಣ 7.ಜಾತಿವಾದ 9.ಕಲಿಕಾಲಂ 10.ವಾರಾಣಸಿ 12.ಮಾಲಾಧರ 14.ರಿಕ್ತಹಸ್ತ 16.ಹೆದರಿಕೆ 18.ಪುಣ್ಯಶ್ರವಣ 19.ತಮಿಳುನಾಡು 20.ತಿರುಪತಿ

ಭಾಗವತರು 25ರ ಸಂಭ್ರಮ

ನೆನಪುಗಳು ನೂರಾರು

ಸಂಸ್ಥೆಯ ಕಾರ್ಯಕ್ರಮದಲ್ಲಿ ಪಂಡಿತ್ ವೆಂಕಟೇಶ್ ಕುಮಾರ್ ತಂಡದಿಂದ ಗಾಯನ

2001ರಲ್ಲಿ ಕನ್ನಡ ರಂಗಭೂಮಿಗೆ 125 ವರ್ಷ ತುಂಬಿದ ಸಂದರ್ಭದಲ್ಲಿ ಶುರುವಾದ ಸಂಸ್ಥೆ ಭಾಗವತರು. ರಂಗಭೂಮಿ, ಸಂಗೀತ, ಸಾಹಿತ್ಯ, ಹರಿಕಥೆ ಮುಂತಾದ ಕಲೆಗಳಿಗೆ ವೇದಿಕೆಯಾಗಿದೆ. ತನ್ನ 25 ವರ್ಷಗಳ ಪಯಣದಲ್ಲಿ ನೆನಪಿನಲ್ಲಿ ಉಳಿಯುವ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿದೆ.

• ಎನ್. ಸಂಧ್ಯಾರಾಣಿ

ನಾನು ಬೆಂಗಳೂರಿಗೆ ಬಂದದ್ದು ತೊಂಬತ್ತರ ದಶಕದಲ್ಲಿ. ತಾಲ್ಲೂಕು ಕೇಂದ್ರದಿಂದ ಬಂದ ನನಗೆ ನಗರದ ದೊಡ್ಡ ರಸ್ತೆಗಳು, ಅಪರಿಚಿತ ವಿಳಾಸಗಳು ಭಯ ಹುಟ್ಟಿಸುತ್ತಿದ್ದವು. ಆದರೆ ಅದಕ್ಕಿಂತ ಹೆಚ್ಚಾಗಿ ಇಲ್ಲಿನ ಸಾಂಸ್ಕೃತಿಕ ಕಾರ್ಯಕ್ರಮಗಳು ನನ್ನನ್ನು ಆಕರ್ಷಿಸಿದವು. ಅವು ನನಗೆ ಹೊಸ ಜಗತ್ತಿನ ಬಾಗಿಲು ತೆರೆದವು. ಪುಸ್ತಕದಂಗಡಿಗಳು ಮತ್ತು ಕಲಾಕ್ಷೇತ್ರಗಳ ಮೂಲಕ, ಈ ಅನಾಮಿಕ ನಗರದ ಹತ್ತಿರವಾಯಿತು.

ಹೀಗೆ ಅನೇಕ ಕಾರ್ಯಕ್ರಮಗಳನ್ನು ನೋಡುತ್ತಿದ್ದರೂ, ಅದರ ಸಂಘಟಕರು ಯಾರು, ತಂಡಗಳು ಯಾವುವು ಎನ್ನುವುದು ಮನಸ್ಸಿಗೆ ಇಳಿಯುತ್ತಿರಲಿಲ್ಲ. ಆದರೆ ಆ ಅನಾಮಿಕ ಅನುಭವಗಳೇ ನಿಧಾನವಾಗಿ ನನ್ನೊಳಗೆ ನೆಲೆಗೊಳ್ಳುತ್ತಿದ್ದವು. ಈ ನಡುವೆ, ಸುಮಾರು 2012ರ ವೇಳೆಗೆ ಚಂದ್ರಶೇಖರ ಕಂಬಾರರ ನಾಟಕೋತ್ಸವ 'ಸಿರಿಸಂಪಿಗೆ'ಗೆ ಹೋದಾಗ, ಸೊಗಸಾದ ನಾಟಕಗಳ ಮಧ್ಯೆ ಕಣ್ಣಿಗೆ ಬಿದ್ದ ಹೆಸರು 'ಭಾಗವತರು'. 'ಎಷ್ಟು ಚೆನ್ನಾಗಿ ಕಾರ್ಯಕ್ರಮ ಮಾಡಿದ್ದಾರೆ!' ಎಂಬ ಭಾವನೆ ಮೂಡಿತು. ಮರುವರ್ಷವೇ ಕೆ.ವೈ. ನಾರಾಯಣಸ್ವಾಮಿ ಅವರ ನಾಟಕಗಳ ಕಾರ್ಯಕ್ರಮ 'ರಂಗಬೆಡಗು' ನಡೆಯಿತು. ಅಲ್ಲಿ 'ಅನಭಿಜ್ಞ ಶಾಕುಂತಲ' ಎಂಬ ಅದ್ಭುತ ನಾಟಕ ನೋಡಿದೆ. ನನ್ನ ಮಟ್ಟಿಗೆ 'ಭಾಗವತರು' ತಂಡದ ಕಾರ್ಯಕ್ರಮಗಳು ನನ್ನೊಳಗೆ ಇಳಿದದ್ದು ಅಲ್ಲಿಂದಲೇ. ನಂತರ 'ಭಾಗವತರು' ತಂಡದ ರೇವಣ್ಣ ಅವರ ಪರಿಚಯವಾಯಿತು. ಒಬ್ಬ ವ್ಯಕ್ತಿಯ ಹಟ ಮತ್ತು ದೃಷ್ಟಿ ಒಂದು ಸಾಂಸ್ಕೃತಿಕ ಚಳವಳಿಯಾಗುವ ಕಥೆಯ ಆರಂಭ ತಿಳಿಯಿತು.

ತುಮಕೂರು ಜಿಲ್ಲೆಯ ತುರುವೇಕೆರೆ ಬಳಿಯ ಜಡೇಮಾಯಸಂದ್ರದ ರೇವಣ್ಣ ಅವರು 1984ರಲ್ಲಿ ಬೆಂಗಳೂರಿಗೆ ಬಂದಾಗ ಅವರಿಗಿದ್ದ ಒಂದೇ ಗುರಿ–ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ₹2000 ಸಂಬಳದ ಕೆಲಸ ಗಿಟ್ಟಿಸಿಕೊಳ್ಳುವುದು. ಆದರೆ ಅವರು ತಲುಪಿದ್ದು ಕರ್ನಾಟಕ ನಾಟಕ ಅಕಾಡೆಮಿಯ ಬಾಗಿಲಿಗೆ. ಅಲ್ಲಿ ಆರಂಭವಾದ ಪಯಣ ಅವರ ಹೆಸರಿನ ಜೊತೆಗೆ ಇನ್ನೊಂದು ಹೆಸರನ್ನು ಸೇರಿಸಿತು 'ಭಾಗವತರು ರೇವಣ್ಣ'. ಅದು ಅವರು ಕಟ್ಟಿದ, ಬೆಳೆಸಿದ ಸಂಸ್ಥೆಯ ಹೆಸರೂ ಹೌದು; ಬೆಂಗಳೂರಿನ ಸಾಂಸ್ಕೃತಿಕ ಲೋಕದ ಚೌಕಿಮನೆಯೂ ಹೌದು. ಒಬ್ಬ ವ್ಯಕ್ತಿಯ ಪ್ರಯತ್ನ ಹೇಗೆ ಸಮೂಹದ ಸಂಸ್ಕೃತಿಯಾಗಿ ಬೆಳೆದೀತು ಎಂಬುದಕ್ಕೆ ಇದು ಉದಾಹರಣೆ.

'ರಂಗಸಂಸ್ಕೃತಿಯಿಂದ ರಾಜ್ಯಸಭೆಗೆ' ಕಾರ್ಯಕ್ರಮದಲ್ಲಿ ಬಿ.ಜಯಶ್ರೀ ಹಾಡುತ್ತಿರುವುದು

ರೇವಣ್ಣ ಮತ್ತು ಕ್ಯಾಂಟೀನ್ ಉಡುಪ ಅವರ ಕನಸು 'ಮಾಯಾಮಂಜರಿ'. 2001ರಲ್ಲಿ ಕನ್ನಡ ರಂಗಭೂಮಿಗೆ 125 ವರ್ಷ ತುಂಬಿದ ಸಂದರ್ಭದಲ್ಲಿಇವರಿಬ್ಬರೂ ರಂಗಭೂಮಿಯಿಂದ ಕಿರುತೆರೆ, ಹಿರಿತೆರೆಗೆ ಹೋದ ಕಲಾವಿದರನ್ನು ಒಂದೇ ವೇದಿಕೆಯಲ್ಲಿ ಸೇರಿಸುವ ಸಾಹಸಕ್ಕೆ ಕೈಹಾಕಿದರು. ಕಲಾಕ್ಷೇತ್ರವು ಸುಮಾರು 120 ಕಲಾವಿದರ ಸಮ್ಮಿಲನಕ್ಕೆ ಸಾಕ್ಷಿಯಾಯಿತು. ವೃತ್ತಿ, ಜನಪದ ಮತ್ತು ಆಧುನಿಕ ರಂಗಭೂಮಿಯ ಬಗ್ಗೆ ನಡೆದ ವಿಚಾರ ವಿನಿಮಯ ಆ ದಿನದ ವಿಶೇಷವಾಗಿತ್ತು. 'ರಾಜಾಶ್ರಯದಿಂದ ಜನಾಶ್ರಯದತ್ತ ಬಂದ ಕನ್ನಡ ವೃತ್ತಿ ರಂಗಭೂಮಿಯ ಸಂಭ್ರಮ ಕ್ಷಣಗಳನ್ನು ದಾಖಲಿಸಿದ ಕಾರ್ಯಕ್ರಮ ಇದು' ಎಂದು ರಂಗಕರ್ಮಿ ಶಶಿಧರ ಭಾರಿಘಾಟ್ ಬರೆಯುತ್ತಾರೆ. ಈ ಕಾರ್ಯಕ್ರಮ ಒಂದು ನೆನಪಷ್ಟೇ ಅಲ್ಲ, ಒಂದು ಸಂಸ್ಕೃತಿಯ ದಾಖಲೆ.

ಈ 'ಮಾಯಾಮಂಜರಿ' ಸಾಂಸ್ಥಿಕ ರೂಪ ತಾಳಿದಾಗ ಹುಟ್ಟಿದ್ದು 'ಭಾಗವತರು'. ಭಾಗವತರು ರಂಗದ ಮೇಲೆ ಕಥೆಯನ್ನು ಮುನ್ನಡೆಸುತ್ತಾರೆ, ಆಟ ಕಟ್ಟಿಸುತ್ತಾರೆ. ಆದರೆ ಸ್ವತಃ ಆಟವಾಡುವುದಿಲ್ಲ. ಸಂಸ್ಥೆ ಹುಟ್ಟಿದಾಗ ತೆಗೆದುಕೊಂಡ ಮೊದಲ ನಿರ್ಧಾರವೇ 'ನಾವು ನಮ್ಮದೇ ತಂಡ ಕಟ್ಟುವುದಿಲ್ಲ' ಎಂಬುದು. ಆಗಿನಿಂದ 'ಭಾಗವತರು' ರಂಗಭೂಮಿ, ಸಂಗೀತ, ಸಾಹಿತ್ಯ, ಹರಿಕಥೆ ಮುಂತಾದ ಕಲೆಗಳಿಗೆ ವೇದಿಕೆಯಾಗಿದೆಯೇ ಹೊರತು, ಸ್ವತಃ ವೇದಿಕೆ ಏರಿಲ್ಲ.


ರೇವಣ್ಣ

ರಂಗಭೂಮಿ ಲಲಿತಕಲೆಗಳಲ್ಲೊಂದು ವಿಶಿಷ್ಟ ಕಲೆ. ಇಲ್ಲಿ ಸಾಹಿತ್ಯ ಇದೆ, ಸಂಗೀತ ಇದೆ, ರಂಗಸಜ್ಜಿಕೆಯೂ ಇದೆ. 'ಭಾಗವತರು' ಈ ಎಲ್ಲವನ್ನೂ ತನ್ನದಾಗಿಸಿಕೊಂಡು, ಎಲ್ಲಕ್ಕೂ ವೇದಿಕೆ ಕಲ್ಪಿಸಿದೆ. ಕನ್ನಡ ಸಾಹಿತ್ಯ-ಸಂಸ್ಕೃತಿಯನ್ನು ಕಟ್ಟಿದ ಕಾರಂತ, ಕಂಬಾರ, ಎಚ್.ಎನ್., ಸಿ.ಜಿ.ಕೆ., ಯು.ಆರ್. ಅನಂತಮೂರ್ತಿ, ಗಿರೀಶ ಕಾರ್ನಾಡ್ ಮೊದಲಾದ ದಿಗ್ಗಜರ ಹೆಸರಿನಲ್ಲಿ, ಹಾಗೆಯೇ ಬಿ. ಜಯಶ್ರೀ ಮತ್ತು ಉಮಾಶ್ರೀ ಅವರ ಹೆಸರಿನಲ್ಲಿ ನಾಟಕೋತ್ಸವಗಳನ್ನು ಆಯೋಜಿಸಿದೆ. ಇದರ ಮೂಲಕ ಪರಂಪರೆ ಮತ್ತು ಆಧುನಿಕತೆಯ ನಡುವೆ ಸಂವಾದ ನಡೆಯುತ್ತಿದೆ.

ಇವರ ಕಾರ್ಯಕ್ರಮಗಳ ಇನ್ನೊಂದು ವಿಶೇಷವೆಂದರೆ ನಾಟಕೋತ್ಸವಗಳ ಜೊತೆಗೆ ನಡೆಯುವ ವಿಚಾರ ಸಂಕಿರಣಗಳು. ಒಂದು ಕಡೆ ಅಕಾಡೆಮಿಕ್ ವಲಯ, ಇನ್ನೊಂದು ಕಡೆ ಅದರಾಚೆಯ ರಂಗಪ್ರೇಮಿಗಳು–ಎಲ್ಲರೂ ಒಂದೇ ಜಾಗದಲ್ಲಿ ಸೇರುತ್ತಾರೆ. ಹಗಲಿನ ಸಾಹಿತ್ಯ ಚರ್ಚೆಗಳು, ಕಲಾಕ್ಷೇತ್ರದ ಮೆಟ್ಟಿಲುಗಳ ಮೇಲೆ ಮುಂದುವರೆಯುವ ಮಾತುಕತೆಗಳು, ಕಾರಂತರ ಕ್ಯಾಂಟೀನ್‌ನ ಉಪ್ಪಿಟ್ಟು, ಟೌನ್ ಹಾಲ್ ಕ್ಯಾಂಟೀನ್‌ನ ಲೆಮನ್ ಟೀ ಇವೆಲ್ಲ ಸೇರಿ ಒಂದು ಸಾಂಸ್ಕೃತಿಕ ಅನುಭವವಾಗುತ್ತದೆ. ಸಂಜೆ ನಾಟಕದೊಂದಿಗೆ ಅದು ಪೂರ್ಣಗೊಳ್ಳುತ್ತದೆ. ಈ ನಿರಂತರ ಸಂವಾದವೇ ಒಂದು ಸಮುದಾಯವನ್ನು ನಿರ್ಮಿಸುತ್ತದೆ.

ಇಷ್ಟೇ ಮುಖ್ಯವಾದುದು 'ಭಾಗವತರು' ನಡೆಸಿದ ಗೀತಗಾಯನ ಕಾರ್ಯಕ್ರಮಗಳು. ಭಾವಗೀತೆಗಳ ಜೊತೆಗೆ ದಾಸರ ಕೀರ್ತನೆಗಳು, ವಚನ, ತತ್ವಪದ, ಜನಪದ, ರಂಗಗೀತೆ, ಹಿಂದೂಸ್ತಾನಿ ಸಂಗೀತ–ಹೀಗೆ ಸಂಗೀತವು ತನ್ನ ವ್ಯಾಪ್ತಿಯನ್ನು ವಿಸ್ತರಿಸಿದೆ. ನನಗೆ ಮರೆಯಲಾಗದ ಕಾರ್ಯಕ್ರಮಗಳಲ್ಲಿ ಸಿ. ಅಶ್ವತ್, ಶಿವಮೊಗ್ಗ ಸುಬ್ಬಣ್ಣ, ಉಸ್ತಾದ್ ಬಾಲೇಖಾನ್ ಸಹೋದರರು, ಪಂ. ರಾಜಶೇಖರ್ ಮನ್ಸೂರ್ ಅವರ ಗಾಯನ ಪ್ರಮುಖ. ಸಂಗೀತವೂ ಇಲ್ಲಿ ಒಂದು ಸೇತುವೆಯಾಗಿದೆ.

ಹವ್ಯಾಸಿ ರಂಗಭೂಮಿಯಲ್ಲಿ ಇರುವವರು ವೃತ್ತಿ ರಂಗಭೂಮಿ ಬಗೆಗೆ ಕಡಿಮೆ ಮಾತನಾಡುವುದು ಸಾಮಾನ್ಯ. ಆದರೆ ವೃತ್ತಿ ರಂಗಭೂಮಿಯು ಪ್ರೇಕ್ಷಕರೊಂದಿಗೆ ಹೊಂದಿರುವ ಸಂಬಂಧವನ್ನು ನಾವು ದೂರದಿಂದ ಊಹಿಸಲು ಸಾಧ್ಯವಿಲ್ಲ. ಉತ್ತರ ಕರ್ನಾಟಕ ಪ್ರವಾಸದ ವೇಳೆ ಜೇವರ್ಗಿ ರಾಜಣ್ಣ ಅವರ ನಾಟಕಕ್ಕೆ ಟಿಕೆಟ್ ಸಿಗದೆ ಹೋಗಿದ್ದ ನನಗೆ, ಅವರ ತಂಡವನ್ನು ಕಲಾಕ್ಷೇತ್ರಕ್ಕೆ ಕರೆತಂದ 'ಭಾಗವತರು' ಕಾರಣದಿಂದಲೇ ನಂತರ ಆ ನಾಟಕ ನೋಡಲು ಸಾಧ್ಯವಾಯಿತು.

ಹೀಗೆ ಬೇರೆಬೇರೆ ಕಡೆಗಳಿಂದ ಒಳ್ಳೆಯದನ್ನು ಹೆಕ್ಕಿ ತಂದು, ಅದಕ್ಕೆ ವೇದಿಕೆ ಕಲ್ಪಿಸಿ, ನೇರವಾಗಿ ಅನುಭವಿಸುವ ಅವಕಾಶ ನೀಡಿರುವುದು ತಂಡದ ದೊಡ್ಡ ಸಾಧನೆ. ಜೊತೆಗೆ ಪುಸ್ತಕ ಪ್ರಕಟಣೆ ಕೂಡ ಇವರ ಇನ್ನೊಂದು ಪ್ರಮುಖ ಕಾರ್ಯಕ್ಷೇತ್ರ. 'ಅಷ್ಟ ದಿಗ್ಗಜರು', 'ಸಾಂಸ್ಕೃತಿಕ ಲೋಕದಲ್ಲಿ ಬರಗೂರು', 'ನಿತ್ಯೋತ್ಸವ ಕವಿಗೆ 80', 'ಯು.ಆರ್. ಅನಂತಮೂರ್ತಿ ಮರುಓದಿನ ನೆಲೆಗಳು', 'ಲಂಕೇಶ್–90' ಮುಂತಾದ ಹಲವು ಪುಸ್ತಕಗಳನ್ನು ಪ್ರಕಟಿಸಿ ಓದುಗರಿಗೆ ನೀಡಿದೆ. ಈ ಪ್ರಕಟಣೆಗಳು ಒಂದು ಕಾಲದ ದಾಖಲೆಗಳಾಗಿವೆ.

'ಯಾವುದಾದರೂ ಹಂತದಲ್ಲಿ ಸವಾಲುಗಳು ನಿಮಗೆ ಸಾಕು ಎಂದು ಅನಿಸಿತೇ?' ಎಂಬ ಪ್ರಶ್ನೆಗೆ ರೇವಣ್ಣ ಅವರ ಉತ್ತರ ಸರಳ, 'ಎಂದಿಗೂ ಇಲ್ಲ. ಮೊದಲ ವರ್ಷಗಳಲ್ಲಿ ತೊಂದರೆಗಳು ಇದ್ದವು. ಆದರೆ ನಾನು ರೈತ. ಏನಾದರೂ ಆಗಲಿ, ನನ್ನ ಕೆಲಸ ನಾನು ಮಾಡುತ್ತೇನೆ ಎಂದು ನಿಂತೆ'.

ಅವರು ಕೇವಲ ನಿಂತಿಲ್ಲ; 25 ವರ್ಷಗಳಿಂದ 'ಭಾಗವತರು' ತಂಡವನ್ನು ನಿರಂತರವಾಗಿ ಮುನ್ನಡೆಸುತ್ತಿದ್ದಾರೆ. ಅವರ ಹಟ, ಅವರ ದೃಷ್ಟಿ ಇವೇ 'ಭಾಗವತರು' ಎಂಬ ಚಳವಳಿಯ ನಿಜವಾದ ಶಕ್ತಿ.

ರಂಗದ ಮೇಲೆ ಸ್ವಾತಂತ್ರ್ಯದ ಓಟ

• ಸರ್ಜಾಶಂಕರ ಹರಳಿಮಠ

ಲಾಗಾಯ್ತಿನ ಸಂಬಂಧಗಳನ್ನು ಅಳಿಸಿ ಹಾಕಿದ ದೇಶ ವಿಭಜನೆಯ ದುರಂತ, ಹಿಂದೂ–ಮುಸ್ಲಿಂ ಎಂಬ ಎರಡು ಧ್ರುವಗಳ ನಡುವೆ ವಿಜೃಂಭಿಸಿದ ಕ್ರೌರ್ಯ, ಅತಂತ್ರಗೊಂಡ ಜನಜೀವನ—ಇವುಗಳ ನೆನಪು ಇಂದಿಗೂ ಪ್ರಜ್ಞಾವಂತರ ಎದೆ ನಡುಗಿಸುವಂತಿವೆ. ಒಂದು ಕಾಲಘಟ್ಟದಲ್ಲಿ ನೆರೆಹೊರೆಯವರಾಗಿದ್ದವರು ಕ್ಷಣಾರ್ಧದಲ್ಲಿ ಪರಸ್ಪರ ವೈರಿಗಳಾಗುವ ಸ್ಥಿತಿ ಮಾನವ ಸಂಬಂಧಗಳ ನಾಜೂಕುತನವನ್ನೇ ಬಿಚ್ಚಿಡುತ್ತದೆ. ಈ ಹಿನ್ನೆಲೆಯಲ್ಲೇ ಮಾನವೀಯತೆಯ ಕಿರಣಗಳನ್ನು ಹುಡುಕಿದ ಹಲವು ರಂಗಪ್ರಯೋಗಗಳ ಸಾಲಿಗೆ ಹೊಸ ಸೇರ್ಪಡೆ 'ಸ್ವಾತಂತ್ರ್ಯದ ಓಟ'. ಬೋಳುವಾರು ಮಹಮದ್ ಕುಂಞ ಅವರ ಕಾದಂಬರಿಯನ್ನು ಆಧರಿಸಿ ರೂಪುಗೊಂಡ ಈ ನಾಟಕ ಇತ್ತೀಚೆಗೆ ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಮೊದಲ ಪ್ರದರ್ಶನ ಕಂಡಿತು.

ಕಾದಂಬರಿಯಲ್ಲಿನ 'ಮುತ್ತುಪ್ಪಾಡಿ' ಎಂಬ ಹಳ್ಳಿ ಇಲ್ಲಿ ರೂಪಕವಾಗಿಯೇ ಅಲ್ಲ, ಜೀವಂತ ಜಗತ್ತಿನಂತೆ ಮೂಡಿಬರುತ್ತದೆ. ದೇಶ ವಿಭಜನೆಯ ಅಲೆಗಳಲ್ಲಿ ಸಿಲುಕಿದ ಚಾಂದ್ ಅಲಿ, ಕ್ರೌರ್ಯದ ನಡುವೆ ಮಾನವೀಯತೆಯನ್ನು ಉಳಿಸಿಕೊಂಡು ಹಿಂದೂ ಕುಟುಂಬವೊಂದನ್ನು ರಕ್ಷಿಸಿ ಭಾರತಕ್ಕೆ ಕರೆತರುತ್ತಾನೆ. ಆದರೆ ರೈಲು ನಿಲ್ದಾಣದಲ್ಲಿ ಅವರಿಂದ ದೂರವಾಗುತ್ತಾನೆ. ಆ ಕಾಣೆಯಾಗುವ ಕ್ಷಣವೇ ಅವನ ಬದುಕಿನ ತಿರುವಾಗಿ ಪರಿಣಮಿಸುತ್ತದೆ. ನಂತರ ಮುತ್ತುಪ್ಪಾಡಿಯಲ್ಲಿ ನೆಲೆಸಿ, ಸೂಫಿ ಸಂತನಂತೆ ಊರ ಬದುಕಿನೊಳಗೆ ಬೆರೆತು 'ಚಾಂದಜ್ಜ'ನಾಗುವ ಅವನ ಪಯಣವೇ ನಾಟಕದ ಹೃದಯ. ಈ ಪಯಣದಲ್ಲಿನ ಒಳಮನದ ಮಿಡಿತಗಳು ಪ್ರೇಕ್ಷಕರಿಗೂ ಹತ್ತಿರವಾಗುತ್ತವೆ.

ಚಾಂದ್ ಅಲಿಯ ಜೀವನವನ್ನು ಮೂರು ಹಂತಗಳಲ್ಲಿ ಮೂವರು ನಟರು ನಿರ್ವಹಿಸಿರುವುದು ಗಮನಾರ್ಹ. ಈ ಪಾತ್ರದ ವಿವಿಧ ಹಂತಗಳ ನಡುವೆ ಕಾಣಿಸುವ ಭಾವಾಂತರಗಳು ನಾಟಕಕ್ಕೆ ಆಳವನ್ನು ನೀಡುತ್ತವೆ. ಬದ್ರುದ್ದೀನ್, ಮೂಸಜ್ಜ, ಖೈರುನ್ನೀಸಾ, ತನ್ವೀರ್ ಮೊದಲಾದ ಪಾತ್ರಗಳು ಕೇವಲ ಪಾತ್ರಗಳಾಗಿಯೇ ಉಳಿಯದೆ, ಸಮೂಹದ ಪ್ರತಿನಿಧಿಗಳಾಗಿ ರೂಪುಗೊಳ್ಳುತ್ತವೆ. ಇದರಿಂದ ಮುತ್ತುಪ್ಪಾಡಿ ಒಂದು ಹಳ್ಳಿಯ ಮಿತಿಯನ್ನು ಮೀರಿ ದೇಶದ ಸಂಕೇತವಾಗಿ ಕಾಣಿಸುತ್ತದೆ.

ಗಾಂಧಿ ನೇರವಾಗಿ ವೇದಿಕೆಗೆ ಬಾರದಿದ್ದರೂ, ಧ್ವನಿ, ಸೂಚನೆಗಳು ಮತ್ತು ಕಥನದ ಮೂಲಕ ಅವರ ಇರುವಿಕೆಯನ್ನು ಕಟ್ಟಿಕೊಡುವ ಪ್ರಯತ್ನ ಯಶಸ್ವಿಯಾಗಿದೆ. ಅದು ಕೇವಲ ವ್ಯಕ್ತಿಯ ನೆನಪಲ್ಲ, ಒಂದು ಮೌಲ್ಯದ ಸಾನ್ನಿಧ್ಯವಾಗಿ ಪ್ರೇಕ್ಷಕರ ಮನಸ್ಸಿನಲ್ಲಿ ಮೂಡುತ್ತದೆ.

ನಾಟಕದ ದೃಶ್ಯ

ಚಿತ್ರ: ಶಿವಮೊಗ್ಗ ನಾಗರಾಜ್

ತಮ್ಮ ಅಳಿದುಳಿದ ಸರಕು, ಸಾಮಾನುಗಳೊಂದಿಗೆ, ಮಡದಿ–ಮಕ್ಕಳು, ವಯಸ್ಸಾದ ತಂದೆ–ತಾಯಿಯರೊಂದಿಗೆ ದಿಕ್ಕೆಟ್ಟವರಂತೆ ಆಶ್ರಯ ಅರಸಿ ಭಾರದ ಹೆಜ್ಜೆಗಳನ್ನಿಡುತ್ತ ಸಾಗುವ ಜನರ ನಿಧಾನಗತಿಯ ಚಲನೆಯಿಂದಲೇ ನಾಟಕ ಆರಂಭವಾಗುತ್ತದೆ. ತಮ್ಮ ಬಳಿ ಉಳಿದಿದ್ದ ಬದುಕಿನ ಅವಶೇಷಗಳನ್ನು ಹೊತ್ತು ಸಾಗುವ ಈ ಜನರ ಮೆರವಣಿಗೆ ನಲವತ್ತೇಳರ ದುಃಸ್ವಪ್ನವನ್ನು ಕಣ್ಮುಂದೆ ಜೀವಂತಗೊಳಿಸುತ್ತದೆ. ದೃಶ್ಯಗಳು ಒಂದರ ಹಿಂದೆ ಒಂದಾಗಿ ನಮ್ಮ ಮುಂದೆ ಸಾಲಾಗಿ ನಿಂತು, ನೋಡುಗರನ್ನು ನಿಧಾನವಾಗಿ ತಲ್ಲಣಗೊಳಿಸುತ್ತವೆ. ಈ 'ಓಟ'ದಲ್ಲಿ ಓಟದ ಆತುರವೂ ಇದೆ, ಧ್ಯಾನದ ಮೌನವೂ ಇದೆ. ಈ ಎರಡು ಬದಿಗಳ ನಡುವೆ ನಡೆಯುವ ದೃಶ್ಯಗಳು ಕಾವ್ಯಾತ್ಮಕ ಅನುಭವವಾಗಿ ಮೂಡುತ್ತವೆ. ನಾಟಕ ಮುಗಿದ ನಂತರವೂ ಆ ಚಿತ್ರಗಳು ಮನಸ್ಸನ್ನು ಬಿಡದೆ ಕಾಡುತ್ತವೆ.

ರಾಘವ ಕಮ್ಮಾರ ಅವರ ಹಿನ್ನೆಲೆ ಸಂಗೀತ ನಾಟಕದ ಭಾವಗಾಢತೆಯನ್ನು ಮತ್ತಷ್ಟು ತೀವ್ರಗೊಳಿಸುತ್ತದೆ. ಕೆಲ ಕ್ಷಣಗಳಲ್ಲಿ ಅದು ಪಾತ್ರಗಳ ಒಳಮನಸ್ಸಿನ ಪ್ರತಿಧ್ವನಿಯಂತೆ ಅನಿಸುತ್ತದೆ. ಮಂಜು ನಾರಾಯಣ್ ಅವರ ಬೆಳಕಿನ ವಿನ್ಯಾಸ ದೃಶ್ಯಗಳಿಗೆ ಶಿಲ್ಪದ ಹೊಳಪು ನೀಡುತ್ತದೆ. ಸಹನಾ ಪಿಂಜರ್ ಅವರ ವಸ್ತ್ರ ವಿನ್ಯಾಸ ಕಾಲಘಟ್ಟದ ನೈಜತೆಯನ್ನು ನಂಬಿಸುವಂತೆ ಕಟ್ಟಿಕೊಡುತ್ತದೆ. ಮಧುಸೂದನ್ ಬಿ.ಆರ್, ರಮೇಶ್ ಎಸ್ ಮೈಸೂರು ಮತ್ತು ಶಂಕರ್ ಕೆ. ಬೆಳಲಕಟ್ಟೆ ಅವರ ರಂಗಸಜ್ಜಿಕೆ ವೇದಿಕೆಗೆ ಚಲನಶೀಲತೆಯನ್ನು ನೀಡುತ್ತದೆ.

ನಟರಾಜ ಹೊನ್ನವಳ್ಳಿ ಅವರ ನಿರ್ದೇಶನ ಈ ಎಲ್ಲಾ ಅಂಶಗಳನ್ನು ಸಮನ್ವಯಗೊಳಿಸಿ ನಾಟಕವನ್ನು ದೃಶ್ಯಕಾವ್ಯವಾಗಿ ರೂಪಿಸಿದೆ. ಕೆಲವು ಮೌನ ಕ್ಷಣಗಳನ್ನು ಬಳಸಿರುವ ರೀತಿ ಗಮನಾರ್ಹ. ಬೃಹತ್ ಕಾದಂಬರಿಯನ್ನು ಮೂರೂವರೆ ಗಂಟೆಗಳ ನಾಟಕವಾಗಿ ರೂಪಾಂತರಿಸುವಲ್ಲಿ ಮಂಜುನಾಥ ಗೋಮಾರದಹಳ್ಳಿ ಯಶಸ್ವಿಯಾಗಿದ್ದಾರೆ.

ಆದರೆ, ಮೊದಲಾರ್ಧದಲ್ಲಿ ನಾಟಕದ ಗತಿ ಕೆಲವೆಡೆ ನಿಧಾನವಾಗುತ್ತದೆ. ಉತ್ತರಾರ್ಧದಲ್ಲಿ ಮಾತ್ರ ಚುರುಕು ಹೆಚ್ಚಾಗಿ ಪ್ರೇಕ್ಷಕರನ್ನು ಗಟ್ಟಿಯಾಗಿ ಹಿಡಿದಿಡುತ್ತದೆ. ಹಿನ್ನೆಲೆ ಗಾಯನದಲ್ಲಿ ಹಿಂದಿ ಗೀತೆಗಳ ಬದಲಿಗೆ ಹೆಚ್ಚು ಕನ್ನಡ ಗೀತೆಗಳನ್ನು ಬಳಸಬಹುದಾಗಿತ್ತು. ಒಂದೆರಡು ದೃಶ್ಯಗಳಲ್ಲಿ ಅತಿವೇಗದ ಸಂಭಾಷಣೆ ಲಯಕ್ಕೆ ಅಡ್ಡಿಯಾಗುತ್ತದೆ.

ಈ ಸಣ್ಣ ಮಿತಿಗಳನ್ನು ಮೀರಿ, 'ಸ್ವಾತಂತ್ರ್ಯದ ಓಟ' ಮಾನವೀಯತೆ ಮತ್ತು ಇತಿಹಾಸದ ನಡುವೆ ಓಡುವ ಒಂದು ಗಾಢ ಅನುಭವವಾಗಿ ಉಳಿಯುತ್ತದೆ. ಶಿವಮೊಗ್ಗ ರಂಗಾಯಣ ನಿರ್ಮಿಸಿರುವ ಈ ನಾಟಕದಲ್ಲಿ ರಾಜ್ಯದ ವಿವಿಧ ಭಾಗಗಳ 22 ರೆಪರ್ಟರಿ ಕಲಾವಿದರು ಅಭಿನಯಿಸಿದ್ದಾರೆ.

ಕಥೆ

ಇಂಗ್ಲಿಷ್ ಮೂಲ: ಕ್ರಿಸ್ಟೀನ್ ಲ್ಯಾಕೊ
ಕನ್ನಡ ಅನುವಾದ: ಬಿ.ಆರ್. ಸತ್ಯನಾರಾಯಣ
ಅವರ
ಕತ್ತಲೊಡಲಲ್ಲಿ ಕಪ್ಪು ಧ್ಯಾನ!
prajavani.net/short-story

ಕವನ

ಫಾತಿಮಾ ರಲಿಯಾ
ಅವರ **ಮೌನದ ಒಳಗೊಂದು ಅಗ್ನಿಪರ್ವತ**
www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮೊದಲ ಓದು



ಬುದ್ಧಿವಂತರು ಬಡವರಾಗುವುದು ಏಕೆ?
ಲೇ: ನವೀನ್ ಕುಮಾರ್ ಎಂ
ಪ್ರ: ಪ್ರಣವ್ ಪಬ್ಲಿಕೇಷನ್

ಬುದ್ಧಿವಂತರು ಬಡವರಾಗುವುದು ಏಕೆ?

ಶ್ರೀಮಂತರಾಗಲು ಅಗಾಧ ಬುದ್ಧಿ ಅಗತ್ಯವಿಲ್ಲ–ಸ್ವಲ್ಪ ಬುದ್ಧಿಯೇ ಸಾಕು. ಆದರೆ ಇರುವ ಬುದ್ಧಿಯನ್ನು ಸಮರ್ಥವಾಗಿ ಬಳಸಿಕೊಳ್ಳುವುದು ತಿಳಿದಿರಬೇಕು. ಹಣದ ಹಿಂದಿನ ಈ ವಿಜ್ಞಾನವನ್ನು ಸರಳವಾಗಿ ಅರ್ಥಮಾಡಿಸುವ ಕೃತಿಯಿದು. ಹಾಗಂತ ಇದು 'ಸರಳವಾಗಿ ಹಣ ಗಳಿಸಿ', 'ಮೂವತ್ತು ದಿನಗಳಲ್ಲಿ ಶ್ರೀಮಂತರಾಗಿ' ಎಂಬ ರೀತಿಯ ಪುಸ್ತಕವಲ್ಲ. ಹಣ ಗಳಿಕೆಯ ನೇರ ಮಾರ್ಗಗಳನ್ನು ಹೇಳುವುದಕ್ಕಿಂತ, ಹಣದಲ್ಲಿ ಯಶಸ್ಸು ಕಂಡವರ ಕಥೆಗಳ ಮೂಲಕ ಆಲೋಚನೆಗೆ ದಾರಿ ಮಾಡಿಕೊಡುತ್ತದೆ.

ಕೃತಿಯಲ್ಲಿ ಒಟ್ಟು 15 ಅಧ್ಯಾಯಗಳಿವೆ. 'ಗಣಿತದಲ್ಲಿ 100 ಅಂಕ ಪಡೆದವರು ಜೀವನದಲ್ಲಿ ಸೋಲುವುದೇಕೆ?' ಎಂಬ ಮೊದಲ ಅಧ್ಯಾಯ ಇಂದಿನ ಅಂಕಪ್ರಧಾನ ಶಿಕ್ಷಣ ವ್ಯವಸ್ಥೆಗೆ ಹಿಡಿದ ಕನ್ನಡಿಯಂತಿದೆ. ಲೆಕ್ಕಾಚಾರದಲ್ಲಿ ಪಾಂಡಿತ್ಯ ಹೊಂದಿದವರೂ ಬದುಕಿನ ಲೆಕ್ಕದಲ್ಲಿ ಏಕೆ ಸೋಲುತ್ತಾರೆ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ. 'ಒಂದು ಹೊಸ ಆವಿಷ್ಕಾರ' ಎಂಬ ಲೇಖನ, ಶ್ರೀಮಂತರಾಗಲು ಹೆಚ್ಚಿನ ಬುದ್ಧಿವಂತಿಕೆ ಅಗತ್ಯ ಎಂಬ ನಂಬಿಕೆಯನ್ನು ತಲೆಕೆಳಗಾಗಿಸುತ್ತದೆ.

'ಬಡತನದ ಸ್ವಿಚ್ ಎಲ್ಲಿದೆ?', 'ನಿಮ್ಮ ದೇಹವೇ ಮೊದಲ ಷೇರು ಮಾರುಕಟ್ಟೆ!', 'ನಾಳೆಯ ಹಣ' ಮುಂತಾದ ಅಧ್ಯಾಯಗಳು ಹಣಕಾಸಿನ ಜಗತ್ತಿನ ಬಗ್ಗೆ ಹೊಸ ಪರಿಕಲ್ಪನೆಗಳನ್ನು ಹುಟ್ಟಿಸುತ್ತವೆ. 'ಮಾನವನ ಮೆದುಳು ಮತ್ತು ಹಣ' ಎಂಬ ಲೇಖನವು ಮನುಷ್ಯನಿಗೂ ಹಣಕ್ಕೂ ಇರುವ ವೈಜ್ಞಾನಿಕ ಸಂಬಂಧವನ್ನು ವಿವರಿಸುತ್ತದೆ.

'ಇದು ಹಣ ಗಳಿಸುವ ಪುಸ್ತಕವಲ್ಲ; ಹಣ ಏಕೆ ಕೈತಪ್ಪುತ್ತದೆ ಎಂಬುದನ್ನು ಕಲಿಸುವ ಪುಸ್ತಕ. ಇಲ್ಲಿನ ಲೇಖನಗಳನ್ನು ಓದುವಾಗ ಲೇಖಕ ಓರ್ವ ಅರ್ಥಶಾಸ್ತ್ರಜ್ಞನಂತೆ ಅನ್ನಿಸುತ್ತಾರೆ. ಅಂತರರಾಷ್ಟ್ರೀಯ ಮಾರುಕಟ್ಟೆ ಚಿಂತನೆಗಳಿಂದ ಈ ಕೃತಿ ಪ್ರಭಾವಿತವಾಗಿದೆ' ಎಂದು ಕುಂ.ವೀ ಬೆನ್ನುಡಿಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಸರಳ ಭಾಷೆಯಲ್ಲಿ ಹಣಕಾಸಿನ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಬಯಸುವ ಓದುಗರಿಗೆ ಇದು ಅತ್ಯಂತ ಸೂಕ್ತವಾದ ಕೃತಿ.

ಪುಟ: 280 ₹400

ಮೌಖಿಕ
ಲೇ: ಮಹಾಬಲಮೂರ್ತಿ ಕೊಡ್ಲೆಕೆರೆ
ಪ್ರ: ಐಬಿಎಚ್
ಸಂ: 9845070613

ಮೌಖಿಕ ಅನುಭವಕ್ಕೆ ಗ್ರಾಂಥಿಕ ರೂಪ

ಚಿಂತನೆಯ ಭಾವಲಹರಿಯ ಓಟಕ್ಕೆ ಬರಹದ ರೂಪ 'ಮೌಖಿಕ'. ವಸ್ತು, ವಿಷಯ, ಪ್ರಕಾರಕ್ಕೆ ಈ ಕೃತಿ ನಿರ್ದಿಷ್ಟಗೊಂಡಿಲ್ಲ. ಈ ಕಾರಣಕ್ಕೆ ಇದನ್ನು ಸಂಕೀರ್ಣ ಪ್ರಕಾರ ಎನ್ನಬಹುದು. ಹಾಗೆಂದು ಕ್ಲಿಷ್ಟ ನಿರೂಪಣೆ ಇಲ್ಲಿಲ್ಲ. ಸರಳ ಮತ್ತು ಓದುಗರ ಅನುಭವಕ್ಕೆ ದಕ್ಕಬಹುದಾದ ಪ್ರಬಂಧಗಳಿವೆ. ಇದು ಒಟ್ಟು 23 ಬಿಡಿ ಬರಹಗಳನ್ನು ಒಳಗೊಂಡಿದೆ. ಕೆಲವು ಫೇಸ್‌ಬುಕ್‌ನಲ್ಲಿ ಸಾಂದರ್ಭಿಕವಾಗಿ ಪ್ರಕಟಿತವಾಗಿವೆ. ಕೆಲವು ಹೊಸ ಬರಹಗಳನ್ನೂ ಒಳಗೊಂಡಿದೆ.

ಪರಿಸರ, ಪುರಾಣ, ಪ್ರವಾಸ, ಸಾಹಿತ್ಯ ಹೀಗೆ ಹಲವು ಆಯಾಮಗಳತ್ತ ಈ ಕೃತಿ ಕರೆದುಕೊಂಡು ಹೋಗುತ್ತದೆ. 'ಸರ್ ನೀವು' ಲೇಖನ ಕ್ಷೌರದ ಅನುಭವದ ಕಥನವನ್ನು ಹೇಳುವ ಜೊತೆಗೆ ಕೋವಿಡ್ ಸಂದರ್ಭದ ಭಯಾನಕತೆಯನ್ನು ಕ್ಷಣ ನೆನಪಿಸುತ್ತದೆ. ಈ ಬರಹದ ನಾಯಕ ತ್ರಿಶೂಲ ಏಳೆಂಟು ವರ್ಷಗಳಿಂದ ನಿರೂಪಕರಿಗೆ ಕಟಿಂಗ್ ಮಾಡುತ್ತಾನೆ. ವರ್ಷದಲ್ಲಿ ಏಳೆಂಟು ಬಾರಿ ಭೇಟಿಯಾದರೂ ಆತ್ಮೀಯ ಒಡನಾಡಿಯಂತೆ ಮಿಡಿಯುತ್ತಾನೆ. ಆದರೆ ಆ ಒಂದು ದಿನ ತ್ರಿಶೂಲ ಹೇಳಿದ ದುರಂತ ಸಾವು–ನೋವುಗಳ ಸ್ಮರಣೆ ಮತ್ತೆ ಕೊರೊನಾ ಸಂಕಟವನ್ನು ನೆನಪಿಗೆ ತರುತ್ತದೆ.

ವಿದೇಶಕ್ಕೆ ಹೋಗುತ್ತಿದ್ದ ವೇಳೆ ವಿಮಾನ ಯಾನ ಮತ್ತು ಸಹ ಪ್ರಯಾಣಿಕರ ಜೊತೆ ಆದ ಅನುಭವವನ್ನು 'ಹಾದಿಯಲ್ಲಿ ಯಾರೂ ಅಪರಿಚಿತರಲ್ಲ' ಲೇಖನ ಮಾತುಕತೆಯ ಧಾಟಿಯಲ್ಲೇ ದಾಟಿಸುತ್ತದೆ. ಲೇಖಕರ ಪಕ್ಕದ ಸೀಟಿನ ಪ್ರಯಾಣಿಕ ವೇನುಜುವೆಲಾ ದೇಶದ ಹಿರಿಯ ನಾಗರಿಕ ಅವರ ಜೀವನ ಉತ್ಸಾಹ, ತಿಳಿವಳಿಕೆ ಮತ್ತು ಕ್ರಿಕೆಟ್ ಪ್ರೇಮವನ್ನು ಇದು ಹೇಳುತ್ತದೆ.

'ಹಾಸ್ಪಿಟಲ್ ಶೃಂಗಾರ' ಲೇಖನ ಅಮೆರಿಕದ ದವಾಖಾನೆಯ ಸ್ವಚ್ಛತೆ, ಅಚ್ಚುಕಟ್ಟುತನ ಮತ್ತು ಆರೋಗ್ಯಸೇವೆಯ ಸ್ಪಂದನೆಗೆ ಚಕಿತರಾದ ಬಗೆಯನ್ನು ಕಟ್ಟಿಕೊಡುತ್ತದೆ. ಲೇಖಕರು ಅಲ್ಲಿ ವೈದ್ಯರೊಬ್ಬರ ಅತಿಥಿಯಾಗಿದ್ದರು. 'ಮೌಖಿಕ' ಕೃತಿ 'ಗಣೇಶ ಚತುರ್ಥಿ ಮತ್ತು ಬೇಂದ್ರೆ', 'ಗೋಕರ್ಣದ ಹರೆ', 'ಭಾನುಮತಿ ಮತ್ತು ಲೇಡಿ ಮ್ಯಾಕ್‌ಬೆತ್', 'ಕೀರ್ತಿನಾಥ ಕುರ್ತಕೋಟಿ', 'ಉಮಾಶ್ರೀಯವರ ಮಂಥರೆ', 'ಎಲ್ಲರ ಪಾಲಿನ ಅಪ್ಪ', 'ಕವಿಯ ಜೊತೆಗಿನ ನೆನಪು' ಲೇಖನಗಳನ್ನು ಇದು ಒಳಗೊಂಡಿದೆ. ಲಂಕೇಶ್, ಚಂಪಾ, ಅನಂತಮೂರ್ತಿ, ವೈಎನ್ಕೆ, ಎಕ್ಕುಂಡಿ, ಯಶವಂತ ಚಿತ್ತಲ, ರಾಮಚಂದ್ರ ಶರ್ಮ, ನಿಸಾರ್ ಅಹಮದ್ ಅವರ ಸ್ನೇಹ ಮತ್ತು ಓದು ಇಲ್ಲಿ ಇಣುಕುತ್ತದೆ. ಆ ಒಡನಾಟಕದ 'ಮೌಖಿಕ' ಅನುಭವ ಇಲ್ಲಿ 'ಗಾಂಥಿಕ' ಸ್ವರೂಪವನ್ನು ಪಡೆದಿದೆ ಎಂದೆನಿಸುತ್ತದೆ.

ಪುಟ: 108 ₹150



ಹುಲಿ ಮನೆ ಆಟ
ಲೇ: ಶರಣಬಸವ ಕೆ.ಗುಡದಿನ್ನಿ
ಪ್ರ: ಟಾಮಿ ಪ್ರಕಾಶನ
ಸಂ: 8217337933

ಗ್ರಾಮ್ಯಲೋಕದ ಕಡುಸತ್ಯಗಳ ಕಥನ

ಶರಣಬಸವ ಕೆ. ಗುಡದಿನ್ನಿ ಅವರ ಮೂರನೇ ಕಥಾಸಂಕಲನ 'ಹುಲಿ ಮನೆ ಆಟ' ಒಂಬತ್ತು ಕಥೆಗಳನ್ನೊಳಗೊಂಡಿದೆ. ರಾಯಚೂರು ಮೂಲದ ಈ ಲೇಖಕರ ಕಥೆಗಳಲ್ಲಿ ಅಲ್ಲಿನ ಭಾಷೆ, ಸಂಸ್ಕೃತಿ, ಜನಜೀವನ, ನೋವು–ನಲಿವುಗಳ ಜೀವಂತ ಚಿತ್ರಣ ಕಾಣುತ್ತದೆ.

ಈ ಸಂಕಲನದ ಬಹುತೇಕ ಕಥೆಗಳು ಗ್ರಾಮ್ಯಲೋಕದಲ್ಲಿ ಸುತ್ತುತ್ತವೆ. ಶಿಕ್ಷಕರಾಗಿರುವ ಕಾರಣದಿಂದ, ಕೆಲ ಕಥೆಗಳ ಹಿನ್ನೆಲೆ ಮತ್ತು ಪಾತ್ರಗಳು ಶಾಲೆ ಹಾಗೂ ಶಿಕ್ಷಣ ವ್ಯವಸ್ಥೆಯನ್ನು ಸುತ್ತಿಕೊಂಡಿವೆ. 'ಹುಲಿ ಮನೆ ಆಟ', 'ಬಿಜ್ಜಮ್ಮನ ಕೆರೆ', 'ಸೈಕಲ್', 'ನನಗೆ ರೆಕ್ಕೆಗಳಿಲ್ಲ' ಕಥೆಗಳು ಶಿಕ್ಷಣ ವ್ಯವಸ್ಥೆಯ ಒಳಮೈ ಜೊತೆಗೆ ಸಮಾಜದ ಇನ್ನೊಂದು ಮುಖವನ್ನೂ ತೀಕ್ಷ್ಣವಾಗಿ ಅನಾವರಣಗೊಳಿಸುತ್ತವೆ.

ಇವುಗಳ ನಡುವೆ 'ಹುಲಿ ಮನೆ ಆಟ' ಕಥೆ ತನ್ನ ನಿರೂಪಣಾ ವೈಶಿಷ್ಟ್ಯದಿಂದ ವಿಭಿನ್ನವಾಗಿ ತೋರುತ್ತದೆ. ಕಥೆಯನ್ನು ಹೇಳುವ ಗಡ್ಡ್ಯಾಗನಿಗೆ ಕಣ್ಣೇ ಕಾಣುವುದಿಲ್ಲ; ಅವನು ಕೇಳಿಕೊಂಡ ಅನುಭವಗಳನ್ನು ಓದುಗರಿಗೆ ದಾಟಿಸುತ್ತಾನೆ. ಶಿವರಾಜಪ್ಪ ಮಾಸ್ತ್ರ ಶಾಲೆಗೆ ಜಾಗ ಕೇಳುವ ಪ್ರಸಂಗ, ದುರುಗಮ್ಮನ ಗುಡಿಯ ಸುತ್ತ ನಡೆಯುವ ಘಟನೆಗಳು ಪೂರ್ಣಚಂದ್ರ ತೇಜಸ್ವಿಯವರ 'ಕರ್ವಾಲೋ' ಕಾದಂಬರಿಯ ಕೆಲವು ಸನ್ನಿವೇಶಗಳನ್ನು ನೆನಪಿಗೆ ತರುತ್ತವೆ.

'ಅಂಗಾಲ ಕಣ್ಣವರು' ಕಥೆಯಲ್ಲಿ ದೇವರ ಹೆಸರಿನಲ್ಲಿ ನಡೆಯುವ ಬಡವರ ಸುಲಿಗೆಯನ್ನು, ಮನುಷ್ಯ ಸಂಬಂಧಗಳಿಗಿಂತ 'ದೇವರು' ಮುಖ್ಯವಾಗುವ ಮನೋಭಾವವನ್ನು ಸೂಕ್ಷ್ಮವಾಗಿ ತೋರಿಸಲಾಗಿದೆ. 'ಅಹಲ್ಯಾ' ಕಥೆ ಅಹಲ್ಯಾಬಾಯಿ ಹೋಳ್ಕರ್ ಅವರ ಜೀವನದ ಒಂದು ವಿಭಿನ್ನ ಮಗ್ಗುಲನ್ನು ಪರಿಚಯಿಸುತ್ತದೆ. 'ನನಗೆ ರೆಕ್ಕೆಗಳಿಲ್ಲ' ಕಥೆ ನೈಜ ಘಟನೆಯೊಂದರ ಪ್ರೇರಣೆಯಿಂದ ಹುಟ್ಟಿಕೊಂಡಿದ್ದು, ಅದರ ಭಾವನಾತ್ಮಕ ತೂಕ ಓದುಗರನ್ನು ತಟ್ಟುತ್ತದೆ.

ನಮ್ಮ ಸುತ್ತಮುತ್ತಲೇ ನಡೆಯುವ ಘಟನೆಗಳನ್ನು ಒಳಗಣ್ಣಿನಿಂದ ಕಂಡು ಕಥೆಯಾಗಿ ಹೆಣೆದಿರುವುದು ಈ ಸಂಕಲನದ ಪ್ರಮುಖ ಬಲ. ರಾಯಚೂರಿನ ಭಾಷಾ ಸೊಗಡು ಕಥೆಗಳಿಗೆ ನೈಜತೆ ನೀಡುತ್ತದೆ. ಆದರೆ, ಕೆಲವು ಕಥೆಗಳ ನಿರೂಪಣೆಯಲ್ಲಿ ಇನ್ನಷ್ಟು ಕಚ್ಚಿತನ ಮತ್ತು ತೀಕ್ಷ್ಣತೆ ಸಾಧಿಸಬಹುದಾಗಿತ್ತು ಎನ್ನುವ ಭಾವನೆ ಮೂಡುತ್ತದೆ.

ಪುಟ: 84 ₹150

ಗೋಕರ್ಣದ ಮುಖ್ಯ ಬೀದಿಯಲ್ಲಿ ವಿದೇಶಿ ಪ್ರವಾಸಿಗರು...

ಗೋಕರ್ಣ ಕೇವಲ ಧಾರ್ಮಿಕ ಕೇಂದ್ರವಲ್ಲ. ಅದು ಮೂರು ಜಗತ್ತುಗಳ ಸಮ್ಮಿಲನ. ಸಾವಿರಾರು ವಿದೇಶಿ ಪ್ರವಾಸಿಗರನ್ನು ಸೆಳೆಯುವ ಈ ತಾಣ, ಭೇಟಿ ನೀಡಿದವರಿಗೆ ನೆನಪುಗಳ ಜೊತೆಗೆ ಹೊಸ ಚೈತನ್ಯ ನೀಡುತ್ತದೆ...



ಧ್ಯಾನಸ್ಥ ಲೋಕದಲ್ಲಿ...

ಬೇಸಿಗೆಯಲ್ಲಿ ಗೋಕರ್ಣದ ಮೌನ–ಧ್ಯಾನ

• ಗಣಪತಿ ಹೆಗಡೆ

ಟ್ರಾಫಿಕ್‌ನಲ್ಲಿ ಸಿಲುಕಿದ್ದೀರಿ. ಹಾರ್ನ್‌ಗಳ ಗದ್ದಲ, ಹೊಗೆ, ದೂಳಿನಿಂದ ತುಂಬಿದ ಗಾಳಿ. ಆ ಕ್ಷಣದಲ್ಲಿ ಮನಸ್ಸು ಎಲ್ಲೋ ಓಡುತ್ತದೆ–ಈ ಕಾಂಕ್ರೀಟ್ ಕಾಡಿನಿಂದ ದೂರ... ಅಲೆಗಳ ಶಬ್ದ ಕೇಳಿಸುವ ಕಡಲತೀರದತ್ತ, ಅಥವಾ ಮೌನದ ಕಾಡಿನತ್ತ, ಕೆಲವೊಮ್ಮೆ ದೇವಾಲಯದ ಗಂಟೆ ಶಬ್ದದತ್ತ.

ಆ ಮೂರೂ ಜಗತ್ತುಗಳು ಒಂದೇ ಕಡೆ ಸಿಗುತ್ತವೆಯೇ ಎಂದರೆ? ಉತ್ತರ–ಗೋಕರ್ಣ.

ಗೋಕರ್ಣಕ್ಕೆ ಕಾಲಿಟ್ಟ ಕ್ಷಣದಿಂದಲೇ ಒಂದು ವಿಚಿತ್ರ ಬದಲಾವಣೆ ಶುರುವಾಗುತ್ತದೆ. ಬಸ್‌ನಿಂದ ಇಳಿದಾಗಲೇ ಗಾಳಿಯಲ್ಲೊಂದು ತಾಜಾತನ. ಉಪ್ಪಿನ ವಾಸನೆಯ ಜೊತೆ ಮಿಶ್ರಣವಾದ ಗಾಳಿ ಮುಖಕ್ಕೆ ತಾಕಿದರೆ ನೀವು ಸಮುದ್ರದ ಹತ್ತಿರ ಬಂದಿದ್ದೀರಿ ಎಂದರ್ಥ. ಬೀದಿಯಲ್ಲಿ ಸಾಗಿದರೆ ಒಂದು ಕಡೆ ಸಾಂಪ್ರದಾಯಿಕ ಉಡುಗೆಯಲ್ಲಿ ದೇವಸ್ಥಾನಕ್ಕೆ ಹೋಗುವ ಭಕ್ತರು... ಮತ್ತೊಂದು ಕಡೆ ಸೂರ್ಯನ ಕೆನ್ನಾಲಿಗೆಗೆ ತಲೆಕೊಟ್ಟು, ನಿರಾಳವಾಗಿ ನಡೆಯುವ ವಿದೇಶಿ ಪ್ರವಾಸಿಗರು. ಇಲ್ಲಿ ಯಾರಿಗೂ ಆತುರ ಇಲ್ಲ; ಯಾರೂ ಸಮಯದ ಜೊತೆ ಓಡುತ್ತಿಲ್ಲ. ಕಾಲವೇ ಸ್ವಲ್ಪ ನಿಧಾನವಾಗಿ ಸಾಗುವಂತೆ ಅನ್ನಿಸುತ್ತದೆ–ನೀವು ಕೂಡ ಆ ಲಯಕ್ಕೆ ಜಾರಿಬಿಡುತ್ತೀರಿ.

ಬೆಳಿಗ್ಗೆ ಮಹಾಬಲೇಶ್ವರ ದೇವಸ್ಥಾನದ ಕಡೆ ಹೆಜ್ಜೆ ಹಾಕಿದರೆ ಭಕ್ತಿ ಮನಸ್ಸನ್ನು ಆವರಿಸುತ್ತದೆ. ದೇವಾಲಯದ ಗಂಟೆಗಳ ನಾದ, ಮಂತ್ರಗಳ ಪ್ರತಿಧ್ವನಿ, ದೀಪದ ಸುಗಂಧ ಇವುಗಳು ಮನಸ್ಸಿಗೆ ಶಾಂತಿ ನೀಡುತ್ತವೆ. ಕೋಟಿತೀರ್ಥದ ಕಟ್ಟೆಯ ಬಳಿ ಕುಳಿತುಕೊಂಡರೆ ಬದುಕಿನ ಗಡಿಬಿಡಿ ಕ್ಷಣಕಾಲ ನಿಂತಂತೆ ಅನುಭವ. ನೀರಿನ ಮೇಲಿನ ಅಲೆಗಳ ಸಣ್ಣ ಚಲನೆಗಳನ್ನು ನೋಡುತ್ತಾ ಕುಳಿತರೆ, ಒಳಗಿನ ಗದ್ದಲ ನಿಧಾನವಾಗಿ ಶಮನವಾಗುತ್ತದೆ. ಕೆಲವರು ಅಲ್ಲೇ ಮೌನವಾಗಿ ಕುಳಿತು ಧ್ಯಾನಿಸುವುದೂ ಕಾಣಿಸುತ್ತದೆ.

ಆದರೆ ಅದೇ ದಿನ ಮಧ್ಯಾಹ್ನ ಕುಡ್ಲೆ ಅಥವಾ ಓಂ ಬೀಚ್‌ಗೆ ಹೋದರೆ ಪೂರ್ಣವಾಗಿ ಬೇರೆಯದೇ ಲೋಕ!

ಅಲ್ಲಿ ಅಲೆಗಳ ಜೊತೆ ಓಡಾಡುವವರು, ಮರಳಿನ ಮೇಲೆ ಮಲಗಿ ಸೂರ್ಯನನ್ನು ನೋಡುವವರು, ಕೆಫೆಗಳಲ್ಲಿ ಕುಳಿತು ಜೂಸ್ ಹೀರುತ್ತ ದೂರದ ಸಮುದ್ರವನ್ನು ಕಣ್ತುಂಬಿಕೊಳ್ಳುವವರು... ಪಕ್ಕದಲ್ಲೇ ಸಂಗೀತಕ್ಕೆ ಹೆಜ್ಜೆ ಹಾಕುವ ಯುವಕರ ಗುಂಪು. ಬಣ್ಣಬಣ್ಣದ ಛತ್ರಿಗಳ ಕೆಳಗೆ ಪುಸ್ತಕ ಓದುತ್ತಿರುವವರು, ಕ್ಯಾಮೆರಾ ಹಿಡಿದು ಸೂರ್ಯಾಸ್ತ ಹಿಡಿಯಲು ಕಾಯುತ್ತಿರುವವರು–ಪ್ರತಿ ಮುಖದಲ್ಲೂ ನಿರಾಳತೆಯ ಗುರುತು. ಯಾರೋ ಯೋಗಾಭ್ಯಾಸ ಮಾಡುತ್ತಿರುತ್ತಾರೆ, ಇನ್ನೊಬ್ಬರು ಸರ್ಫಿಂಗ್ ಕಲಿಯಲು ಪ್ರಯತ್ನಿಸುತ್ತಿರುತ್ತಾರೆ. ಆದರೆ ಆಶ್ಚರ್ಯವೇನೆಂದರೆ–ಈ ಎಲ್ಲಾ ಗದ್ದಲದ ಮಧ್ಯೆಯೂ ಸಮುದ್ರ ಮಾತ್ರ ಮೌನವಾಗಿಯೇ ತನ್ನ ಕಥೆಯನ್ನು ಹೇಳುತ್ತಿರುತ್ತದೆ.

‘ಗೋವಾ ಮೋಜಿನ ಜಾಗ. ಆದರೆ ಮೋಜಿನಾಚೆಗೂ ಏನೋ ಇದೆ ಅನ್ನಿಸುವವರಿಗೆ ಗೋಕರ್ಣವೇ ಬೇಕು’ ಎಂದು ಹೇಳುತ್ತಾರೆ ಮೈಸೂರಿನ ಆರ್. ನಟರಾಜ್. ಅವರ ಮಾತು ಕೇಳಿದರೆ ಗೋಕರ್ಣದ ಅರ್ಥ ಸ್ಪಷ್ಟವಾಗುತ್ತದೆ. ಇದು ಕೇವಲ ಪ್ರವಾಸಿ ತಾಣವಲ್ಲ, ಒಂದು ಅನುಭವ. ಇಲ್ಲಿ ಮೋಜು ಇದೆ, ಆದರೆ ಅದಕ್ಕಿಂತ ಹಿರಿದು ಇಲ್ಲಿ ಮನಸ್ಸಿಗೆ ಸಿಗುವ ವಿಶ್ರಾಂತಿ ಮತ್ತು ಒಳಗಿನ ನೆಮ್ಮದಿ.

ಹಿಂದೆ ಗೋಕರ್ಣ ಎಂದರೆ ದೇವಸ್ಥಾನ ಮತ್ತು ಪಿತೃಕಾರ್ಯಗಳ ತಾಣವಷ್ಟೇ ಎನ್ನುವ ಮಾತಿತ್ತು. ಈಗ ಚಿತ್ರಣ ಸಂಪೂರ್ಣ ಬದಲಾಗಿದೆ. ಇಲ್ಲಿ ಶಿವಭಕ್ತನೂ ಇದ್ದಾನೆ, ಬ್ಯಾಕ್‌ಪ್ಯಾಕರ್ ವಿದೇಶಿಗನೂ ಇದ್ದಾನೆ; ಯೋಗ ಕಲಿಯುವ ಯುವತಿಯೂ ಇದ್ದಾಳೆ, ಟ್ರೆಕ್ಕಿಂಗ್‌ಗಾಗಿ ಬಂದ ತಂಡವೂ ಇದೆ. ಕೆಲವರು ಬೆಳಿಗ್ಗೆ ದೇವಸ್ಥಾನಕ್ಕೆ ಹೋಗಿ ಸಂಜೆ ಬೀಚ್‌ನಲ್ಲಿ ಸಂಗೀತ ಕೇಳುತ್ತಾರೆ. ಇದು ಇಲ್ಲಿ ಸಾಮಾನ್ಯ. ಎಲ್ಲರಿಗೂ ತಮ್ಮದೇ ಗೋಕರ್ಣ ಇದೆ; ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಈ ಊರನ್ನು ಅನುಭವಿಸುತ್ತಾರೆ.

ಯೂರೋಪ್‌ನ ಅನೇಕ ದೇಶಗಳಿಂದ ಬರುವ ಪ್ರವಾಸಿಗರು ಇಲ್ಲಿಗೆ ಬಂದು ತಿಂಗಳಗಟ್ಟಲೆ ತಂಗುತ್ತಾರೆ. ಬೆಳಿಗ್ಗೆ ಯೋಗ, ಮಧ್ಯಾಹ್ನ ಕಡಲತೀರ, ಸಂಜೆ ಸಂಗೀತ. ಇದು ಅವರ ದಿನಚರಿ. ಕೆಲವರು ಇಲ್ಲಿ ಇಷ್ಟಪಟ್ಟು ಕಾಟೇಜ್‌ಗಳನ್ನು ಬಾಡಿಗೆಗೆ ಪಡೆದು ಬದುಕನ್ನೇ ಇಲ್ಲಿ ಕಟ್ಟಿಕೊಳ್ಳುತ್ತಾರೆ. ತಮ್ಮ ದೇಶದಿಂದ ತಂದ ಸಣ್ಣ ಸಣ್ಣ ವಸ್ತುಗಳನ್ನು ಮಾರಾಟ ಮಾಡಿ, ಇಲ್ಲಿನ ಬದುಕಿನ ಭಾಗವಾಗಿಬಿಡುತ್ತಾರೆ. ಸ್ಥಳೀಯರೊಂದಿಗೆ ಬೆರೆತು, ಅವರ ಸಂಸ್ಕೃತಿಯನ್ನೂ ಅಳವಡಿಸಿಕೊಳ್ಳುತ್ತಾರೆ. ಗೋಕರ್ಣ ಅವರಿಗೆ ಪ್ರವಾಸಿ ತಾಣವಲ್ಲ; ತಾತ್ಕಾಲಿಕ ಮನೆ, ಕೆಲವೊಮ್ಮೆ ಶಾಶ್ವತ ನೆನಪು.

ಮರಳ ಮಡಿಲಲ್ಲಿ ನೆಮ್ಮದಿ ಅರಸುತ್ತಾ...

‘ಕುಡ್ಲೆ, ಓಂ ಬೀಚ್‌ಗಳಲ್ಲಿ ಜನರೇ ಕಾಣಸಿಗುತ್ತಿರಲಿಲ್ಲ. ತೆಂಗಿನಗರಿಯ ಶೆಡ್‌ಗಳಲ್ಲಿ ತಂಗಬೇಕಾಗುತ್ತಿತ್ತು. ಈಗ ನೋಡಿದರೆ ಹೊಸ ಜಗತ್ತೇ ಸೃಷ್ಟಿಯಾಗಿದೆ’ ಎನ್ನುತ್ತಾರೆ ಐವತ್ತು ವರ್ಷಗಳಿಂದ ಗೋಕರ್ಣಕ್ಕೆ ಬರುತ್ತಿರುವ ಇಂಗ್ಲೆಂಡ್‌ನ ಅಂತೋನಿಯಾ ಚೆಟ್ವಿಂಡ್. ಅವರ ಕಣ್ಣುಗಳಲ್ಲಿ ಹಳೆಯ ನೆನಪುಗಳ ಹೊಳಪು ಇನ್ನೂ ಕಾಣುತ್ತದೆ. ಆದರೆ ಇಂದಿನ ಗೋಕರ್ಣದ ಮೇಲೆ ಆಶ್ಚರ್ಯವೂ ತೋರುತ್ತದೆ.

ಟ್ರೆಕ್ಕಿಂಗ್ ಪ್ರಿಯರಿಗೆ ಗೋಕರ್ಣ ಇನ್ನೊಂದು ಸ್ವರ್ಗ. ಪ್ಯಾರಡೈಸ್ ಬೀಚ್‌ನಿಂದ ಹಾಫ್ ಮೂನ್, ಅಲ್ಲಿಂದ ಓಂ ಬೀಚ್‌ವರೆಗೆ ಕಾಡಿನ ನಡುವೆ ನಡೆಯುವ ದಾರಿ–ಪ್ರತಿ ಹೆಜ್ಜೆಯಲ್ಲೂ ಹೊಸ ದೃಶ್ಯ. ಕೆಲವೆಡೆ ಕಲ್ಲುಬಂಡೆಗಳ ನಡುವೆ ಸಣ್ಣ ದಾರಿಗಳು, ಕೆಲವೆಡೆ ಮರಗಳ ನೆರಳು, ಇನ್ನೂ ಕೆಲವೆಡೆ ಅಚಾನಕ್ ತೆರೆದುಕೊಳ್ಳುವ ಸಮುದ್ರದ ದೃಶ್ಯ. ಅಲೆಗಳ ಶಬ್ದ ದೂರದಿಂದ ಕೇಳಿಸುತ್ತಾ, ಹಕ್ಕಿಗಳ ಕೂಗು ಜೊತೆಗಿದ್ದು, ಈ ಪಯಣ ಮನಸ್ಸನ್ನು ಸಂಪೂರ್ಣವಾಗಿ ಪ್ರಕೃತಿಯೊಳಗೆ ಕರಗಿಸುತ್ತದೆ. ಮಧ್ಯೆ ಮಧ್ಯೆ ನಿಂತು ಆ ದೃಶ್ಯವನ್ನು ಕಣ್ತುಂಬಿಕೊಳ್ಳಲೇಬೇಕೆನಿಸುತ್ತದೆ.

ಸಂಜೆ ಸೂರ್ಯಾಸ್ತ ನೋಡಲು ಕುಳಿತಾಗ ಗೋಕರ್ಣ ತನ್ನ ನಿಜವಾದ ರೂಪ ತೋರಿಸುತ್ತದೆ. ಆಕಾಶ ನಿಧಾನವಾಗಿ ಕಿತ್ತಳೆ ಬಣ್ಣ ತಾಳುತ್ತದೆ, ನಂತರ ಕೆಂಪಾಗುತ್ತದೆ. ಸಮುದ್ರದ ಮೇಲ್ಮೈ ಆ ಬಣ್ಣವನ್ನು ಪ್ರತಿಬಿಂಬಿಸುತ್ತದೆ. ಜನರು ಮೌನವಾಗುತ್ತಾರೆ. ಯಾರಿಗೂ ಮಾತಾಡಬೇಕೆನಿಸುವುದಿಲ್ಲ. ಕೆಲವರು ಕೈಯಲ್ಲಿ ಕ್ಯಾಮೆರಾ ಹಿಡಿದು ಆ ಕ್ಷಣವನ್ನು ಹಿಡಿಯಲು ಪ್ರಯತ್ನಿಸುತ್ತಾರೆ. ಇನ್ನೂ ಕೆಲವರು ಕೇವಲ ಕಣ್ಣುಗಳಿಂದಲೇ ಆ ಸೌಂದರ್ಯವನ್ನು ಹೀರುತ್ತಾರೆ. ಆ ಕ್ಷಣದಲ್ಲಿ ನೀವು ಅರಿಯುತ್ತೀರಿ–ಇಲ್ಲಿ ನೀವು ಪ್ರವಾಸಿಗನಲ್ಲ, ಈ ಪ್ರಕೃತಿಯ ಒಂದು ಭಾಗ.

ರಾತ್ರಿಯಲ್ಲಿ ಮತ್ತೊಂದು ಗೋಕರ್ಣ ಎಚ್ಚರಗೊಳ್ಳುತ್ತದೆ. ಬೀಚ್ ಸುತ್ತಲಿನ ಕೆಫೆಗಳಲ್ಲಿ ಮೃದುವಾದ ಸಂಗೀತ, ಮಿಂಚುವ ದೀಪಗಳು, ಸ್ನೇಹಿತರೊಂದಿಗೆ ಕುಳಿತು ಮಾತುಕತೆ... ಕೆಲವರು ಗಿಟಾರ್ ಬಾರಿಸುತ್ತಾ ಹಾಡುತ್ತಾರೆ. ಕೆಲವರು ಮೌನವಾಗಿ ಸಮುದ್ರವನ್ನು ನೋಡುತ್ತ ಕುಳಿತುಕೊಳ್ಳುತ್ತಾರೆ. ಅಲೆಗಳ ಶಬ್ದ ರಾತ್ರಿ ಇನ್ನಷ್ಟು ಸ್ಪಷ್ಟವಾಗಿ ಕೇಳುತ್ತದೆ. ದಿನದ ಗದ್ದಲದ ನಂತರ ರಾತ್ರಿ ಗೋಕರ್ಣ ಮತ್ತೆ ಮೃದುವಾದ ಮೌನವನ್ನು ಹೊದಿಕೊಳ್ಳುತ್ತದೆ. ಆ ಮೌನವೇ ಇಲ್ಲಿ ಉಳಿಯುವ ನೆನಪು.

ಗೋಕರ್ಣದಲ್ಲಿ ಭಕ್ತಿ ಇದೆ. ಮೋಜು ಇದೆ. ಮೌನ ಇದೆ–ಈ ಮೂರೂ ಒಂದೇ ಜಾಗದಲ್ಲಿ ಸೇರುವ ಅಪರೂಪದ ಸ್ಥಳ ಇದು. ಇಲ್ಲಿ ಬಂದವರು ಕೇವಲ ನೆನಪುಗಳನ್ನು ಮಾತ್ರ ತೆಗೆದುಕೊಂಡು ಹೋಗುವುದಿಲ್ಲ; ತಮ್ಮೊಳಗೆ ಸ್ವಲ್ಪ ಬದಲಾವಣೆಯನ್ನೂ, ಒಂದು ಹೊಸ ಚೈತನ್ಯವನ್ನು ಹೊಂದುತ್ತಾರೆ. ❖

ಮದ್ದೂರು ಮಾಲ್... ಎಲ್ಲೆಲ್ಲೂ ಕಮಾಲ್

10ನೇ ಪುಟದಿಂದ...

ಈ ವ್ಯವಸ್ಥೆಯಲ್ಲಿ ಎಲ್ಲರೂ ಭಾಗಿಯಾಗಿದ್ದರೂ, ಲಾಭದ ಹಂಚಿಕೆ ಸಮವಾಗಿಲ್ಲ. ‘ತೋಟದಲ್ಲೇ ₹28ರಿಂದ ₹32ಕ್ಕೆ ಎಳನೀರು ತೆಗೆದುಕೊಳ್ಳುತ್ತಾರೆ. ಮಾರುಕಟ್ಟೆಯಲ್ಲಿ ₹45ರಿಂದ ₹52ಕ್ಕೆ ಮಾರಾಟವಾಗುತ್ತದೆ. ನಗರಗಳಲ್ಲಿ ಗ್ರಾಹಕರು ಇನ್ನೂ ಹೆಚ್ಚಿನ ದರ ಕೊಡುತ್ತಾರೆ’ ಎಂದು ರೈತ ರಾಮೇಗೌಡ ಹೇಳುತ್ತಾರೆ.

ರೈತ ಸಂಘಟನೆಗಳ ಅಭಿಪ್ರಾಯವೂ ಅದೇ ದಿಕ್ಕಿನಲ್ಲಿ ಇದೆ. ‘ಎಪಿಎಂಸಿಗಳು ರೈತರಿಗಾಗಿ ಎಂಬ ಮಾತು ಇದೆ. ಆದರೆ ಇಲ್ಲಿ ವ್ಯವಹಾರದ ನಿಯಂತ್ರಣ ಮಧ್ಯವರ್ತಿಗಳಲ್ಲೇ ಹೆಚ್ಚು. ರೈತರಿಗೆ ನೇರವಾಗಿ ಮಾರಾಟ ಮಾಡಲು ಬೇಕಾದ ವ್ಯವಸ್ಥೆ ಇಲ್ಲ’ ಎಂದು ರೈತ ಮುಖಂಡ ಕೆ. ಬೋರಯ್ಯ ಹೇಳುತ್ತಾರೆ. ಮಾರುಕಟ್ಟೆಯ ವಿಸ್ತಾರ ಹೆಚ್ಚಾದಂತೆ, ರೈತರ ಪಾಲಿನ ನಿಯಂತ್ರಣ ಕಡಿಮೆಯಾಗುತ್ತಿದೆ ಎನ್ನುವ ಆತಂಕವೂ ವ್ಯಕ್ತವಾಗುತ್ತದೆ.

‘ನೀರಿನ ಪ್ರಮಾಣ ಹೆಚ್ಚು ಇರುವುದರಿಂದ ಇಲ್ಲಿನ ಎಳನೀರಿಗೆ ಬೇಡಿಕೆ ಇದೆ. ಆದರೆ ನಿರಂತರ ಕೊಯ್ಲು ಮಾಡಿದರೆ ಮರದ ಆಯುಷ್ಯ ಕಡಿಮೆಯಾಗುತ್ತದೆ’ ಎಂದು ಮಳವಳ್ಳಿ ರೈತ ನಾಗರಾಜು ತಿಳಿಸುತ್ತಾರೆ. ಅಂದರೆ ಮಾರುಕಟ್ಟೆಯ ಬೇಡಿಕೆ ಮತ್ತು ತೋಟಗಳ ಸ್ಥಿರತೆ ನಡುವೆ ಸಮತೋಲನ ಕಾಪಾಡುವುದು ರೈತರಿಗೆ ಸವಾಲಾಗಿದೆ.

ಈ ಮಾರುಕಟ್ಟೆ ಕೇವಲ ವಹಿವಾಟಿನ ಸ್ಥಳವಲ್ಲ; ಸಾವಿರಾರು ಜನರ ಜೀವನ ಇದರೊಂದಿಗೆ ಬೆಸೆದುಕೊಂಡಿದೆ. ತೆಂಗು ಬೆಳೆಗಾರರು, 367 ವರ್ತಕರು, 68 ಕೂಲಿ ಕಾರ್ಮಿಕರು ಮತ್ತು ಹೊರ ರಾಜ್ಯಗಳ ವ್ಯಾಪಾರಿಗಳೆಲ್ಲಾ ಈ ಚಟುವಟಿಕೆಯ ಭಾಗ. ‘ಇಪ್ಪತ್ತೈದು ವರ್ಷಗಳಿಂದ ಇಲ್ಲಿ ಕೆಲಸ ಮಾಡುತ್ತಿದ್ದೇನೆ. ಬೇಸಿಗೆಯಲ್ಲಿ ದಿನದ ಆದಾಯ ₹1000 ರಿಂದ ₹1500ವರೆಗೆ ಬರುತ್ತದೆ. ಆದರೆ ಕೆಲಸವೂ ಅಷ್ಟೇ ಕಷ್ಟಕರ’ ಎಂದು ಕಾರ್ಮಿಕರಾದ ಶಂಕರ್ ಹೇಳುತ್ತಾರೆ.

‘ಇಲ್ಲಿ ಮೂಲಸೌಕರ್ಯಗಳ ಕೊರತೆ ಇದೆ. ಎಲ್ಲೆಡೆ ಕಸದ ರಾಶಿ ಕಾಣಿಸುವುದು ಸಾಮಾನ್ಯ. ಶೌಚಾಲಯಗಳ ಸ್ಥಿತಿ ತೀರಾ ಕೆಟ್ಟದಾಗಿದೆ. ಕುಡಿಯುವ ನೀರಿನ ವ್ಯವಸ್ಥೆಯೂ ಸಮರ್ಪಕವಾಗಿಲ್ಲ. ಬಾಯಾರಿದರೆ ಎಳನೀರನ್ನೇ ಕುಡಿಯಬೇಕಷ್ಟೆ. ಹೊರ ರಾಜ್ಯದಿಂದ ಬರುವ ವರ್ತಕರು, ಕಾರ್ಮಿಕರು ಮೂಗು ಮುರಿಯುತ್ತಾರೆ’ ಎಂದು ವರ್ತಕರಾದ ವಿಶ್ವನಾಥ್, ಮಂಜೇಶ್, ರವಿ ಚನ್ನಸಂದ್ರ ಬೇಸರ ವ್ಯಕ್ತಪಡಿಸಿದರು.

ಅಂಕಿಅಂಶಗಳ ಮಟ್ಟದಲ್ಲಿ ಮಾರುಕಟ್ಟೆ ವಿಸ್ತರಿಸುತ್ತಿದೆ. 2024–25ರಲ್ಲಿ 9.32 ಕೋಟಿ ಎಳನೀರು ಆವಕದಿಂದ ₹193 ಕೋಟಿ ವಹಿವಾಟು ನಡೆದಿದ್ದರೆ, 2025–26ರಲ್ಲಿ ಅದು 11.59 ಕೋಟಿಗೆ ಏರಿ ₹245 ಕೋಟಿಗೆ ತಲುಪಿದೆ. ಈ ಏರಿಕೆ ಮಾರುಕಟ್ಟೆಯ ಬೇಡಿಕೆಯನ್ನು ತೋರಿಸಿದರೂ, ಅದಕ್ಕೆ ತಕ್ಕಂತೆ ಸುಧಾರಣೆಗಳು ನಡೆದಿವೆಯೇ ಎಂಬ ಪ್ರಶ್ನೆ ಉಳಿದಿದೆ. ಸಿಬ್ಬಂದಿ ಕೊರತೆ ಇನ್ನೂ ಪರಿಹಾರವಾಗಿಲ್ಲ.

ಇನ್ನೊಂದೆಡೆ, ಸೆಸ್ ತಪ್ಪಿಸಲು ಕೆಲ ವ್ಯಾಪಾರಿಗಳು ನೇರವಾಗಿ ತೋಟಗಳಲ್ಲೇ ಖರೀದಿ ಮಾಡುವ ಪ್ರವೃತ್ತಿಯೂ ಇದೆ. ಮಂಡ್ಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ಟ್ರಕ್‌ಗಳನ್ನು ನಿಲ್ಲಿಸಿ ಎಳನೀರು ಸಂಗ್ರಹಿಸುವುದು ಸಾಮಾನ್ಯವಾಗಿದೆ. ಇದರಿಂದ ಮಾರುಕಟ್ಟೆಯ ಅಧಿಕೃತ ವಹಿವಾಟಿಗೂ ಹೊಡೆತ ಬೀಳುತ್ತಿದೆ.

ಮದ್ದೂರಿನ ಎಳನೀರು ಮಾರುಕಟ್ಟೆ ಒಂದು ದೊಡ್ಡ ಆರ್ಥಿಕ ಚಟುವಟಿಕೆಯ ಕೇಂದ್ರ. ಆದರೆ ಅದರ ಒಳ–ಹೊರಗೆ ನೋಡಿದಾಗ, ವಹಿವಾಟಿನ ಬೆಳವಣಿಗೆ ಜೊತೆಗೆ ಸಮಾನವಾಗಿ ಮುಂದೆ ಸಾಗದ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ.

ಬೇಸಿಗೆಯಲ್ಲಿ ಈ ಮಾರುಕಟ್ಟೆ ಹೆಚ್ಚು ಚಟುವಟಿಕೆಯಿಂದ ತುಂಬಿದರೂ, ಅದೇ ಸಮಯದಲ್ಲಿ ಅದರ ಕೊರತೆಗಳನ್ನು ಇನ್ನೂ ಸ್ಪಷ್ಟವಾಗಿ ತೋರಿಸುತ್ತದೆ. ❖

ಹೊರರಾಜ್ಯಕ್ಕೆ ಹೊರಡಲು ಸಿದ್ಧವಾದ ಎಳನೀರು ತುಂಬಿದ ಲಾರಿ

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಪತ್ರ ಒಯ್ದ ಹಾವು!

majakoora@prajavani.co.in

ಜಾಣಪದ ಆಟ

ಇಲ್ಲಿ ಕೊಟ್ಟಿರುವ ರಾ-ರಿ ಅಕ್ಷರಗಳ ನಡುವೆ ಅಕ್ಷರ ಪಟ್ಟಿಯಿಂದ ಆಯ್ದು ಎರಡಕ್ಷರ ತುಂಬಿ ನಾಲ್ಕಕ್ಷರಗಳ ಪದಗಳನ್ನು ರಚನೆ ಮಾಡಿ.

1		ರಾ		ರಿ
2		ರಾ		ರಿ
3		ರಾ		ರಿ
4		ರಾ		ರಿ
5		ರಾ		ರಿ
6		ರಾ		ರಿ

ಅಕ್ಷರ ಪಟ್ಟಿ

ಹೇ	ತು	ಫೇ	ಏ
ತ	ನೀ	ಸ	ವ
ಮಾ	ಸ	ಮಾ	ಏ

ಲೆಕ್ಕ ಮಾಡು ಮೋಜು ನೋಡು

ಇಲ್ಲಿರುವ ಗುಣಾಕಾರ ಲೆಕ್ಕ ಮಾಡಿದರೆ ನಟ ರಾಜ್‌ಕುಮಾರ್ ಅವರ ಜನ್ಮದಿನಾಂಕ ಲಭ್ಯವಾಗುತ್ತದೆ.

348847X7

ಉತ್ತರ:__________



ಗುಂಡ ತನ್ನ ಗೆಳೆಯನಿಗೆ ಜನ್ಮದಿನದ ಶುಭಾಶಯ ಕೋರಿ ಪತ್ರ ಬರೆದ. ಆ ಪತ್ರವನ್ನು ಮನೆಯ ಸಮೀಪವೇ ಇದ್ದ ಅಂಚೆ ಪೆಟ್ಟಿಗೆಯೊಳಗೆ ಹಾಕಿದ. ಆದರೆ ಗುಂಡನಿಗೆ ಅದರೊಳಗೆ ಹಾವು ಅಡಗಿ ಕುಳಿತಿರುವುದು ಅರಿವಿಗೆ ಬರಲಿಲ್ಲ. ಗುಂಡ ಹಾಕಿದ ಬಿಳಿಯ ಪತ್ರ ಆ ಹಾವಿನ ಮೈಮೇಲೆ ಬಿದ್ದ ಕೂಡಲೇ ಅದೊಂದು ಇಲಿ ಮರಿ ಇರಬೇಕು ಎಂದು ಭಾವಿಸಿತು ಹಾವು. ಅದನ್ನು ಕಚ್ಚಿಕೊಂಡು ಮೆಲ್ಲನೆ ಪೆಟ್ಟಿಗೆಯಿಂದ ಹೊರಹೋಯಿತು.

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಶಬ್ದಾಟ

ಇಲ್ಲಿ ಕೊಟ್ಟಿರುವ ಎರಡೂ ಪದ ಸೇರಿಸಿ ಒಂದೇ ಪದ ಮಾಡಿ.

ಮರ + ನೆಗಡಿ = ________

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಮುರಿ	+	ಕೆನ್ನೆ	+	ಚ್ಚ	=	
2	ಸಾರ	+	ವಾಸ	+	ವು	=	
3	ವಾರ	+	ಸದ್ದು	+	ಪ್ರ	=	
4	ಗೋಲ	+	ಕುಲ	+	ಬಾ	=	
5	ಹೊಲಿ	+	ಕಸ	+	ಕೆ	=	

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಅಕ್ಷರ ಎಂ.ಎಸ್.
ಮೈಸೂರು

ಲೇಖನ ದೊಗ್ಗಲು ವಿನಾಯಕ, ಬೆಂಗಳೂರು

ಸಂಸ್ಕೃತಿ ಎಸ್.ಆರ್.
ಮಡಿಕೇರಿ

ಅಭಿಷೇಕ್ ಎಂ.
ಪುತ್ತೂರು

ಇಂಚರ
ಚಾಮರಾಜನಗರ

ಸುಧೀಕ್ಷ ಒ.
ಮೈಸೂರು

ಪಂಚ–ಕ್ವಿಜ್ಞಾಯ

ಇವು ವಿಜ್ಞಾನಶಾಸ್ತ್ರದ ಪಂಚಪ್ರಶ್ನೆಗಳು

1	ಕ್ವಿನೈನ್ ಮಾತ್ರೆಯು ಯಾವ ರೋಗಕ್ಕೆ ಉಪಶಮನ ನೀಡುತ್ತದೆ	
2	ಸಸ್ಯಗಳಿಗೂ ಜೀವವಿದೆ ಎಂಬುದನ್ನು ನಿರೂಪಿಸಿದ ಭಾರತದ ಪ್ರಸಿದ್ಧ ವಿಜ್ಞಾನಿ ಯಾರು?	
3	ಟೆಲಿಗ್ರಾಫ್ ಸಂಜ್ಞೆಗಳನ್ನು ರೂಪಿಸಿದ ವಿಜ್ಞಾನಿ ಯಾರು?	
4	ಬೆನ್ನು ಮೂಳೆಗಳಿರುವ ಪ್ರಾಣಿಗಳನ್ನು ಏನೆಂದು ಕರೆಯುತ್ತಾರೆ?	
5	ಗ್ಲುಕೋಮಾ ರೋಗಕ್ಕೆ ಸಂಬಂಧಿಸಿದ ಅಂಗ ಯಾವುದು?	

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ OA ಸ್ವರಾಕ್ಷರಗಳ ಹಿಂದೊಂದು ಮುಂದೊಂದು ಅಕ್ಷರವನ್ನು ಅಕ್ಷರ ಪಟ್ಟಿಯಿಂದ ಆಯ್ದು ತುಂಬಿ ಪದ ಪೂರ್ಣ ಮಾಡಿ.

1		O	A	
2		O	A	
3		O	A	
4		O	A	
5		O	A	
6		O	A	

ಅಕ್ಷರ ಪಟ್ಟಿ

L	T	D	T
C	D	B	R
T	S	G	P

2. ಇಲ್ಲಿ ಕೊಟ್ಟಿರುವ ‘ಮಹಾ’ ಎಂಬ ಎರಡಕ್ಷರಕ್ಕೆ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಪದ ಮಾಡಿ

1	ಮ	ಹಾ		
2	ಮ	ಹಾ		
3	ಮ	ಹಾ		
4	ಮ	ಹಾ		
5	ಮ	ಹಾ		

ಅಕ್ಷರ ಪಟ್ಟಿ

ಜ	ಣಿ	ರಾ	ರಾ	ಯ
ಶ	ಣ	ಪ್ರಾ	ರ	ದ್ವಾ

ಇದು ‘ಮೇ’ ಆಟ

ಇಲ್ಲಿ ಕೊಟ್ಟಿರುವ ‘ಮೇ’ ಅಕ್ಷರಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡು ಅಕ್ಷರ ತುಂಬಿ ಮೂರಕ್ಷರದ ಪದ ಮಾಡಿ.

1	ಮೇ		
2	ಮೇ		
3	ಮೇ		
4	ಮೇ		
5	ಮೇ		

ಅಕ್ಷರ ಪಟ್ಟಿ

ನಾ	ವಿ	ನ	ದ	ದಾ
ಸ್ತು	ಕೆ	ಫ	ಧಾ	ರ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ತಿಲಕಇಡು 2.ಕರಡುಪ್ರತಿ 3.ಬೇಸಿಗೆಮಳೆ 4.ಮಯೂರವನ 5.ಕರಿಕಂಬಳಿ
ಶಬ್ದಾಟ: ಮನೆಗೆಲಸ
ವರ್ಡ್ ಗೇಮ್: GLOBAL
ಪದಶೋಧ: ಶ್ರೀನಿವಾಸ ರಾಮಾನುಜನ್
ಜಾಣಪದ ಆಟ: 1.ಚಿಕ್ಕಣ್ಣ 2.ಕಣ್ಮಣಿ 3.ಕಟ್ಟಡ 4.ಕಲ್ನಾರು 5.ಕಮ್ಮಾರ 6.ಕನ್ನಡಿ 7.ಕಣ್ಮುಚ್ಚು 8.ಕಗ್ಗಂಟು 9.ಕವ್ವಾಲಿ 10.ಕತ್ತರಿ 11.ಕಡ್ಡಾಯ 12.ಕಣ್ಮರೆ 13.ಕಲ್ಗುಡಿ 14.ಕಬ್ಬಿಣ 15.ಕಲ್ಲಾವಿ
ಜಾಣಪದ ಆಟ 2: 1.ಪರಭಾಷೆ 2.ಪರದೈವ 3.ಪರಮಾತ್ಮ 4.ಪರಬ್ರಹ್ಮ 5.ಪರಸ್ಪರ
ಪಂಚಕ್ವಿಜ್ಞಾಯ: 1.ತಾಮ್ರ + ತವರ 2.ಬ್ರೈಲ್ 3.ಕಣ್ವಋಷಿ 4.ರತ್ನಾಕರವರ್ಣಿ 5.ನಂದಳಿಕೆ ಲಕ್ಷ್ಮಿನಾರಾಯಣಪ್ಪ
ಮೋಜಿನ ಇಂಗ್ಲಿಷ್: 1.ಕರೆನ್ಸಿ 2.ಶಿಲೆಕ್ಟ್ 3.ಸಮರಿ 4.ಆನೆಸ್ಟ್ 5.ಕೆಲರಿ 6.ಕಲೆಕ್ಟ್ 7.ಕಷ್ಟಮ್

ಮುಂಬೈ ಎದುರು ಚೆನ್ನೈ ‘ಸೂಪರ್ ಕಿಂಗ್’

ಋತುರಾಜ್, ಕಾರ್ತಿಕ್ ಅಜೇಯ ಅರ್ಧಶತಕ
• ಕಮರಿದ ಇಂಡಿಯನ್ಸ್ ಪ್ಲೇಆಫ್ ಕನಸು?

ಅನ್ಷುಲ್ ಕಂಬೋಜ್


ನೂರ್ ಅಹಮದ್

ಚೆನ್ನೈ (ಪಿಟಿಐ): ಪ್ರಸಕ್ತ ಐಪಿಎಲ್‌ನಲ್ಲಿ ಏಳನೇ ಸೋಲು ಕಂಡ ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ಇಂಡಿಯನ್ಸ್‌ನ ಪ್ಲೇಆಫ್ ಕನಸು ಬಹುತೇಕ ಕಮರಿತು.

ಚೆಪಾಕ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಆಲ್‌ರೌಂಡ್ ಆಟವಾಡಿದ ಚೆನ್ನೈ ಸೂಪರ್ ಕಿಂಗ್ಸ್ ತಂಡವು 8 ವಿಕೆಟ್‌ಗಳಿಂದ ಮುಂಬೈ ತಂಡವನ್ನು ಮಣಿಸಿತು. ಅದರೊಂದಿಗೆ, ಪ್ಲೇ-ಆಫ್ ತಲುಪುವ ಅವಕಾಶವನ್ನೂ ಜೀವಂತಗೊಳಿಸಿತು. ಆದರೆ, ಐದು ಬಾರಿಯ ಚಾಂಪಿಯನ್ ಮುಂಬೈ ತಂಡವು ದುರ್ಬಲ ಆಟಕ್ಕೆ ಮತ್ತೆ ಬೆಲೆ ತೆರಬೇಕಾಯಿತು.

ವೇಗಿ ಅನ್ಷುಲ್ ಕಂಬೋಜ್ (32ಕ್ಕೆ3) ಹಾಗೂ ಅಫ್ಗಾನಿಸ್ತಾನದ ಎಡಗೈ ಸ್ಪಿನ್ನರ್ ನೂರ್ ಅಹಮದ್ (26ಕ್ಕೆ2) ಮೋಡಿಯ ಎದುರು ಮುಂಬೈ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 159 ರನ್ ಗಳಿಸಿತು. ಚೆನ್ನೈ ತಂಡವು ನಾಯಕ ಋತುರಾಜ್ ಗಾಯಕವಾಡ್ ಹಾಗೂ ಯುವ ಪ್ರತಿಭೆ ಕಾರ್ತಿಕ್ ಶರ್ಮಾ ಅವರ ಅರ್ಧಶತಕಗಳ ಬಲದಿಂದ 18.1 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು ನಿರಾಯಾಸವಾಗಿ ಗುರಿ ಮುಟ್ಟಿತು.

ಸಿಎಸ್‌ಕೆ ತಂಡದ ಕಾರ್ತಿಕ್ ಶರ್ಮಾ, ಋತುರಾಜ್ ಗಾಯಕವಾಡ್ ಪಿಟಿಐ ಚಿತ್ರ

ಲಯದಲ್ಲಿದ್ದ ಸಂಜು ಸ್ಯಾಮ್ಸನ್ (11; 9ಎ) ಎರಡು ಬೌಂಡರಿ ಗಳಿಸಿ, ಆಕ್ರಮಣಕಾರಿ ಆಟಕ್ಕೆ ಮುಂದಾದರು. ಆದರೆ, ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಹಾಕಿದ ಎರಡನೇ ಓವರ್‌ನ ಕೊನೆಯ ಎಸೆತದಲ್ಲಿ ರಿಯಾನ್ ರಿಕೆಲ್ಟನ್ ಅವರಿಗೆ ಕ್ಯಾಚ್ ಆದರು.

ಉರ್ವಿಲ್ ಪಟೇಲ್ 12 ಎಸೆಗಳಲ್ಲಿ ತಲಾ ಎರಡು ಬೌಂಡರಿ ಹಾಗೂ ಸಿಕ್ಸರ್‌ಗಳೊಂದಿಗೆ 24 ರನ್ ಬಾರಿಸಿದರು. ಅವರಿಗೆ, ಅಫ್ಗಾನಿಸ್ತಾನದ ಸ್ಪಿನ್ನರ್ ಅಲ್ಲಾಹ ಘಜನಫರ್ ಪೆವಿಲಿಯನ್ ಹಾದಿ ತೋರಿದರು.

ಎಚ್ಚರಿಕೆಯ ಆಟವಾಡಿದ ಋತುರಾಜ್ (ಔಟಾಗದೆ 67; 48ಎ, 4x5, 6x2) ಅವರು ಕಾರ್ತಿಕ್ (ಔಟಾಗದೆ 54; 40ಎ, 4x4, 6x3) ಜೊತೆಗೆ ಮುರಿಯದ ಮೂರನೇ ವಿಕೆಟ್‌ಗೆ 75 ಎಸೆತಗಳಲ್ಲಿ 98 ರನ್ ಸೇರಿಸಿದರು. ಹಾಲಿ ಲೀಗ್‌ನಲ್ಲಿ ಚೆನ್ನೈ ತಂಡಕ್ಕೆ ನಾಲ್ಕನೇ ಗೆಲುವು ತಂದುಕೊಟ್ಟರು.

ಟಾಸ್ ಗೆದ್ದ ಮುಂಬೈ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಎರಡನೇ ಓವರ್‌ನಲ್ಲಿಯೇ ತಂಡಕ್ಕೆ ಬಲವಾದ ಪೆಟ್ಟು ಬಿತ್ತು. ಭರವಸೆಯ ಬ್ಯಾಟರ್ ವಿಲ್ ಜ್ಯಾಕ್ಸ್ (1 ರನ್) ಅವರ ವಿಕೆಟ್ ಗಳಿಸಿದ ವೇಗಿ ಅನ್ಷುಲ್ ಸಂಭ್ರಮಿಸಿದರು.

ಈ ಹಂತದಲ್ಲಿ ರಿಯಾನ್ ರಿಕೆಲ್ಟನ್ (37; 24ಎ, 6x5) ಮತ್ತು ನಮನ್ ಧೀರ್ (57; 37ಎ, 4x4, 6x3) ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 58 ರನ್ ಸೇರಿಸಿದರು. ಇದರಿಂದಾಗಿ ಸ್ವಲ್ಪ ಮಟ್ಟಿಗೆ ಇನಿಂಗ್ಸ್ ಚೇತರಿಕೆ ಕಂಡಿತು.

ಆದರೆ ಪವರ್‌ಪ್ಲೇ ಮುಗಿದ ನಂತರದ ಓವರ್‌ನಲ್ಲಿಯೇ ನೂರ್ ಅಹಮದ್ ಅವರು ರಿಕೆಲ್ಟನ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು. ಕ್ರೀಸ್‌ಗೆ ಬಂದ ಸೂರ್ಯಕುಮಾರ್ ಯಾದವ್ (21; 12ಎ) ಉತ್ತಮ ಲಯದಲ್ಲಿದ್ದಂತೆ ಕಂಡರು. ಆದರೆ ಅವರೂ ಬೇಗನೆ ನಿರ್ಗಮಿಸಿದರು. ತಿಲಕ್ ವರ್ಮಾ (5; 8ಎ) ಮತ್ತು ಹಾರ್ದಿಕ್ ಪಾಂಡ್ಯ (18; 23ಎ) ಅವರು ದೊಡ್ಡ ಹೊಡೆತವಾಡಲು ಪರದಾಡಿದರು.

ನೂರ್ ಅಹಮದ್ ಬೌಲಿಂಗ್‌ನಲ್ಲಿ ತಿಲಕ್ ಅವರ ಕ್ಯಾಚ್ ಪಡೆದ ಋತುರಾಜ್ ಗಾಯಕವಾಡ್ ಮಿಂಚಿದರು. ಪಾಂಡ್ಯಗೆ ವೇಗಿ ಕಂಬೋಜ್ ಅವರು ಡಗ್‌ಔಟ್ ದಾರಿ ತೋರಿಸಿದರು. ರಾಬಿನ್ ಮಿನ್ಜ್ ಅವರನ್ನೂ ಕಂಬೋಜ್ ಕ್ಲೀನ್‌ಬೌಲ್ಡ್ ಮಾಡಿದರು.

ಅರ್ಧಶತಕ ಗಳಿಸಿ ಆಡುತ್ತಿದ್ದ ನಮನ್ ಅವರು ಒವರ್ಟನ್ ಬೌಲಿಂಗ್‌ನಲ್ಲಿ ದೊಡ್ಡ ಹೊಡೆತಕ್ಕೆ ಪ್ರಯತ್ನಿಸಿದರು. ಬದಲೀ ಫೀಲ್ಡರ್ ಸರ್ಫರಾಜ್ ಖಾನ್ ಅವರು ಪಡೆದ ಆಕರ್ಷಕವಾದ ಕ್ಯಾಚ್‌ನಿಂದಾಗಿ ನಮನ್ ಇನಿಂಗ್ಸ್‌ಗೆ ತೆರೆಬಿತ್ತು. ನಮನ್ ಅವರು 19 ರನ್ ಗಳಿಸಿದ್ದ ಸಂದರ್ಭದಲ್ಲಿ ಶಿವಂ ದುಬೆ ಅವರು ಸುಲಭ ಕ್ಯಾಚ್ ಕೈಚೆಲ್ಲಿದ್ದರು. ಇದರ ಲಾಭ ನಮನ್ ಅವರಿಗಾಯಿತು.

ಚೆನ್ನೈ ತಂಡದ ಮುಕೇಶ್ ಚೌಧರಿ ಅವರು ವಿಕೆಟ್ ಪಡೆಯಲಿಲ್ಲ. ಆದರೆ ರನ್ ನಿಯಂತ್ರಿಸಿದರು. ಇನಿಂಗ್ಸ್‌ನ ಮೊದಲ ಓವರ್ ಹಾಕಿದ ಅವರು ಕೇವಲ ಒಂದು ರನ್ ನೀಡಿದರು.

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್: 7ಕ್ಕೆ159 (20 ಓವರ್)
ಜ್ಯಾಕ್ಸ್ ಸಿ ಘೋಷ್ ಬಿ ಕಂಬೋಜ್ 1 (5ಎ)
ರಿಯಾನ್ ಸಿ ಪಟೇಲ್ ಬಿ ನೂರ್ 37 (24ಎ, 6x5)
ನಮನ್ ಸಿ ಸರ್ಫರಾಜ್ (ಬದಲೀ) ಬಿ ಒವರ್ಟನ್ 57 (37ಎ, 4x4, 6x3)
ಸೂರ್ಯಕುಮಾರ್ ಸಿ ಬ್ರೆವಿಸ್ ಬಿ ಘೋಷ್ 21 (12ಎ, 4x3, 6x1)
ತಿಲಕ್ ಸಿ ಗಾಯಕವಾಡ್ ಬಿ ನೂರ್ 5 (8ಎ)
ಹಾರ್ದಿಕ್ ಸಿ ಬ್ರೆವಿಸ್ ಬಿ ಕಂಬೋಜ್ 18 (23ಎ, 4x2)
ರಾಬಿನ್ ಬಿ ಕಂಬೋಜ್ 5 (3ಎ)
ಕ್ರಿಷ್ ಭಗತ್ ಔಟಾಗದೇ 3 (6ಎ)
ಟ್ರೆಂಟ್ ಬೌಲ್ಟ್ ಔಟಾಗದೇ 7 (2ಎ, 4x1)
ಇತರೆ: 5 (ಬೈ 2, ಲೆಗ್‌ಬೈ 2, ವೈಡ್ 1)
ವಿಕೆಟ್ ಪತನ: 1–1 (ವಿಲ್ ಜ್ಯಾಕ್ಸ್;1.2), 2–59 (ರಿಯಾನ್ ರಿಕೆಲ್ಟನ್; 6.4), 3–99 (ಸೂರ್ಯಕುಮಾರ್ ಯಾದವ್; 10.4), 4–109 (ತಿಲಕ್ ವರ್ಮಾ; 12.5), 5–134 (ನಮನ್ ಧೀರ್; 16.5), 6–139 (ರಾಬಿನ್ ಮಿನ್ಜ್; 17.2), 7–151 (ಹಾರ್ದಿಕ್ ಪಾಂಡ್ಯ;19.3)
ಬೌಲಿಂಗ್: ಮುಕೇಶ್ ಚೌಧರಿ 3–0–25–0, ಅನ್ಷುಲ್ ಕಂಬೋಜ್ 4–0–32–3, ಪ್ರಶಾಂತ್ ವೀರ್ 2–0–25–0, ನೂರ್ ಅಹಮದ್ 4–0–26–2, ರಾಮಕೃಷ್ಣ ಘೋಷ್ 3–0–24–1, ಜೇಮಿ ಒವರ್ಟನ್ 4–0–23–1

ಚೆನ್ನೈ ಸೂಪರ್ ಕಿಂಗ್ಸ್: 2ಕ್ಕೆ160 (18.1 ಓವರ್)
ಸಂಜು ಸಿ ರಿಕೆಲ್ಟನ್ ಬಿ ಬೂಮ್ರಾ 11 (9ಎ, 4x2)
ಋತುರಾಜ್ ಗಾಯಕವಾಡ್ ಔಟಾಗದೇ 67 (48ಎ, 4x5, 6x2)
ಉರ್ವಿಲ್ ಬಿ ಘಜನಫರ್ 24 (12ಎ, 4x2, 6x2)
ಕಾರ್ತಿಕ್ ಶರ್ಮಾ ಔಟಾಗದೇ 54 (40ಎ, 4x4, 6x3)
ಇತರೆ: 4 (ವೈಡ್ 4)
ವಿಕೆಟ್ ಪತನ: 1–13 (ಸಂಜು ಸ್ಯಾಮ್ಸನ್; 2.0), 2–62 (ಊರ್ವಿಲ್ ಪಟೇಲ್; 5.4)
ಬೌಲಿಂಗ್: ಟ್ರೆಂಟ್ ಬೌಲ್ಟ್ 3.1–0–37–0, ಜಸ್‌ಪ್ರೀತ್ ಬೂಮ್ರಾ 3–0–20–1, ಕ್ರಿಷ್ ಭಗತ್ 2–0–22–0, ಅಲ್ಲಾಹ ಘಜನಫರ್ 4–0–40–1, ರಘು ಶರ್ಮಾ 4–0–24–0, ಹಾರ್ದಿಕ್ ಪಾಂಡ್ಯ 2–0–17–0
ಪಂದ್ಯದ ಆಟಗಾರ: ಋತುರಾಜ್ ಗಾಯಕವಾಡ್

ಗುಜರಾತ್ ಟೈಟನ್ಸ್‌ಗೆ ಶ್ರೇಯಸ್ ಪಡೆ ಸವಾಲು ಇಂದು
ಜಯದ ಹಾದಿಗೆ ಮರಳುವತ್ತ ಕಿಂಗ್ಸ್ ಚಿತ್ತ

ಗುಜರಾತ್ ಟೈಟನ್ಸ್ ತಂಡದ ನಾಯಕ ಶುಭಮನ್ ಗಿಲ್ ಶನಿವಾರ ಪಿಚ್ ಪರಿಶೀಲಿಸಿದರು ಪಿಟಿಐ ಚಿತ್ರ

ಅಹಮದಾಬಾದ್ (ಪಿಟಿಐ): ಐಪಿಎಲ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಪಂಜಾಬ್ ಕಿಂಗ್ಸ್ ತಂಡವು ಪಂಜಾಬ್ ಕಿಂಗ್ಸ್ ತಂಡವು ಭಾನುವಾರ ಗುಜರಾತ್ ಟೈಟನ್ಸ್ ಎದುರು ಕಣಕ್ಕಿಳಿಯಲಿದೆ.

ಪಂಜಾಬ್ ತಂಡವು ಟೂರ್ನಿಯ ಆರಂಭದಿಂದ ಸತತ ಏಳು ಪಂದ್ಯಗಳಲ್ಲಿ ಸೋಲು ಕಾಣದೇ ಈಚೆಗೆ ತನ್ನ ಎಂಟನೇ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಎದುರು ಮಣಿದಿತ್ತು. ಇದೀಗ ಮತ್ತೆ ಗೆಲುವಿನ ಹಾದಿಗೆ ಮರಳುವ ಛಲದಲ್ಲಿ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಇದೆ. ತಂಡದ ಖಾತೆಯಲ್ಲಿ 13 ಅಂಕಗಳು ಇವೆ. ಸತತ ಆರು ಪಂದ್ಯ ಗೆದ್ದಿತ್ತು. ಒಂದು ಪಂದ್ಯ ಮಳೆಯಿಂದ ರದ್ದಾಗಿತ್ತು. ಲೀಗ್‌ನ ಆರಂಭಿಕ ಪಂದ್ಯದಲ್ಲಿಯೇ ಪಂಜಾಬ್ ತಂಡವು ಗುಜರಾತ್ ಬಳಗವನ್ನು ಮಣಿಸಿತ್ತು. ಇದೀಗ ಗಿಲ್ ಬಳಗವು ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿದೆ.

ಬಲಿಷ್ಠ ಬ್ಯಾಟಿಂಗ್ ಮತ್ತು ಅದಕ್ಕೆ ತಕ್ಕಂತೆ ಬೌಲಿಂಗ್ ಪಂಜಾಬ್ ತಂಡದ ಶಕ್ತಿಯಾಗಿದೆ. ಪ್ರಭಸಿಮ್ರನ್ ಸಿಂಗ್ ಹಾಗೂ ಪ್ರಿಯಾಂಶ್ ಆರ್ಯ ಅವರು ಉತ್ತಮ ಆರಂಭದ ಮೂಲಕ ಗಟ್ಟಿ ಅಡಿಪಾಯ ಹಾಕುತ್ತಿದ್ದಾರೆ. ಅದರ ಮೇಲೆ ಶ್ರೇಯಸ್, ಕೂಪರ್ ಕೊನೊಲಿ, ಮಾರ್ಕಸ್ ಸ್ಟೊಯಿನಿಸ್, ನೇಹಲ್ ವಧೇರಾ, ಆಲ್‌ರೌಂಡರ್ ಮಾರ್ಕೊ ಯಾನ್ಸೆನ್ ಅವರು ರನ್ ಸೌಧ ಕಟ್ಟುತ್ತಿದ್ದಾರೆ.

ಶ್ರೇಯಸ್ ಅಯ್ಯರ್ ತಾಲೀಮು

ಬೌಲಿಂಗ್‌ನಲ್ಲಿ ಅರ್ಷದೀಪ್ ಸಿಂಗ್, ಕನ್ನಡಿಗ ವೈಶಾಖ ವಿಜಯಕುಮಾರ್ ಮತ್ತು ಸ್ಪಿನ್ನರ್ ಯುಜುವೇಂದ್ರ ಚಾಹಲ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಬೌಲಿಂಗ್ ಮಾಡುತ್ತಿದ್ದಾರೆ. ಒಂದೊಮ್ಮೆ ಅವರು ತುಟ್ಟಿಯಾದರೂ ಬ್ಯಾಟರ್‌ಗಳು ತಮ್ಮ ಆಟದ ಮೂಲಕ ತಂಡಕ್ಕೆ ಬಲ ತುಂಬುತ್ತಿರುವುದು ವಿಶೇಷ. ರಾಜಸ್ಥಾನ ಎದುರಿನ ಪಂದ್ಯದಲ್ಲಿ ಮಾತ್ರ ಪಂಜಾಬ್ ಬೌಲಿಂಗ್ ಪಡೆ ದುರ್ಬಲವಾಗಿತ್ತು. ಆ ಲೋಪವನ್ನು ಸರಿಪಡಿಸಿಕೊಂಡು ಮತ್ತೆ ಗೆಲುವಿನ ಹಾದಿಗೆ ಮರಳುವ ವಿಶ್ವಾಸದಲ್ಲಿ ಶ್ರೇಯಸ್ ಪಡೆ ಇದೆ.

ಟೈಟನ್ಸ್ ತಂಡವು ಈಚೆಗೆ ‘ಹಾಲಿ ಚಾಂಪಿಯನ್’ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಸೋಲಿಸಿದ ಖುಷಿಯಲ್ಲಿದೆ. ಇದೀಗ ‘ರನ್ನರ್ಸ್ ಅಪ್’ ಬಳಗವನ್ನೂ ಹಣಿಯುವ ಉತ್ಸಾಹದಲ್ಲಿದೆ. ಗಿಲ್ ಪಡೆಯ ಬೌಲರ್‌ಗಳು ಆರ್‌ಸಿಬಿ ಎದುರಿನ ಜಯದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅದರಲ್ಲೂ ವಿಂಡೀಸ್ ಆಲ್‌ರೌಂಡರ್ ಜೇಸನ್ ಹೋಲ್ಡರ್ ಮಿಂಚಿದ್ದರು. ಮೊಹಮ್ಮದ್ ಸಿರಾಜ್, ಅರ್ಷದ್ ಖಾನ್, ಕಗಿಸೊ ರಬಾಡ ಮತ್ತು ಸ್ಪಿನ್ನರ್ ರಶೀದ್ ಖಾನ್ ಅವರು ಕೂಡ ಉತ್ತಮ ಲಯದಲ್ಲಿದ್ದಾರೆ. ಇವರ ಮುಂದೆ ಈಗ ಪಂಜಾಬ್ ಬ್ಯಾಟಿಂಗ್ ಪಡೆಗೆ ಕಡಿವಾಣ ಹಾಕುವ ಸವಾಲು ಇದೆ.

ಇಂದಿನ ಪಂದ್ಯ

ಸನ್‌ರೈಸರ್ಸ್ ಹೈದರಾಬಾದ್ V/s ಕೋಲ್ಕತ್ತ ನೈಟ್ ರೈಡರ್ಸ್
ತಾಣ: ಹೈದರಾಬಾದ್
ಆರಂಭ: ಮಧ್ಯಾಹ್ನ 3.30

ಗುಜರಾತ್ ಟೈಟನ್ಸ್ V/s ಪಂಜಾಬ್ ಕಿಂಗ್ಸ್
ತಾಣ: ಅಹಮದಾಬಾದ್
ಆರಂಭ: ರಾತ್ರಿ 7.30

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್

ಬಲಾಬಲ	ಒಟ್ಟು ಪಂದ್ಯ 7
ಕಿಂಗ್ಸ್ ಗೆಲುವು	4
ಟೈಟನ್ಸ್ ಜಯ	3

ಸನ್‌ರೈಸರ್ಸ್‌ಗೆ ನೈಟ್‌ರೈಡರ್ಸ್ ಸವಾಲು

ಹೈದರಾಬಾದ್ (ಪಿಟಿಐ): ಬೀಸಾಟ ಆಡುವ ಬ್ಯಾಟರ್‌ಗಳ ದಂಡನ್ನು ಹೊಂದಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡವು, ಗೆಲುವಿನ ಹಳಿಗೆ ಈಗಷ್ಟೇ ಮರಳುತ್ತಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಭಾನುವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಎದುರಿಸಲಿದೆ.

ಸತತ ಐದು ಪಂದ್ಯಗಳ ಗೆಲುವಿನ ಓಟವನ್ನು ಮುಂದುವರಿಸುವ ಹುಮ್ಮಸ್ಸಿನಲ್ಲಿರುವ ಸನ್‌ರೈಸರ್ಸ್ ತಂಡ ಮೂರನೇ ಸ್ಥಾನಕ್ಕೆ ಲಗ್ಗೆಯಿಟ್ಟಿದೆ. ಈ ಪಂದ್ಯ ಗೆಲ್ಲುವ ನೆಚ್ಚಿನ ತಂಡವೂ ಆಗಿದೆ. ಪ್ಯಾಟ್ ಕಮಿನ್ಸ್ ಪಡೆ 9 ಪಂದ್ಯಗಳಲ್ಲಿ ಆರು ಗೆದ್ದು, ಮೂರು ಸೋತಿದೆ.

ಈ ಋತುವಿನಲ್ಲಿ ತಿಣುಕಾಡಿರುವ ಅಜಿಂಕ್ಯ ರಹಾನೆ ನೇತೃತ್ವದ ನೈಟ್‌ರೈಡರ್ಸ್ ತಂಡ ತನ್ನ ಕೊನೆಯ ಎರಡು ಪಂದ್ಯಗಳನ್ನು ಗೆದ್ದು ಪುನರುತ್ಥಾನದ ವಿಶ್ವಾಸದಲ್ಲಿದೆ. ಕೋಲ್ಕತ್ತದ ತಂಡ, ಎಂಟನೇ ಸ್ಥಾನದಲ್ಲಿದೆ.

ಸನ್‌ರೈಸರ್ಸ್ ತಂಡದ ಅಭಿಷೇಕ್ ಶರ್ಮಾ ಮತ್ತು ಹೆನ್ರಿಚ್ ಕ್ಲಾಸೆನ್ ಉತ್ತಮ ಲಯದಲ್ಲಿದ್ದಾರೆ. ಅಭಿಷೇಕ್ ಗರಿಷ್ಠ ರನ್‌ಗಳಿಕೆದಾರರ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ. ಇಶಾನ್ ಕಿಶನ್ ಕೂಡ ಪಂದ್ಯದ ಗತಿಯನ್ನು ಬದಲಾಯಿಸುವ ಸಾಮರ್ಥ್ಯ ಹೊಂದಿದ್ದಾರೆ.

ನಿತೀಶ್ ಕುಮಾರ್ ರೆಡ್ಡಿ ಮತ್ತು ಸಲೀಲ್ ಅರೋರಾ ಅವರೂ ಕೆಲವು ಪಂದ್ಯಗಳಲ್ಲಿ ಉಪಯುಕ್ತ ಆಟವಾಡಿದ್ದಾರೆ. ಈ ಬ್ಯಾಟಿಂಗ್ ಬಲಾಢ್ಯ ತಂಡವನ್ನು ನಿಯಂತ್ರಿಸಬೇಕಾದರೆ, ಕೋಲ್ಕತ್ತದ ಬೌಲರ್‌ಗಳು ತಮ್ಮ ಮಟ್ಟವನ್ನು ಬಹಳಷ್ಟು ಎತ್ತರಿಸಬೇಕಾಗಿದೆ.

ಕಮಿನ್ಸ್ ಆಗಮನದಿಂದ ಎಸ್‌ಆರ್‌ಎಚ್ ಬೌಲಿಂಗ್ ಬಲಗೊಂಡಿದೆ. ಇಶಾನ್ ಮಾಲಿಂಗ, ನಿತೀಶ್ ರೆಡ್ಡಿ, ಪ್ರಫುಲ್ ಹಿಂಗೆ, ಸಾಕಿಬ್ ಅವರ ವೇಗದ ಬಲ ತಂಡಕ್ಕಿದೆ.

ಕೋಲ್ಕತ್ತ ತಂಡದ ನಾಯಕ ರಹಾನೆ ಇನ್ನೂ ಸ್ಫೂರ್ತಿಯುತ ಇನಿಂಗ್ಸ್ ಆಡಿಲ್ಲ. ಅವರ ಕೆಲವು ನಿರ್ಧಾರಗಳೂ ತರ್ಕಕ್ಕೆ ನಿಲುಕುವಂತಿರಲಿಲ್ಲ. ಮುಂಬೈ ವಿರುದ್ಧ 40 ಎಸೆತಗಳಲ್ಲಿ 67 ರನ್ ಮತ್ತು ಲಖನೌ ವಿರುದ್ಧ 24 ಎಸೆತಗಳಲ್ಲಿ 41 ರನ್ ಗಳಿಸಿದ್ದು ಬಿಟ್ಟರೆ ಅವರ ಆಟ ಪೇಲವ ಎನಿಸಿದೆ.

ತಂಡ ರಚಿನ್ ರವೀಂದ್ರ ಅವರಿಗೆ ಕೊನೆಗೂ ಅವಕಾಶ ನೀಡುವುದೇ ಎಂಬುದನ್ನು ಕಾದುನೋಡಬೇಕಾಗಿದೆ. ನ್ಯೂಜಿಲೆಂಡ್ ಜೋಡಿಯಾದ ಫಿನ್ ಅಲೆನ್ ಮತ್ತು ಟಿಮ್ ಸೀಫರ್ಟ್ ನಿರೀಕ್ಷೆಗೆ ತಕ್ಕಂತೆ ಆಡಿಲ್ಲ. ಅಂಗ್‌ಕ್ರಿಷ್ ರಘುವಂಶಿ, ಕ್ಯಾಮೆರಾನ್ ಗ್ರೀನ್, ರೋವ್ಮನ್ ಪಾವೆಲ್ ಸಹ ಮಿಂಚು ಹರಿಸಿಲ್ಲ.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	8	6	1	1	13	1.043
ಆರ್‌ಸಿಬಿ	9	6	3	0	12	1.420
ಎಸ್‌ಆರ್‌ಎಚ್	9	6	3	0	12	0.832
ಆರ್ ಆರ್	10	6	4	0	12	0.510
ಜಿ ಟಿ	9	5	4	0	10	- 0.192
ಸಿಎಸ್‌ಕೆ	9	4	5	0	8	0.005
ಡಿ ಸಿ	9	4	5	0	8	- 0.895
ಕೆಕೆಆರ್	8	2	5	1	5	- 0.751
ಎಂ ಐ	9	2	7	0	4	- 0.803
ಎಲ್‌ಎಸ್‌ಜಿ	8	2	6	0	4	- 1.106

ಆರೆಂಜ್ ಕ್ಯಾಪ್: ಕೆ.ಎಲ್.ರಾಹುಲ್, ಡಿ ಸಿ (433 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (17 ವಿಕೆಟ್)

ಬಲಾಬಲ	ಒಟ್ಟು ಪಂದ್ಯ 31
ಸನ್‌ರೈಸರ್ಸ್ ಗೆಲುವು	11
ನೈಟ್‌ರೈಡರ್ಸ್ ಜಯ	20

ಸಂಕ್ಷಿಪ್ತ ಸುದ್ದಿ

‘ಟೀಕಾಕಾರರಿಗೆ ಉತ್ತರಿಸುವ ಅಗತ್ಯವಿಲ್ಲ’

ಪರಾಗ್

ಜೈಪುರ (ಪಿಟಿಐ): ‘ಟೀಕಾಕಾರರಿಗೆ ಉತ್ತರಿಸುವ ಅಥವಾ ಅದರ ಬಗ್ಗೆ (ಇ ಸಿಗರೇಟ್ ಪ್ರಕರಣ) ಮಾತನಾಡುವವರಿಗೆ ಪ್ರತಿಕ್ರಿಯಿಸುವ ಅಗತ್ಯ ನನಗಿಲ್ಲ. ತಂಡವನ್ನು ಗೆಲುವಿನತ್ತ ಮುನ್ನಡೆಸಿ ಎರಡು ಅಂಕ ಕೊಡಿಸುವುದು ಮಾತ್ರ ನನ್ನ ಕೆಲಸ’ ಎಂದು ರಾಜಸ್ಥಾನ ರಾಯಲ್ಸ್ ತಂಡದ ನಾಯಕ ರಿಯಾನ್ ಪರಾಗ್ ಹೇಳಿದ್ದಾರೆ.

ಶುಕ್ರವಾರ ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ಪರಾಗ್ 50 ಎಸೆತಗಳಲ್ಲಿ 90 ರನ್ ಗಳಿಸಿದ್ದರು. ಈ ಪಂದ್ಯಕ್ಕೂ ಮುನ್ನ ಪರಾಗ್ ಅವರು ಲಯದಲ್ಲಿ ಇರಲಿಲ್ಲ.

ಜೇಮಿಸನ್‌ಗೆ ಡಿಮೆರಿಟ್ ಪಾಯಿಂಟ್

ಜೈಪುರ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡದ ಯುವ ಬ್ಯಾಟಿಂಗ್ ತಾರೆ ವೈಭವ್ ಸೂರ್ಯವಂಶಿ ಅವರ ವಿಕೆಟ್ ಪಡೆದ ತಕ್ಷಣ ‘ಪ್ರಚೋದನಕಾರಿ ರೀತಿ ಸೆಂಡ್‌ಆಫ್’ ನೀಡಿದ ಡೆಲ್ಲಿ ಕ್ಯಾಪಿಟಲ್ಸ್‌ನ ವೇಗದ ಬೌಲರ್ ಕೈಲ್ ಜೇಮಿಸನ್ ಅವರ ಶಿಸ್ತಿನ ಖಾತೆಗೆ ಒಂದು ಡಿಮೆರಿಟ್ ಪಾಯಿಂಟ್ ಸೇರ್ಪಡೆ ಮಾಡಲಾಗಿದೆ.

ಜೈಪುರದ ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಈ ಪಂದ್ಯದಲ್ಲಿ ಡೆಲ್ಲಿ ತಂಡ ಏಳು ವಿಕೆಟ್‌ಗಳ ಜಯಪಡೆದಿತ್ತು.

ಎರಡನೇ ಓವರಿನಲ್ಲಿ, 15 ವರ್ಷ ವಯಸ್ಸಿನ ವೈಭವ್ ವಿಕೆಟ್ ಪಡೆದ ತಕ್ಷಣ ಅವರ ಸಮೀಪಕ್ಕೆ ಧಾವಿಸಿದ ಜೇಮಿಸನ್ ಜೋರಾಗಿ ಸಂಭ್ರಮಿಸಿದ್ದರು. ಮ್ಯಾಚ್ ರೆಫ್ರಿ ರಾಜೀವ್ ಸೇಠ್ ಅವರ ತೀರ್ಪನ್ನು ಜೇಮಿಸನ್ ಒಪ್ಪಿಕೊಂಡಿದ್ದಾರೆ.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಸಭಾಭವನದಲ್ಲಿ ಶನಿವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಭಾರತ ಮಹಿಳಾ ತಂಡದ ಮೊದಲ ನಾಯಕಿ ಶಾಂತಾ ರಂಗಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಯುವ ಆಟಗಾರ್ತಿಯರೊಂದಿಗೆ ಶಾಂತಾ ಸಂಭ್ರಮಿಸಿದರು. ಪ್ರಜಾವಾಣಿ ಚಿತ್ರ

ಮಡಿಕೇರಿ ತಾಲ್ಲೂಕಿನ ನಾಪೋಕ್ಲು ಪಟ್ಟಣದಲ್ಲಿ ಶನಿವಾರ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ 26ನೇ ಆವೃತ್ತಿಯ ಚೇನಂಡ ಕಪ್‌ನ ಚಾಂಪಿಯನ್ ಆಗಿ ಹೊರಹೊಮ್ಮಿದ ಕುಲ್ಲೇಟಿರ ತಂಡಕ್ಕೆ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಪ್ರಶಸ್ತಿ ನೀಡಿದರು

ಚೇನಂಡ ಕಪ್ ಕೊಡವ ಕೌಟುಂಬಿಕ ಹಾಕಿ ಟೂರ್ನಿ
ಕುಲ್ಲೇಟಿರ ತಂಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

